ಮಂಗಳೂರು
ಶುಕ್ರವಾರ, 10 ಏಪ್ರಿಲ್ 2026
ಸಂಪುಟ 48, ಸಂಚಿಕೆ 22 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಕದನ ವಿರಾಮ ಇನ್ನೂ ಅಸ್ಥಿರ
• ಪುಟ ೩

ಆಳ್ವಾಸ್ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ ರಾಜ್ಯಕ್ಕೆ ಮೊದಲ ರ್‍ಯಾಂಕ್, ವಿಜ್ಞಾನ ವಿಭಾಗದ ವಿದ್ಯಾರ್ಥಿ ದ್ವಿತೀಯ ರ್‍ಯಾಂಕ್

ಉಡುಪಿ, ದ.ಕ., ಕೊಡಗು ಸಾಧನೆಯ ಸರದಾರರು!

ಮಂಗಳೂರು/ಉಡುಪಿ: ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಉಡುಪಿ ಜಿಲ್ಲೆ ರಾಜ್ಯಕ್ಕೇ ಪ್ರಥಮ ಸ್ಥಾನವನ್ನು ಅಲಂಕರಿಸುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಆಧಿಪತ್ಯವನ್ನು ಮರಳಿ ಸ್ಥಾಪಿಸಿದೆ. ದಕ್ಷಿಣ ಕನ್ನಡ ಜಿಲ್ಲೆ ಎರಡನೇ ಸ್ಥಾನ ಗಳಿಸಿದೆ. ಕಳೆದ ಕೆಲವು ವರ್ಷಗಳಿಂದ ಅಗ್ರ ಸ್ಥಾನಕ್ಕಾಗಿ ನಡೆಯುತ್ತಿದ್ದ ತೀವ್ರ ಪೈಪೋಟಿಯಲ್ಲಿ ಈ ಬಾರಿ ಉಡುಪಿ ಜಿಲ್ಲೆಯು ಮುನ್ನಡೆ ಸಾಧಿಸಿ ಜಯಭೇರಿ ಬಾರಿಸಿದೆ.

ಸತತ ಮೂರು ವರ್ಷಗಳ ಸಾಧನೆ

ಜಿಲ್ಲೆಯ ಶೈಕ್ಷಣಿಕ ಇತಿಹಾಸವನ್ನು ಗಮನಿಸಿದರೆ, ಉಡುಪಿ ಜಿಲ್ಲೆಯು ಪಿಯುಸಿ ಫಲಿತಾಂಶದಲ್ಲಿ ಸತತವಾಗಿ ರಾಜ್ಯದ ಮೊದಲ ಎರಡು ಸ್ಥಾನಗಳಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು ಬಂದಿದೆ. 2024 ಮತ್ತು 2025ರ ಸಾಲಿನಲ್ಲಿ ಜಿಲ್ಲೆಯು ರಾಜ್ಯಮಟ್ಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿತ್ತು. ಕಳೆದ ಎರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಪ್ರಥಮ ಸ್ಥಾನ ಪಡೆದಿದ್ದರೆ, ಉಡುಪಿ ಜಿಲ್ಲೆಯು ಅತ್ಯಲ್ಪ ಅಂತರದಲ್ಲಿ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟಿತ್ತು. ಆದರೆ ಈ ಬಾರಿ ಜಿಲ್ಲೆಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರ ಸಮನ್ವಯಿತ ಶ್ರಮದ ಫಲವಾಗಿ ಉಡುಪಿಯು ದ್ವಿತೀಯ ಸ್ಥಾನದಿಂದ ಜಿಗಿದು ರಾಜ್ಯದ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಜಿಲ್ಲೆಯಾದ್ಯಂತ ಇರುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳ ಸಮಗ್ರ ಸಾಧನೆಯೇ ಈ ಬಾರಿಯ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ. ವಿಶೇಷವಾಗಿ ಗ್ರಾಮೀಣ ಭಾಗದ ಕಾಲೇಜುಗಳಲ್ಲಿ ದಾಖಲಾದ ಉತ್ತಮ ಫಲಿತಾಂಶವು ಜಿಲ್ಲೆಯ ಒಟ್ಟಾರೆ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ಶಿಕ್ಷಣ ಇಲಾಖೆಯು ಪರೀಕ್ಷಾ ಪೂರ್ವದಲ್ಲಿ ಹಮ್ಮಿಕೊಂಡಿದ್ದ ವಿಶೇಷ ತರಗತಿಗಳು ಮತ್ತು ಜಿಲ್ಲಾ ಮಟ್ಟದ ಸರಣಿ ಪರೀಕ್ಷೆಗಳು ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಮಂಗಳೂರು ವರದಿ

ಕಳೆದ ವರ್ಷ ಶೇ. 93.57 ಫಲಿತಾಂಶ ಪಡೆದಿದ್ದ ದ.ಕ. ಜಿಲ್ಲೆ ಈ ಬಾರಿ ಶೇ. 96.35 ಫಲಿತಾಂಶ ಪಡೆಯುವ ಮೂಲಕ ಫಲಿತಾಂಶದಲ್ಲಿ ಏರಿಕೆಯನ್ನು ದಾಖಲಿಸಿಕೊಂಡಿದೆ. ವಿಜ್ಞಾನ ವಿಭಾಗದಲ್ಲಿ ದ.ಕ. ಜಿಲ್ಲೆಯ ಆಕಾಶಭವನದ ದಿ ಲರ್ನಿಂಗ್ ಸೆಂಟರ್ ಪಿಯು ಕಾಲೇಜಿನ ಪ್ರಿಸ್ಸಿಲ್ಲಾ ಕಾರ್ಡೋಜಾ 599 ಅಂಕಗಳೊಂದಿಗೆ ರಾಜ್ಯಕ್ಕೆ ಪ್ರಥಮ ಸ್ಥಾನಿಯಾಗಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ದಿಶಾ ಅವರು ವಾಣಿಜ್ಯ ವಿಭಾಗದಲ್ಲಿ 600ಕ್ಕೆ 600 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನಿಯಾಗಿ ಹೊರಹೊಮ್ಮಿದ್ದಾರೆ. ದಿಶಾಗೆ ರೂಪಾಯಿ ಮೂರು ಲಕ್ಷ ನಗದು ಹಾಗೂ ಸಿಎ ವಿದ್ಯಾಭ್ಯಾಸಕ್ಕೆ ಸಂಪೂರ್ಣ ಉಚಿತ ವಸತಿ ಸಹಿತ ಶಿಕ್ಷಣವನ್ನು ಆಳ್ವಾಸ್ ಸಂಸ್ಥೆಯ ಅಧ್ಯಕ್ಷರಾದ ಡಾ. ಮೋಹನ್ ಆಳ್ವ ಘೋಷಿಸಿದ್ದಾರೆ.

ಆಳ್ವಾಸ್ ಪಿಯು ಕಾಲೇಜಿನ ದಿಶಾ ವಾಣಿಜ್ಯ ವಿಭಾಗದಲ್ಲಿ 600 ಅಂಕಗಳನ್ನು ಪಡೆದಿದ್ದು, ಬೆಂಗಳೂರಿನ ಎಸ್‌ಬಿ ಮಹಾವೀರ ಜೈನ್ ಪಿಯು ಕಾಲೇಜಿನ ಅದಿತಿ ಎ. ಬಾಪು ಅವರೊಂದಿಗೆ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಸಂತ ಆಲೋಶಿಯಸ್ ಪಿಯು ಕಾಲೇಜಿನ ರಚೆಲ್ ಡಿಸೋಜ ಅವರು ವಾಣಿಜ್ಯ ವಿಭಾಗದಲ್ಲಿ 599 ಅಂಕಗಳೊಂದಿಗೆ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ ದ.ಕ. ಜಿಲ್ಲೆಯ ಸುಳ್ಯದ ಶಾರದಾ ಮಹಿಳಾ ಪಪೂ ಕಾಲೇಜಿನ ಫಾತಿಮತ್ ಶಾಹಲ 595 ಅಂಕಗಳೊಂದಿಗೆ ರಾಜ್ಯದಲ್ಲಿ ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ.

ಮಂಗಳೂರಿನ ಮ್ಯಾಪ್ಸ್ ಪಿಯು ಕಾಲೇಜಿನ ವೃಷಾ ವಾಣಿಜ್ಯ ವಿಭಾಗದಲ್ಲಿ 598 ಅಂಕಗಳನ್ನು ಪಡೆದಿದ್ದರೆ, ಮುಲ್ಕಿ ನಾರಾಯಣಗುರು ಕಾಂಪೊಸಿಟ್ ಪಿಯು ಕಾಲೇಜಿನ ಅನ್ವಿತಾ ಆರ್., ಸಂತ ಆಲೋಶಿಯಸ್ ಕಾಲೇಜಿನ ಆವಾ ಕ್ರಿಸ್ಟಿನಾ ರಾಡ್ರಿಗಸ್, ಮೂಡಬಿದ್ರೆ ಎಕ್ಸಲೆಂಟ್ ಪಿಯು ಕಾಲೇಜಿನ ಕೆ.ಎಚ್. ಆದಿತಿ ಭೂಷಣ್, ಸಂತ ಆಲೋಶಿಯಸ್‌ನ ರಿಯಾ ಫೇತ್ ಸಲ್ಡಾನ, ಬೆಳ್ತಂಗಡಿ ಎಕ್ಸೆಲ್ ಪಿಯು ಕಾಲೇಜಿನ ಶ್ರೀವತ್ಸ ಯು. ಹಾಗೂ ಯನ ಪೊನ್ನಮ್ಮ ಎನ್.ಪಿ. ತಲಾ 597 ಅಂಕಗಳನ್ನು ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪುತ್ತೂರು ವಿವೇಕಾನಂದ ಪಿಯು ಕಾಲೇಜಿನ ಅಭಿರಾಮ್ ವಿ. ಭಟ್, ಮೂಡಬಿದಿರೆಯ ನ್ಯೂ ವೆಬ್ರಂಟ್ ಪಿಯು ಕಾಲೇಜಿನ ಧನುಷ್ ಗಟ್ಟಿ, ಆಕಾಶಭವನದ ದಿ ಲರ್ನಿಂಗ್ ಸೆಂಟರ್ ಪಿಯು ಕಾಲೇಜಿನ ಮೀನಾಕ್ಷಿ ಉನ್ನಿತನ್, ಎಕ್ಸ್‌ಪರ್ಟ್ ಪಿಯು ಕಾಲೇಜಿನ ನಂದನ್ ನಾಯಕ್, ಸಮನ್ಯು ಎಸ್. ಶೆಟ್ಟಿ, ಆಳ್ವಾಸ್ ಪಿಯು ಕಾಲೇಜಿನ ರಕ್ಷಿತಾ ಮಂಜುನಾಥ್ ಸಂಗನಪೇಟ್, ಕೊಡಿಯಾಲ್‌ಬೈಲ್ ಶಾರದಾ ಪಿಯು ಕಾಲೇಜಿನ ವೈಭವಿ ಎಸ್. ಕರ್ಕೇರ ತಲಾ 598 ಅಂಕಗಳೊಂದಿಗೆ ದ್ವಿತೀಯ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಪ್ರಸಕ್ತ ಸಾಲಿನ ಪಿಯು ಪರೀಕ್ಷೆಗೆ ದ.ಕ. ಜಿಲ್ಲೆಯಿಂದ ಒಟ್ಟು 37140 (ಪುನರಾವರ್ತಿತ ಹಾಗೂ ಖಾಸಗಿ ವಿದ್ಯಾರ್ಥಿಗಳು ಸೇರಿ) ಪರೀಕ್ಷೆಗೆ ಹಾಜರಾಗಿ 35190 (ಶೇ.94.75) ಮಂದಿ ಉತ್ತೀರ್ಣರಾಗಿದ್ದಾರೆ. ದ.ಕ. ಜಿಲ್ಲೆಯಿಂದ ಈ ಬಾರಿ ಪ್ರಥಮ ಬಾರಿಗೆ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ 35449 ಆಗಿದ್ದು, 34155 (ಶೇ.96.35) ಮಂದಿ ಉತ್ತೀರ್ಣರಾಗಿದ್ದಾರೆ.

ಈ ಹಿಂದಿನಂತೆ ಈ ವರ್ಷವೂ ಉತ್ತೀರ್ಣರಾದವರಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ. ದ.ಕ. ಜಿಲ್ಲೆಯಿಂದ ಪರೀಕ್ಷೆ ಬರೆದ 18509 ವಿದ್ಯಾರ್ಥಿನಿಯರಲ್ಲಿ 17827 (ಶೇ. 96.32) ಮಂದಿ ಉತ್ತೀರ್ಣರಾಗಿದ್ದಾರೆ. 18631 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 17363 (ಶೇ.93.19) ಮಂದಿ ಉತ್ತೀರ್ಣರಾಗಿದ್ದಾರೆ.

ಕಲಾ ವಿಭಾಗದಲ್ಲಿ ದ.ಕ. ಜಿಲ್ಲೆಯಲ್ಲಿ 3646 ಮಂದಿ ಪರೀಕ್ಷೆ ಬರೆದಿದ್ದು 3126 (ಶೇ.85.74) ಮಂದಿ ಉತ್ತೀರ್ಣರಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ 14964 ಮಂದಿ ಪರೀಕ್ಷೆ ಬರೆದಿದ್ದು, 13993 (ಶೇ.93.51) ಮಂದಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನದಲ್ಲಿ 18530 ಮಂದಿ ಪರೀಕ್ಷೆ ಬರೆದಿದ್ದು, 18071 (ಶೇ.97.52) ಮಂದಿ ಉತ್ತೀರ್ಣರಾಗಿದ್ದಾರೆ.

ಆಳ್ವಾಸ್ ಕಾಲೇಜ್ ಐತಿಹಾಸಿಕ ಸಾಧನೆ

ಮೂಡುಬಿದಿರೆ: ಆಳ್ವಾಸ್ ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ 2026ರಲ್ಲಿ ಅಸಾಧಾರಣ ಸಾಧನೆಗೈದು ತನ್ನ ಶೈಕ್ಷಣಿಕ ಮೇಲುಗೈಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.



ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ದಿಶಾ 600ರಲ್ಲಿ 600 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾಳೆ. ಆಳ್ವಾಸ್ ಪದವಿಪೂರ್ವ ಕಾಲೇಜಿನ ಅನನ್ಯ ಕೆ, 2023ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೊದಲ ರ್‍ಯಾಂಕ್ ಪಡೆದು, ದ್ವಿತೀಯ ಪಿಯು ಫಲಿತಾಂಶದ ಇತಿಹಾಸದಲ್ಲಿ ಮೊದಲ ಬಾರಿಗೆ ಈ ಸಾಧನೆ ಮೆರೆದಿದ್ದಳು.

ವಿಜ್ಞಾನ ವಿಭಾಗದಲ್ಲಿ ರಕ್ಷಿತಾ ಮಂಜುನಾಥ್ ಎಸ್ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದು ಶ್ರೇಷ್ಠ ಸಾಧನೆ ಮೆರೆದಿದ್ದಾಳೆ.

ಈ ವರ್ಷದ ಫಲಿತಾಂಶದಲ್ಲಿ 95 ವಿದ್ಯಾರ್ಥಿಗಳು ರಾಜ್ಯದ ಟಾಪ್ 10 ರ್‍ಯಾಂಕ್‌ಗಳಲ್ಲಿ ಸ್ಥಾನ ಪಡೆದಿದ್ದಾರೆ. 687 ವಿದ್ಯಾರ್ಥಿಗಳು 95% ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದರೆ, 1557 ವಿದ್ಯಾರ್ಥಿಗಳು 90% ಕ್ಕಿಂತ ಅಧಿಕ, 1892 ವಿದ್ಯಾರ್ಥಿಗಳು 85% ಕ್ಕಿಂತ ಹೆಚ್ಚು (ಡಿಸ್ಟಿಂಕ್ಷನ್) ಅಂಕಗಳನ್ನು ಗಳಿಸಿದ್ದಾರೆ. 285 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಪಲ್ಲವಿ ಕೆ. ಸಿ – 597, ಅಂಕಿತಾ ಒಸಪ್ಪ ಕೊನ್ನೂರ – 596, ದಿಶಾ ಎಚ್ ಶೆಟ್ಟಿ – 596, ಜ್ಞಾನಶ್ರೀ ಡಿ ಅರಳ – 596, ಆದರ್ಶ್ ಬಾಲಚಂದ್ರ ಹೆಗಡೆ – 596, ಲಿಜ್ವಿತಾ ವರ್ಜಿನಿಯಾ ಡಿ ಮೆಲ್ಲೋ – 596, ನೇಹಾ ಪಿ ಕರಡ್ಡಿ – 596, ಐಶ್ವರ್ಯ – 595, ಮಾನವಿ ಡಿ ಎಸ್ – 595, ನಿರಾಳಿ ಹೆಗ್ಗರ್ – 595, ಜಶ್ ಕಾವೇರಿಯಪ್ಪ ಎ. ಎಂ – 595, ವೈಷ್ಣವಿ ರಾವ್ – 595, ಅಕ್ಷಯಕುಮಾರ್ ಸೋಮಶೇಖರ ಗುಗ್ಗಾರಿ – 595 ಅಂಕವನ್ನು ಪಡೆದು ವಿಶೇಷ ಸಾಧನೆ ಮೆರೆದಿದ್ದಾರೆ.

ಗಣಿತ ವಿಷಯದಲ್ಲಿ 199, ಸಂಸ್ಕೃತ –122, ಬಿಸಿನೆಸ್ ಸ್ಟಡೀಸ್ –86, ಕಂಪ್ಯೂಟರ್ ಸೈನ್ಸ್ –86, ಭೌತಶಾಸ್ತ್ರ–85, ಕನ್ನಡ–82, ಬೇಸಿಕ್ ಮ್ಯಾತ್ಸ್– 54, ಅಕೌಂಟೆನ್ಸಿ–53, ಜೀವಶಾಸ್ತ್ರ–49, ಸಂಖ್ಯಾಶಾಸ್ತ್ರ–45, ಅರ್ಥಶಾಸ್ತ್ರ–36, ರಸಾಯನಶಾಸ್ತ್ರ–21, ಹಿಂದಿ–13, ಎಲೆಕ್ಟ್ರಾನಿಕ್ಸ್–6, ಇಂಗ್ಲೀಷ್ –3, ಸಮಾಜಶಾಸ್ತ್ರ–2, ರಾಜ್ಯಶಾಸ್ತ್ರ–1, ಅರೇಬಿಕ್–1 ವಿದ್ಯಾರ್ಥಿಗಳು 100ಕ್ಕೆ ನೂರು ಅಂಕಗಳನ್ನು ಗಳಿಸಿದ್ದಾರೆ.

6 ವಿಷಯಗಳಲ್ಲಿ 100ಕ್ಕೆ ನೂರು ಅಂಕಗಳನ್ನು ಒರ್ವ ವಿದ್ಯಾರ್ಥಿ, 5 ವಿಷಯಗಳಲ್ಲಿ 4, 4 ವಿಷಯಗಳಲ್ಲಿ 20, 3 ವಿಷಯಗಳಲ್ಲಿ 66, 2 ವಿಷಯದಲ್ಲಿ 147, ಒಂದು ವಿಷಯದಲ್ಲಿ 481 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದುಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಪ್ರೊ. ಎಂ. ಸದಾಕತ್, ಉಪ ಪ್ರಾಂಶುಪಾಲೆ ಝಾನ್ಸಿ ಪಿಎನ್, ವಾಣಿಜ್ಯ ವಿಭಾಗದ ಡೀನ್ ಪ್ರಶಾಂತ್ ಎಂ.ಡಿ., ಕಲಾ ನಿಕಾಯದ ವೇಣು ಗೋಪಾಲ ಶೆಟ್ಟಿ ಉಪಸ್ಥಿತರಿದ್ದರು.

ಬಿಜಿಎಸ್‌ಗೆ 98.2% ಫಲಿತಾಂಶ



ಮಂಗಳೂರು: ಕಾವೂರು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಬಿಜಿಎಸ್ ಪದವಿಪೂರ್ವ ದ್ವಿತೀಯ ಪಿಯುಸಿಯಲ್ಲಿ 98.2% ಫಲಿತಾಂಶ ದಾಖಲಾಗಿದೆ. ಸದರಿ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ 49 ಹಾಗೂ ವಾಣಿಜ್ಯ ವಿಭಾಗದಲ್ಲಿ 68 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹಾಜರಾಗಿದ್ದು ಇದರಲ್ಲಿ 27 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದ ಕು. ಶಾರ್ವರಿ 593 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ ಏಳನೇ ಸ್ಥಾನವನ್ನು ಪಡೆದಿರುತ್ತಾರೆ.

ವಿಜ್ಞಾನ ವಿಭಾಗದಲ್ಲಿ ಶಾರ್ವರಿ 593, ಯಶಿಕಾ 586, ಪೂರ್ವಿ ಬಿ. ಸುವರ್ಣ 580, ಗಣ್ಯಶ್ರೀ ಪಿ. ಸಿ. 571, ಇಶಾಂತ್ ವೈ. ಎಂ. 563, ಪ್ರಶಾಂತ 555 , ಮಂಜುನಾಥ ಡಿ. ಎಸ್. 546, ವರ್ಷ ಅನ್ನಪೂರ್ಣ 542, ರೋಹಿತ್ ಜಿ ಮಾದರ್ 542, ಇಶಿತಾ ಕೌಶಲ್ಯ 539, ಹರ್ಷ ಡಿ ರಮೇಶ 532, ನೀಲೇಶ್ 522, ಫಾತಿಮ ಅಸ್ನೀಯಾ 520, ಸುಡಲೈಕಣ್ಣು 517, ಅಭಿನವ್ ಬಿಸ್ವಾಲ್ 517.

ವಾಣಿಜ್ಯ ವಿಭಾಗದಲ್ಲಿ ಪ್ರೇರಣ ಪಿ. ದೇವಾಡಿಗ 578, ಸಮರ್ಥ ಸುಧಾಕರ 568, ಗಗನ್ ಕೆ. 550, ನಿತಿನ್ ಸಿ ಎ 549, ಅಮೃತ 548, ಕೃತಿ ಬಿ. ಕೊಟ್ಯಾನ್545, ಅನಿತ 538, ನಿಶಾ 536, ಅಂಕಿತ್ ಶೆಟ್ಟಿ534, ತೇಜಸ್ವಿ ಸಿ ಹೊಸಮಠ್ 526, ಮಹಮ್ಮದ್ ಆಖೀಲ್ 523 , ನೀಕ್ಷಾ ಭಂಡಾರಿ 520.

ಶಕ್ತಿ ಕಾಲೇಜ್ ಉತ್ತಮ ಸಾಧನೆ

ಮಂಗಳೂರು: ಶಕ್ತಿ ನಗರದ ಶಕ್ತಿ ಪ.ಪೂ. ಕಾಲೇಜಿನ ದ್ವಿತೀಯ ಪ.ಪೂ. ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದ ಪಿಸಿಎಂಬಿ ಮತ್ತು ಪಿಸಿಎಂಸಿ ವಿಭಾಗದಲ್ಲಿ ಒಟ್ಟು 65 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇವರಲ್ಲಿ 37 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. 25 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದ ಇಬಿಎಸಿ ಮತ್ತು ಇಬಿಎಎಸ್‌ನಲ್ಲಿ ಒಟ್ಟು 31 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇವರಲ್ಲಿ 14 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಪ್ರಥಮ ಶ್ರೇಣಿಯಲ್ಲಿ 13 ವಿದ್ಯಾರ್ಥಿಗಳು ಉತ್ತೀರ್ಣ ರಾಗಿದ್ದಾರೆ.



ವಿಜ್ಞಾನ ವಿಭಾಗದ ಪಿಸಿಎಮ್‌ಬಿಯಲ್ಲಿ ಶೆಟ್ಟಿ ಮೌಲ್ಯ ಕರುಣಾಕರ್ 588, ಪಿ.ಸಿ.ಎಂ.ಸಿ ಲಿಖಿತ್ ಗೌಡ ಎಸ್.ಡಿ. 587, ಪಿ.ಸಿ.ಎಂ.ಬಿ ಚಿಂತನ ಪಿ.ಆರ್ 585, ಪಿ.ಸಿ.ಎಂ.ಬಿ ಚೈತನ್ಯ ಪ್ರಕಾಶ್ ಸಿ ಎಂ 577, ಪಿ.ಸಿ.ಎಂ.ಸಿ ಭೂಮಿಕರಾವ್ 576, ಪಿ.ಸಿ.ಎಂ.ಸಿ ಪ್ರಣವ್ ರಾಜ್ ಆರ್ಯನ್ 575 ಅಂಕಗಳಿಸಿದ್ದಾರೆ.



ವಾಣಿಜ್ಯ ವಿಭಾಗದಲ್ಲಿ ಇ.ಬಿ.ಎ.ಸಿಯಲ್ಲಿ ಶ್ರೀ ವಿಷ್ಣು ಎ.ಎಸ್. 589, ಇ.ಬಿ.ಎ.ಎಸ್ ಯಶವಂತ್ ಎ.ಎಸ್.586, ಇ.ಬಿ.ಎ.ಸಿ. ಧೃತಿಕೋಟ್ಯಾನ್ 581,ಇ.ಬಿ.ಎ.ಸಿ ಮುಕೇಶ್ 581, ಇ.ಬಿ.ಎ.ಸಿ ದೀಪ್ತ ಎಂ.ಎಂ. 579, ಇ.ಬಿ.ಎ.ಸಿ ಸುಷ್ಮ ಕೆ. 578, ಇ.ಬಿ.ಎ.ಎಸ್. ಕೃತಿಕ ಕುಲಕರ್ಣಿ 575 ಅಂಕಗಳಿಸಿದ್ದಾರೆ.

ಶಕ್ತಿ ಪಪೂ ಕಾಲೇಜು ಫಲಿತಾಂಶದಲ್ಲಿ ಉತ್ತಮ ಸಾಧನೆ ತೋರಿರುವುದನ್ನು ಸಂಸ್ಥೆಯ ಆಡಳಿತಾಧಿಕಾರಿ ಡಾ. ಕೆ.ಸಿ.ನ್ಯಾಕ್ ಅಭಿನಂದಿಸಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ ಸಂಜೀತ್ ನ್ಯಾಕ್, ಪ್ರಧಾನ ಸಲಹೆಗಾರ ರಮೇಶ ಕೆ., ಶಕ್ತಿ ಪ.ಪೂ. ಕಾಲೇಜು ಪ್ರಭಾರ ಪ್ರಾಂಶುಪಾಲರಾದ ಮಂಜುನಾಥ ಚಾವಡಿ, ಶಕ್ತಿ ರೆಸಿಡೆನ್ಶಿಯಲ್ ಶಾಲೆ ಪ್ರಾಂಶುಪಾಲೆ ಬಬಿತಾ ಸೂರಜ್ ವಿದ್ಯಾರ್ಥಿಗಳನ್ನು ಹಾಗೂ ಉಪನ್ಯಾಸಕರನ್ನು ಅಭಿನಂದಿಸಿದ್ದಾರೆ.

ಎಕ್ಸ್‌ಪರ್ಟ್‌ನ ಇಬ್ಬರು ವಿದ್ಯಾರ್ಥಿಗಳಿಗೆ ತಲಾ 598 ಅಂಕ

ಪುಷ್ಪಗುಚ್ಛ ನೀಡಿ ಅಭಿನಂದಿಸಿದ ಆಡಳಿತ

ಮಂಗಳೂರು: ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ವಿಜ್ಞಾನ ವಿಭಾಗದಲ್ಲಿ 600ಕ್ಕೆ 598 ಅಂಕ ಗಳಿಸಿ ದಾಖಲೆ ಬರೆದಿದ್ದಾರೆ.

ನಂದನ್ ನಾಯಕ್ ಹಾಗೂ ಸಮನ್ಯು ಎಸ್. ಶೆಟ್ಟಿ ಇಬ್ಬರು ವಿದ್ಯಾರ್ಥಿಗಳು ಈ ಸಾಧನೆ ಮಾಡಿದವರು. ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕಾಲೇಜಿನ ಆಡಳಿತ ಮಂಡಳಿ ಇಬ್ಬರೂ ವಿದ್ಯಾರ್ಥಿಗಳಿಗೆ ಹೂಗುಚ್ಛ ನೀಡಿ ಅಭಿನಂದನೆ ಸಲ್ಲಿಸಿತು.

ಸುಳ್ಯದ ಬೀರ ಮಂಗಲ ನಿವಾಸಿ ಸಮನ್ಯು ಎಸ್ ಶೆಟ್ಟಿ ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದವರು. ಮಂಗಳೂರಿನಲ್ಲಿ ಬಾಡಿಗೆ ಕೊಠಡಿಯಲ್ಲಿ ವಾಸ್ತವ್ಯವಿದ್ದು ಕಾಲೇಜು ವ್ಯಾಸಂಗ ಮಾಡುತ್ತಿದ್ದರು. ಅಥ್ಲೆಟಿಕ್ ಆಗಿರುವ ಇವರು ಶಿಕ್ಷಣದಲ್ಲೂ ಯಶಸ್ಸು ಸಾಧಿಸಿದ್ದಾರೆ. ಮುಂದೆ ಅವರು ಸಿಇಟಿ ಮಾಡಿ ವೈದ್ಯಕೀಯ ವಿಭಾಗಕ್ಕೆ ಸೇರುವ ಆಶಯ ವ್ಯಕ್ತಪಡಿಸಿದ್ದಾರೆ.

ಮತ್ತೋರ್ವ ವಿದ್ಯಾರ್ಥಿ ನಂದನ್ ನಾಯಕ್ ಅವರು ಭಟ್ಕಳ ಮೂಲದವರು. ಇವರ ಹೆತ್ತವರು ಕೂಡ ವೈದ್ಯರಾಗಿದ್ದು, ತಂದೆ ಕಣ್ಣಿನ ಡಾಕ್ಟರ್ ಆಗಿದ್ದು, ತಾಯಿ ಗೈನಾಕಾಲಜಿಸ್ಟ್. ಹೆತ್ತವರಂತೆ ತಾನೂ ಕೂಡ ವೈದ್ಯನಾಗಕೇಂದುಕೊಂಡಿದ್ದೇನೆ ಎಂದು ನಂದನ್ ನಾಯಕ್ ಹೇಳಿದ್ದಾರೆ. ಎಕ್ಸ್‌ಪರ್ಟ್ ಕಾಲೇಜಿನ ದೀಕ್ಷಾ ಶೆಣೈ,ಅದಿತಿ ಐ ರೆಡ್ಡಿ, ಆಮೋಘ್ ಬಿ ಲೋಕ, ಸುಹಾನ್ ನಾರಾಯಣ ಬಿಲ್ಲವ ಎಂಬ ನಾಲ್ವರು ವಿದ್ಯಾರ್ಥಿಗಳು 596 ಅಂಕ ಗಳಿಸಿದ್ದಾರೆ.



ವೈದ್ಯನಾಗುವ ಕನಸು ಇದೆ

ಸತತ ಪ್ರಯತ್ನಕ್ಕೆ ಫಲ ಸಿಕ್ಕಿದೆ. 598 ಅಂಕ ಬಂದಿರುವುದು ಖುಷಿ ತಂದಿದೆ. ಎರಡು ಅಂಕ ಕೈ ತಪ್ಪಿರುವ ಬೇಸರವೂ ಇದೆ. ಎಕ್ಸ್‌ಪರ್ಟ್ ಸಂಸ್ಥೆಯ ನಿರಂತರ ಮಾರ್ಗದರ್ಶನ ಮತ್ತು ಹೆತ್ತವರ ಪ್ರೋತ್ಸಾಹದಿಂದಾಗಿ ಸಾಧನೆ ಸಾಧ್ಯವಾಗಿದೆ. ನನಗೆ ಪ್ರೋತ್ಸಾಹ ನೀಡಿದ ಎಲ್ಲರಿಗೂ ಧನ್ಯವಾದ ಸಲ್ಲಿಸುತ್ತೇನೆ. ಮುಂದೆ ವೈದ್ಯನಾಗುವ ಕನಸಿದೆ.

■ ಸಮನ್ಯು ಎಸ್.ಶೆಟ್ಟಿ

ಹೆಚ್ಚಿನ ಸಾಧನೆ ಮಾಡಬೇಕು

ಎಕ್ಸ್‌ಪರ್ಟ್ ಸಂಸ್ಥೆಯ ಪ್ರೋತ್ಸಾಹವನ್ನು ಎಂದೂ ಮರೆಯಲಾಗದು. ನನ್ನ ಸಾಧನೆಯ ಹಿಂದೆ ಅವರ ನಿರಂತರ ಮಾರ್ಗದರ್ಶನವಿದೆ. ನನ್ನ ತಂದೆ ತಾಯಿ ಇಬ್ಬರೂ ಕೂಡ ವೈದ್ಯರು. ನಾನು ಕೂಡ ವೈದ್ಯನಾಗುವ ಕನಸು ಹೊಂದಿದ್ದೇನೆ. ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡಬೇಕು.

■ ನಂದನ್ ನಾಯಕ್

ಪುತ್ತೂರಿನ ವಿವೇಕಾನಂದದ ಅಭಿರಾಮ್ ವಿ. ಭಟ್ ರಾಜ್ಯಕ್ಕೆ ದ್ವಿತೀಯ

ಪುತ್ತೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸಿದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ರಲ್ಲಿ ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಯನ್ನು ಮಾಡಿರುತ್ತಾರೆ. ವಿಜ್ಞಾನ ವಿಭಾಗದಲ್ಲಿ ಬಂಟ್ವಾಳ ತಾಲೂಕಿನ ವಸಂತ ಕುಮಾರ್ ಎನ್. ಹಾಗೂ ಸುಲೋಚನಾ ಕುಮಾರಿ ಬಿ.ಕೆ. ದಂಪತಿ ಪುತ್ರ ಅಭಿರಾಮ್ ವಿ. ಭಟ್ 598 ಅಂಕಗಳೊಂದಿಗೆ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಕಡೇಶಿವಾಲಯದ ಮನ್ವಿತ ಹಾಗೂ ಕೊಡಗು ಜಿಲ್ಲೆಯ ಬಿಂದು ಎಚ್.ಆರ್. 596 ಅಂಕಗಳೊಂದಿಗೆ ಮತ್ತು ಕಲಾ ವಿಭಾಗದಲ್ಲಿ ಪುತ್ತೂರು ನೆಹರು ನಗರದ ರೂಪಶ್ರೀ 584 ಅಂಕಗಳೊಂದಿಗೆ ಪುತ್ತೂರು ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.



ವಿಜ್ಞಾನ ವಿಭಾಗದಲ್ಲಿ ತೀರ್ಥ ಶೆಟ್ಟಿ595, ಶ್ರೀಜಾ 594, ಪ್ರಾಪ್ತಿ ಆಳ್ವ 593, ಮಂಗಳಾಮೃತ ಕೆ.ಆರ್. 592 ಹಾಗೂ ಪ್ರಸ್ತುತಿ ಪಿ. ಅದಿತಿ ಯು. 590 ಅಂಕಗಳನ್ನು ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪ್ರಮಥ ಎಂ. ಭಟ್ 594, ಶ್ರೀವಿದ್ಯಾ ಜೆ. 593, ಸುಶ್ಮಿತಾ ಬಿ. 592, ಸಹನ ಮಳಿ 591 ಅಂಕಗಳನ್ನು ಪಡೆದುಕೊಂಡಿದ್ದಾರೆ. ಕಲಾ ವಿಭಾಗದಲ್ಲಿ ಪ್ರೀತಿ ಸುನಿಲ್ ಚಿಲ್ಲಾಲ್ 582, ಬಿಂದು ಕೆ.ಜೆ. 580, ಕಿರಣ್ ಆರ್. 577, ಶೋಭಿತಾ ಸಿ.ಎಚ್. 571 ಅಂಕಗಳನ್ನು ಪಡೆದುಕೊಂಡಿರುತ್ತಾರೆ.

ಕಾಲೇಜಿನ ಒಟ್ಟು 820 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 447 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 330 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇದರೊಂದಿಗೆ ಪುತ್ತೂರಿನಲ್ಲಿ ರಾಜ್ಯ ಮಟ್ಟದಲ್ಲಿ ಅತ್ಯಧಿಕ ರಾಂಕ್‌ಗಳನ್ನು ಗಳಿಸಿದ ಏಕೈಕ ವಿದ್ಯಾ ಸಂಸ್ಥೆ ಎನ್ನುವ ಹೆಗ್ಗಳಿಕೆಗೆ ವಿವೇಕಾನಂದ ಪದವಿ ಪೂರ್ವ ಕಾಲೇಜ್ ಪಾತ್ರವಾಗಿದೆ.

ವಾಣಿಜ್ಯದಲ್ಲಿ ಆಳ್ವಾಸ್‌ನ ದಿಶಾ ಪ್ರಥಮ

ಮಂಗಳೂರು: ದ್ವಿತೀಯ ಪಿಯುಸಿ ಫಲಿತಾಂಶ ಇಂದು ಪ್ರಕಟಗೊಂಡಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ದಿಶಾ ಅವರು ವಾಣಿಜ್ಯ ವಿಭಾಗದಲ್ಲಿ 600ಕ್ಕೆ 600 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನಿಯಾಗಿ ಹೊರಹೊಮ್ಮಿದ್ದಾರೆ.



ಸಂತಸ ಹಂಚಿಕೊಂಡ ಅವರು, ಹೆತ್ತವರ ಮತ್ತು ಉಪನ್ಯಾಸಕರ ಸತತ ಪ್ರೋತ್ಸಾಹ ಮತ್ತು ಮಾರ್ಗದರ್ಶನ ನನ್ನ ಸಾಧನೆಗೆ ಕಾರಣವಾಗಿದೆ. ಸಮಯ ಸಿಕ್ಕಾಗಲೆಲ್ಲಾ ಓದುತ್ತಾ ಇದ್ದೆ. ಅಂದಂದಿನ ಪಾಠವನ್ನು ಆ ದಿನವೇ ಮನನ ಮಾಡಿಕೊಳ್ಳುತ್ತಿದ್ದೆ. ನಿರಂತರ ಶ್ರಮದಿಂದಾಗಿ ಹೆಚ್ಚು ಅಂಕ ಗಳಿಸಲು ಸಹಕಾರಿಯಾಯಿತು ಮುಂದೆ ಸಿಎ ಮಾಡಬೇಕೆಂದಿದ್ದುಕೊಂಡಿದ್ದೇನೆ ಎಂದು ತಿಳಿಸಿದ್ದಾರೆ.

ಇಂದ್ರಪ್ರಸ್ಥ ಪದವಿ ಪೂರ್ವ ಕಾಲೇಜಿನ ಅನಘಾ ಕೆ. ರಾಜ್ಯಕ್ಕೆ ದ್ವಿತೀಯ

ಉಪ್ಪಿನಂಗಡಿ: 2025–26ನೇ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ಉಪ್ಪಿನಂಗಡಿಯ ಇಂದ್ರಪ್ರಸ್ಥ ಪದವಿ ಪೂರ್ವಕಾಲೇಜಿನ ಅನಘಾ ಕೆ. 600ರಲ್ಲಿ 597 ಅಂಕಗಳಿಸಿ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾಗಿ ಹೊರ ಹೊಮ್ಮಿದ್ದಾರೆ.

ಅನಘಾ ಕೆ ರವರು ಕೊಕ್ಕಡದ ಹರಿಪ್ರಸಾದ್ ಕೆದಿಲಾಯ, ಶ್ವೇತಾ ಹೆಚ್.ಕೆ. ದಂಪತಿಗಳ ಪುತ್ರಿಯಾಗಿದ್ದು, ಪ್ರೌಢ ಶಿಕ್ಷಣವನ್ನು ನೆಲ್ಯಾಡಿಯ ಸಂತ ಜಾರ್ಜ್ ವಿದ್ಯಾ ಸಂಸ್ಥೆಯಲ್ಲಿ ಪೂರೈಸಿದ್ದು, ಪಿಯುಸಿ ಶಿಕ್ಷಣವನ್ನು ಉಪ್ಪಿನಂಗಡಿಯ ಇಂದ್ರಪ್ರಸ್ಥ ವಿದ್ಯಾಲಯದಲ್ಲಿ ಪಡೆದಿರುತ್ತಾರೆ.

ಇಂಜಿನಿಯರ್ ಆಗುವ ಕನಸಿದೆ

ಅನಘಾ ಕೆ. ಅವರನ್ನು ಪತ್ರಿಕೆ ಮಾತನಾಡಿಸಿದಾಗ, ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾಗುತ್ತೇನೆ ಎಂದು ನಿರೀಕ್ಷಿಸಿರಲಿಲ್ಲ. 95 ಶೇಕಡಾ ಕ್ಕಿಂತ ಹೆಚ್ಚು ಅಂಕ ಗಳಿಸುವ ನಿರೀಕ್ಷೆ ಇತ್ತು. ಕಾಲೇಜಿನಲ್ಲಿ ಉತ್ತಮ ರೀತಿಯಲ್ಲಿ ಪಾಠ ಪ್ರವಚನ ನಡೆಸಿ ಕಲಿಕೆಗೆ ಉತ್ತಮ ಪ್ರೋತ್ಸಾಹ ನೀಡಿದ್ದರು. ಮನೆಯಲ್ಲಿ ಹೆತ್ತವರ ಸಹಕಾರ ಅನುದಿನವೂ ನನಗೆ ಲಭಿಸಿತ್ತು. ಹೆತ್ತವರ ಹಾಗೂ ಇಂದ್ರಪ್ರಸ್ಥ ಕಾಲೇಜಿನ ಪ್ರೋತ್ಸಾಹದಿಂದಾಗಿ ನಾನಿಂದು ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾಗಿ ಉತ್ತಮ ಫಲಿತಾಂಶ ಪಡೆಯುವಂತಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.



ಶೇ 100 ಫಲಿತಾಂಶ

ಉಪ್ಪಿನಂಗಡಿಯ ಇಂದ್ರಪ್ರಸ್ಥ ಕಾಲೇಜಿನಲ್ಲಿ ಪರೀಕ್ಷೆ ಬರೆದ 101 ವಿದ್ಯಾರ್ಥಿಗಳಲ್ಲಿ 66 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 35 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಗೊಂಡಿರುತ್ತಾರೆ.

ತನ್ಮೂಲಕ ಶೇ 100 ರ ನಿರಂತರ ಫಲಿತಾಂಶ ದಾಖಲಿಸಿಕೊಂಡಿದೆ. ಕಾಲೇಜಿನ ಅನಘ ಕೆ 597 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಪಿ. ವಿ. ವಿದಿಶಾ 589 ಅಂಕ ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಕೆ. ಪೃಥ್ವಿ ಪ್ರಭು 587 ಅಂಕ ಪಡೆದು ಕಾಲೇಜಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಮಂಗಳೂರು
ಶುಕ್ರವಾರ, 10 ಏಪ್ರಿಲ್ 2026
ಸಂಪುಟ 48, ಸಂಚಿಕೆ 22 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಪೊಲೀಸ್ ಹುದ್ದೆಗಳಿಗೆ ನೇಮಕ ಶೀಘ್ರ |೦೫
ಸಂಸದರಾಗಿ ಇಂದು ನಿತೀಶ್ ಪ್ರಮಾಣ |೦೭
ಸುನೇತ್ರಾ ಪವಾರ್ ಅವಿರೋಧ ಆಯ್ಕೆ? |೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ :ಅಷ್ಟಮಿ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ನಿಜವಾದ ವಿವೇಕಿಯು ಸದಾ ಶಾಂತ ಸ್ವಭಾವದವನಾಗಿರುತ್ತಾನೆ.

▲ಚಾಣಕ್ಯ

ಇರಾನ್ ಸಮರದಿಂದ ಬಯಲಾದ ಮಿಥ್ಯೆಗಳು !

• ಉತ್ವಲ್ ಕುಮಾರ್

• ಪುಟ ೬

ಕಿರುಸುದ್ದಿ

ಅರ್ಚಕರ ನೇಮಕ ಧಾರ್ಮಿಕ ವಿಷಯ: ಕೇಂದ್ರ

• **ಹೊಸದಿಲ್ಲಿ:** ದೇವಾಲಯಗಳಲ್ಲಿ ಅರ್ಚಕರ ನೇಮಕಾತಿ ಸರ್ಕಾರದ ಮಂಡಳಿಗಳ ನಿಯಂತ್ರಣಕ್ಕೆ ಒಳಪಡುವ ಲೌಕಿಕ ಕ್ರಮವಲ್ಲ, ಅದು ಧಾರ್ಮಿಕ ಪರಂಪರೆ ಮತ್ತು ಆಚರಣೆಗಳಿಗೆ ಸಂಬಂಧಿಸಿದ ವಿಷಯವಾಗಿದೆ ಎಂದು ಸುಪ್ರೀಂಕೋರ್ಟ್ ಮುಂದೆ ಕೇಂದ್ರ ಸರ್ಕಾರ ವಾದ ಮಂಡಿಸಿದೆ. ಹಾಗೆಯೇ, ಪಂಥಾಧಾರಿತವಾಗಿ ದೇವಾಲಯ ಪ್ರವೇಶ ನಿರ್ಬಂಧಿಸಿದರೆ ಹಿಂದೂಧರ್ಮವೇ ಹಾನಿಗೊಳಗಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದ ಪ್ರಸಂಗವೂ ನಡೆಯಿತು.

• ಪುಟ ೨

ಎಲ್‌ಪಿಜಿ ಟ್ಯಾಂಕರ್ ಗ್ರೀನ್ ಆಶಾ ಭಾರತಕ್ಕೆ ಆಗಮನ

• **ಮುಂಬೈ:** ಭಾರತದ ಧ್ವಜ ಹೊಂದಿರುವ ಗ್ರೀನ್ ಆಶಾ ನೌಕೆ, ಹಾರ್ಮುಜ್ ಜಲಸಂಧಿಯನ್ನು ಯಶಸ್ವಿ ಯಾಗಿ ದಾಟಿದ್ದು, 15,000 ಟನ್‌ಗಳಿಗಿಂತ ಹೆಚ್ಚು ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತು ಗುರುವಾರ ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರ ತಲುಪಿದೆ.

ಇಂದು ಸಿಎಂ ದಿಲ್ಲಿಗೆ: ಸಂಪುಟ ವಿಸ್ತರಣೆ ಚರ್ಚೆ

• ಪುಟ ೫

ಸಂಸ್ಕೃತಿಗೆ ವಿರುದ್ಧವಾದ ಸ್ಥಳದ ಹೆಸರು ಬದಲು

• ಪುಟ ೫

ಮಿಸ್ರಿ ಅಮೆರಿಕ ಭೇಟಿ: ಒಪ್ಪಂದಗಳ ಬಗ್ಗೆ ಚರ್ಚೆ

• ಪುಟ ೭

ಕರಾವಳಿ ರಾಜ್ಯದಿಂದ ಸವಾಲು ಅವಕಾಶಗಳಾಗಿ ಪರಿವರ್ತನೆ

• ಪುಟ ೭

3 ಮಕ್ಕಳನ್ನು ಹೊಂದಬೇಕು: ಹಿಂದುಗಳಿಗೆ ಸೀಮಾ ಹೈದರ್

• ಪುಟ ೭

ಅಮ್ಮನ ಅಗಲಿಕೆ ನೋವಲ್ಲೂ ಗುರಿ ಸಾಧಿಸಿದ ದಿಶಾ

▸ ನಂದಿನಿ ಎನ್.



• **ಬೆಂಗಳೂರು :** ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುತ್ತಿರುವಾಗಲೇ ತನ್ನ ತಾಯಿಯನ್ನು ಕಳೆದುಕೊಂಡ ನೋವಿನಲ್ಲೂ ಧೃತಿಗೆಡದೆ ತನ್ನ ಸಾಧನೆಯನ್ನೇ ಗುರಿಯಾಗಿಸಿಕೊಂಡು, ಪರೀಕ್ಷೆಯಲ್ಲಿ 600ಕ್ಕೆ 600 ಅಂಕಗಳನ್ನು ಪಡೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ದಿಶಾ ಅವರು ಕರ್ನಾಟಕದ ಕೀರ್ತಿಗೆ ಪಾತ್ರರಾಗಿದ್ದಾರೆ.

ಫೆ.28ರಂದು ದ್ವಿತೀಯ ಪಿಯುಸಿ ಆರಂಭಗೊಂಡಿದ್ದು, ಪರೀಕ್ಷೆ ಆರಂಭವಾಗಿ ಕೇವಲ ಮೂರು ದಿನಗಳಾಗಿತ್ತು. ದಿಶಾ ತಾಯಿ ಮೃತಪಟ್ಟಿದ್ದರು. ತಾಯಿಯನ್ನು ಕಳೆದುಕೊಂಡ ನೋವಿನಲ್ಲೂ ಪರೀಕ್ಷೆಗಳನ್ನು ಬರೆದು, ವಾಣಿಜ್ಯ ವಿಭಾಗದಲ್ಲಿ ಎಲ್ಲ ವಿಷಯಗಳಿಂದ 600ಕ್ಕೆ 600 ಅಂಕಗಳನ್ನು ಪಡೆದು ರಾಜ್ಯಕ್ಕೆ ನಂಬರ್ 1 ಸ್ಥಾನ ಪಡೆದಿದ್ದಾರೆ.

ಮೂರು ಪರೀಕ್ಷೆ ಮುಗಿದಿತ್ತು. ಮುಂದಿನ ಗಣಿತ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದರು. ಆದರೆ, ದಿಶಾ ಜೀವನದ ಪರೀಕ್ಷೆಯಲ್ಲಿ ಸಿಡಿಲು ಬಡಿದಂತಾಯಿತು. ಅಮ್ಮ ಬಿಟ್ಟು ಹೋದರು ಎಂಬ ದುಃಖ ಒಂದೆಡೆಯಾದರೆ, ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಬೇಕೆಂಬ ಛಲ ಮತ್ತೊಂದೆಡೆ. ಅದೇ ರೀತಿ ತನ್ನ ಛಲವನ್ನು ಬಿಡದೆ ಸಾಧಿಸಿ ತೋರಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆ ಮೂರು ಪರೀಕ್ಷೆ ಮುಗಿದಿದ್ದವು ಅಷ್ಟೇ. ಮನೆಯಲ್ಲಿ ನಾನು ಮತ್ತು ನನ್ನ ತಂಗಿ ಕೊಠಡಿಯಲ್ಲಿ ಓದಿಕೊಳ್ಳುತ್ತಿದ್ದೆವು. ಹೊರಗಿನಿಂದ ಏಕಾಏಕಿ ಕೆಳಗೆ ಬಿದ್ದ ನನ್ನ ತಾಯಿ ಸವಿತಾ ಅವರಿಗೆ ಪ್ರಜ್ಞೆ ಇಲ್ಲದಂತಾಯಿತು. ಅಂದು ಪರೀಕ್ಷೆಗೆ ಹೋಗಬೇಕಿತ್ತು. ನನ್ನ ಆತಂಕವನ್ನು ಗಮನಿಸಿದ ತಂದೆ ದಿನೇಶ್ ಕೋಟ್ಯಾನ್ ಅವರು, ಸವಿತಾರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆಂದು ಪರೀಕ್ಷೆ ಬರೆಯಲು ಧೈರ್ಯ ನೀಡಿದ್ದರು. ಹಾಗಾಗಿ ಅಮ್ಮನ ಚೇತರಿಕೆ ಆತಂಕದ ನಡುವೆಯೇ ಪರೀಕ್ಷೆ ಬರೆದೆ.

➡ಪುಟ ೪

- 3 ಪರೀಕ್ಷೆ ಮುಗಿದು, ಗಣಿತ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದಾಗ ಅಮ್ಮನ ಸಾವು
- ದುಃಖ ಮೀರಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ
- ಮನೆಯಲ್ಲಿ ತೀವ್ರ ಸಂಕಷ್ಟಗಳ ನಡುವೆ 600ಕ್ಕೆ 600 ಅಂಕ

ಆಳ್ವಾಸ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ದಿಶಾ ಅವರ ಈ ಸಾಧನೆ ನಮಗೆ ಅತ್ಯಂತ ಸಂತೋಷ ತಂದಿದೆ. ಆಕೆಗೆ ನಾನು ಮತ್ತು ನಮ್ಮ ಸಂಸ್ಥೆ ಸಂಪೂರ್ಣ ಬೆಂಬಲ ನೀಡುತ್ತಿದ್ದೇವೆ. ಮುಂದೆಯೂ ನೀಡಲಿದ್ದೇವೆ. ಆಕೆಯ ಈ ಯಶಸ್ವಿನ ಹಿನ್ನೆಲೆ 3 ಲಕ್ಷ ರೂ. ಗಳನ್ನು ಬಹುಮಾನವಾಗಿ ನೀಡುತ್ತೇವೆ.

■ **ಮೋಹನ್ ಆಳ್ವ,** ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ಮೂಡುಬಿದಿರೆ)

ಪಿಯು ಪರೀಕ್ಷೆ–1ರ ಫಲಿತಾಂಶ ಪ್ರಕಟ, । ದಕ್ಷಿಣ ಕನ್ನಡ ಜಿಲ್ಲೆಗೆ ದ್ವಿತೀಯ ಸ್ಥಾನ

ಉಡುಪಿ ಜಿಲ್ಲೆ ಪ್ರಥಮ

• **ಬೆಂಗಳೂರು:** 2026ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ಶೇ.81.58ರಷ್ಟು ಫಲಿತಾಂಶ ದಾಖಲಾಗಿದೆ. ಕಳೆದ ಸಾಲಿಗಿಂತ ಶೇ.11.42ರಷ್ಟು ಹೆಚ್ಚಳವಾಗಿದೆ. ಪರೀಕ್ಷೆಗೆ ಹಾಜರಾದ ಒಟ್ಟು 6,94,545 ವಿದ್ಯಾರ್ಥಿಗಳ ಪೈಕಿ 5,66,608 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಉಡುಪಿ ಜಿಲ್ಲೆ ಪ್ರಥಮ ಸ್ಥಾನ ಪಡೆದರೆ, ದಕ್ಷಿಣ ಕನ್ನಡ ದ್ವಿತೀಯ, ತೃತೀಯ ಕೊಡಗು ಹಾಗೂ ಯಾದಗಿರಿ ಕೊನೆಯ ಸ್ಥಾನದಲ್ಲಿದೆ.

ದ್ವಿತೀಯ ಪಿಯುಸಿ ಪರೀಕ್ಷೆ-1ರ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಶೇ.81.58ರ ದಾಖಲೆಯ ಫಲಿತಾಂಶ ಪ್ರಕಟವಾಗಿದೆ. 2023–24ನೇ ಸಾಲಿನಲ್ಲಿ ಒಟ್ಟಾರೆ ಫಲಿತಾಂಶ ಶೇ.81.15 ದಾಖಲಾಗಿದ್ದು, ಈ ವರೆಗಿನ ದಾಖಲೆಯಾಗಿತ್ತು. ಪ್ರಸಕ್ತ ವರ್ಷ ಪರೀಕ್ಷೆ -1 ಬರೆದಿದ್ದ ಒಟ್ಟು 6,94,545 ವಿದ್ಯಾರ್ಥಿಗಳ ಪೈಕಿ 5,66,608 ಮಂದಿ ಉತ್ತೀರ್ಣರಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಎಲ್ಲರನ್ನೂ ಉತ್ತೀರ್ಣಗೊಳಿಸಿದ್ದನ್ನು ಹೊರತುಪಡಿಸಿದರೆ, ಇದು ಐತಿಹಾಸಿಕ ಫಲಿತಾಂಶ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಬಣ್ಣಿಸಿದ್ದಾರೆ. ಈ ಬಾರಿ ಪರೀಕ್ಷೆ ಬರೆದಿದ್ದ ಹೊಸಬರು ಶೇ.86.48 ಮಂದಿ ಉತ್ತೀರ್ಣರಾಗಿದ್ದು, ಇದು ಸಹ ದಾಖಲೆಯೇ. 2023–24ರ ರಲ್ಲಿ ಹೊಸಬರ ಫಲಿತಾಂಶ ಶೇ.84.59ರಷ್ಟು ಬಂದಿದ್ದು, ಈ ವರೆಗಿನ ದಾಖಲೆಯಾಗಿತ್ತು. ಕಳೆದ ಶೈಕ್ಷಣಿಕ ವರ್ಷ (2024–25)ದ ಪರೀಕ್ಷೆ-1ರ ಫಲಿತಾಂಶಕ್ಕೆ ಹೋಲಿಸಿದರೆ ಈ ಬಾರಿ ಶೇ.11.42ರಷ್ಟು ಫಲಿತಾಂಶ ಜಿಗಿತ ಕಂಡಿದೆ.

➡ಪುಟ ೪








ಇಬ್ಬರಿಗೆ 600ಕ್ಕೆ 600 ಅಂಕ

ವಾಣಿಜ್ಯ ವಿಭಾಗದಲ್ಲಿ ಬೆಂಗಳೂರಿನ ಎಸ್.ಬಿ.ಮಹಾವೀರ ಜೈನ್ ಪಿಯು ಕಾಲೇಜಿನ ಅಧಿತಿ ಎ. ಬಾಪು ಮತ್ತು ಮೂಡುಬಿದಿರೆಯ ಆಳ್ವಾಸ್ ಪಿಯು ಕಾಲೇಜಿನ ದಿಶಾ 600ಕ್ಕೆ 600 ಅಂಕ, ಕಲಾ ವಿಭಾಗದಲ್ಲಿ ಬಳ್ಳಾರಿಯ ಇಂದು ಪಿಯು ಕಾಲೇಜಿನ ಅರ್ಚನಾ ಡಿ.ಎಂ. 598, ಸಂಗೀತಾ 598, ಎಸ್‌ಎಂಟಿ ವಿಜಿ ಪಿಯು ಕಾಲೇಜಿನ ಶ್ರುತಿ 598, ವಿಜ್ಞಾನ ವಿಭಾಗದಲ್ಲಿ ಮಂಗಳೂರಿನ ದಿ ಲರ್ನಿಂಗ್ ಸೆಂಟರ್ ಪಿಯು ಕಾಲೇಜಿನ ಪ್ರಿಸ್ಸಿಲ್ಲಾ ಕಾರ್ಡೋಜಾ 599 ಅಂಕಗಳೊಂದಿಗೆ ಆಯಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಜಿಲ್ಲೆಗಳ ಶೇಕಡಾವಾರು ಉತ್ತೀರ್ಣ ಫಲಿತಾಂಶ

ಜಿಲ್ಲೆ	2026ರ ಉತ್ತೀರ್ಣ
ಉಡುಪಿ	96.39
ದಕ್ಷಿಣ ಕನ್ನಡ	96.35
ಕೊಡಗು	92.34
ಉತ್ತರ ಕನ್ನಡ	91.78
ಬೆಂಗಳೂರು ಗ್ರಾಮಾಂತರ	91.00

➡ಪುಟ ೪

ಪುದುಚೇರಿ: ದಾಖಲೆಯ ಶೇ.90 ಮತ

ಕೇರಳ, ಅಸ್ಸಾಂನಲ್ಲಿ ಭರ್ಜರಿ ಮತದಾನ

• **ತಿರುವನಂತಪುರಂ/ಗುವಾಹಟಿ:** ಅಸ್ಸಾಂ ಮತ್ತು ಕೇರಳ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಮತದಾನ ದಾಖಲಾಗಿದ್ದು, ಅಸ್ಸಾಂನಲ್ಲಿ ಶೇ.85ಕ್ಕೂ ಹೆಚ್ಚು ಮತದಾನವಾಗಿದ್ದರೆ, ಕೇರಳದಲ್ಲಿ ಶೇ.78ಕ್ಕೂ ಹೆಚ್ಚು ಮತದಾನ ನಡೆದಿದೆ ಎಂದು ಚುನಾವಣಾ ಆಯೋಗದ ಪ್ರಾಥಮಿಕ ಅಂಕಿ–ಅಂಶಗಳು ತಿಳಿಸಿವೆ. ಈ ಎರಡೂ ರಾಜ್ಯಗಳಲ್ಲಿ ಆಡಳಿತದಲ್ಲಿರುವ ಸರ್ಕಾರಗಳು ಮೂರನೇ ಅವಧಿಗೆ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿವೆ.

ಅಸ್ಸಾಂನಲ್ಲಿ ಭಾರೀ ಮತದಾನ: ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಈ ಬಾರಿ ನಡೆದ ಮತದಾನವನ್ನು ಐತಿಹಾಸಿಕ ಎಂದು ಬಣ್ಣಿಸಿದ್ದಾರೆ. ಜನರ ಮುಖಗಳಲ್ಲಿ ಕಂಡುಬರುವ ಭರವಸೆ, ಹೆಮ್ಮೆ ಮತ್ತು ಸಂತೋಷವೇ ಈ ಚುನಾವಣೆಯ ಫಲಿತಾಂಶವನ್ನು ಈಗಲೇ ಸೂಚಿಸುತ್ತಿದೆ ಎಂದು ಅವರು ಹೇಳಿದರು. ಇನ್ನೊಂದೆಡೆ, ಕಾಂಗ್ರೆಸ್ ನಾಯಕ ಗೌರವ್ ಗೋಗೊಯಿ ಅವರು ಈ ಭಾರೀ ಮತದಾನವು ಹೊಸ ಮತ್ತು ಉತ್ತಮ ಅಸ್ಸಾಂ ನಿರ್ಮಾಣದ ಸಂಕೇತವಾಗಿದೆ ಎಂದು ಅಭಿಪ್ರಾಯಪಟ್ಟರು. ಮತ ಎಣಿಕೆ ಪ್ರಕ್ರಿಯೆ ಸರಿಯಾಗಿ ನಡೆಯುವಂತೆ ಮತ್ತು ಇವಿಎಂಗಳ ಭದ್ರತೆ ಕಾಪಾಡುವಂತೆ ಚುನಾವಣಾ ಆಯೋಗಕ್ಕೆ ಅವರು ಮನವಿ ಮಾಡಿದರು.

➡ಪುಟ ೪



ಅಸ್ಸಾಂನ ತಮುಲ್ಪುರ ಮತಗಟ್ಟೆಯಲ್ಲಿ ಮತ ಚಲಾಯಿಸಿದ ಬೋಡೋ ಬುಡಕಟ್ಟು ಮಹಿಳೆ

ಉಪ ಚುನಾವಣೆ ಶೇ.68 ಮತದಾನ

ದಾವಣಗೆರೆ/ಬಾಗಲಕೋಟೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಶೇ.68.55, ಬಾಗಲಕೋಟೆ ಕ್ಷೇತ್ರದಲ್ಲಿ ಶೇ.68.73 ಮತದಾನವಾಗಿದ್ದು, ಮತದಾನ ಬಹುತೇಕ ಶಾಂತಿಯುತವಾಗಿ ಮುಕ್ತಾಯ ಗೊಂಡಿತು.

➡ಪುಟ ೪

ಲೆಬನಾನ್ ವಿಷಯದಲ್ಲಿ ಭಿನ್ನಾಭಿಪ್ರಾಯ

ಕದನ ವಿರಾಮವಿನ್ನೂ ಅಸ್ಥಿರ

• **ದುಬೈ:** ತಾತ್ಕಾಲಿಕ ಕದನ ವಿರಾಮ ಒಪ್ಪಂದವು ಮಧ್ಯಪ್ರಾಚ್ಯದಲ್ಲಿ ಬೂದಿಮುಚ್ಚಿದ ಕೆಂಡದಂತಿದೆ. ಈ ಮಧ್ಯೆ ಬೈರೂತ್ ಮೇಲೆ ಇಸ್ರೇಲ್ ನಡೆಸಿದ ಬಾಂಬ್ ದಾಳಿ, ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್‌ನ ಹಿಡಿತ ಹಾಗೂ ಶನಿವಾರ ನಡೆಯಲಿರುವ ಸಂಧಾನ ಮಾತುಕತೆಗಳ ಬಗ್ಗೆ ಇರುವ ಅನಿಶ್ಚಿತತೆ ಸೇರಿ ಈ ಪರಿಸ್ಥಿತಿಯನ್ನು ಗಂಭೀರಗೊಳಿಸಿವೆ. ಕದನ ವಿರಾಮದ ಬಳಿಕ ಯುದ್ಧದಲ್ಲಿ ನಮ್ಮದೇ ಜಯ ಎಂದು ಇರಾನ್ ಮತ್ತು ಅಮೆರಿಕ ಘೋಷಿಸಿಕೊಂಡಿದ್ದು, ಉದ್ವಿಗ್ನತೆ ಮುಂದುವರಿದಿದೆ. ಇರಾನ್‌ನ ಸರ್ಕಾರಿ ಮಾಧ್ಯಮಗಳು ಹಾರ್ಮುಜ್ ಜಲಸಂಧಿಯಲ್ಲಿ ಸಮುದ್ರ ಮೈನ್‌ಗಳನ್ನು ಇರಿಸಲಾಗಿದೆ ಎಂದು ಹೇಳಿವೆ. ಈ ಜಲಸಂಧಿ ಜಾಗತಿಕ ತೈಲ ಸಾಗಣೆಯಲ್ಲಿ ಅತ್ಯಂತ ಪ್ರಮುಖವಾಗಿದೆ.

➡ಪುಟ ೪



ಪಾಕ್ ವಿಶ್ವಾಸಾರ್ಹವಲ್ಲ

• ಪುಟ ೪



ದಾಳಿ ನಿಂತರೆ ಮಾತ್ರ ಹಾರ್ಮುಜ್ ಮುಕ್ತ!

ಇರಾನ್ ಉಪ ವಿದೇಶಾಂಗ ಸಚಿವ ಸಯೀದ್ ಖತೀಬ್ ಜಾದೆಹ್ ಮಾತನಾಡಿ, ಅಮೆರಿಕ ತನ್ನ ಆಕ್ರಮಣ ನಿಲ್ಲಿಸಿದ ಬಳಿಕ ಹಾಗೂ ಇಸ್ರೇಲ್ ಲೆಬನಾನ್ ಮೇಲೆ ದಾಳಿಗಳನ್ನು ನಿಲ್ಲಿಸಿದರೆ ಮಾತ್ರ ಹಡಗುಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಮುಕ್ತ ಸಂಚಾರಕ್ಕೆ ಅವಕಾಶ ನೀಡಲಾಗುತ್ತದೆ ಎಂದಿದ್ದಾರೆ. ಈ ಪರಿಸ್ಥಿತಿಯಿಂದ ಜಾಗತಿಕ ತೈಲ ಬೆಲೆ ಗಗನಕ್ಕೇರಿದೆ.

ಪ.ಬಂಗಾಳಕ್ಕೆ 6 ಗ್ಯಾರಂಟಿ ಘೋಷಿಸಿದ ಮೋದಿ

• **ಹಲ್ದಿಯಾ:** ಪಶ್ಚಿಮ ಬಂಗಾಳದಲ್ಲಿ ಕ್ರೂರ ಸರ್ಕಾರ ನಡೆಯುತ್ತಿದೆ ಎಂದು ಆಡಳಿತದಲ್ಲಿರುವ ತೃಣಮೂಲ ಕಾಂಗ್ರೆಸ್(ಟಿಎಂಸಿ) ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿಯವರು. ಬಂಗಾಳವನ್ನು ಅಭಿವೃದ್ಧಿಯ ಹಾದಿಯಿಂದ ಹಿಂದಕ್ಕೆಳೆಯಲಾಗುತ್ತಿದೆ ಎಂದು ಟೀಕಿಸಿದರು.ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಶುಕ್ರವಾರ ಹಲ್ದಿಯಾ ನಗರದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಆರು ಗ್ಯಾರಂಟಿಗಳನ್ನು ಘೋಷಿಸಿದರು. ಮೊದಲನೆಯದಾಗಿ, ಟಿಎಂಸಿ ಸರ್ಕಾರದ ಭಯದ ಆಡಳಿತವನ್ನು ವಿಶ್ವಾಸದ ಆಡಳಿತ ವಾಗಿ ಬದಲಿಸುವುದಾಗಿ ಹೇಳಿದರು. ಎರಡನೆಯದಾಗಿ, ಆಡಳಿತ ವ್ಯವಸ್ಥೆಯನ್ನು ಸುಧಾರಿಸಿ ಸರ್ಕಾರಿ ಅಧಿಕಾರಿಗಳನ್ನು ಜನತೆಗೆ ಉತ್ತರದಾಯಕರನ್ನಾಗಿಸಲಾಗುವುದು ಎಂದು ಭರವಸೆ ನೀಡಿದರು.

➡ಪುಟ ೪



- ರಾಜ್ಯದಲ್ಲಿ ಮಮತಾ ನೇತೃತ್ವದಲ್ಲಿ ಕ್ರೂರ ಸರ್ಕಾರ: ಪ್ರಧಾನಿ ತೀವ್ರ ವಾಗ್ದಾಳಿ

ಬಿಜೆಪಿ ಅಧಿಕಾರಕ್ಕೆ ಬಂದರೆ ವಿಶ್ವಾಸದ ವಾತಾವರಣ

• ಪುಟ ೪

ಶ್ರೀನಂದಾ ಪತ್ತೆಗೆ ವ್ಯಾಪಕ ಶೋಧ

• **ಚಿಕ್ಕಮಗಳೂರು:** ಕೇರಳದ ಪಾಲಕ್ಕಾಡ್‌ನ 15 ವರ್ಷದ ಬಾಲಕಿ ಶ್ರೀನಂದಾ ನಾಪತ್ತೆ ಪ್ರಕರಣ ದಿನೇ ದಿನೇ ಜಟಿಲಗೊಳ್ಳುತ್ತಿದ್ದು, ಪೊಲೀಸ್ ಇಲಾಖೆ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಬಾಲಕಿಯ ಪೋಷಕರು, ಸಂಬಂಧಿಕರು ಸಂಕಟದಲ್ಲಿ ಮುಳುಗಿದ್ದಾರೆ. ಏಪ್ರಿಲ್ 7ರಂದು ಸಂಜೆ 5.30ಕ್ಕೆ ದತ್ತಪೀಠದ ಮಾಣಿಕ್ಯಧಾರ ಜಲಪಾತದ ಬಳಿ ತಂದೆಯೊಂದಿಗೆ ರೀಲ್ಸ್ ಮಾಡಿದ್ದ ಬಾಲಕಿ ಮೆಟ್ಟಿಲು ಇಳಿಯುವಾಗ ಮೂರ್‍ನಾಲ್ಕು ನಿಮಿಷದಲ್ಲಿ ಕಾಣೆಯಾಗಿದ್ದಳು.

ನಾಪತ್ತೆ ಹಿಂದೆ ಸಂಚು: ಬಾಲಕಿ ಆಕಸ್ಮಿಕವಾಗಿ ಕಣಿವೆಗೆ ಬಿದ್ದಿರಬಹುದು ಎಂಬ ಸಂಶಯದಲ್ಲೇ ಪೊಲೀಸರು ಶೋಧ ಕಾರ್ಯ ನಡೆಸುತ್ತಿದ್ದರು.

➡ಪುಟ ೪

- ದತ್ತಪೀಠದ ಮಾಣಿಕ್ಯಧಾರ ದಲ್ಲಿ ಕೇರಳ ಬಾಲಕಿ ನಾಪತ್ತೆ

ಉಡುಪಿ ಜಿಲ್ಲೆ ಪ್ರಥಮ

ಪುಟ ೩➡ ಕಳೆದ ವರ್ಷ ಕಲಾ ವಿಭಾಗದಲ್ಲಿ ಶೇ. 53,29 ಫಲಿತಾಂಶ ಬಂದಿದ್ದರೆ ಈ ವರ್ಷ ಸುಮಾರು ಶೇ. 20ರಷ್ಟು ಫಲಿತಾಂಶ ಏರಿಕೆ ಕಂಡಿದ್ದು ಶೇ. 72.86 ಫಲಿತಾಂಶ ಬಂದಿದೆ. ಉಳಿದಂತೆ ಈ ಬಾರಿ ವಾಣಿಜ್ಯ ಶೇ.88.04, (ಕಳೆದ ಬಾರಿ ಶೇ. 76.07), ವಿಜ್ಞಾನ ಶೇ.91.69 (ಕಳೆದ ಬಾರಿ ಶೇ.82.54) ಫಲಿತಾಂಶ ಬಂದಿದೆ.

74 ಸರ್ಕಾರಿ ಪ.ಪೂ. ಕಾಲೇಜು, 6 ಅನುದಾನಿತ ಪ.ಪೂ. ಕಾಲೇಜು, 265 ಅನುದಾನ ರಹಿತ ಪ.ಪೂ. ಕಾಲೇಜು, 64 ವಸತಿ ಶಾಲಾ ಪ.ಪೂ. ಕಾಲೇಜಿಗೆ ಶೇ.100ರಷ್ಟು ಫಲಿತಾಂಶ ಬಂದಿದ್ದರೆ, 1 ಸರ್ಕಾರಿ, 7 ಅನುದಾನಿತ, 37 ಅನುದಾನ ರಹಿತ ಹಾಗೂ 2 ವಸತಿ ಶಾಲಾ ಪ.ಪೂ. ಕಾಲೇಜು ಸೇರಿದಂತೆ 47 ಪ.ಪೂ. ಕಾಲೇಜುಗಳಿಗೆ ಶೂನ್ಯ ಫಲಿತಾಂಶ ಲಭ್ಯವಾಗಿದೆ. ನಗರಕ್ಕಿಂತ ಗ್ರಾಮೀಣ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಸ್ ಆಗಿರುವುದು ಈ ಬಾರಿಯ ವಿಶೇಷ. ಈ ಬಾರಿ ಗ್ರಾಮೀಣ ಭಾಗದಲ್ಲಿ ಶೇ. 87.62 ಫಲಿತಾಂಶ ಬಂದಿದ್ದು ನಗರ ಭಾಗದಲ್ಲಿ ಶೇ. 85.95 ಫಲಿತಾಂಶ ದಾಖಲಾಗಿದೆ. ಕಳೆದ ವರ್ಷ ಗ್ರಾಮೀಣ ಭಾಗದಲ್ಲಿ ಶೇ. 69.33 ಫಲಿತಾಂಶ ಬಂದಿದ್ದರೆ, ನಗರ ಭಾಗದಲ್ಲಿ ಶೇ. 74.55 ಫಲಿತಾಂಶ ದಾಖಲಾಗಿತ್ತು.

ಈ ಬಾರಿ ಉತ್ತಮ ಫಲಿತಾಂಶ ಬಂದಿದೆ. ಆದ್ದರಿಂದ ಪರೀಕ್ಷೆ -2 ಮಾತ್ರ ಪರೀಕ್ಷೆ ನಡೆಸಲಿದ್ದು, ಪರೀಕ್ಷೆ-3 ಅನ್ನು ನಡೆಸುವುದಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಮಾಹಿತಿ ನೀಡುತ್ತೇನೆ.
■ ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ

ಜಿಲ್ಲೆಗಳ ಶೇಕಡಾವಾರು ಫಲಿತಾಂಶ

ಉಡುಪಿ	96.39
ದಕ್ಷಿಣ ಕನ್ನಡ	96.35
ಕೊಡಗು	92.34
ಉತ್ತರ ಕನ್ನಡ	91.78
ಬೆಂಗಳೂರು ಗ್ರಾಮಾಂತರ	91.00
ಚಿಕ್ಕಮಗಳೂರು	90.80
ಬೆಂಗಳೂರು ದಕ್ಷಿಣ	90.55
ಚಿಕ್ಕಬಳ್ಳಾಪುರ	90.24
ಬೆಂಗಳೂರು ಉತ್ತರ	90.05
ರಾಮನಗರ	87.90
ಕೋಲಾರ	87.38
ತುಮಕೂರು	86.89
ಕೊಪ್ಪಳ	86.80
ಚಾಮರಾಜನಗರ	84.68
ಮೈಸೂರು	84.80
ಬಾಗಲಕೋಟೆ	84.12
ಬೀದರ್	84.61
ಚಿಕ್ಕೋಡಿ	83.10
ಧಾರವಾಡ	83.31
ಬೆಳಗಾವಿ	80.32
ಮಂಡ್ಯ	88.85
ರಾಮನಗರ	87.90
ಶಿವಮೊಗ್ಗ	87.62
ಹಾವೇರಿ	84.11
ಹಾಸನ	89.71
ದಾವಣಗೆರೆ	81.99
ಕಲಬುರಗಿ	76.97
ಗದಗ	76.65
ಚಿತ್ರದುರ್ಗ	79.12
ಬಳ್ಳಾರಿ	78.69
ರಾಯಚೂರು	74.09
ವಿಜಯಪುರ	92.00
ಯಾದಗಿರಿ	71.21

ವಿದ್ಯಾರ್ಥಿನಿಯರೇ ಮೇಲುಗೈ

ಎಂದಿನಂತೆ ಈ ಬಾರಿಯೂ ವಿದ್ಯಾರ್ಥಿನಿಯರೇ ಹೆಚ್ಚು ಅಂಕಗಳಿಸುವ ಮೂಲಕ ಮೇಲುಗೈ ಸಾಧಿಸಿದ್ದು, ಪರೀಕ್ಷೆ ಎದುರಿಸಿದ 3,53,742 ವಿದ್ಯಾರ್ಥಿನಿಯರಲ್ಲಿ 3,13,770(ಶೇ.88.70) ರಷ್ಟು ಬಾಲಕಿಯರು ಉತ್ತೀರ್ಣರಾಗಿದ್ದಾರೆ. ಅಲ್ಲದೇ 2,78,458 ವಿದ್ಯಾರ್ಥಿಗಳ ಪೈಕಿ 2,32,928 (ಶೇ.83.65)ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ. ಅದರಲ್ಲೂ ಈ ವರ್ಷ ಮೂರು ವಿಭಾಗದಲ್ಲಿಯೂ ಪ್ರಥಮ ರ್‍ಯಾಂಕ್ ಪಡೆದಿರುವುದು ವಿದ್ಯಾರ್ಥಿನಿಯರಾಗಿದ್ದಾರೆ.



ಅಮ್ಮನ ಅಗಲಿಕೆ ನೋವಲ್ಲೂ ಗುರಿ ಸಾಧಿಸಿದ ದಿಶಾ

ಪುಟ ೩➡ ತಂಗಿ ಆಸ್ಪತ್ರೆಯಲ್ಲಿ ಇದ್ದಿದ್ದರಿಂದ ಮುಂದಿನ ಅರ್ಥಶಾಸ್ತ್ರ ಪರೀಕ್ಷೆಗೆ ನಮ್ಮ ಮನೆಯ ವಾಚ್‌ಮ್ಯಾನ್ ಮನೆಯಲ್ಲಿ ಉಳಿದು ಕೊಂಡು ಸಿದ್ಧತೆ ನಡೆಸುತ್ತಿದ್ದೆ. ಪರೀಕ್ಷೆ ಬರೆದು ನಾನು ಆಸ್ಪತ್ರೆಗೆ ಹೋಗಿದ್ದೆ, ಅಂದು ರಾತ್ರಿ 9 ಗಂಟೆ ಸುಮಾರಿಗೆ ನನ್ನ ತಾಯಿ ಮೃತಪಟ್ಟಿರುವುದು ದೃಢವಾಯಿತು. ನಂತರ ತಾಯಿಯ ಕಾರ್ಯ ಮುಗಿದ ಬಳಿಕ ನನ್ನ ಕಾಲೇಜಿನ ಶಿಕ್ಷಕರು ಅದರಲ್ಲೂ ವೀಣಾ(ಶಿಕ್ಷಕಿ) ಪರೀಕ್ಷೆಗೆ ಸಮಸ್ಯೆಯಾಗಬಾರದೆಂಬ ನಿಟ್ಟಿನಲ್ಲಿ ನನ್ನನ್ನು ಹಾಗೂ ನನ್ನ ಸಹೋದರಿಯನ್ನು ಅವರ ಮನೆಗೆ ಕರೆದೊಯ್ದರು. ಒಂದನ್ನು ಕಳೆದುಕೊಂಡಾಯಿತು. ಮತ್ತೊಂದನ್ನು ಕಳೆದು ಕೊಳ್ಳಬಾರದೆಂದು ಪರೀಕ್ಷೆಯೆಡೆಗೆ ಹೆಚ್ಚು ಗಮನಹರಿಸಿದೆ. ಎರಡು ಪರೀಕ್ಷೆಯನ್ನು ನನ್ನ ಶಿಕ್ಷಕಿ ವೀಣಾ ಮೇಡಂ ಅವರ ಮನೆಯಲ್ಲೇ ಬರೆದಿದ್ದೇನೆ. ಇವೆಲ್ಲ ಸಂಘರ್ಷಗಳೇ ಸಾಧನೆಯ ದಾರಿಯಲ್ಲಿ ಕೈ ಹಿಡಿದು ಮುನ್ನಡೆಸಿತು.

ಸಿ. ಎ. ನನ್ನ ಗುರಿ

ಸಿ.ಎ. ಮಾಡುವ ಗುರಿ ಇದೆ. ಮೇ 14 ರಂದು ಸಿ.ಎ. ಫೌಂಡೇಶನ್ ಪರೀಕ್ಷೆ ಇರುವುದರಿಂದ ಈಗಿನಿಂದಲೇ ಸಿದ್ಧತೆ ನಡೆಸುತ್ತಿದ್ದೇನೆ. ಸಿ.ಎ. ಇಂಟಿಗ್ರೇಟೆಡ್ ಬಿ.ಕಾಂ ತೆಗೆದುಕೊಳ್ಳಲು ಆಸಕ್ತಿ ಇದೆ. ಕಾಲೇಜಿನಲ್ಲಿ ಆಗಾಗ ನಡೆಸುತ್ತಿದ್ದ ಪರೀಕ್ಷೆಗಳು ಉತ್ತಮ ಅಂಕಗಳಿಗೆ ಪೂರಕವಾಗಿವೆ. ಇನ್ನು 1 ತಿಂಗಳಿನಲ್ಲಿ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ ಎಂದು ದಿಶಾ ತಿಳಿಸಿದರು.

ದ್ವಿತೀಯ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಸಿಕ್ಕಿದೆ. ಬಹಳ ಸಂತೋಷವಾಗಿದ್ದು, ನನ್ನ ಈ ಸಾಧನೆಗೆ ನನ್ನ ಕಾಲೇಜು ಹಾಗೂ ಶಿಕ್ಷಕರು, ಪ್ರಾಂಶುಪಾಲರು ಮುಖ್ಯ ಕಾರಣರಾಗಿದ್ದಾರೆ. ಶಿಕ್ಷಕರು ಬೇಗ ಸಿಲಬಸ್‌ಗಳನ್ನು ಮುಗಿಸಿ, ಹೆಚ್ಚು-ಹೆಚ್ಚು ಪರೀಕ್ಷೆಗಳನ್ನು ಕೊಡುತ್ತಿದ್ದರು. ತಪ್ಪಿದ್ದರೆ ಸರಿಯಾಗಿ ಹೇಳಿಕೊಡುತ್ತಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕೇಸರಿ ಯಾವುದೇ ಪಕ್ಷದ ಸೊತ್ತಲ್ಲ, ಅದು ಧರ್ಮವನ್ನು ಪ್ರತಿನಿಧಿಸುವ ಗೌರವದ ಪ್ರತೀಕವಾಗಿದೆ- ಕರಿಂಜೆ -ಮುಕ್ತಾನಂದ ಸ್ವಾಮೀಜಿ ಧರ್ಮದ ನಿಜವಾದ ಅರ್ಥವನ್ನು ಅರಿಯಲಾರದವರಿಗೆ ಇದು ಅರ್ಥವಾಗಲಾರದು.ಹಾಗಾಗಿ ಕೆಲವರಿಗೆ ಕೇಸರಿ ಕಂಡರೆ ಕಣ್ಣು ಕೆಂಪಾಗುವುದು, ಮೈ ನಡುಗುವುದು!

ದಿನ ಭವಿಷ್ಯ

ಮೇಷ ನಿಮ್ಮ ಕರ್ತವ್ಯನಿಷ್ಠೆ ಎಲ್ಲರ ಮೆಚ್ಚುಗೆಗೆ ಪಾತ್ರ. ಆದರೆ ಬಸವಳಿಯುವಷ್ಟು ಕೆಲಸ ಮಾಡದಿರಿ. ವಿಶ್ರಾಂತಿಯೂ ಇರಲಿ. ಕೌಟುಂಬಿಕ ಸಮಾಧಾನ

ವೃಷಭ ಹಿರಿಯರಿಂದ ಒತ್ತಡ ಎದುರಿಸುವಿರಿ. ಕೆಲ ವಿಷಯದಲ್ಲಿ ಅತಿಯಾಗಿ ಚಿಂತಿಸಲು ಹೋಗಬೇಡಿ. ಲಘುವಾಗಿ ಪರಿಗಣಿಸಿ. ಹಿತಾಸಕ್ತಿ ಕಾಯ್ದುಕೊಳ್ಳಿ.

ಮಿಥುನ ವೃತ್ತಿಯಲ್ಲಿ ನಿಮ್ಮ ಹೊಣೆ ಸರಿಯಾಗಿ ನಿಭಾಯಿಸುವಿರಿ. ಕೆಲ ವಿಷಯದಲ್ಲಿ ನಿಮ್ಮ ಕಾರ್ಯಶೈಲಿ ಬದಲಿಸುವ ಅಗತ್ಯವಿದೆ. ಧನಪ್ರಾಪ್ತಿ.

ಕಟಕ ಉದ್ಯೋಗದಲ್ಲಿ ಅತೃಪ್ತಿ. ಬದಲಾವಣೆಗೆ ಕಾಲ ಕೂಡಿಬರಲಿದೆ. ಸಾಲ ಪಡೆದಿದ್ದರೆ ಮರುಪಾವತಿ ಸುಲಭವಾಗಲಿದೆ. ಸ್ನೇಹಿತರ ನೆರವು.

ಸಿಂಹ ಇಂದು ವೈಫಲ್ಯಕ್ಕೆ ಎದೆಗುಂದಬೇಡಿ. ಇದು ನಿಮ್ಮ ಮಂತ್ರವಾಗಲಿ. ಸತತ ಪ್ರಯತ್ನದಿಂದ ಯಶ ಸಾಧಿಸುವಿರಿ. ಆಪ್ತರ ಜತೆ ಮುನಿಸು ನಿವಾರಣೆ.

ಕನ್ಯಾ ಅಭಿವೃದ್ಧಿಯ ಪಥ ನಿಮ್ಮ ಮುಂದಿದೆ. ಎಡವದೆ ಮುಂದರಿಯಿರಿ. ಆಪ್ತರ ಜತೆ ತುಸು ಕಾಲ ಕಳೆಯಿರಿ. ಅವರನ್ನು ಕಡೆಗಣಿಸಬೇಡಿ.

ತುಲಾ ಉತ್ಸಾಹದ ದಿನ. ಉದ್ದೇಶಿತ ಕಾರ್ಯ ಸಫಲ. ನಿಮ್ಮ ನೇರ ಮಾತು ಕೆಲವರಿಗೆ ಅಸಮಾಧಾನ ತಂದೀತು. ಮೆದು ಮಾತು ಒಳಿತು.

ವೃಶ್ಚಿಕ ಹೊಸ ಸವಾಲು. ಮಾನಸಿಕ ಅಸಹನೆ. ಕುಟುಂಬ ಸದಸ್ಯರ ಸಂಗದಲ್ಲಿ ಸಮಾಧಾನ. ನಿರ್ಧಾರದಲ್ಲಿ ಅನಿಶ್ಚಿತತೆ ಬೇಡ, ದೃಢತೆಯಿರಲಿ.

ಧನು ಆಪ್ತರ ಸಂಗದಲ್ಲಿ ಕಾಲ ಕಳೆಯಿರಿ. ನಿಮ್ಮ ನೋವು, ಸಂಕಷ್ಟ ಮರೆಯಲು ಇದು ಸಹಕಾರಿ. ಬಂಧುಮಿತ್ರರ ಅಸಹಕಾರ ಎದುರಿಸುವಿರಿ.

ಮಕರ ವೃತ್ತಿ ಸಂಬಂಧಿತ ವಿಷಯವನ್ನು ತಾಳ್ಮೆಯಿಂದ ನಿಭಾಯಿಸಿ. ಬಿಕ್ಕಟ್ಟು ನಿವಾರಿಸಲು ವಿಳಂಬ ಮಾಡಬೇಡಿ. ಕ್ಷಿಪ್ರ ನಿರ್ಧಾರ ಅವಶ್ಯ.

ಕುಂಭ ದಂಪತಿಗಳು ಹಳೆಯ ವಿಚಾರ ಬಿಟ್ಟು ವ್ಯವಹರಿಸಿ. ಕಲಹ ಶಮನಕ್ಕೆ ಇದು ಅಗತ್ಯ. ವೃತ್ತಿಯಲ್ಲಿ ಕೆಲವರ ಟೀಕೆ ಎದುರಾಗಬಹುದು.

ಮೀನ ಕೌಟುಂಬಿಕವಾಗಿ ಸಮಾಧಾನಕರ ಸ್ಥಿತಿ. ಆರೋಗ್ಯಕ್ಕೆ ಗಮನ ಕೊಡಿ. ನೆಗೆಟಿವ್ ಚಿಂತನೆ ಬದಿಗಿಡಿ. ಸಕಾರಾತ್ಮಕ ಭಾವನೆ ಬೆಳೆಸಿಕೊಳ್ಳಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 6,0,4,

ಸೃಷ್ಟಿ ಮಲ್ಲಿನಾಥ, ಅರ್ಚನ ದೊಡ್ಡಮನಿ, ಸಂಗೀತಾ ಅದ್ಭುತ ಸಾಧನೆ

ಕಲಾ ವಿಭಾಗದಲ್ಲಿ ಪ್ರಥಮ

• **ಕಲಬುರಗಿ/ ಕೊಟ್ಟೂರು:** 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಇಂದು ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು 600ಕ್ಕೆ 598 ಅಂಕ ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ.





ಕಲಬುರಗಿಯ ವೀರಮ್ಮ ಗಂಗಸಿರಿ (ವಿಜಿ) ಮಹಿಳಾ ಪಿಯು ಕಾಲೇಜಿನ ವಿದ್ಯಾರ್ಥಿನಿ ಸೃಷ್ಟಿ ಮಲ್ಲಿನಾಥ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾಳೆ.

600 ಅಂಕಗಳಲ್ಲಿ598 ಅಂಕಗಳನ್ನು ಗಳಿಸಿರುವ ಸೃಷ್ಟಿ, ಕನ್ನಡದಲ್ಲಿ 100, ಇಂಗ್ಲಿಷ್‌ನಲ್ಲಿ 99, ಇತಿಹಾಸದಲ್ಲಿ 99, ಅರ್ಥಶಾಸ್ತ್ರದಲ್ಲಿ 100, ಸಮಾಜ ಶಾಸ್ತ್ರದಲ್ಲಿ 100 ಹಾಗೂ ರಾಜಕೀಯ ಶಾಸ್ತ್ರದಲ್ಲಿ 100 ಅಂಕಗಳನ್ನು ಪಡೆದು ರಾಜ್ಯದ ಶ್ರೇಷ್ಠ ಸ್ಥಾನಕ್ಕೇರಿದ್ದಾಳೆ. ಈ ಸಾಧನೆಯ ಮೂಲಕ ಕಾಲೇಜು, ಪಾಲಕರು ಹಾಗೂ ಜಿಲ್ಲೆಯ ಹೆಸರು ಬೆಳಗಿಸಿದ್ದಾಳೆ. ವಿದ್ಯಾರ್ಥಿನಿಯ ಈ ಸಾಧನೆಗೆ ಕಠಿಣ ಪರಿಶ್ರಮವೇ ಪ್ರಮುಖ ಕಾರಣ ಎಂದು ಕಾಲೇಜಿನ ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿದೆ.

ಕೊಟ್ಟೂರು ಪಟ್ಟಣದ ಇಂದು ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಕಲಾ ವಿಭಾಗದ ದ್ವಿತೀಯ ಪಿಯುನಲ್ಲಿ 600ಕ್ಕೆ 598 ಅಂಕ ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ. ಈ ಇಬ್ಬರು ವಿದ್ಯಾರ್ಥಿನಿಯರು ಗ್ರಾಮೀಣ ಭಾಗದಲ್ಲಿನ ಕೃಷಿಕರ ಮಕ್ಕಳು ಎಂಬುದು ವಿಶೇಷ.

ಹರಪನಹಳ್ಳಿ ತಾಲೂಕಿನ ಬಳಿಗಾನೂರು ಗ್ರಾಮದ ಅರ್ಚನ ದೊಡ್ಡಮನಿ (598) ಮತ್ತು ಕೊಪ್ಪಳ ಜಿಲ್ಲೆ ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಸಂಗೀತಾ (598) ಟಾಪ್ ಒಂದನೇ ಸ್ಥಾನದಲ್ಲಿ ತೇರ್ಗಡೆಯಾಗಿದ್ದಾರೆ. ಕಾಲೇಜಿನ ಹಾಸ್ಟೆಲ್‌ನಲ್ಲಿದ್ದ ಸಂಗೀತ, ಬಳಿಗಾನೂರಿನಿಂದ ದಿನವೂ ಬಸ್‌ನಲ್ಲಿ ಕಾಲೇಜಿಗೆ ಬರುತ್ತಿದ್ದ ಅರ್ಚನ ದೊಡ್ಡಮನಿ, ರಾಜ್ಯವೇ ಗಮನ ಸೆಳೆಯುವಂತಹ ಸಾಧನೆ ಮಾಡುವ ಮೂಲಕ ಇಂದು ಪಿಯು ಕಾಲೇಜಿನ ರ್‍ಯಾಂಕ್ ನಾಗಲೋಟವನ್ನು ಮುಂದುವರಿಸಿದ್ದಾರೆ. ಇಂದು ಪಿಯು ಕಾಲೇಜು ದ್ವಿತೀಯ ಪಿಯು ಫಲಿತಾಂಶದಲ್ಲಿ ಸತತವಾಗಿ 11ನೇ ವರ್ಷದಲ್ಲಿಯೂ ತನ್ನ ಉನ್ನತ ಸ್ಥಾನ ಪಡೆವ ಸಾಧನೆಯನ್ನು ಮಾಡಿದೆ. ಕನ್ನಡದಲ್ಲಿ 100ಕ್ಕೆ 98 ಅಂಕ ಪಡೆದ ಅರ್ಚನ ದೊಡ್ಡಮನಿ, ಸಂಸ್ಕೃತ, ಐಚ್ಛಿಕ ಕನ್ನಡ, ಇತಿಹಾಸ, ರಾಜ್ಯ ಶಾಸ್ತ್ರ, ಶಿಕ್ಷಣದಲ್ಲಿ ತಲಾ 100 ಅಂಕ ಪಡೆದಿದ್ದಾರೆ.ಸಂಗೀತಾ ಅವರು ಕನ್ನಡ, ಸಂಸ್ಕೃತ, ಐಚ್ಛಿಕ ಕನ್ನಡ, ರಾಜ್ಯ ಶಾಸ್ತ್ರ, ಶಿಕ್ಷಣದಲ್ಲಿ 100 ಅಂಕಗಳನ್ನು, ಇತಿಹಾಸದಲ್ಲಿ 99 ಅಂಕಗಳನ್ನು ಪಡೆದಿದ್ದಾರೆ.

ಎರಡು ವರ್ಷದ ಪ್ರಯತ್ನಕ್ಕೆ ಫಲ

ಕಲಬುರಗಿಯ ವೀರಮ್ಮ ಗಂಗಸಿರಿ (ವಿಜಿ) ಮಹಿಳಾ ಪಿಯು ಕಾಲೇಜಿನ ಮುಖ್ಯಗುರುಗಳಾದ ಡಾ.ಮೋಹನ್ ರಾಜ್ ಪತ್ತಾರ ಮಾತನಾಡಿ, ಸೃಷ್ಟಿಯ ಸಾಧನೆ ನಮ್ಮ ಕಾಲೇಜಿಗೆ ಮಾತ್ರವಲ್ಲದೆ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ. ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆಯಬೇಕು ಎಂಬ ಉದ್ದೇಶದಿಂದ ನಿರಂತರ ಪ್ರಯತ್ನ ಮಾಡುತ್ತಿದ್ದೇವೆ. ಕಳೆದ ವರ್ಷ 587 ಅಂಕಗಳೊಂದಿಗೆ ಟಾಪ್ 10ರಲ್ಲಿ ಸ್ಥಾನ ಪಡೆದಿದ್ದೇವೆ. ಈ ಬಾರಿ ಸೃಷ್ಟಿ ನಮ್ಮ ಕನಸನ್ನು ನನಸಾಗಿಸಿದ್ದಾಳೆ ಎಂದು ಸಂತೋಷ ವ್ಯಕ್ತಪಡಿಸಿದರು. ಪಾಲಕರ ಪ್ರೋತ್ಸಾಹ ಮತ್ತು ಶಿಕ್ಷಕರ ನಿರಂತರ ಮಾರ್ಗದರ್ಶನ ವಿದ್ಯಾರ್ಥಿನಿಯ ಸಾಧನೆಗೆ ಮುಖ್ಯ ಕಾರಣವಾಗಿದ್ದು, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಶೀಲ್ ನಮೋಶಿ, ಉಪಾಧ್ಯಕ್ಷ ರಾಜಾ ಭೀಮಳ್ಳಿ ಸೇರಿದಂತೆ ಮಂಡಳಿಯ ಸದಸ್ಯರ ಸಹಕಾರವೂ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.



ರಾಜ್ಯಕ್ಕೆ ಪ್ರಥಮವಾಗಿ ಬರುತ್ತೇನೆ ಎಂದು ಅನ್ಕೊಂಡೆ ಇರಲಿಲ್ಲ. ಒಮ್ಮೆಯಾದರೂ ರಾಜ್ಯಕ್ಕೆ ಪ್ರಥಮ ಬಂದು ತಂದೆ ತಾಯಿ, ಕಲಿಸಿದ ಶಿಕ್ಷಕರ ಹೆಸರು ಎತ್ತರಕ್ಕೆ ಕೊಂಡೊಯ್ಯಬೇಕು ಎಂಬ ಆಸೆಯಿತ್ತು. ಇದೀಗ ಆ ಆಸೆ ಈಡೇರಿದೆ.
■ ಸೃಷ್ಟಿ ಮಲ್ಲಿನಾಥ, ವಿದ್ಯಾರ್ಥಿನಿ

ಅರ್ಜಿ ಸಲ್ಲಿಸಲು ಏ.15ರವರೆಗೆ ಅವಕಾಶ

ಡಿಜಿಲಾಕರ್‌ನಲ್ಲಿ ಅಂಕಪಟ್ಟಿ

• **ಬೆಂಗಳೂರು:** ದ್ವಿತೀಯ ಪಿಯುಸಿ ಅಂಕಪಟ್ಟಿಯನ್ನು ಎನ್‌ಎಡಿ ಡಿಜಿಲಾಕರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಯ ಛಾಯ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕೆ ವೆಬ್‌ಸೈಟ್ https://kseab.karnataka.gov.inನಲ್ಲಿ ಲಭ್ಯವಿದೆ.



ಜೊತೆಗೆ ಕರ್ನಾಟಕ ಒನ್ ಮೊಬೈಲ್ ಆ್ಯಪ್‌ನಲ್ಲಿ ಸಲ್ಲಿಸಬಹುದು. ಉತ್ತರ ಪತ್ರಿಕೆಯ ಛಾಯಾ ಪ್ರತಿಗೆ ಅರ್ಜಿ ಸಲ್ಲಿಸಲು ಏ.15ರವರೆಗೆ ಸಮಯವಕಾಶ ನೀಡಲಾಗಿದೆ. ಉತ್ತರ ಪತ್ರಿಕೆಯ ಛಾಯಾ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು ಏ.12ರಿಂದ 17ರವರೆಗೆ, ಮರು ಮೌಲ್ಯಮಾಪನಕ್ಕಾಗಿ ಹಾಗೂ ಮರು ಎಣಿಕೆಗಾಗಿ ಅರ್ಜಿ ಸಲ್ಲಿಸಲು ಏ. 13 ರಿಂದ 19ರವರೆಗೆ ಸಮಯ ನೀಡಲಾಗಿದೆ. ಛಾಯಾ ಪ್ರತಿ ಪಡೆಯಲು ಶುಲ್ಕ ಪ್ರತಿ ವಿಷಯಕ್ಕೆ 530 ರೂ., ಮರು ಮೌಲ್ಯಮಾಪನದ ಶುಲ್ಕ ಪ್ರತಿ ವಿಷಯಕ್ಕೆ 1,670 ರೂ. ನಿಗದಿಪಡಿಸಲಾಗಿದೆ. ಹಾಗೆಯೇ ಅಭ್ಯರ್ಥಿಗಳು ಪರೀಕ್ಷೆ -2ಕ್ಕೆ ಅರ್ಜಿ ಸಲ್ಲಿಸಲು ಮರು ಮೌಲ್ಯಮಾಪನದ ಫಲಿತಾಂಶಕ್ಕಾಗಿ ಕಾಯಬೇಕಾಗಿಲ್ಲ. ಮರು ಮೌಲ್ಯ ಮಾಪನದಲ್ಲಿ ಗಳಿಸಿದ ಅಂಕಗಳನ್ನೇ ಪರೀಕ್ಷೆ-1 ರ ಅಂಕಗಳೆಂದು ಪರಿಗಣಿಸಲಾಗುವುದು, ಮೇಲ್ಮನವಿಗೆ ಅವಕಾಶವಿಲ್ಲ. ಅಂಕಗಳ ಮರು ಎಣಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ ಎಂದು ಪರೀಕ್ಷಾ ಮಂಡಳಿ ತಿಳಿಸಿದೆ.

ಅರ್ಜಿ ಸಲ್ಲಿಸಲು ಏ.17 ಕೊನೆ ದಿನ

ಪರೀಕ್ಷೆ-2ಕ್ಕೆ ಅರ್ಜಿ ಸಲ್ಲಿಸಲು ಏ.17 ಕೊನೆಯ ದಿನವಾಗಿದ್ದು, ಅಭ್ಯರ್ಥಿಗಳು ಪರೀಕ್ಷಾ ಮಂಡಳಿಯ ವೆಬ್‌ಸೈಟ್ kseab.karnataka.gov.in ಮೂಲಕ ನೋಂದಾಣಿ ಮಾಡಿಕೊಳ್ಳಬಹುದು. ಪರೀಕ್ಷೆ -1ರಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕ ಇರುವುದಿಲ್ಲ. ಆದರೆ, ಪರೀಕ್ಷೆ -1ರ ಫಲಿತಾಂಶ ಸುಧಾರಿಸಲು ಪರೀಕ್ಷೆ ಬರೆಯುವ ವಿದ್ಯಾರ್ಥಿಗೆ ಒಂದು ವಿಷಯ (ಪ್ರಥಮ ಬಾರಿಗೆ)ಕ್ಕೆ 175, ಒಂದು ವಿಷಯಕ್ಕೆ (ಎರಡನೇ ಬಾರಿಗೆ) 350 ರೂ.ನಿಗದಿ ಪಡಿಸಲಾಗಿದೆ ಎಂದು ಮಧು ಬಂಗಾರಪ್ಪ ಹೇಳಿದರು.

ಕದನ ವಿರಾಮವಿನ್ನೂ ಅಸ್ಥಿರ

ಪುಟ ೩➡ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಒಪ್ಪಂದವನ್ನು ಇರಾನ್ ಪಾಲಿಸದಿದ್ದರೆ ಹಿಂದಿಗಿಂತ ಹೆಚ್ಚು ಭೀಕರ ದಾಳಿ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮಾತನಾಡಿ, ಲೆಬನಾನ್ ನಮ್ಮ ಒಪ್ಪಂದದಲ್ಲಿ ಇರಲಿಲ್ಲ ಎಂದಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ಲೆಬನಾನ್ ಮೇಲೆ ದಾಳಿ: ಕದನ ವಿರಾಮ ಒಪ್ಪಂದದಲ್ಲಿ ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವಿನ ಹೋರಾಟ ನಿಲ್ಲಿಸುವ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಮತ್ತೊಂದು ಪ್ರಮುಖ ಸಮಸ್ಯೆಯಾಗಿದೆ. ಇಸ್ರೇಲ್ ಬೈರೂತ್ ಮೇಲೆ ಭಾರೀ ವಾಯು ದಾಳಿಗಳನ್ನು ನಡೆಸಿದೆ. ಇದು ಫೆ.28ರಿಂದ ಆರಂಭವಾದ ಯುದ್ಧದಲ್ಲಿ ಲೆಬನಾನ್‌ನಲ್ಲಿ ಒಂದೇ ದಿನದಲ್ಲಿ ಕಂಡ ಅತ್ಯಂತ ಭೀಕರ ದಾಳಿಯಾಗಿದೆ. ಈ ದಾಳಿಯಲ್ಲಿ ಕನಿಷ್ಠ 203 ಮಂದಿ ಮೃತಪಟ್ಟಿದ್ದು, 1,000ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇಸ್ರೇಲ್ ಈ ದಾಳಿಗಳು ಹೆಜ್ಬೊಲ್ಲಾಗಳನ್ನು ಗುರಿಯಾಗಿಸಿವೆ ಎಂದು ಹೇಳಿದೆ.

ಮಾತುಕತೆ ಪ್ರಸ್ತಾವ: ಇಸ್ರೇಲ್ ದಾಳಿಗಳು ಮುಂದುವರಿದರೆ ಬಲವಾದ ಪ್ರತಿಕ್ರಿಯೆ ನೀಡಲಾಗುತ್ತದೆ ಎಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್ ಎಚ್ಚರಿಸಿದ್ದಾರೆ. ಈ ನಡುವೆ ಲೆಬನಾನ್ ಜೊತೆ ಸಾಧ್ಯವಾದಷ್ಟು ಬೇಗ ಮಾತುಕತೆಗೆ ಸಿದ್ಧ ಎಂದು ಇಸ್ರೇಲ್ ಕೂಡಾ ಹೇಳಿಕೆಯಿತ್ತಿದೆ.

ಇರಾನ್ ಪರಮಾಣು ಭವಿಷ್ಯ ಇನ್ನೂ ಅನಿಶ್ಚಿತ: ಯುದ್ಧದ ಮೂಲ ಕಾರಣವಾದ ಇರಾನ್‌ನ ಅಣು ಮತ್ತು ಕ್ಷಿಪಣಿ ಕಾರ್ಯಕ್ರಮದ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ಅಮೆರಿಕ ಮತ್ತು ಇಸ್ರೇಲ್, ಇರಾನ್ ಅಣ್ವಸ್ತ್ರಗಳನ್ನು ಅಭಿವೃದ್ಧಿಪಡಿಸಬಾರದು ಎಂದು ಒತ್ತಾಯಿಸುತ್ತಿವೆ. ಆದರೆ ಇರಾನ್ ತನ್ನ ಅಣು ಕಾರ್ಯಕ್ರಮ ಶಾಂತಿಯುತವಾಗಿದೆ ಎಂದು ಹೇಳುತ್ತಿದೆ. ಇರಾನ್ ಅಣು ಸಂಸ್ಥೆಯ ಮುಖ್ಯಸ್ಥ ಮೊಹಮ್ಮದ್ ಎಸ್ಲಾಮಿ, ಯುರೇನಿಯಂ ಸಂವರ್ಧನೆ ಹಕ್ಕು ಇರಾನ್‌ಗೆ ಅಗತ್ಯವಿದೆ ಎಂದು ಹೇಳಿದ್ದಾರೆ.

ಮುಂದಿನ ಮಾತುಕತೆಗಳ ಮೇಲೆ ನಿರೀಕ್ಷೆ: ಇಸ್ಲಾಮಾಬಾದ್‌ನಲ್ಲಿ ಶನಿವಾರ ನಡೆಯಲಿರುವ ಮಾತುಕತೆಗಳಲ್ಲಿ ಈ ಎಲ್ಲಾ ವಿಷಯಗಳು ಚರ್ಚೆಯಾಗಲಿವೆ. ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳಿಗೆ ಶುಲ್ಕ ವಿಧಿಸುವ ವಿಚಾರವೂ ಪ್ರಮುಖವಾಗಲಿದೆ. ಇದು ದಶಕಗಳಿಂದ ಇದ್ದ ಉಚಿತ ಸಾಗಣೆ ವ್ಯವಸ್ಥೆಯನ್ನು ಬದಲಾಯಿಸಬಹುದು. ಒಟ್ಟಿನಲ್ಲಿ, ಯುದ್ಧ ವಿರಾಮ ಒಪ್ಪಂದವು ಅಸ್ಥಿರವಾಗಿದ್ದು, ಮುಂದಿನ ದಿನಗಳಲ್ಲಿ ನಡೆಯುವ ಮಾತುಕತೆಗಳು ಮಧ್ಯಪ್ರಾಚ್ಯದ ಭವಿಷ್ಯವನ್ನು ನಿರ್ಧರಿಸಬಹುದು.

ಪಾಕ್ ವಿಶ್ವಾಸಾರ್ಹವಲ್ಲ

• **ಹೊಸದಿಲ್ಲಿ:** ಅಮೆರಿಕ ಮತ್ತು ಇರಾನ್ ನಡುವೆ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಿದ ಪಾಕಿಸ್ತಾನದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿದ ಇಸ್ರೇಲ್ ರಾಯಭಾರಿ, ಅಮೆರಿಕದ ನಡೆ ಅಚ್ಚರಿ ತಂದಿದೆ ಎಂದಿದ್ದಾರೆ. ಭಾರತಕ್ಕೆ ಇಸ್ರೇಲ್ ರಾಯಭಾರಿಯಾಗಿರುವ ರೂವೆಲ್ ಅಜರ್ ಅವರು, ಇಸ್ರೇಲ್ ಯಾವತ್ತೂ ಪಾಕಿಸ್ತಾನವನ್ನು ಒಂದು ವಿಶ್ವಾಸಾರ್ಹ ದೇಶ ಎಂದು ಪರಿಗಣಿಸುವುದೇ ಇಲ್ಲ. ಅಮೆರಿಕ, ಪಾಕಿಸ್ತಾನದ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳಲು ತನ್ನದೇ ಆದ ಕಾರಣಗಳನ್ನು ಹೊಂದಿರಬಹುದು. ಆದರೆ, ಇಸ್ರೇಲ್ ಪಾಕಿಸ್ತಾನವನ್ನು ಯಾವತ್ತೂ ನಂಬಿಕೆಗೆ ಯೋಗ್ಯವಾದ ದೇಶ ಎಂದು ನಂಬುವುದೇ ಇಲ್ಲ ಎಂದಿದ್ದಾರೆ.

ಶ್ರೀನಂದಾ ಪತ್ತೆಗೆ ವ್ಯಾಪಕ ಶೋಧ

ಪುಟ ೩➡ ಆದರೆ ಗುರುವಾರ ಬಾಲಕಿಯ ತಾಯಿ ರೋಹಿಣಿ ಅವರು ನನ್ನ ಮಗಳನ್ನು ಯಾರೋ ಸಂಚು ರೂಪಿಸಿ ಕರೆದೊಯ್ದಿದ್ದಾರೆ. ಆಕೆ ಆಕಸ್ಮಿಕವಾಗಿ ಎಲ್ಲಿಯೋ ಬಿದ್ದಿರಲು ಸಾಧ್ಯವಿಲ್ಲ ಎಂದು ನೀಡಿರುವ ಹೇಳಿಕೆಯು ತನಿಖೆಯ ದಿಕ್ಕನ್ನೇ ಬದಲಿಸುವಂತೆ ಮಾಡಿದೆ. ಶ್ರೀನಂದಾ ಒಬ್ಬಳೇ ಇದ್ದ ಸಮಯವನ್ನು ನೋಡಿ, ಯಾವುದೋ ಮಾದಕ ದ್ರವ್ಯ ನೀಡಿ ಅಥವಾ ಬಲವಂತವಾಗಿ ಕರೆದೊಯ್ದಿದ್ದಾರೆ ಎಂದು ರೋಹಿಣಿ ಕಣ್ಣೀರು ಹಾಕುತ್ತಾ ಆರೋಪಿಸಿದ್ದಾರೆ. ಈ ಹೇಳಿಕೆಯು ಸ್ಥಳೀಯ ಪೊಲೀಸರು ಹಾಗೂ ಶೋಧನಾ ತಂಡಗಳಲ್ಲಿ ಗೊಂದಲದ ಜತೆಗೆ ಒತ್ತಡವನ್ನೂ ಹೆಚ್ಚಿಸಿದೆ.

ಇದರ ಜತೆಯಲ್ಲೇ ಶೋಧ ಕಾರ್ಯದಲ್ಲಿ ತೊಡಗಿರುವ ಕೆಲವು ಸಿಬ್ಬಂದಿ ಸೇರಿದಂತೆ ಸಾರ್ವಜನಿಕರು ಸಹ ಮಾಣಿಕ್ಯ ಧಾರದಲ್ಲಿ ಬಾಲಕಿ ನಾಪತ್ತೆಯಾಗಿರುವ ಸಾಧ್ಯತೆ ತೀರಾ ಕಡಿಮೆ ಇದೆ. ಪ್ರಕರಣದ ಹಿಂದೆ ಬೇರೇನೋ ಇದೆ ಎಂದು ಸಂಶಯ ವ್ಯಕ್ತಪಡಿಸುತ್ತಿರುವುದರಿಂದ ಪೊಲೀಸರು ತನಿಖೆಯ ಆಯಾಮವನ್ನು ಬದಲಿಸುವ ಬಗ್ಗೆ ಆಲೋಚಿಸುವಂತೆ ಮಾಡಿದೆ. ಬಾಲಕಿ ಶ್ರೀನಂದಾ ಮತ್ತವರ ಕುಟುಂಬ ಏಪ್ರಿಲ್ 7ರಂದು ಹಂಪಿಗೆ ಭೇಟಿ ನೀಡಿದ್ದು, ಅಲ್ಲಿಂದ ನೇರವಾಗಿ ದತ್ತಪೀಠಕ್ಕೆ ಆಗಮಿಸಿತ್ತು. ಆದರೆ ಬಾಲಕಿ ನಾಪತ್ತೆಯಿಂದ ಕುಟುಂಬದ ಸಂತೋಷದ ಕ್ಷಣಗಳು ಮಾಯವಾಗಿ ಮೌನ ಆವರಿಸಿಕೊಂಡಿದೆ.

ಮುಂದುವರಿದ ಶೋಧಕಾರ್ಯ: ಬಾಲಕಿಯ ಪತ್ತೆಗಾಗಿ ಮೂರನೇ ದಿನವೂ ಶೋಧ ಕಾರ್ಯ ತೀವ್ರಗೊಂಡಿದೆ. ಗಿರಿ, ಶಿಖರಗಳ ನಡುವೆ ಕಂದಕ, ಕೊರಕಲುಗಳನ್ನೆಲ್ಲಾ ಜಾಲಾಡಲಾಗುತ್ತಿದೆ. ಶೋಧ ಕಾರ್ಯಕ್ಕೆ ಶ್ವಾನದಳವನ್ನೂ ಬಳಸಿಕೊಳ್ಳಲಾಗಿದೆ.

ಪಶ್ಚಿಮ ವಲಯ ಐಜಿಪಿ ಭೇಟಿ: ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಅವರು ಗುರುವಾರ ಮಾಣಿಕ್ಯಧಾರಕ್ಕೆ ಭೇಟಿ ನೀಡಿದ್ದಾರೆ. ನಂತರ ನಗರದಲ್ಲಿ ಎಸ್ಪಿ ಮತ್ತಿತರರೆ ಸಿಬ್ಬಂದಿಗಳಿಂದ ಮಾಹಿತಿ ಪಡೆದು, ತನಿಖೆ ಸಂಬಂಧ ಸಲಹೆಯನ್ನೇ ನೀಡಿದ್ದಾರೆ.

ಸದ್ಯ ಸ್ಥಳದಲ್ಲಿ ಅರಣ್ಯ ಇಲಾಖೆ, ಪೊಲೀಸ್ ಹಾಗೂ ಅಗ್ನಿಶಾಮಕ ದಳ, ಎಸ್‌ಡಿಆರ್‌ಎಫ್‌ನ 100ಕ್ಕೂ ಹೆಚ್ಚು ಸಿಬ್ಬಂದಿ ಸತತವಾಗಿ ಶೋಧ ಕಾರ್ಯದಲ್ಲಿ ತೊಡಗಿದ್ದಾರೆ. ಶೋಧಕ್ಕಾಗಿ ಡಾಗ್ ಸ್ಕ್ಯಾಡ್, ಡ್ರೋನ್ ಹಾಗೂ ಥರ್ಮಲ್ ಡ್ರೋನ್‌ಗಳನ್ನು ಬಳಸಲಾಗುತ್ತಿದೆ.

ಅರಣ್ಯ ಸಚಿವರ ಆದೇಶ: ಶೋಧ ಕಾರ್ಯಾಚರಣೆಗೆ ಪೊಲೀಸರೊಂದಿಗೆ ಕೈಜೋಡಿಸುವಂತೆ ಅರಣ್ಯ ಇಲಾಖೆಗೆ ಸಚಿವ ಈಶ್ವರ ಬಿ. ಖಂಡ್ರೆ ಅವರು ಸೂಚನೆ ನೀಡಿದ್ದಾರೆ. ಜಿಲ್ಲಾಡಳಿತ ಮತ್ತು ಪೊಲೀಸ್ ಪಡೆಗೆ ನೆರವು ನೀಡಲು ನುರಿತ ಅರಣ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸುವಂತೆ ಸೂಚಿಸಿದ್ದಾರೆ. ಚಂದ್ರದ್ರೋಣ ಪರ್ವತ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರದಿದ್ದರೂ ಸಹ, ಆ ಪ್ರದೇಶವು ಕಡಿದಾದ ಗುಡ್ಡಗಳು ಮತ್ತು ದಟ್ಟವಾದ ಗಿಡಗಂಟಿಗಳಿಂದ ಕೂಡಿರುವ ಕಾರಣ ಬಾಲಕಿಯ ಸುರಕ್ಷತೆಯ ದೃಷ್ಟಿಯಿಂದ ಅರಣ್ಯ ಇಲಾಖೆಯ ಬೆಂಬಲ ಅತ್ಯಗತ್ಯ ಎಂದು ಸಚಿವರು ತಿಳಿಸಿದ್ದಾರೆ. ಬಾಲಕಿಯನ್ನು ಶೀಘ್ರವಾಗಿ ಪತ್ತೆ ಹಚ್ಚಲು ಥರ್ಮಲ್ ಡ್ರೋನ್ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಬಳಸುವಂತೆ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ರಕ್ಷಣಾ ಕಾರ್ಯಾಚರಣೆಯನ್ನು ಚುರುಕುಗೊಳಿಸುವಂತೆ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಸಚಿವರು ಆದೇಶ ನೀಡಿದ್ದಾರೆ.

ಪ.ಬಂಗಾಳಕ್ಕೆ 6 ಗ್ಯಾರಂಟಿ ಘೋಷಿಸಿದ ಮೋದಿ

ಪುಟ ೩➡ ಮೂರನೆಯದಾಗಿ, ಭ್ರಷ್ಟಾಚಾರ ಹಾಗೂ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳ ಎಲ್ಲಾ ದಾಖಲೆಗಳನ್ನು ಮರು ಪರಿಶೀಲಿಸಲಾಗುವುದು ಎಂದು ಹೇಳಿದರು.

ನಾಲ್ಕನೆಯ ಭರವಸೆಯಲ್ಲಿ, ಭ್ರಷ್ಟಾಚಾರದಲ್ಲಿ ತೊಡಗಿರುವ ಯಾರೇ ಆಗಿರಲಿ ಕಾನೂನಿನಲ್ಲಿ ಶಿಕ್ಷೆಗೆ ಒಳಗಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದರು. ಐದನೆಯದಾಗಿ, ಕಾನೂನಾತ್ಮಕವಾಗಿ ಭಾರತದಲ್ಲಿ ಆಶ್ರಯ ಪಡೆದವರಿಗೆ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು. ಜತೆಗೆ ನುಸುಳುವವರನ್ನು ದೇಶದಲ್ಲಿ ಉಳಿಯಲು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಆರನೆಯದಾಗಿ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ರಾಜ್ಯ ಸರ್ಕಾರಿ ನೌಕರರು ಮತ್ತು ಶಿಕ್ಷಕರಿಗೆ 7ನೇ ವೇತನ ಆಯೋಗವನ್ನು ಜಾರಿಗೆ ತರುವುದಾಗಿ ಹೇಳಿದರು.

ಮತಬ್ಯಾಂಕ್ ರಾಜಕಾರಣ: ಟಿಎಂಸಿ ಧರ್ಮ ಆಧಾರಿತ ಮೀಸಲಾತಿ ನೀತಿಯನ್ನು ಅನುಸರಿಸಿ, ಮತಬ್ಯಾಂಕ್ ರಾಜಕಾರಣ ನಡೆಸುತ್ತಿದೆ ಎಂದು ಟೀಕಿಸಿದ ಮೋದಿ, ರಾಜ್ಯದ ಅಭಿವೃದ್ಧಿಗಾಗಿ ಡಬಲ್ ಎಂಜಿನ್ ಸರ್ಕಾರ ಅಗತ್ಯವಿದೆ ಎಂದರು. ಪ್ರಧಾನಿ ಮತ್ತು ಮುಖ್ಯಮಂತ್ರಿ ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ರಾಜ್ಯಕ್ಕೆ ಪ್ರಯೋಜನವಾಗುತ್ತದೆ ಎಂದು ಹೇಳಿದರು.

ಕೊನೆಯಲ್ಲಿ ಸಬ್ಕಾ ಸಾಥ್, ಸಬ್ಕಾ ವಿಕಾಸ್ ಎಂಬ ಕೇಂದ್ರ ಸರ್ಕಾರದ ನೀತಿಯನ್ನು ಪುನರುಚ್ಚರಿಸಿ, ಬಂಗಾಳವನ್ನು ದೋಚಿದ ಎಲ್ಲರೂ ಕಾನೂನಿನ ಮುಂದೆ ಉತ್ತರಿಸಬೇಕಾಗುತ್ತದೆ ಎಂದು ಮೋದಿ ಹೇಳಿದರು.



ಬಿಜೆಪಿ ಅಧಿಕಾರಕ್ಕೆ ಬಂದರೆ ವಿಶ್ವಾಸದ ವಾತಾವರಣ

ಪುಟ ೩➡ ರಾಜ್ಯದಲ್ಲಿ ಭಯದ ವಾತಾವರಣವಿದ್ದು ಹೂಡಿಕೆಗಳು ಕುಂಠಿತಗೊಂಡಿವೆ . ಭಯದ ವಾತಾವರಣದಲ್ಲಿ ಹೂಡಿಕೆ ಸಾಧ್ಯವಿಲ್ಲ. ವಿಶ್ವಾಸ ನಿರ್ಮಾಣವಾದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ವಿಶ್ವಾಸದ ವಾತಾವರಣವನ್ನು ನಿರ್ಮಿಸುತ್ತೇವೆ ಎಂದು ಅವರು ಭರವಸೆ ನೀಡಿದರು.ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಆಡಳಿತವನ್ನು ಟೀಕಿಸಿದ ಅವರು, ದೇಶದ ಇತರ ರಾಜ್ಯಗಳು ಅಭಿವೃದ್ಧಿಯತ್ತ ಸಾಗುತ್ತಿರುವಾಗ ಬಂಗಾಳ ಮಾತ್ರ ಹಿಂದುಳಿದಿದೆ ಎಂದರು. ವಿಕಸಿತ ಬಂಗಾಳಕ್ಕಾಗಿ ಟಿಎಂಸಿ ಸರ್ಕಾರವನ್ನು ಕೆಳಗಿಳಿಸುವುದು ಅನಿವಾರ್ಯ ಎಂದು ಮೋದಿ ಕರೆ ನೀಡಿದರು.

ಕೇರಳ, ಅಸ್ಸಾಂನಲ್ಲಿ ಭರ್ಜರಿ ಮತದಾನ

ಪುಟ ೩➡ ಈ ಚುನಾವಣೆಯಲ್ಲಿ 126 ಕ್ಷೇತ್ರಗಳಿಂದ ಒಟ್ಟು 722 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದು, ಸುಮಾರು 2.5 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. 2021ರ ಚುನಾವಣೆಯಲ್ಲಿ ಅಸ್ಸಾಂನಲ್ಲಿ ಶೇ.82.04 ಮತದಾನ ದಾಖಲಾಗಿತ್ತು.

ಕೇರಳದಲ್ಲಿ ಹೆಚ್ಚಿದ ಮತದಾನ ಪ್ರಮಾಣ: ಮತದಾನ ಪ್ರಮಾಣ ಶೇ.90 ತಲುಪುವ ಸಾಧ್ಯತೆ ಇದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ರಥನ್ ಯು. ಕೆಲ್ಕರ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. 2021ರಲ್ಲಿ ಕೇರಳದಲ್ಲಿ ಶೇ.74.06 ಮತದಾನ ದಾಖಲಾಗಿತ್ತು. ಕೇರಳದಲ್ಲಿ ಸಾಂಪ್ರದಾಯಿಕವಾಗಿ ಎಡಪಕ್ಷದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವಿನ ಸ್ಪರ್ಧೆ ಹೆಚ್ಚು ತೀವ್ರವಾಗಿದ್ದು, ಈ ಬಾರಿ 140 ಕ್ಷೇತ್ರಗಳಿಂದ 883 ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ಒಟ್ಟು 2.71 ಕೋಟಿ ಮತದಾರರು ಇದ್ದಾರೆ. ಸಿಪಿಐ(ಎಂ) ನಾಯಕ ಸಿ.ಎನ್. ಮೋಹನನ್ ಅವರು ಮತದಾನ ಪ್ರಮಾಣ ಹೆಚ್ಚಿರುವುದು ಎಲ್‌ಡಿಎಫ್‌ಗೆ ಲಾಭಕರ ಎಂದು ಹೇಳಿದ್ದಾರೆ. ಬಿಜೆಪಿ ನಾಯಕ ಕೆ.ಎಸ್. ಶೈಜು ಅವರು ಮಹಿಳಾ ಮತದಾರರ ಹೆಚ್ಚಿನ ಭಾಗವಹಿಸುವಿಕೆಯೇ ಮತದಾನ ಪ್ರಮಾಣ ಏರಿಕೆಗೆ ಕಾರಣ ಎಂದು ಹೇಳಿದ್ದಾರೆ. ಕಾಂಗ್ರೆಸ್ ನಾಯಕ ದೀಪ್ತಿ ಮೇರಿ ವರ್ಗೀಸ್ ಅವರು ಮತದಾನ ಪ್ರಮಾಣ ಏರಿಕೆಗೆ ಕಾರಣಗಳನ್ನು ವಿವರವಾಗಿ ವಿಶ್ಲೇಷಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ಹಂತದ ಚುನಾವಣೆ: ಈ ಚುನಾವಣೆಯು ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಮೊದಲ ಹಂತವಾಗಿದೆ. ಪಶ್ಚಿಮ ಬಂಗಾಳದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ತಮಿಳುನಾಡಿನಲ್ಲಿ ಏ.23 ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಎಲ್ಲಾ ರಾಜ್ಯಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ.

ಉಪ ಚುನಾವಣೆ ಶೇ.68 ಮತದಾನ

ಪುಟ ೩➡ ಬೆಳಿಗ್ಗೆಯಿಂದಲೇ ಮತಗಟ್ಟೆಗಳ ಮುಂದೆ ಮಹಿಳೆಯರು, ಯುವಜನರು ಹಾಗೂ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಆಗಮಿಸಿ ಹುಮ್ಮಸ್ಸಿನಿಂದ ಮತದಾನ ಮಾಡಿದರು. ಬಾಗಲಕೋಟೆ ಕ್ಷೇತ್ರ ಉಪಚುನಾವಣೆ ಹಿನ್ನೆಲೆಯಲ್ಲಿ ಗೋವಾ ಹಾಗೂ ಮಂಗಳೂರು ಕಡೆ ದುಡಿಯಲು ಹೋದವರು ಬಸ್‌ನಲ್ಲಿ ಬಂದು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು.

ಪುದುಚೇರಿಯಲ್ಲಿ ಶೇ.90 ಮತದಾನ

• **ಬೆಂಗಳೂರು:** ಪುದುಚೇರಿ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಗುರುವಾರ ನಡೆದಿದ್ದು, ಶೇ.90ರಷ್ಟು ಮತ ಚಲಾವಣೆಯಾಗಿದೆ. ಇದರಿಂದ ಬಿಜೆಪಿ ಮತ್ತೆ ಅಧಿಕಾರಕ್ಕೇರುವ ನಿರೀಕ್ಷೆ ಗರಿಗೆದರಿದೆ. ಚುನಾವಣೆಗೆ ಇನ್ನೂ ಎರಡು ವರ್ಷಗಳಿರುವಾಗ ಬಿಜೆಪಿ ರಾಷ್ಟ್ರೀಯ ನಾಯಕತ್ವವು ನಿರ್ಮಲ್ ಕುಮಾರ್ ಸುರಾಣ ಅವರನ್ನು ಪುದುಚೇರಿಯ ಪಕ್ಷದ ಉಸ್ತುವಾರಿಯಾಗಿ ನಿಯೋಜಿಸಿತ್ತು. ನಿರ್ಮಲ್ ಕುಮಾರ್ ಸುರಾಣ ಕಾಲಿಗೆ ಚಕ್ರ ಕಟ್ಟಿದಂತೆ ಅಲ್ಲಿ ಓಡಾಡಿ ಕಾರ್ಯತಂತ್ರ ರೂಪಿಸಿದ್ದರು. ಅವರ ಪರಿಶ್ರಮದ ಪರಿಣಾಮವಾಗಿಯೇ 2021ರಲ್ಲಿ ಅಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಏರಿತ್ತು. ಸಣ್ಣ ರಾಜ್ಯವಾಗಿದ್ದರೂ ಪುದುಚೇರಿಯಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದ್ದವು. ಆದ್ದರಿಂದ ಅಲ್ಲಿ ಬಿಜೆಪಿ ಅಗತ್ಯವೇನು ಎಂಬುದನ್ನು ಪಕ್ಷದ ಕಾರ್ಯಕರ್ತರು ಮತ್ತು ಅವರ ಮೂಲಕ ಜನ ಸಾಮಾನ್ಯರಿಗೆ ಅರ್ಥ ಮಾಡಿಸಲಾಯಿತು. ಈ ಬಾರಿಯ ಚುನಾವಣೆಯಲ್ಲಿ ಎಐಎನ್‌ಆರ್‌ಸಿ ಜತೆ ಬಿಜೆಪಿ ಮೈತ್ರಿ ಮಾಡಿಕೊಳ್ಳುವಲ್ಲಿಯೂ ಸುರಾಣ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.

ಖರ್ಗೆ ವಿರುದ್ಧ ದೂರು: ಖಂಡನೆ



ಕಲಬುರಗಿ: ಎಐಸಿಸಿ ಅಧ್ಯಕ್ಷ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಬಿಜೆಪಿ ನಾಯಕರು ನಡೆಸುತ್ತಿರುವ ವೈಯಕ್ತಿಕ ಟೀಕೆಗಳು, ದೂರು ದಾಖಲಿಸಿರುವುದು ಅತ್ಯಂತ ಖಂಡನೀಯ ಹಾಗೂ ಹಾಸ್ಯಾಸ್ಪದ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ನಗರದ ತಮ್ಮ ನಿವಾಸದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬಿಜೆಪಿಯ ದ್ವೇಷದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಕಳೆದ 50 ವರ್ಷಗಳಿಂದ ಮೌಲ್ಯಾಧಾರಿತ ಮತ್ತು ಸಿದ್ಧಾಂತದ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಅವರು ಸಮಾಜ ಒಡೆಯುವ ಕೆಲಸ ಮಾಡಿಲ್ಲ. ಚುನಾವಣಾ ಸಂದರ್ಭದಲ್ಲಿ ಬಿಜೆಪಿಯನ್ನು ಸೈದ್ಧಾಂತಿಕವಾಗಿ ಎದುರಿಸುವ ಮಾತನ್ನೇ ಬಿಜೆಪಿ ನಾಯಕರು ಬೇರೆ ಅರ್ಥದಲ್ಲಿ ಬಿಂಬಿಸುತ್ತಿದ್ದಾರೆ. ಖರ್ಗೆ ಅವರ ಹೇಳಿಕೆಗೆ ಬಿಜೆಪಿ ಬಣ್ಣ ಹಚ್ಚುವುದು ಸರಿಯಲ್ಲ ಎಂದು ಕಿಡಿಕಾರಿದರು.

ಈ ಹಿಂದೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ನೆಹರು ಅವರ ಬಗ್ಗೆ ಬಿಜೆಪಿ ಏನೆಲ್ಲಾ ಮಾತನಾಡಿದೆ ಎಂಬುದು ದೇಶಕ್ಕೆ ತಿಳಿದಿದೆ. ಮೊದಲು ಬಿಜೆಪಿ ತನ್ನ ಸಂಸ್ಕೃತಿಯನ್ನು ನೋಡಿಕೊಳ್ಳಲಿ ಎಂದು ಆಕ್ರೋಶ ಹೊರಹಾಕಿದರು.

ವಿದೇಶಾಂಗ ನೀತಿ ವೈಫಲ್ಯದಿಂದ ಆರ್ಥಿಕ ಸಂಕಷ್ಟ

ಇರಾನ್ ಮತ್ತು ಇಸ್ರೇಲ್ ಯುದ್ಧದ ಪ್ರಸ್ತಾವ ಮಾಡಿದ ಸಚಿವ ಶರಣಪ್ರಕಾಶ್ ಪಾಟೀಲ್, ಯುದ್ಧದ ಪರಿಣಾಮವಾಗಿ ದೇಶದಲ್ಲಿ ತೈಲ ಮತ್ತು ಅನಿಲ ದರ ಏರಿಕೆಯಾಗುತ್ತಿದೆ. ವೈದ್ಯಕೀಯ ಉಪಕರಣಗಳ ಆಮದು-ರಫ್ತಿನ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಭಾರತ ಯಾರ ಮೇಲೆಯೂ ಯುದ್ಧ ಮಾಡುವುದಿಲ್ಲ ನಿಜ. ಆದರೆ, ಮೋದಿಯವರು ಇರಾನ್ ಮೇಲೆ ದಾಳಿ ನಡೆಯುವ ಮುನ್ನ ಇಸ್ರೇಲ್ ಜೊತೆ ಅಷ್ಟೊಂದು ಆತ್ಮೀಯತೆ ಪ್ರದರ್ಶಿಸುವ ಅಗತ್ಯವೇನಿತ್ತು? ಎಂದು ಪ್ರಶ್ನಿಸಿದರು.

ಪರಿಶೀಲನೆ



ಗುರುವಾರ ಬೆಂಗಳೂರು-ಮೈಸೂರು ರೈಲು ಮಾರ್ಗದ ಕಾಮಗಾರಿಯನ್ನು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಪರಿಶೀಲನೆ ನಡೆಸಿದರು.

ಪೊಲೀಸ್ ಹುದ್ದೆಗಳ ನೇಮಕ ಶೀಘ್ರ



ದೇವನಹಳ್ಳಿ: ಪೊಲೀಸ್ ಇಲಾಖೆಯಲ್ಲಿ 1000 ಸಬ್ ಇನ್ಸ್‌ಪೆಕ್ಟರ್ , 8000 ಕಾನ್ ಸ್ಟೇಬಲ್‌ಗಳನ್ನು ಆದಷ್ಟು ಶೀಘ್ರ ನೇಮಕ ಮಾಡಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಪಟ್ಟಣದ ಪ್ರೆಸ್ಟೀಜ್ ಗ್ರೂಪ್ ಸಂಸ್ಥೆಯಿಂದ ಸಿಎಸ್‌ಆರ್ ಅನುದಾನದಡಿ ನಿರ್ಮಿಸಲಾಗಿರುವ ದೇವನಹಳ್ಳಿ ಸಹಾಯಕ ಪೊಲೀಸ್ ಆಯುಕ್ತರ ಕಚೇರಿ ಹಾಗೂ ದೇವನಹಳ್ಳಿ ಪೊಲೀಸ್ ಠಾಣೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿ, ಪೊಲೀಸ್ ಇಲಾಖೆಯಲ್ಲಿ ದೊಡ್ಡ ಬದಲಾವಣೆಗಳನ್ನು ಮಾಡಲಾಗುತ್ತಿದೆಂದರು. ಪಿಎಸ್‌ಐ ಹಗರಣವನ್ನು ಬಗೆಹರಿಸಿ ಈಗ 545 ಜನ ತರಬೇತಿ ಪಡೆದು ಕೆಲಸಕ್ಕೆ ಸೇರಿದ್ದಾರೆ. ಇನ್ನು ಸಬ್ ಇನ್ಸ್‌ಪೆಕ್ಟರ್ ಗಳ ನೇಮಕ ಹಾಗೂ ಕಾನ್ಸ್‌ಟೇಬಲ್‌ಗಳನ್ನು ನೇಮಕಕ್ಕೆ ಮುಖ್ಯಮಂತ್ರಿಗಳು ಅನುಮತಿ ನೀಡಲಾಗಿದೆ. ಹಣಕಾಸು ಇಲಾಖೆಯು ಅನುಮೋದಿಸಿದ್ದು ಮುಂದಿನ ದಿನಗಳಲ್ಲಿ ನೇಮಕ ಮಾಡಲಾಗುವುದು ಎಂದರು.

ಎರಡು ವರ್ಷಕ್ಕೊಮ್ಮೆ ಇನ್ಸ್‌ಪೆಕ್ಟರ್ ವರ್ಗಾವಣೆ

ಕಳೆದ ಮೂರು ವರ್ಷದಲ್ಲಿ ರಾಜ್ಯದಲ್ಲಿ ಯಾವುದೇ ಕೋಮುಗಲಭೆಗಳಾಗಿಲ್ಲ ಕರಾವಳಿ ಭಾಗದಲ್ಲಿಯೂ ಕೂಡ ಗಲಾಟೆ ಆಗಿಲ್ಲ. ಸಬ್ ಇನ್ಸ್‌ಪೆಕ್ಟರ್ ವರ್ಗಾವಣೆಯನ್ನು ಒಂದು ವರ್ಷದಿಂದ ಎರಡು ವರ್ಷಕ್ಕೆ ಹೆಚ್ಚಿಸಲಾಗಿದೆ. ಕಡ್ಡಾಯವಾಗಿ ಎರಡು ವರ್ಷ ಪೂರೈಸಲೇಬೇಕು. ಪೊಲೀಸ್ ಇಲಾಖೆಗೆ ಎಲ್ಲಾ ರೀತಿಯ ಸೌಲಭ್ಯವನ್ನು ನೀಡುತ್ತಿದ್ದೇವೆ. ಪೊಲೀಸ್ ಗೃಹ ಎಂಬ ಯೋಜನೆ ಯಿಂದ ಸುಮಾರು 40% ಸಿಬ್ಬಂದಿ, ಪೊಲೀಸರಿಗೆ ಮನೆ ಕಟ್ಟಿಕೊಟ್ಟಿದ್ದೇವೆ. ಒಂದು ಅಪಾರ್ಟ್‌ಮೆಂಟಿಗೆ 38 ಲಕ್ಷ ರೂ. ಖರ್ಚು ಮಾಡಿ ಮನೆ ನಿರ್ಮಿಸಲಾಗಿದೆ. ಇನ್ನಷ್ಟು ಮನೆಗಳನ್ನು ಕಟ್ಟಲಿದ್ದೇವೆ ಎಂದು ಹೇಳಿದರು. ಪೊಲೀಸ್ ಇಲಾಖೆ ಬಹಳ ಶಿಸ್ತು ಬದ್ಧ ಇಲಾಖೆ, ಕರ್ನಾಟಕ ಪೊಲೀಸ್ ಇಲಾಖೆಗೆ ಒಂದು ಇತಿಹಾಸ ಇದೆ. ಇಲಾಖೆಯಲ್ಲಿ ಅನೇಕ ಬದಲಾವಣೆಯನ್ನು ತರಲಾಗಿದೆ . ಇಡೀ ದೇಶದಲ್ಲಿ ನ್ಯಾಯವನ್ನು ಜರೂರಾಗಿ ಒದಗಿಸುವುದರಲ್ಲಿ ಕರ್ನಾಟಕ ನಂಬರ್ ಒನ್ ಸ್ಥಾನದಲ್ಲಿದೆ ಎಂದರು.

ಕಿರುಸುದ್ದಿ

ಇಂದು ಸಿಎಂ ದಿಲ್ಲಿಗೆ: ಸಂಪುಟ ವಿಸ್ತರಣೆ ಚರ್ಚೆ



ಬೆಂಗಳೂರು: ಸುಮಾರು ದಿನಗಳ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಿಲ್ಲಿಗೆ ತೆರಳುತ್ತಿದ್ದು, ನಾಯಕತ್ವ ಬದಲಾವಣೆ ಮತ್ತು ಸಂಪುಟ ವಿಸ್ತರಣೆ ಬಗ್ಗೆ ಪಕ್ಷದ ವರಿಷ್ಠರ ಚರ್ಚಿಸಲಿದ್ದಾರೆ ಎಂಬುವುದರ ಬಗ್ಗೆ ಕುತೂಹಲ ಮೂಡಿಸಿದೆ. ಶುಕ್ರವಾರ ಬೆಳಗ್ಗೆ ಎಚ್ ಎಎಲ್ ವಿಮಾನ ನಿಲ್ದಾಣದಿಂದ ತೆರಳಿರುವ ಅವರು, ಮಧ್ಯಾಹ್ನ 12.30ಕ್ಕೆ ದಿಲ್ಲಿಯ ಇಂದಿರಾ ಗಾಂಧಿ ವಿಮಾನ ನಿಲ್ದಾಣಕ್ಕೆ ತೆರಳಲಿದೆ. ರಾಜ್ಯದ ಅಭಿವೃದ್ಧಿ ಯೋಜನೆಗಳ ಕುರಿತು ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚಿಸಲಿದ್ದಾರೆ. ಮಧ್ಯಾಹ್ನ 3ಕ್ಕೆ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಲಿರುವ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭಾಗವಹಿಸಲಿದ್ದು ಈ ವೇಳೆ ರಾಜ್ಯ ರಾಜಕಾರಣದ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ.

ಚಾರಣಿಗರ ಸುರಕ್ಷತೆಗೆ ಎಸ್‌ಒಪಿ: ಖಂಡ್ರೆ

ಬೆಂಗಳೂರು: ರಾಜ್ಯದ ಗಿರಿಶ್ರೇಣಿಗಳಿಗೆ ಬರುವ ಚಾರಣಿಗರ ಸುರಕ್ಷತೆಯ ದೃಷ್ಟಿಯಿಂದ ದೇಶಕ್ಕೆ ಮಾದರಿಯಾಗುವಂತಹ ಪ್ರಮಾಣಿತ ಮಾನದಂಡ (ಎಸ್.ಒ.ಪಿ.) ರೂಪಿಸುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ. ತಡಿಯಾಂಡಮೋಳ್ ಚಾರಣದ ವೇಳೆ ಕೇರಳದ ಶರಣ್ಯ ಎಂಬ ಮಹಿಳೆ 3 ದಿನ ಕಾಡಿನಲ್ಲಿ ಕಳೆದ ಹಾಗೂ ಚಂದ್ರದ್ರೋಣ ಪರ್ವತದಲ್ಲಿ ಅಪ್ರಾಪ್ತ ವಯಸ್ಕ ಬಾಲಕಿ ನಾಪತ್ತೆಯಾಗಿರುವ ಹಿನ್ನೆಲೆಯಲ್ಲಿ ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಅವರು ಲಿಖಿತ ಸೂಚನೆ ಕೊಟ್ಟಿದ್ದಾರೆ. ಅರಣ್ಯ ಇಲಾಖೆ ಈಗಾಗಲೇ ಅಭಿವೃದ್ಧಿಪಡಿಸಿರುವ ಇ-ಗಸ್ತು, ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಬಳಕೆ ಮಾಡುವ ಎಂ.ಸ್ಟ್ರೈಪ್ಸ್‌ನಂತಹ ಆ್ಯಪ್ ರೀತಿಯಲ್ಲೇ ಚಾರಣ ಅವಧಿಯಲ್ಲಿ ತಾತ್ಕಾಲಿಕವಾಗಿ ಚಾರಣಿಗರ ಮೊಬೈಲ್‌ನಲ್ಲಿ ಈ ಆಪ್ ಅಳವಡಿಸಿದರೆ, ಯಾರೇ ದಾರಿ ತಪ್ಪಿಸಿಕೊಂಡರೂ ಅವರ ಶೋಧಕಾರ್ಯ ಸುಲಭವಾಗುತ್ತದೆ. ಹೀಗಾಗಿ ಆ್ಯಪ್ ಅಭಿವೃದ್ಧಿಗೆ ಕ್ರಮವಹಿಸುವಂತೆ ಮತ್ತು ಚಾರಣಿಗರಿಗೆ ಗುಂಪು ವಿಮೆ ಮಾಡಿಸುವಂತೆ ಅರಣ್ಯ ಸಚಿವರು ನಿರ್ದೇಶಿಸಿದ್ದಾರೆ.

ಖರ್ಗೆ ಟೀಕೆಗೆ ಕಾಂಗ್ರೆಸ್ ಆಕ್ಷೇಪ

ಬೆಂಗಳೂರು: ಚುನಾವಣಾ ಪ್ರಚಾರ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಳಸಿದ ಭಾಷೆಯ ಸಂಬಂಧ ಬಿಜೆಪಿ ನಾಯಕರು ರಾಜಕೀಯ ಟೀಕೆಗಳನ್ನು ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಆರೋಗ್ಯಕರ ಟೀಕೆ ಟಿಪ್ಪಣಿಗಳಿಗೆ ಅವಕಾಶವಿದೆ, ಆದರೆ ವೈಯಕ್ತಿಕ ಟೀಕೆ ಮಾಡಲಾಗುತ್ತಿದೆ ಎಂದು ರಾಜ್ಯ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ. ಟೀಕೆಯ ಸಂದರ್ಭದಲ್ಲಿ ಕೆಲವು ಬಿಜೆಪಿ ನಾಯಕರು ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಕುಟುಂಬದ ವೈಯಕ್ತಿಕ ತೇಜೋವಧೆಗೆ ಮುಂದಾಗಿದ್ದಾರೆ. ಇದು ಇವರ ಭೌತಿಕ ದಿವಾಳಿತನವನ್ನು ತೋರುತ್ತದೆ. ಸಂಘ ಪರಿವಾರದ ನಿರ್ದೇಶನಗಳಿಗೆ ಅನುಗುಣವಾಗಿ ಮತ್ತು ತಮ್ಮ ರಾಜಕೀಯ ಅಸ್ತಿತ್ವದ ಉಳಿವಿಗಾಗಿ ಬಿಜೆಪಿಯ ನಾಯಕರು ಇಂತಹ ಕೀಳುಮಟ್ಟದ ಟೀಕೆಗಳಿಗೆ ಮುಂದಾಗಿದ್ದಾರೆ ಎಂದು ಕೆಪಿಸಿಸಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಬಾಗಲಕೋಟೆ ಶೇ. 68.74 | ದಾವಣಗೆರೆ ಶೇ.68 ಮತದಾನ

ಬಿಸಿಲಿನಲ್ಲೂ ಹುರುಪು

ಬಾಗಲಕೋಟೆ/ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳಿಗೆ ಗುರುವಾರ ನಡೆದ ಉಪ ಚುನಾವಣೆ ಶಾಂತಿಯುವಾಗಿ ಮತದಾನವಾಗಿದ್ದು ಎರಡು ಕ್ಷೇತ್ರಗಳಿಂದ ಶೇ. 65ಕ್ಕೂ ಹೆಚ್ಚು ಮತದಾನ ದಾಖಲಾಗಿದೆ. ಬಾಗಲಕೋಟೆಯಲ್ಲಿ ಶೇ. 68.74ರಷ್ಟು ಮತದಾನವಾಗಿದ್ದರೆ, ದಾವಣಗೆರೆ ದಕ್ಷಿಣದಲ್ಲಿ ಶೇ.68.55ರಷ್ಟು ಮತದಾನವಾಗಿದೆ. ಆಡಳಿತಾರೂಢ ಕಾಂಗ್ರೆಸ್ ಎರಡೂ ಸ್ಥಾನಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೇ ಬಿಜೆಪಿ ಅವುಗಳನ್ನು ವಶಪಡಿಸಿಕೊಳ್ಳುವ ಮತ್ತು ನಾಯಕತ್ವಕ್ಕಾಗಿ ಆಂತರಿಕ ಹೋರಾಟದಲ್ಲಿ ಮುಳುಗಿರುವ ತನ್ನ ಪ್ರತಿಸ್ಪರ್ಧಿಗೆ ಹಿನ್ನಡೆಯನ್ನುಂ ಟುಮಾಡುವ ಗುರಿಯನ್ನು ಹೊಂದಿದೆ. ಹಿರಿಯ ಕಾಂಗ್ರೆಸ್ ಶಾಸಕರಾದ ಎಚ್ ವೈ ಮೇಟಿ (ಬಾಗಲಕ್ಕೋಟೆ) ಮತ್ತು ಶಾಮನೂರು ಶಿವಶಂಕರಪ್ಪ (ದಾವಣಗೆರೆ ದಕ್ಷಿಣ) ಅವರ ನಿಧನದಿಂದಾಗಿ ಉಪಚುನಾವಣೆ ಘೋಷಣೆಯಾಗಿತ್ತು. ಬಾಗಲಕೋ ಟೆಯ ಸುಮಾರು 319 ಮತಗಟ್ಟೆಗಳಲ್ಲಿ ಒಟ್ಟು 2.59 ಲಕ್ಷಕ್ಕೂ ಹೆಚ್ಚು ಅರ್ಹ ಮತದಾರರು ಮತ ಚಲಾಯಿಸುವ ನಿರೀಕ್ಷೆಯಿದ್ದು, ಒಂಬತ್ತು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ 284 ಮತಗಟ್ಟೆಗಳಲ್ಲಿ 2.31 ಲಕ್ಷಕ್ಕೂ ಹೆಚ್ಚು ಅರ್ಹ ಮತದಾರರು ಮತ ಚಲಾಯಿಸುವ ನಿರೀಕ್ಷೆಯಿದ್ದು, 25 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ.



> ಗ್ರಾಮೀಣ ಮತ್ತು ನಗರಮಟ್ಟದಲ್ಲಿ ಕಾಂಗ್ರೆಸ್ ಪರ ಗಾಳಿ ಇದೆ. ಚುನಾವಣೆಯಲ್ಲಿ ಗೆಲ್ಲುತ್ತೇನೆ ಎಂಬ ವಿಶ್ವಾಸ ನನ್ನಲ್ಲಿದೆ.
> ■ ಉಮೇಶ ಮೇಟಿ, ಕಾಂಗ್ರೆಸ್ ಅಭ್ಯರ್ಥಿ

ಪೊಲೀಸ್ ಬಂದೋಬಸ್ತ್

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮತದಾನ ಬಹುತೇಕ ಶಾಂತಿಯುತವಾಗಿ ಮುಕ್ತಾಯಗೊಂಡಿತು. ಬೆಳಿಗ್ಗೆಯಿಂದಲೇ ಮತಗಟ್ಟೆಗಳ ಮುಂದೆ ಮತದಾರರು ಉತ್ಸಾಹದಿಂದ ಸರದಿಯಲ್ಲಿ ನಿಂತು ಮತ ಚಲಾಯಿಸಿದ್ದು ಕಂಡುಬಂತು. ಚುನಾವಣಾ ಆಯೋಗದ ಕಟ್ಟುನಿಟ್ಟಿನ ಕ್ರಮ ಹಾಗೂ ಪೊಲೀಸ್ ಬಂದೋಬಸ್ತ್‌ನಿಂದಾಗಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಿಲ್ಲದಂತೆ ಮತದಾನ ಪ್ರಕ್ರಿಯೆ ಸುಗಮವಾಗಿ ನಡೆಯಿತು. ಮಹಿಳೆಯರು, ಹಿರಿಯ ನಾಗರಿಕರು ಮತಗಟ್ಟೆಗಳಿಗೆ ಆಗಮಿಸಿ ಹುಮ್ಮಸ್ಸಿನಿಂದ ಮತದಾನ ಮಾಡಿದರು.

ಶೇ.68.74ರಷ್ಟು ಮತದಾನ

ಬಾಗಲಕೋಟೆ ಮತಕ್ಷೇತ್ರದಲ್ಲಿ ಶಾಂತಿಯುತ ಮತದಾನ ನಡೆದಿದ್ದು ಅಂದಾಜು ಶೇ.68.74ರಷ್ಟು ಮತದಾನವಾಗಿದೆ. ಸುಡುಬಿಸಿಲಿನಲ್ಲಿ ಮತದಾನ ಮಾಡಲು ಹೋಗದವರು ಬೆಳಗ್ಗೆಯೇ ಮತದಾನ ಕೇಂದ್ರದತ್ತ ಜನ ಆಗಮಿಸಿದರು. ಇನ್ನೂ ಪ್ರತಿಯೊಂದು ಮತಗಟ್ಟೆ ಮುಂದೆ ಹೋದರೆ ಅಲ್ಲಿ ಮಹಿಳೆಯರ ಸಂಖ್ಯೆಯೇ ಏರಿಕೆಯಲ್ಲಿತ್ತು. ಇನ್ನೂ ಮಧ್ಯಾಹ್ನ 1ರಿಂದ ಸಂಜೆ 4 ಗಂಟೆಯವರೆಗೆ ಮಂದಗತಿಯಲ್ಲಿ ಮತದಾನ ನಡೆಯಿತು. ಸಂಜೆಯಾಗುತ್ತಿದ್ದಂತೆ ಅಲ್ಲಲ್ಲಿ ಮತದಾನ ಕೇಂದ್ರದ ಮುಂದೆ ಜನರು ಸರದಿಯಲ್ಲಿ ನಿಂತು ತಮ್ಮ ಮತದಾನದ ಹಕ್ಕು ಚಲಾಯಿಸಿದರು. ಉಪಚುನಾವಣೆಯ ಹಿನ್ನೆಲೆ ಯಲ್ಲಿ ಗೋವಾ ಹಾಗೂ ಮಂಗಳೂರ ಕಡೆ ದುಡಿಯಲು ಹೋದವರು ಬಸ್‌ನಲ್ಲಿ ಬಂದು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ತಿಮ್ಮಾಪುರ, ಐಹೊಳೆ ಗ್ರಾಮಗಳಲ್ಲಿ ಬಸ್‌ಗಳಲ್ಲಿ ಕೂಲಿಕಾರ್ಮಿಕರು ಆಗಮಿಸಿ ತಮ್ಮ ಮತದಾನದ ಹಕ್ಕು ಚಲಾಯಿಸಿದರು.

ಕಡತ ವಿಲೇವಾರಿ: ಸಚಿವ

ಬೆಂಗಳೂರು: 180 ದಿನ ಮೀರಿರುವ ಕೋರ್ಟ್ ಕೇಸ್‌ಗೆ ಸಂಬಂಧಿಸಿದ ಕಡತಗಳ ವಿಲೇವಾರಿಯನ್ನು ರಾಜ್ಯದ ಎಲ್ಲಾ ಎಸಿಗಳು ಪೂರ್ಣ ಗೊಳಿಸಬೇಕು. ಇಲ್ಲದಿದ್ದರೆ ಆಟೋ ಜನರೇಟ್ ನೋಟೀಸ್ ನೀಡಲಾಗು ವುದು, ನೋಟೀಸ್ ತಲುಪಿಯೂ ಕೆಲಸ ಮಾಡದಿದ್ದರೆ ಶಿಸ್ತುಕ್ರಮ ಕೈಗೊಳ್ಳ ಲಾಗುವುದು ಎಂದು ಸಚಿವ ಕೃಷ್ಣಬೈರೇಗೌಡ ಸೂಚನೆ ನೀಡಿದರು.

ಕೋರ್ಟ್ ಕೇಸ್ ವಿಲೇವಾರಿಗೆ ಸಂಬಂಧಿಸಿ ತಮ್ಮ ಕಚೇರಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ರಾಜ್ಯದ ಎಲ್ಲಾ ಎಸಿಗಳ (ಉಪ ವಿಭಾಗಾಧಿಕಾರಿಗಳು) ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ಕೆಲವು ಎಸಿಗಳ ಬೇಜವಾಬ್ದಾರಿಯಿಂದ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಎಸಿಗಳಿಗೂ ಕೆಟ್ಟ ಹೆಸರು ಬರುತ್ತಿದೆ ಎಂದರು. ಎಸಿ ನ್ಯಾಯಾಲಯಗಳಲ್ಲಿನ ಅವಧಿ ಮೀರಿದ ಶೇ.80 ಕ್ಕೂ ಹೆಚ್ಚು ಬಾಕಿ ಪ್ರಕರಣಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. 3 ವರ್ಷದ ಹಿಂದೆ ಎಸಿ ಕೋರ್ಟ್‌ನಲ್ಲಿ ಅವಧಿ ಮೀರಿದ 73,624 ಪ್ರಕರಣ ಇತ್ತು. ಹಳೆಯ ತಕರಾರು ಪ್ರಕರಣಗಳ ವಿಲೇವಾರಿಗಾಗಿ ವಿಶೇಷ ಎಸಿಗಳ ನೇಮಕ ಮಾಡಲಾಗಿತ್ತು.

ಎಸಿಗಳ ವಿರುದ್ಧ ಗರಂ

ಹಳೆ ಪ್ರಕರಣಗಳ ವಿಲೇವಾರಿಯ ಜೊತೆಗೆ ಹೊಸ ಪ್ರಕರಣಗಳ ವಿಲೇವಾರಿಯೂ ಗುಣಮಟ್ಟದಿಂದ ಕೂಡಿರಬೇಕು ಎಂಬ ಉದ್ದೇಶದಿಂದ ವಿಶೇಷ ಎಸಿಗಳ ನೇಮಕ ಮಾಡಲಾಯಿತು. ಆದರೆ, ರೆಗ್ಯುಲರ್ ಎಸಿಗಳು ಹೊಸದಾಗಿ ತೆಗೆದುಕೊಂಡ ಪ್ರಕರಣಗಳನ್ನೂ ಸಮಯಕ್ಕೆ ಸರಿಯಾಗಿ ಗುಣಮಟ್ಟದ ವಿಲೇವಾರಿ ಮಾಡುತ್ತಿಲ್ಲ. ರೆಗ್ಯುಲರ್ ಎಸಿಗಳು ದಾಖಲಿಸಿಕೊಂಡಿರುವ ಪ್ರಕರಣಗಳ ಕಾರಣಕ್ಕೆ ಹಳೆಯ ಪ್ರಕರಣಗಳ ಜೊತೆ ಮತ್ತೆ 1,500 ಪ್ರಕರಣಗಳು ಹೆಚ್ಚಾಗಿವೆ ಎಂದ ಸಚಿವರು, ಅರ್ಹ ಪ್ರಕರಣಗಳನ್ನು ಮಾತ್ರ ದಾಖಲಿಸಿಕೊಳ್ಳಲು ಎಸಿಗಳಿಗೆ ಸೂಚನೆ ನೀಡಿದರು.

14 ಸಾವಿರ ಪ್ರಕರಣ ವಿಲೇವಾರಿ

ಒಂದುವರೆ ವರ್ಷದ ಹಿಂದೆ ವಿಶೇಷ ಎಸಿಗಳಿಗೆ ಬಾಕಿ ಇದ್ದ ಹಳೆಯ 18,300 ಪ್ರಕರಣಗಳನ್ನು ವಿಲೇವಾರಿಗಾಗಿ ನೀಡಲಾಗಿತ್ತು. ಆದರೆ, ಇಂದು ಕೇವಲ 4,300 ಪ್ರಕರಣಗಳು ಮಾತ್ರ ಬಾಕಿ ಇವೆ. 14,000 ಪ್ರಕರಣಗಳು ವಿಲೇವಾರಿ ಆಗಿವೆ. ತುಮಕೂರಿನಲ್ಲಿ ಅತಿಹೆಚ್ಚು ಪ್ರಕರಣ ಬಾಕಿ ಇವೆ. ಅವಧಿ ಮೀರಿದ 1,900 ಪ್ರಕರಣ ಬಾಕಿ ಇವೆ. ಈ ಪೈಕಿ 180 ದಿನಕ್ಕೂ ಮೀರಿದ 91 ಪ್ರಕರಣಗಳು ಬಾಕಿ ಇವೆ. 3 ಜನ ವಿಶೇಷ ಎಸಿಗಳಿದ್ದಾರೆ. ಮುಂದಿನ 2 ತಿಂಗಳಲ್ಲಿ ಎಲ್ಲಾ ಬಾಕಿ ಪ್ರಕರಣ ವಿಲೇಗೊಳಿಸಲು ಸಚಿವ ಕೃಷ್ಣ ಬೈರೇಗೌಡ ಸೂಚನೆ ನೀಡಿದರು.

ಡಿಕೆಶಿಯಿಂದ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ

ಚೆನ್ನೈ: ಮಹಿಳೆಯರಿಗೆ 2 ಸಾವಿರ, 3 ಲಕ್ಷ ಸರ್ಕಾರಿ ಹುದ್ದೆ ಭರ್ತಿ, ಭೂ ರಹಿತ ರೈತರಿಗೆ ವಾರ್ಷಿಕ 6 ಸಾವಿರ ಸೇರಿದಂತೆ ತಮಿಳುನಾಡಿನ ಎಲ್ಲಾ ವರ್ಗದವರ ಹಿತ ಕಾಪಾಡುವ ಮಹತ್ತರ ಭರವಸೆಗಳನ್ನು ಒಳಗೊಂಡ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಡುಗಡೆ ಮಾಡಿದರು.

ಗುರುವಾರ ಚೆನ್ನೈನ ತಮಿಳುನಾಡು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಮಹಿಳೆಯರನ್ನು ಸಬಲರನ್ನಾಗಿ ಮಾಡಬೇಕು, ಮಹಿಳೆ ಶಕ್ತಿಶಾಲಿಯಾದರೆ ಕುಟುಂಬ ಶಕ್ತಿಶಾಲಿ ಆಗುತ್ತದೆ. ಕುಟುಂಬ ಶಕ್ತಿಶಾಲಿಯಾದರೆ, ಸಮಾಜ ಬಲಿಷ್ಠವಾಗುತ್ತದೆ. ಇದಕ್ಕಾಗಿ ಮಹಿಳೆಯರಿಗೆ ಮಾಸಿಕ 2 ಸಾವಿರ ರೂ. ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. ಆರೋಗ್ಯ, ಮೀನುಗಾರರ ಸಮಸ್ಯೆ, ಭೂ ದಾಖಲೆ ಹಂಚಿಕೆ ಯೋಜನೆಗಳನ್ನು ಘೋಷಣೆ ಮಾಡಲಾಗಿದ್ದು, ರಾಜ್ಯದ ಜನರ ಅಗತ್ಯಕ್ಕೆ ತಕ್ಕಂತೆ ಯೋಜನೆ ರೂಪಿಸಲಾಗಿದೆ. ನಿರುದ್ಯೋಗಿ ಯುವಕರಿಗಾಗಿ 3 ಲಕ್ಷ ಸರ್ಕಾರಿ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು. ಹುದ್ದೆ ಖಾಲಿಯಾದ 300 ದಿನಗಳಲ್ಲಿ ಅವುಗಳನ್ನು ಭರ್ತಿ ಮಾಡಲಾಗುವುದು. ಪಿಂಚಣಿ ದರ ಏರಿಕೆ, ಭೂರಹಿತ ರೈತರಿಗೆ ವಾರ್ಷಿಕ 6 ಸಾವಿರ ರೂ. ನೀಡಲಾಗುವುದು ಎಂದರು.

ಇಡೀ ದೇಶಕ್ಕೆ ಗ್ಯಾರಂಟಿ ಮಾದರಿ: ಕರ್ನಾಟಕದಲ್ಲಿ ನಾವು ಅಧಿಕಾರಕ್ಕೆ ಬಂದ ಮೊದಲ 6 ತಿಂಗಳ ಒಳಗಾಗಿ ಜಾರಿ ಮಾಡಿದೆವು. ಪ್ರಧಾನಮಂತ್ರಿ ಸೇರಿದಂತೆ ಬಿಜೆಪಿಯರು ನಮ್ಮ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದರು. ಇದು ಸಾಧ್ಯವೇ ಎಂದು ಪ್ರಶ್ನಿಸಿದರು. ನಾವು ಈ ಗ್ಯಾರಂಟಿ ಯೋಜನೆ ಜಾರಿ ಮಾಡಿದ ಬಳಿಕ ಇಡೀ ದೇಶದೆಲ್ಲೆಡೆ ನಮ್ಮ ಮಾದರಿಯನ್ನೇ ಅವಲಂಬಿಸಿದ್ದಾರೆ. ಯಾವುದೇ ರಾಜ್ಯವಾಗಲಿ, ಯಾವುದೇ ಸರ್ಕಾರವಿರಲಿ ಮಹಾರಾಷ್ಟ್ರ, ಮಧ್ಯಪ್ರದೇಶ, ಬಿಹಾರ ರಾಜ್ಯಗಳಲ್ಲಿ ಬಿಜೆಪಿ ನಮ್ಮ ಯೋಜನೆಗಳನ್ನು ನಕಲು ಮಾಡಲಾಗಿದೆ ಎಂದರು.

ದುಡ್ಡಿಲ್ಲ ಎಂದು ಸಿಎಂ ಪತ್ರ: ಸೋಮಣ್ಣ

ಮಂಡ್ಯ: ಹೆಜ್ಜಾಲ-ಚಾಮರಾಜನಗರ ರೈಲು ಮಾರ್ಗಕ್ಕೆ ತಡೆಯೊಡ್ಡಿದ್ದೇ ಮುಖ್ಯಮಂತ್ರಿ ಸಿದ್ದರಾಮಯ್ಯ. ನಮ್ಮತ್ರ ದುಡ್ಡಿಲ್ಲ, ಈ ಯೋಜನೆಯನ್ನು ಕೈಬಿಡುವಂತೆ ಪತ್ರ ಬರೆದಿದ್ದರು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಗಂಭೀರ ಆರೋಪ ಮಾಡಿದರು.

ಗುರುವಾರ ಬೆಂಗಳೂರಿನಿಂದ ಮೈಸೂರುವರೆಗೆ ಕೇಂದ್ರ ಭಾರೀ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್ .ಡಿ.ಕುಮಾರಸ್ವಾಮಿ ಅವರೊಂದಿಗೆ ವಿಂಡೋ ಟ್ರೇಲಿಂಗ್ ಪರಿವೀಕ್ಷಣೆ ನಡೆಸುವ ವೇಳೆ ನಗರದ ರೈಲು ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಅಧಿಕಾರಕ್ಕೆ ಬಂದ ತಕ್ಷಣವೇ ಹೆಜ್ಜಾಲ-ಕನಕಪುರ-ಮಳವಳ್ಳಿ-ಚಾಮರಾಜನಗರ ರೈಲ್ವೆ ಮಾರ್ಗದ ಯೋಜನೆಯನ್ನು ಕೈಗೆತ್ತಿಕೊಂಡೆವು. ಇದು ಅಗತ್ಯದ ಯೋಜನೆಯಾಗಿತ್ತು. ಕೇಂದ್ರ ಸರ್ಕಾರ ಯೋಜನೆಗೆ ಗ್ರೀನ್ ಸಿಗ್ನಲ್ ನೀಡಿತ್ತು. ಆದರೆ, ರಾಜ್ಯದ ಪಾಲಿನ ಹಣ ಬಿಡುಗಡೆಗೆ ಕಾಂಗ್ರೆಸ್ ಸರ್ಕಾರ ಸಿದ್ಧವಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯೋಜನೆಗೆ ರಾಜ್ಯದಿಂದ ಹಣಕಾಸು ಒದಗಿಸಲಾಗುವುದಿಲ್ಲ. ಈ ಯೋಜನೆಯನ್ನು ಕೈಬಿಡುವಂತೆ ಪತ್ರ ಬರೆದಿದ್ದರು. ಅದಕ್ಕಾಗಿ ಯೋಜನೆ ಅನುಷ್ಠಾನಕ್ಕೆ ಬರಲಿಲ್ಲ ಎಂದು ದೂಷಣೆ ಮಾಡಿದರು.



ರೈಲ್ವೆ ನಿಲ್ದಾಣಗಳಲ್ಲಿ ಸಾರ್ವಜನಿಕರಿಗೆ ಇರುವ ಸೌಲಭ್ಯಗಳು, ರೈಲ್ವೆ ಮಾರ್ಗಗಳಲ್ಲಿರುವ ಸಮಸ್ಯೆಗಳು, ತೊಂದರೆಗಳು, ರೈಲ್ವೆ ಮೇಲ್ಸೇತುವೆ, ಕೆಳ ಸೇತುವೆಗಳ ನಿರ್ಮಾಣ ಕುರಿತಂತೆ ಪರಿಶೀಲನೆ ನಡೆಸಲಾಗುತ್ತಿದೆ. ಸಾಮಾನ್ಯ ಜನರಿಗೆ ತೊಂದರೆ ಆಗದ ರೀತಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕ್ರಮ ಜರುಗಿಸುವ ಭರವಸೆ ನೀಡಿದರು. ಬೆಂಗಳೂರು-ಮೈಸೂರು ನಡುವೆ ಮೆಮೋ ರೈಲು ನೀಡುವಂತೆ ಬೇಡಿಕೆ ಇದೆ. ಇದರ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು. ಈ ಕುರಿತಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೂ ಚರ್ಚಿಸಲಾಗಿದೆ. ಅವರು ನಿಮ್ಮ ಕನಸು ನನಸು ಮಾಡುವರು. ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ನಿಟ್ಟಿನಲ್ಲಿ ನಾನೂ ಅವರ ಜೊತೆಯಾಗಿರುತ್ತೇನೆ ಎಂದರು.

ಮಂಗಳೂರಿಗೆ ಶೀಘ್ರ ವಂದೇ ಭಾರತ್ ರೈಲು

ಹಾಸನ- ಕುಕ್ಕೆ ಸುಬ್ರಹ್ಮಣ್ಯ -ಮಂಗಳೂರು ನಡುವಿನ 51 ಕಿ.ಮೀ. ಪ್ರಯಾಸದ ರೈಲು ಮಾರ್ಗವನ್ನು ವಿದ್ಯುದೀಕರಣ ಮಾಡಿದ್ದು ಮಂಗಳೂರು-ಕುಕ್ಕೆ ಸುಬ್ರಹ್ಮಣ್ಯ ನಡುವಿನ 51 ಕಿ.ಮೀ. ಪ್ರಯಾಸದ ರೈಲು ಮಾರ್ಗವನ್ನು ವಿದ್ಯುದೀಕರಣ ಮಾಡಿದ್ದು ನಮ್ಮ ಸಾಧನೆ. ಮಂಗಳೂರಿಗೆ ವಂದೇ ಭಾರತ್ ರೈಲು ಸಂಚಾರ ಶೀಘ್ರದಲ್ಲಿ ಆರಂಭವಾಗಲಿದೆ ಎಂದರು. ದೇಶದಲ್ಲಿರುವ ರೈಲ್ವೆ ನಿಲ್ದಾಣಗಳನ್ನು ವಿಮಾನ ನಿಲ್ದಾಣಗಳನ್ನಾಗಿ ಪರಿವರ್ತಿಸುವ ಸಂಕಲ್ಪವನ್ನು ಪ್ರಧಾನಿ ನರೇಂದ್ರಮೋದಿಯವರು ಮಾಡಿದ್ದು, ಆ ನಿಟ್ಟಿನಲ್ಲಿ ಕೆಲಸ ಸಾಗುತ್ತಿದೆ. 1568 ಮಾರ್ಗಗಳಿಗೆ ಪ್ರಯಾಣಿಕರಿಗೆ ಸುರಕ್ಷಾ ಕವಚಗಳನ್ನು ಅಳವಡಿಸಲಾಗಿದೆ. ಕಳೆದ ಹತ್ತು ವರ್ಷದಲ್ಲಿ ರಾಜ್ಯದಲ್ಲಿ 707 ಹೊಸ ರೈಲ್ವೆ ಸೇತುವೆಗಳನ್ನು ನಿರ್ಮಿಸಲಾಗುತ್ತಿದೆ. ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲೆಲ್ಲ ನಿರ್ಮಾಣಕ್ಕೆ ಸೂಚಿಸಿದ್ದು, ವೆಚ್ಚವನ್ನು ಕೇಂದ್ರವೇ ಭರಿಸಲಿದೆ ಎಂದರು.

ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹೈ ವಜಾ

ಬೆಂಗಳೂರು: ಶಾಲೆಗಳಲ್ಲಿ ಪ್ರತಿದಿನ ವಂದೇ ಮಾತರಂ ಗೀತೆಯನ್ನು ಎಲ್ಲ ಆರು ಚರಣಗಳೊಂದಿಗೆ ಕಡ್ಡಾಯವಾಗಿ ಹಾಡುವ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ ಶಿಷ್ಟಾಚಾರ ಮಾರ್ಗಸೂಚಿಗಳನ್ನು ಅಸಾಂವಿಧಾನಿಕ ಎಂದು ಘೋಷಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಲು ನಿರಾಕರಿಸಿರುವ ಹೈಕೋರ್ಟ್ ಗುರುವಾರ ವಜಾಗೊಳಿಸಿದೆ. ಬೆಂಗಳೂರಿನ ವಕೀಲ ಸೋಮಶೇಖರ್ ರಾಜವಂಶಿ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ.ಪೂಣಚ್ಚ ಅವರ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್ ಅವರು ಕೇಂದ್ರ ಗೃಹ ಇಲಾಖೆಯ ಆದೇಶದಲ್ಲಿ ವಂದೇ ಮಾತರಂ ಗೀತೆ ಹಾಡಬಹುದು ಎಂಬ ಪದ ಬಳಕೆ ಮಾಡಲಾಗಿದ್ದು, ಅದು ಕಡ್ಡಾಯವಲ್ಲ ಎಂಬುದನ್ನು ಸೂಚಿಸುತ್ತದೆ. ಅಲ್ಲದೇ, ಈಚೆಗೆ ಸುಪ್ರೀಂ ಕೋರ್ಟ್ ಇಂಥದ್ದೇ ಮನವಿ ಒಳಗೊಂಡಿದ್ದ ಪಿಐಎಲ್ ವಜಾಗೊಳಿಸಿದೆ ಎಂದರು. ಇದನ್ನು ಆಲಿಸಿದ ಪೀಠವು ವಂದೇ ಮಾತರಂ ಗೀತೆಯನ್ನು ಯಾವುದೇ ಶಾಸನಬದ್ಧ ಚೌಕಟ್ಟಿನಲ್ಲಿ ಸೇರ್ಪಡೆ ಮಾಡಲಾಗಿಲ್ಲ. ಕೇಂದ್ರ ಸರ್ಕಾರದ ಆದೇಶದಲ್ಲಿ ಸಾಧ್ಯತೆ ಎಂಬ ಪದ ಬಳಕೆ ಮಾಡಿದ್ದು ಅದು ಕಡ್ಡಾಯವಲ್ಲ. ರಾಷ್ಟ್ರಗೀತೆಯಂತೆ ವಂದೇ ಮಾತರಂ ಗೀತೆಯ ಗಾಯನ ಕಡ್ಡಾಯವಲ್ಲ. ಇಂಥದ್ದೇ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ ಎಂದು ಅರ್ಜಿ ವಜಾಗೊಳಿಸಿತು.



ಮತದಾನದ ದಿನವೇ ಕೈ ಹಣ ಹಂಚಿಕೆ

ಬಾಗಲಕೋಟೆ: ಬಾಗಲಕೋಟೆಯ ಉಪಚುನಾವಣೆ ಶಾಂತಿಯುತವಾಗಿ, ಪಾರದರ್ಶಕವಾಗಿ ನಡೆಯಬೇಕು ಹಾಗೂ ಮತದಾರರಿಗೆ ದುಡ್ಡಿನ ಆಮಿಷ, ಇನ್ನಿತರ ಆಮಿಷ ಒಡ್ಡಬಾರದು ಎಂದು ಚುನಾವಣಾಧಿಕಾರಿಗಳು ನಿತ್ಯ ಪತ್ರಿಕೆಯಲ್ಲಿ ಜನರಿಗೆ ಜಾಗೃತಿ ಮೂಡಿಸಿದರೂ ಕಾಂಗ್ರೆಸ್ ಕಾರ್ಯಕರ್ತರು ರಾಜಾರೋಷವಾಗಿ ನಡು ಬೀದಿಯಲ್ಲೇ ದುಡ್ಡು ಹಂಚಿಕೆ ಮಾಡಿದ್ದು ಭಾರೀ ಚರ್ಚೆಗೆ ಗ್ರಾಸವಾಗಿದೆ.

ಬಾಗಲಕೋಟೆ ಉಪಚುನಾವಣೆ ಎಂದರೆ ಅನುಕಂಪ, ಅಭಿವೃದ್ಧಿಯನ್ನು ಇಟ್ಟುಕೊಂಡು ಚುನಾವಣೆಯಲ್ಲಿ ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳು ಕಣದಲಿದ್ದರು. ಆದರೆ, ಕಾಂಗ್ರೆಸ್ ಕಾರ್ಯಕರ್ತರು ಕೊನೆ ಗಳಿಗೆಯಲ್ಲಿ ಮತದಾನ ದಿನವೇ ಹಣವನ್ನು ಹಂಚಿಕೆ ಮಾಡಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಬಾಗಲಕೋಟೆ ನಗರದ ವಾಂಬೆ ಕಾಲೋನಿಯ ಮುಂಭಾಗ ಕಾಂಗ್ರೆಸ್ ಮುಖಂಡ ಜಾಫರ್ ಬೇಪಾರಿ ನೂರಾರು ಜನರ ಮಧ್ಯೆ ನಿಂತು ಹಣವನ್ನು ಹಂಚಿಕೆ ಮಾಡುತ್ತಿದ್ದರು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದಿಂದ ದುಡ್ಡು ಕೊಡುತಾ ಇದ್ದಾರೆ ಎಂದು ವಿಡಿಯೋದಲ್ಲಿ ಹೇಳಿಕೆ ಕೇಳಿ ಬರುತ್ತಿತ್ತು. ಜನರು ಒಬ್ಬರ ಮೇಲೆ ಒಬ್ಬರು ಮುಗಿಬಿದ್ದು ದುಡ್ಡಿಗಾಗಿ ಕೈ ಚಾಚುತ್ತಿದ್ದರು. ಇನ್ನೂ ಹೆಚ್ಚು ಜನರು ದುಡ್ಡಿಗಾಗಿ ಕೈ ಚಾಚುತ್ತಿದ್ದಂತೆ ಕಾಂಗ್ರೆಸ್ ಮುಖಂಡ ಅಲ್ಲಿಂದ ಕಾಲ್ಕಿತ್ತರು. ಗದ್ದಲದಲ್ಲಿಯೇ ಹಣವನ್ನು ಪಡೆದುಕೊಂಡು ಮಹಿಳೆಯೊಬ್ಬಳು ಕೈಯಲ್ಲಿ ಹಿಡಿದುಕೊಂಡು ಬರುವಾಗ ವಿಡಿಯೋ ಮಾಡುವವರು ಕೇಳಿದಾಗ ಯಾರು ಕೊಟ್ಟರು ಎಂದು ದುಡ್ಡು ಕೇಳಿದರೆ ಕಾಂಗ್ರೆಸ್‌ನವರು ಕೊಟ್ಟರು ಎಂದು ಹೇಳಿಕೆ ನೀಡಿದ್ದು ವಿಡಿಯೋದಲ್ಲಿ ಕೇಳಿಬಂದಿದೆ. .

ನೀತಿ ಸಂಹಿತೆ ಉಲ್ಲಂಘನೆ: ದೂರು ದಾಖಲು

ಉಪಚುನಾವಣೆಯ ಹಿನ್ನಲೆಯಲ್ಲಿ ನವನಗರದ ವಾಂಬೆ ಕಾಲೋನಿಯಲ್ಲಿ ರಾಜಾರೋಷವಾಗಿ ನೂರಾರು ಜನರ ಮಧ್ಯೆ ನಿಂತು ಕಾಂಗ್ರೆಸ್ ಪಕ್ಷದ ಮುಖಂಡ ಜಾಫರ್ ಬೇಪಾರಿ ದುಡ್ಡು ಹಂಚಿಕೆ ಮಾಡುತ್ತಿರುವ ವಿಡಿಯೋ ದೃಶ್ಯವನ್ನು ಆಧಾರಿಸಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಣೆ ಪ್ರಕರಣವನ್ನು ದಾಖಲಿಸಲಾಗಿದೆ. ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿ ವಿಠ್ಠಲ ಸಿದ್ದಪ್ಪ ನಾಯಕ ಎಂಬುವವರು ಸಾಮಾಜಿಕ ಜಾಲತಾಣದಲ್ಲಿ ದುಡ್ಡು ಹಂಚಿಕೆ ಮಾಡುತ್ತಿದ್ದ ಕಾಂಗ್ರೆಸ್ ಮುಖಂಡನ ವಿಡಿಯೋ ಆಧರಿಸಿದ ಕಾಂಗ್ರೆಸ್ ಮುಖಂಡ ನವನಗರದ ಜಾಫರ್ ಬೇಪಾರಿಯವರ ಮೇಲೆ ಚುನಾವಣೆ ನೀತಿಸಂಹಿತೆ ಉಲ್ಲಂಘನೆ ಮಾಡಿರುವ ಕುರಿತು ಪ್ರಕರಣ ದಾಖಲಿಸಿದ್ದಾರೆ.

ಶಿಕ್ಷಣ ಅಧಿಕಾರಿ ತರಾಟೆಗೆ ತೆಗೆದುಕೊಂಡ ಮಾಜಿ ಶಾಸಕ ವಿಕ್ರಮಸಿಂಹ ಸಾವಂತ್

ಮಹಾರಾಷ್ಟ್ರ ಟಿಇಟಿಯಲ್ಲಿ ಕನ್ನಡ ಸೇರಿಸಲು ಆಗ್ರಹ

ಬೆಂಗಳೂರು: ಮಹಾರಾಷ್ಟ್ರ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿಇಟಿ) ಕನ್ನಡ ಭಾಷೆಯನ್ನು ಸೇರಿಸುವಂತೆ ಮತ್ತು ಗಡಿಭಾಗದ ಕನ್ನಡ ಶಾಲೆಗಳ ದೀರ್ಘಕಾಲದ ಬಾಕಿ ಉಳಿದಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ, ಜತ್ ಮಾಜಿ ಶಾಸಕ ವಿಕ್ರಮಸಿಂಹ ಸಾವಂತ್ ಪುಣೆಯಲ್ಲಿ ರಾಜ್ಯದ ಹಿರಿಯ ಶಿಕ್ಷಣ ಅಧಿಕಾರಿಗಳನ್ನು ಭೇಟಿ ಮಾಡಿ ತರಾಟೆಗೆ ತೆಗೆದುಕೊಂಡರು.

ಈ ಸಂಬಂಧ ಮಹಾರಾಷ್ಟ್ರ ರಾಜ್ಯ ಶಿಕ್ಷಣ ಆಯುಕ್ತ ಸಚಿಂದ್ರ ಪ್ರತಾಪ್ ಸಿಂಗ್, ಪರೀಕ್ಷಾ ಪರಿಷತ್ತಿನ ಅಧ್ಯಕ್ಷ ನಂದಕುಮಾರ್ ಬೆಡ್ಸೆ ಮತ್ತು ಆಯುಕ್ತ ಮಹೇಶ್ ಚೋತೆ ಅವರನ್ನು ಭೇಟಿ ಮಾಡಿ ಸುದೀರ್ಘ ಚರ್ಚೆ ನಡೆಸಿದರು. ಡಿಜಿಟಲ್ ಮಾಧ್ಯಮದಲ್ಲಿ ಕನ್ನಡದ ಬಳಕೆ ಸಂಬಂಧ ನಿಪುಣ ಭಾರತ ಮತ್ತು ಇತರ ಶೈಕ್ಷಣಿಕ ಆ್ಯಪ್‌ಗಳಲ್ಲಿ ಮೌಲ್ಯಮಾಪನವು ಕೇವಲ ಮರಾಠಿಯಲ್ಲಿ ನಡೆಯುತ್ತಿರುವುದರಿಂದ ಕನ್ನಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅಲ್ಲಿ ತಕ್ಷಣವೇ ಕನ್ನಡ ಭಾಷೆಯ ಆಯ್ಕೆಯನ್ನು ನೀಡಬೇಕು ಎಂದು ಒತ್ತಾಯಿಸಿದರು.



> ಕನ್ನಡ ಭಾಷಿಕರ ಸಮಸ್ಯೆಗಳ ಕುರಿತು ಶೀಘ್ರದಲ್ಲೇ ಸರ್ಕಾರಿ ಮಟ್ಟದಲ್ಲಿ ಚರ್ಚಿಸಿ ಪರಿಹರಿಸಲಾಗುವುದು. ಅಲ್ಲದೇ ಟಿಇಟಿ ಪರೀಕ್ಷೆಯ ಲ್ಲಿ ಕನ್ನಡ ಮಾಧ್ಯಮವನ್ನು ಸೇರಿಸುವ ಕುರಿತು ಖಂಡಿತವಾಗಿಯೂ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುವುದು.
> ■ ಸಚಿಂದ್ರ ಪ್ರತಾಪ್ ಸಿಂಗ್, ಮಹಾರಾಷ್ಟ್ರ ಶಿಕ್ಷಣ ಆಯುಕ್ತ

ಮಹಾರಾಷ್ಟ್ರ ಮುಖ್ಯ ಕಾರ್ಯದರ್ಶಿಗೆ ಶಾಲಿನಿ ರಜನೀಶ್ ಪತ್ರ

ಮಹಾರಾಷ್ಟ್ರದ ಜತ್ತ, ಅಕ್ಕಲಕೋಟೆ, ದಕ್ಷಿಣ ಸೋಲಾಪುರ ಸೇರಿದಂತೆ ವಿವಿಧೆಡೆ ಸುಮಾರು 377 ಕನ್ನಡ ಮಾಧ್ಯಮ ಶಾಲೆಗಳಿವೆ. ಇವುಗಳಲ್ಲಿ 44,860ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಸಂವಿಧಾನದ ವಿಧಿ 350ಎ ಅನ್ವಯ ಭಾಷಾ ಅಲ್ಪಸಂಖ್ಯಾತರಿಗೆ ಅವರದ್ದೇ ಮಾಧ್ಯಮದಲ್ಲಿ ಪರೀಕ್ಷೆ ಬರೆಯುವ ಹಕ್ಕಿದೆ. ಸುಪ್ರೀಂ ಕೋರ್ಟ್ ಆದೇಶದಂತೆ 2027ರೊಳಗೆ ಶಿಕ್ಷಕರು ಟಿಇಟಿ ಪಾಸಾಗುವುದು ಕಡ್ಡಾಯ. ಪ್ರಸ್ತುತ ಮಹಾರಾಷ್ಟ್ರದಲ್ಲಿ ಟಿಇಟಿಗೆ ಅರ್ಜಿ ಸಲ್ಲಿಸಲು ಏ.16 ಕೊನೆಯ ದಿನ. ತಕ್ಷಣವೇ ಕನ್ನಡ ಮಾಧ್ಯಮದ ಆಯ್ಕೆಯನ್ನು ಒದಗಿಸಬೇಕು. ಕರ್ನಾಟಕ ಸರ್ಕಾರವು ಇಲ್ಲಿನ ಮರಾಠಿ ಭಾಷಿಕರಿಗಾಗಿ ಮರಾಠಿ ಮಾಧ್ಯಮದಲ್ಲೂ ಟಿಇಟಿ ನಡೆಸುತ್ತಿದೆ. ಅದೇ ಮಾದರಿಯ ಸೌಲಭ್ಯವನ್ನು ಮಹಾರಾಷ್ಟ್ರ ಸರ್ಕಾರವು ಅಲ್ಲಿನ ಕನ್ನಡಿಗರಿಗೂ ನೀಡಬೇಕು ಎಂದು ಮಹಾರಾಷ್ಟ್ರದ ಮುಖ್ಯ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪತ್ರ ಬರೆದು ಒತ್ತಾಯಿಸಿದ್ದಾರೆ.

ಸಂಪಾದಕೀಯ

ಪ್ರಜಾಪ್ರಭುತ್ವದ ಹಬ್ಬಕ್ಕೆ ಮತದಾರನ ಮುದ್ರೆ

ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಏಪ್ರಿಲ್ 9 ಮಹತ್ವದ ದಿನವಾಗಿ ದಾಖಲಾಗಿದೆ. ದಕ್ಷಿಣದ ಕೇರಳ, ಪುದುಚೇರಿ ಮತ್ತು ಈಶಾನ್ಯದ ಅಸ್ಸಾಂ ರಾಜ್ಯಗಳಲ್ಲಿ ನಡೆದ ವಿಧಾನಸಭೆ ಚುನಾವಣೆಗಳು ಮತದಾರರ ಉತ್ಸಾಹಕ್ಕೆ ಸಾಕ್ಷಿಯಾಗಿವೆ. ಮತಗಟ್ಟೆಗಳ ಮುಂದೆ ಕಂಡುಬಂದ ಸುದೀರ್ಘ ಸಾಲುಗಳು ಭಾರತೀಯರು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಇಟ್ಟಿರುವ ಅಚಲ ನಂಬಿಕೆಯನ್ನು ಮತ್ತೊಮ್ಮೆ ಜಗತ್ತಿಗೆ ಸಾರಿದೆ. ವಿಶೇಷವೆಂದರೆ, ಎಸ್‌ಐಆರ್ ಮುಗಿದ ಮೇಲೆ ಈ ರಾಜ್ಯಗಳಲ್ಲಿ ಮತದಾನವಾಗಿದ್ದು, ಎಸ್‌ಐಆರ್‌ನ ಪ್ರಭಾವವೂ ಇಲ್ಲಿ ಗೊತ್ತಾಗಿದೆ. ಅಂದರೆ, ಕೇಂದ್ರ ಚುನಾವಣಾ ಆಯೋಗವು ಈಗಾಗಲೇ ನಕಲಿ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಿದ ಪರಿಣಾಮ ನೈಜ ಮತದಾರರಷ್ಟೇ ಪಟ್ಟಿಯಲ್ಲಿ ಉಳಿದಿದ್ದಾರೆ. ಹೀಗಾಗಿ, ಮತದಾನವೂ ಚೆನ್ನಾಗಿ ಆಗಿದೆ. ಎಸ್‌ಐಆರ್ ಅನ್ನು ಟೀಕಿಸುತ್ತಿದ್ದವರಿಗೆ ಈ ಚುನಾವಣೆ ತಕ್ಕ ಪಾಠವನ್ನೇ ಕಲಿಸಿದೆ. ಎಲ್ಲೂ ತಮ್ಮ ಹೆಸರು ಮತದಾರರ ಪಟ್ಟಿಯಿಂದ ನಾಪತ್ತೆಯಾಗಿದೆ ಎಂಬ ಕೂಗು ಕೇಳಿಸಿಲ್ಲ ಎಂಬುದು ವಿಶೇಷ.



ಪ್ರಾಥಮಿಕ ವರದಿಗಳ ಪ್ರಕಾರ, ಪುದುಚೇರಿಯಲ್ಲಿ ಶೇ. 89ಕ್ಕೂ ಹೆಚ್ಚು ದಾಖಲೆ ಮತದಾನವಾಗಿದ್ದರೆ, ಅಸ್ಸಾಂನಲ್ಲಿ ಶೇ. 85 ಹಾಗೂ ಕೇರಳದಲ್ಲಿ ಶೇ. 77ಕ್ಕೂ ಹೆಚ್ಚು ಮತದಾನವಾಗಿದೆ. ಅಸ್ಸಾಂನಲ್ಲಿ ಹಿಮಂತ ಬಿಸ್ವ ಶರ್ಮಾ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತದ ಅಳಿವು-ಉಳಿವು ನಿರ್ಧಾರವಾಗಬೇಕಿದ್ದರೆ, ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗದ ಭವಿಷ್ಯ ಅಡಗಿದೆ. ಈ ಬಾರಿ ಅಸ್ಸಾಂನಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಹಿಂಸಾಚಾರದ ಘಟನೆಗಳು ವರದಿಯಾಗಿದ್ದರೂ, ಒಟ್ಟಾರೆಯಾಗಿ ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ಸಾಗಿರುವುದು ಸಮಾಧಾನದ ಸಂಗತಿ. ಅಸ್ಸಾಂನ ಮತದಾರರು ಭೂಮಿ ಮತ್ತು ಅಸ್ಮಿತೆಯ ರಕ್ಷಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಹೊರಬಂದಿರುವುದು ಗಮನಾರ್ಹ. ಕೇರಳದಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು, ಸಾಂಪ್ರದಾಯಿಕ ಎಡರಂಗ(ಎಲ್‌ಡಿಎಫ್) ಮತ್ತು ಕಾಂಗ್ರೆಸ್ ನೇತೃತ್ವದ (ಯುಡಿಎಫ್) ಮೈತ್ರಿಕೂಟಗಳ ನಡುವೆ ಬಿಜೆಪಿ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಪುದುಚೇರಿಯಲ್ಲಿ ಎನ್. ರಂಗಸ್ವಾಮಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಪಾರಮ್ಯವನ್ನು ಎದುರಿಸಲು ಕಾಂಗ್ರೆಸ್-ಡಿಎಂಕೆ ಮೈತ್ರಿಕೂಟ ಹೋರಾಟ ನಡೆಸಿದೆ. ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ಮನೆಯಿಂದಲೇ ಮತದಾನ ಮಾಡುವ ಅವಕಾಶ ಹಾಗೂ ಮೊದಲ ಬಾರಿಗೆ ಮತ ಚಲಾಯಿಸುವ ಯುವಕರಿಗೆ ಸಸಿಗಳನ್ನು ನೀಡಿದ ಚುನಾವಣಾ ಆಯೋಗದ ಕ್ರಮಗಳು ಶ್ಲಾಘನೀಯ. ಒಟ್ಟಾರೆಯಾಗಿ, ಈ ಬೃಹತ್ ಮತದಾನವು ಆಡಳಿತ ವಿರೋಧಿ ಅಲೆಯೋ ಅಥವಾ ಆಡಳಿತ ಪರವಾದ ಒಲವೋ ಎಂಬುದು ಮೇ 4ರ ಫಲಿತಾಂಶದಂದು ತಿಳಿಯಲಿದೆ. ಆದರೆ, ಮತದಾನದ ಪ್ರಮಾಣ ಹೆಚ್ಚಾಗಿರುವುದು ಬದಲಾವಣೆಯ ಸಂಕೇತವೋ ಅಥವಾ ಬಲಿಷ್ಠ ಸ್ಥಿರತೆಯ ಬಯಕೆಯೋ ಎಂಬ ಕುತೂಹಲ ರಾಜಕೀಯ ಪಂಡಿತರಲ್ಲಿ ಮನೆಮಾಡಿದೆ. ದೇಶದ ಭವಿಷ್ಯವನ್ನು ನಿರ್ಧರಿಸುವ ಈ ನಿರ್ಣಾಯಕ ಹಂತದಲ್ಲಿ ಮತದಾರರು ನೀಡಿರುವ ತೀರ್ಪು ಇವಿಎಂ ಯಂತ್ರಗಳಲ್ಲಿ ಭದ್ರವಾಗಿದ್ದು, ಹೊಸ ಸರ್ಕಾರದ ಹಾದಿ ಸುಗಮಗೊಳಿಸಲಿದೆ.

ಇರಾನ್ ಸಮರದಿಂದ ಬಯಲಾದ ಮಿಥ್ಯೆಗಳು!

▸ ಉತ್ಪಲ್ ಕುಮಾರ್

ಇರಾನ್ ಯುದ್ಧವು ಎಲ್ಲ ಯುದ್ಧಗಳಂತೆ ಕೊಲ್ಲಿಯಲ್ಲಿ ನಡೆದ ಒಂದು ಸಂಘರ್ಷವಲ್ಲ. ಅದರ ಆಯಾಮ ಇನ್ನೂ ವಿಸ್ತಾರವಾಗಿದೆ. ಮುಖ್ಯವಾಗಿ ಅದು ದಶಕಗಳಿಂದ ಬೆಳೆದುಕೊಂಡು ಬಂದಿದ್ದ ಹಲವಾರು ಮಿಥ್ಯೆಗಳನ್ನು ನಾಶಪಡಿಸಿದೆ. ವ್ಯವಸ್ಥಿತವಾಗಿ ಕಟ್ಟಿದ ಹಲವು ಸುಳ್ಳುಗಳನ್ನು ಬಹಿರಂಗಪಡಿಸಿದೆ.ಈ ಯುದ್ಧವು ಭೌಗೋಳಿಕ ವ್ಯವಸ್ಥೆಯನ್ನೆ ಮರುರೂಪಿಸುವಂತಿದೆ.

'ಅರಬ್ ಏಕತೆ' ಎಂಬ ಕಲ್ಪನೆಯನ್ನೇ ನೋಡೋಣ. ಕಳೆದ ಕೆಲವು ದಶಕಗಳಿಂದ ಅರಬ್ ಏಕತೆಯ ಕುರಿತು ಅತಿರಂಜಿತವಾಗಿ ಹೇಳಲಾಗುತ್ತಿತ್ತು. ಗಮಾಲ್ ಅಬ್ದುಲ್ ನಾಸೀರ್‌ನಿಂದ ಹಿಡಿದು ಸದ್ದಾಂ ಹುಸೇನ್, ಮಹಮ್ಮದ್ ಗಡ್ಡಾಫಿವರೆಗೆ ಎಲ್ಲರೂ 'ಪಾನ್ ಅರಬ್' ಅಥವಾ 'ಪಾನ್ ಖಲೀಫತ್' ಕುರಿತು ಮುಸ್ಲಿಮರಲ್ಲಿ ಕನಸು ಬಿತ್ತಿದ್ದರು. ಆದರೆ ಅದು ಎಂದಿಗೂ ಕಾರ್ಯಸಾಧ್ಯ ಕಲ್ಪನೆಯಾಗಿರಲಿಲ್ಲ. ಮುಸ್ಲಿಮರಲ್ಲಿ ಉನ್ಮಾದ ಸೃಷ್ಟಿಸುವ, ಭಿನ್ನಮತ ಅಳಿಸಿ ಹಾಕುವ ಮತ್ತು ಅಸ್ಥಿರತೆಯ ಮನಸ್ಥಿತಿ ಮರೆಯಾಗಿಸುವ ತಂತ್ರವಾಗಿತ್ತಷ್ಟೆ.

ಇರಾನ್ ಸಮರವು ಈ ಭ್ರಮೆಯನ್ನು ಬೆತ್ತಲುಗೊಳಿಸಿದೆ. ಅರಬ್‌ಏಕತೆ ಎಂಬುದು ಅಸ್ತಿತ್ವದಲ್ಲೇ ಇಲ್ಲ ಎಂಬುದು ಸಾಬೀತಾಗಿದೆ. ಇರಾನಿನ ಡ್ರೋನ್‌ಗಳು ಮತ್ತು ಕ್ಷಿಪಣಿಗಳು ನೆರೆಯ ಅರಬ್ ರಾಷ್ಟ್ರಗಳ ಮೇಲೆಯೇ ಎರಗುತ್ತಿದ್ದರೆ, ಈ ಎಲ್ಲಾ ಅರಬ್ ದೇಶಗಳು ಆತಂಕದಿಂದ ಚಡಪಡಿಸುತ್ತಿದ್ದವು.

'ಅರಬ್ ಸುರಕ್ಷತೆ' ಎಂಬ ಮಿಥ್ಯೆ ಕೂಡ ಈಗ ಚೂರಾಗಿದೆ. ಕೆಲವಾರು ವರ್ಷಗಳಿಂದ ಗಲ್ಫ್ ರಾಷ್ಟ್ರಗಳು ತಮ್ಮ ಶಕ್ತಿ ಇರುವುದೇ ಮೈತ್ರಿ ಕೂಟ ರಚಿಸುವುದರಲ್ಲಿ ಹಾಗೂ ಸುಧಾರಿತ ಶಸ್ತ್ರಾಸ್ತ್ರ ಪಡೆಯುವುದರಲ್ಲಿ ಎಂದು ಭಾವಿಸಿದ್ದವು. ಇದರ ಜತೆಗೇ ಅಮೆರಿಕದ ರಕ್ಷಣಾ ಕೊಡೆಯೂ ಅವುಗಳಿಗಿತ್ತು. ಆದರೆ ಇರಾನ್‌ನ ಕ್ಷಿಪಣಿ ಮತ್ತು ಡ್ರೋನ್‌ಗಳು ಈ ಗಲ್ಫ್ ರಾಷ್ಟ್ರಗಳ ಗುರಿಗಳ ಮೇಲೆ ಬಂದೆರಗಿದವು.ಅಲ್ಲಿಗೆ 'ಗಲ್ಫ್ ಒಂದು ಕೋಟೆ' ಎಂಬ ಭ್ರಮೆ ಛಿದ್ರವಾಯಿತು. ಗಲ್ಫ್ ಪ್ರದೇಶವು ಒಂದು ಗಾಜಿನ ಕೋಟೆ ಎಂಬುದು ಸಾಬೀತಾಯಿತು.

ಗಲ್ಫ್‌ನಲ್ಲಿದ್ದ ಅಮೆರಿಕನ್ ಸೇನಾ ನೆಲೆಗಳ ಸ್ಥಿತಿಯನ್ನೇ ನೋಡಿ. ಅವು ಅಮೆರಿಕದ ಮಿತ್ರರಾದ ಕೊಲ್ಲಿ ರಾಷ್ಟ್ರಗಳನ್ನು ಸಂರಕ್ಷಿಸಲು ಇರುವುದೆಂದು ಭಾವಿಸಲಾಗಿತ್ತು. ವಿಪರ್ಯಾಸವೆಂದರೆ ಅವುಗಳ ಕಾರಣದಿಂದಲೇ ಕೊಲ್ಲಿ ರಾಷ್ಟ್ರಗಳ ಮೇಲೆ ಇರಾನಿನ ಬಾಂಬ್‌ಗಳು ಬಂದು ಬಿದ್ದವು.

ಯುದ್ಧದ ಕಂಪನಗಳು ಕೊಲ್ಲಿ ಪ್ರದೇಶಕ್ಕಷ್ಟೇ ಸೀಮಿತವಾಗಿಲ್ಲ. ಜಾಗತಿಕವಾಗಿ ಪ್ರತಿಯೊಂದು ದೇಶವೂ ಹಾನಿ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಯುದ್ಧವು ಅಂತಾರಾಷ್ಟ್ರೀಯ ಗಮನವನ್ನು ಇನ್ನಿತರ ಕೆಲವು ಸಂಘರ್ಷಗಳಿಂದ ದೂರ ಸೆಳೆದಿದೆ. ಮುಖ್ಯವಾಗಿ ಉಕ್ರೇನ್ ಸಮರವನ್ನು ಜನರು ಮರೆತುಬಿಟ್ಟಿದ್ದಾರೆ. ಇದು ರಷ್ಯಾಕ್ಕೆ ಜಾಗತಿಕವಾಗಿ ತನ್ನ ಸ್ಥಾನಮಾನ ಬಲಪಡಿಸಲು ನೆರವಾಗಿದೆ. ಆದರೆ ಇಲ್ಲೊಂದು ವಿಪರ್ಯಾಸವೂ ಇದೆ. ದುರ್ಬಲಗೊಂಡ ಇರಾನ್ ಪಶ್ಚಿಮ ಏಷ್ಯಾದಲ್ಲಿ ರಷ್ಯಾದ ಸ್ಥಿತಿಯನ್ನೂ ದುರ್ಬಲಗೊಳಿಸುತ್ತದೆ. ಆದ್ದರಿಂದ ರಷ್ಯಾಕ್ಕೆ ಲಾಭದ ಜತೆಗೆ ನಷ್ಟವೂ ಸಂಭವಿಸಿದೆ.

ಇತ್ತ ಚೀನಾ ಕೂಡಾ ಇಕ್ಕಟ್ಟಿನಲ್ಲಿ ಸಿಲುಕಿದೆ. ಅಮೆರಿಕವು ಅನವಶ್ಯ ಯುದ್ಧವೊಂದರಲ್ಲಿ ತೊಡಗಿರುವುದು ಚೀನಾದ ಪಾಲಿಗೆ ಒಂದು ಸುಸಂಧಿಯಾಗಬೇಕಿತ್ತು. ಅದಕ್ಕೆ ತೈವಾನ್ ಜಲಸಂಧಿ ಸೇರಿದಂತೆ ಇನ್ನಿತರ ಪ್ರದೇಶಗಳಲ್ಲಿ ತನ್ನ ಹಿತಾಸಕ್ತಿಯನ್ನು ಬಲಗೊಳಿಸಲು ಅವಕಾಶ ಒದಗಿತ್ತು. ಆದರೆ ಭೌರಾಜಕೀಯವು ಅಷ್ಟು ಸರಳವಲ್ಲ! ಚೀನಾದ ಇಂಧನ ಭದ್ರತೆಗೆ ಇರಾನೇ ಮೂಲ. ಪ. ಏಷ್ಯಾದಲ್ಲಿ ಚೀನಾದ ಮಹತ್ವಕಾಂಕ್ಷೆ ಈಡೇರಿಸಲೂ ಇರಾನ್ ಬೇಕು. ದೌರ್ಭಾಗ್ಯವೆಂದರೆ ವೆನೆಜುವೆಲಾದ ಬಳಿಕ ಇರಾನ್ ಕೂಡ ಅಸ್ಥಿರಗೊಂಡಿರುವುದು ಚೀನಾದ ದೀರ್ಘಾವಧಿ ಆಟಕ್ಕೆ ತಡೆ ಹಾಕಿದೆ.

ಈ ಯುದ್ಧದಲ್ಲಿ ನಿಜವಾದ ವಿಜೇತನೆಂದರೆ ಅದು ಇಸ್ರೇಲ್. ಇಸ್ರೇಲ್‌ನ ಪಾಲಿಗೆ ಇರಾನ್ ಅತೀ ದೊಡ್ಡ ಅಪಾಯವಾಗಿತ್ತು.ಇದೀಗ ಇರಾನ್ ದುರ್ಬಲಗೊಳ್ಳುವುದರೊಂದಿಗೆ ಇಸ್ರೇಲ್ ಹೆಚ್ಚು ಸುರಕ್ಷಿತ ಎಂದು ಭಾವಿಸುವಂತಾಗಿದೆ. ಇರಾನಿನಲ್ಲಿ ಆಡಳಿತ ಬದಲಾವಣೆ ಯುದ್ಧದ ನಿಜವಾದ ಉದ್ದೇಶವೇ ಆಗಿರಲಿಲ್ಲ. ಇರಾನಿನ ಬಲ ಕುಂದಿಸುವುದೇ ಈ ಸಮರದ ಮುಖ್ಯ ಉದ್ದೇಶವಾಗಿತ್ತು. ಅದು ಸಾಧಿಸಲ್ಪಟ್ಟಿದೆ.



ಆದರೆ ಅಮೆರಿಕ ಮಾತ್ರ ಈ ಕಾರ್ಯಸೂಚಿಯಲ್ಲಿ ಎಡವಿದಂತೆ ತೋರುತ್ತಿದೆ. ಇರಾನಿನ ಕೆಲವು ಪ್ರಮುಖ ವ್ಯಕ್ತಿಗಳ ಮೇಲೆ ದಾಳಿ ನಡೆಸುವುದರಿಂದ ಅದು ಆಂತರಿಕವಾಗಿ ಕುಸಿಯಬಹುದೆಂದು ಅಮೆರಿಕ ಲೆಕ್ಕಾಚಾರ ಹಾಕಿತ್ತು. ಇದಕ್ಕೆ ವಿರುದ್ಧವಾಗಿ ಇರಾನ್‌ನಲ್ಲಿ ಅಧಿಕಾರವು ಸೇನೆಯ ಕೈಯಲ್ಲಿ ಹೆಚ್ಚು ಕೇಂದ್ರೀಕೃತಗೊಂಡಿತು. ಇರಾನ್‌ಗೆ ಬರೆ ಬಿದ್ದಿರಬಹುದು. ಆದರೆ ಅದು ಛಿದ್ರವಾಗಿಲ್ಲ. ಅದು ದೀರ್ಘಾವಧಿ ಯುದ್ಧಕ್ಕೆ ಸನ್ನದ್ಧವಾಗಿ ನಿಂತಿದೆ.

ಇವೆಲ್ಲದರ ಮಧ್ಯೆ ಭಾರತದ ವಿದೇಶಾಂಗ ನೀತಿಯು ಶ್ಲಾಘನೀಯ ಪ್ರಬುದ್ಧತೆ ತೋರಿದೆ. ಉಕ್ರೇನ್ ಸಮರದಿಂದಾರಂಭಿಸಿ ಇರಾನ್ ಯುದ್ಧದ ತನಕ ಭಾರತವು ತನ್ನ ಹಳೆಯ ಅಲಿಪ್ತ ನೀತಿಯನ್ನು ಕೈಬಿಟ್ಟು 'ಬಹುಮೈತ್ರಿ'ಯ ನೀತಿಯನ್ನು ಅನುಸರಿಸಿರುವುದು ಹಾಗೂ ಇದು ಉತ್ತಮ ಫಲ ನೀಡಿರುವುದು ಕಂಡುಬರುತ್ತಿದೆ.ಭಾರತದ ವಿದೇಶಾಂಗ ನೀತಿಯು ಈಗ ಹೆಚ್ಚು ಪ್ರಾಯೋಗಿಕ ಮತ್ತು ವಾಸ್ತವಿಕ. ಹೆಚ್ಚು ನಿಖರ ಮತ್ತು ಪ್ರಾಮಾಣಿಕ. ಸ್ಪಷ್ಟವಾಗಿ ಹೇಳಬೇಕೆಂದರೆ ಭಾರತವು ಈಗ ಬೇರಾವ ಪಕ್ಷವನ್ನೂ ವಹಿಸುವುದಿಲ್ಲ. ಬದಲಾಗಿ ತನ್ನದೇ ಪಕ್ಷವನ್ನು ವಹಿಸುತ್ತದೆ. ಸ್ವಂತ ಹಿತಾಸಕ್ತಿಗೇ ಆದ್ಯತೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಗ ಸಚಿವ ಜೈಶಂಕರ್ ನೇತೃತ್ವದಲ್ಲಿ ಭಾರತವು ಇದನ್ನೊಂದು ಕಲೆಯನ್ನಾಗಿ ರೂಪಿಸಿದೆ.ಯಾರಿಗೂ ಸೇರದೆ, ಪ್ರತಿಯೊಬ್ಬರಲ್ಲೂ ಮಾತುಕತೆ ನಡೆಸುವ, ಸಖ್ಯ ಬೆಳೆಸುವ ಕಲೆಗಾರಿಕೆ ಸಿದ್ಧಿಸಿಕೊಂಡಿದೆ. ಈಗ ಭಾರತವು ಇಸ್ರೇಲಿಗೆ ಹಿಂದಿಗಿಂತ ಹೆಚ್ಚು ಆಪ್ತವಾಗಿದೆ. ಡೊನಾಲ್ಡ್ ಟ್ರಂಪ್‌ರ ವಿಧ್ವಂಸಕ ಕಾರ್ಯಶೈಲಿಯ ಹೊರತಾಗಿಯೂ ಅಮೆರಿಕದೊಂದಿಗಿನ ಸಂಬಂಧ ಗಟ್ಟಿಗೊಂಡಿದೆ. ಇದೇವೇಳೆ ಇರಾನ್ ಕೂಡಾ ಭಾರತವನ್ನು ವಿರೋಧಿ ಎಂದು ಪರಿಗಣಿಸುತ್ತಿಲ್ಲ. ಬದಲಾಗಿ ವಿಶ್ವಾಸಾರ್ಹ ದೇಶವೆಂದು ಭಾವಿಸುತ್ತಿದೆ. ಭಾರತದ ಈ ನೀತಿಯು ಗೋಡೆ ಮೇಲೆ ಕುಳಿತಂತಲ್ಲ. ಇದು ವ್ಯೂಹಾತ್ಮಕ ಸಾರ್ವಭೌಮತೆ.

ಟೀಕಾಕಾರರು, ಅದರಲ್ಲಿ ಮುಖ್ಯವಾಗಿ ಪಾಶ್ಚಿಮಾತ್ಯರು ಭಾರತದ ಈ ವಿದೇಶಾಂಗ ನೀತಿಯನ್ನು ತಪ್ಪರ್ಥಮಾಡಿಕೊಂಡಿದ್ದಾರೆ. ಅವರ ಪ್ರಕಾರ ಜಗತ್ತು ಎರಡೇ ವರ್ಗಗಳಾಗಿ ವಿಭಜನೆಗೊಂಡಿವೆ. ಒಂದೋ ಮಿತ್ರನಾಗಿರಬೇಕು ಇಲ್ಲವೇ ವೈರಿಯಾಗಿರಬೇಕು. ಭಾರತವು ಇಂತಹ ನೀತಿಯನ್ನು ತಿರಸ್ಕರಿಸಿದೆ. ಮೈತ್ರಿ ಎಂದರೆ ಶರಣಾಗತಿಯಲ್ಲ. ಸ್ವಂತ ಹಿತಾಸಕ್ತಿ ಕಾಪಾಡಿಕೊಳ್ಳುವುದು ಮುಖ್ಯ ಎಂದು ಭಾವಿಸಿದೆ.

ಇಂತಹ ನೀತಿಗೂ ಸ್ವಲ್ಪ ಮಟ್ಟಿನ ಬೆಲೆ ತೆರಬೇಕಾಗುತ್ತದೆ ಎಂಬುದು ನಿಜ. ತನ್ನ ವ್ಯೂಹಾತ್ಮಕ ಸಾರ್ವಭೌಮತೆಯನ್ನು ಬಿಟ್ಟುಕೊಡಲು ಒಪ್ಪದ ದೇಶವು ಏಕಾಂಗಿಯಾಗಿ ನಿಲ್ಲಬೇಕಾಗುತ್ತದೆ. ಭಾರತವು ಇಂತಹ ಪರಿಸ್ಥಿತಿಯನ್ನು ಹಿಂದೆ ಎದುರಿಸಿದೆ. ಉಕ್ರೇನ್ ಸಮರದ ವೇಳೆ ಮತ್ತು ಆಪರೇಷನ್ ಸಿಂದೂರ್‌ನ ವೇಳೆ ಭಾರತಕ್ಕೆ ಇಂತಹ ಪರಿಸ್ಥಿತಿಯೊದಗಿದೆ. ಭಾರತವು ಇದನ್ನು ಎದುರಿಸಲು ಸಜ್ಜಾಗಿದೆ. ಹಾಗಾಗಿ 'ಬಹುಮೈತ್ರಿ'ಯ ನೀತಿಯು ತಾಳ್ಮೆ ಮತ್ತು ಅಲ್ಪಕಾಲೀನ ಹಾನಿ ಮತ್ತು ನೋವನ್ನು ಅನುಭವಿಸುವ ಸಹನೆಯನ್ನು ಬೇಡುತ್ತದೆ. ಆದರೆ ಇದರಿಂದ ದೀಘಾವಧಿಯಲ್ಲಿ ದೊಡ್ಡ ಲಾಭವಿದೆ. ಇದೇವೇಳೆ, ಅಮೆರಿಕವು ಜಾಗತಿಕ ಪಾಲುದಾರಿಕೆಯ ಕುರಿತಾದ ತನ್ನ ನಿಲುವನ್ನು ಬದಲಿಸಬೇಕಾದ ಅಗತ್ಯವಿದೆ. 'ಒಂದೋ ನೀವು ನಮ್ಮೊಂದಿಗಿರಬೇಕು, ತಪ್ಪಿದರೆ ನೀವು ನಮ್ಮ ವೈರಿ' ಎಂಬ ಹಳೆಯ ಸಿದ್ಧಾಂತ ಇನ್ನು ಕೆಲಸಕ್ಕೆ ಬಾರದು. ಮುಖ್ಯವಾಗಿ ಭಾರತಕ್ಕೆ ಸಂಬಂಧಿಸಿ ಇಂಥ ನಿಲುವು ಫಲ ನೀಡದು ಎಂಬುದನ್ನು ಅರಿಯಬೇಕು.

ರಾಜತಾಂತ್ರಿಕತೆಗೆ ಸಂಬಂಧಿಸಿ ಭಾರತದ ವಸ್ತುನಿಷ್ಠ ನಿಲುವು ಪಾಶ್ಚಿಮಾತ್ಯ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಅಮೆರಿಕಕ್ಕೆ ಅಸಹನೆ ಸೃಷ್ಟಿಸುವುದು ಸಹಜ. ಆದರಿದು ಅನಿವಾರ್ಯ ಪರಿಸ್ಥಿತಿ. ಅಮೆರಿಕದಲ್ಲಿರುವ ಕೆಲವು ನೀತಿ ನಿರೂಪಕರು ಭಾರತ ಕೂಡಾ ಚೀನಾದಂತೆಯೇ ಬೆಳೆಯುತ್ತಿರುವ ರಾಷ್ಟ್ರವಾಗಿದ್ದು, ಅದನ್ನು ನಿಯಂತ್ರಿಸಬೇಕು ಎಂದು ಭಾವಿಸುತ್ತಿದ್ದಾರೆ. ಅವರು ಅರ್ಥ ಮಾಡಿಕೊಳ್ಳಬೇಕಾದುದೆಂದರೆ, ಭಾರತದ ಪ್ರಗತಿಗೆ ಅಮೆರಿಕದ ಸಮ್ಮತಿಯೇನೂ ಬೇಕಾಗಿಲ್ಲ. ಅಮೆರಿಕದ ನೆರವು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ, ಭಾರತವಂತೂ ಬೆಳೆಯುತ್ತಲೇ ಸಾಗುತ್ತದೆ. ಇದು ಪಾಶ್ಚಿಮಾತ್ಯ ಕೇಂದ್ರಿತ ವ್ಯವಸ್ಥೆಯನ್ನು ಬಲಪಡಿಸುವುದೇ ಇಲ್ಲವೇ ಎಂಬುದೇ ಮುಖ್ಯ ಪ್ರಶ್ನೆ. ಚೀನಾ ಕೇಂದ್ರಿತ ನಿರಂಕುಶ ವ್ಯವಸ್ಥೆಗಿಂತ ಭಾರತದ್ದು ಒಳ್ಳೆಯ ವ್ಯವಸ್ಥೆ ಎಂಬುದನ್ನು ಅಮೆರಿಕ ಒಪ್ಪಿಕೊಳ್ಳಬೇಕು. ಚೀನಾವನ್ನು ನಿಯಂತ್ರಿಸುವುದು ಅದರ ಮುಖ್ಯ ಉದ್ದೇಶವಾಗಿದ್ದರೆ ಅದು ಭಾರತದ ಮುಖಾಂತರವೇ ಆಗಬೇಕಾಗುತ್ತದೆ. ಹಾಗೆಂದು ಭಾರತವನ್ನು ತನ್ನ ಅಧೀನ ರಾಷ್ಟ್ರವಾಗಿ ಪರಿಗಣಿಸಿ ಅಲ್ಲ. ಭಾರತಕ್ಕೆ ಒಂದು ಸಾರ್ವಭೌಮ ರಾಷ್ಟ್ರವೆಂಬ ಗೌರವವನ್ನು ನೀಡಿ ಅದನ್ನು ಸಾಧಿಸಬೇಕು.

ಇರಾನ್ ಯುದ್ಧವು ಮತ್ತೂ ಒಂದು ವಿಷಯ ನಿಚ್ಚಳಗೊಳಿಸಿದೆ. ಭಾರತವು ಬೆಳೆಯುತ್ತಿರುವುದು ಇತರ ದೇಶಗಳನ್ನು ಅಸ್ಥಿರಗೊಳಿಸಲಲ್ಲ. ಬದಲಾಗಿ ಸ್ಥಿರತೆಯ ಶಕ್ತಿಯಾಗಿ ಭಾರತವು ಕಾರ್ಯನಿರ್ವಹಿಸುತ್ತಿದೆ. ಈ ಸತ್ಯವನ್ನು ಎಲ್ಲರೂ ಅರಿತುಕೊಳ್ಳಬೇಕು.

ಬಹುಪಕ್ಷೀಯ ರಾಜತಾಂತ್ರಿಕ ತಂತ್ರವನ್ನು ಭಾರತವು ಸಮರ್ಥವಾಗಿ ನಿಭಾಯಿಸಿದೆ. ಬಲಪ್ರಯೋಗ, ಆಕ್ರಮಣ ಮುಂತಾದ ಮಾನದಂಡದಿಂದಲೇ ಒಂದು ರಾಷ್ಟ್ರದ ಜಾಗತಿಕ ಪ್ರಗತಿಯನ್ನು ಅಳೆಯುವ ಈ ಕಾಲಮಾನದಲ್ಲಿ ಭಾರತವು ಯಾವುದೇ ದೇಶವನ್ನು ಅಸ್ಥಿರಗೊಳಿಸದೆ, ಯಾರ ಮೇಲೂ ದಾಳಿ ನಡೆಸದೆ, ಯಾವುದೇ ದೇಶವನ್ನು ಲೂಟಿ ಮಾಡದೆ ಪ್ರಗತಿಯತ್ತ ಸಾಗುತ್ತಿದೆ. ಇದು ಭಾರತದ ವಿಶೇಷತೆ.

ಭಾರತದ ರಾಜತಾಂತ್ರಿಕತೆಯು ಅಪ್ಪಟ 'ಭಾರತೀಯತೆ'ಯನ್ನು ಒಳಗೊಂಡಿರುವುದು ಕೊಲ್ಲಿ ಸಮರದಿಂದ ಸ್ಪಷ್ಟವಾಗಿದೆ. ವಿಭಜಿತ ಜಗತ್ತಿನಲ್ಲಿ ಯಾವುದೇ ಒಂದು ಪಕ್ಷ ವಹಿಸಲು ಭಾರತ ನಿರಾಕರಿಸಿದೆ. ಇದು ಪ್ರಾಯೋಗಿಕ ನೀತಿ, ಆದರೆ ನೈತಿಕತೆಯನ್ನು ಉಲ್ಲಂಘಿಸಿದ್ದಲ್ಲ. ಇದು ಜಗತ್ತಿಗೇ ಬೆಳಕು ತೋರುವಂತಹ ನೀತಿ. ◈

ವಾಸಕ್ಕಿಟ್ಟುಕೊಳ್ಳಬಾರದವರು

ಅಕರ್ಮಶೀಲಂ ಚ ಮಹಾಶನಂ ಚ ಲೋಕದ್ವಿಷ್ಟಂ ಬಹುಮಾಯಾಂ ನೃಶಂಸಮ್।
ಆದೇಶಕಾಲಜ್ಞಮನಿಷ್ಟಮೇವಮ್ ಏತಾನ್ ಗೃಹೇ ನ ಪ್ರತಿವಾಸಯೇತ ॥
-ಹಿತೋಪದೇಶ

ದುಷ್ಕರ್ಮಿ, ಹೊಟ್ಟೆಬಾಕ, ಮಾನವದ್ವೇಷಿ, ಮಹಾಮಾಯಾವಿ, ಕ್ರೂರಿ, ದೇಶಕಾಲಗಳ ಅರಿವಿಲ್ಲದವನು, ಇಷ್ಟವಲ್ಲದವನು ಇಂಥವರನ್ನು ಮನೆಯಲ್ಲಿ ವಾಸಕ್ಕಿಟ್ಟುಕೊಳ್ಳಬಾರದು - ಎಂಬುದು ಶ್ಲೋಕಾರ್ಥ.

ಸನಾತನ ಭಾರತೀಯರ ಆಚಾರವಿಚಾರ, ನಡೆ-ನುಡಿ, ಹೃದಯ ವೈಶಾಲ್ಯ ಸಾಮಾನ್ಯ ಕಲ್ಪನೆಗೆ ನಿಲುಕದ್ದು. ಜಗತ್ತಿನ ಇತರೆಡೆ ಕಾಣದ ವೈಶಿಷ್ಟ್ಯವನ್ನು ಸನಾತನ ಪರಂಪರೆಯಲ್ಲಿ ಕಾಣುತ್ತೇವೆ. ನಮಗೆ ಆಶ್ರಯ ಕೇಳಿ ಬಂದವರಿಗೆ ನಿರಾಶೆಗೊಳಿಸಿ ಗೊತ್ತಿಲ್ಲ. ಹಸಿದವರೊಡನೆ ಹಂಚಿ ತಿನ್ನುವುದನ್ನು ಸನಾತನ ಧರ್ಮವೇ ಕಲಿಸಿದೆ. 'ಅತಿಥಿ ದೇವೋ ಭವ' ಎಂದು ನಂಬಿ ಮನೆಗೆ ಬಂದವರನ್ನು ಗೌರವಾದರಗಳಿಂದ ಸತ್ಕರಿಸುವ ಪರಂಪರೆಯ ಪಾಠ ನಮಗಿದೆ. ಅತಿಥಿ ಎಂದರೆ ಹೇಳದೇ ಕೇಳದೇ ಬರುವವನು.



ಪರಿಚಯವಿಲ್ಲದಿರಲೂಬಹುದು. ಅಪರಿಚಿತರಿಗೂ ಅಶನ, ವಸನ, ವಸತಿ ಕೊಟ್ಟು ಸತ್ಕರಿಸುವುದು ನಮ್ಮ ಜಾಯಮಾನ. ಇದು ಮಾನವತ್ವದ ಶ್ರೇಷ್ಠ ಪರಿಕಲ್ಪನೆಯೆನಿಸಿದರೂ ಬಲ್ಲವರು ಒಂದಿಷ್ಟು ಎಚ್ಚರಿಕೆಯ ಸೂಚನೆಯನ್ನು ನೀಡಿದ್ದಾರೆ. ಮನೆಯಲ್ಲಿ ಇತರರು ನಿಲ್ಲುವುದಕ್ಕೆ ಅವಕಾಶ ಕಲ್ಪಿಸುವುದು ಮಾನವತ್ವದ ಧರ್ಮ ಮುಖ್ಯವೆನಿಸಿದರೂ, ಕೆಲವರಿಗೆ ಅವಕಾಶ ಕಲ್ಪಿಸಬಾರದು ಎಂಬ ನಿಯಮವಿದೆ. ಯಾರನ್ನೆಲ್ಲ ಮನೆಯಲ್ಲಿ ವಾಸಕ್ಕೆ ಇಟ್ಟುಕೊಳ್ಳಬಾರದು ಎಂಬುದನ್ನು ಪ್ರಕೃತ ಶ್ಲೋಕದಲ್ಲಿ ನಿರೂಪಿಸಲಾಗಿದೆ. ದುಷ್ಕರ್ಮಿಗೆ ಅವಕಾಶ ಕಲ್ಪಿಸಬಾರದು. ಮೊದಲೇ ದುಷ್ಕರ್ಮಿ. ಯಾವ ಬಗೆಯ ಕೆಡುಕನ್ನೆಸಗುವುದಕ್ಕೂ ಹೇಸುವುದಿಲ್ಲ. ಇಂಥವನಿಂದ ಕೇಡು ತಪ್ಪಿದ್ದಲ್ಲ. ಮನೆಗೆ ಮಾರಿ ಹೊಕ್ಕಂತಾಗುವುದರಿಂದ ಆಶ್ರಯವನ್ನು ನೀಡಬಾರದು. ವಿದೇಶಿ ನುಸುಳುಕೋರರು ನಮ್ಮ ದೇಶದಲ್ಲಿ ಎಂತೆಂತಹ ಅನ್ಯಾಯವೆಸಗುತ್ತಿದ್ದಾರೆ ಎಂಬುದನ್ನು ಗಮನಿಸಿದಾಗ ಈ ಹೇಳಿಕೆ ಅರ್ಥವಾಗುತ್ತದೆ.

ಹೊಟ್ಟೆಬಾಕನನ್ನು ಮನೆಯೊಳಗೆ ಸೇರಿಸಬಾರದು. ಇವನಿಂದಾಗಿ ಇತರರು ಉಪವಾಸ ಬೀಳಬೇಕಾದೀತು. ಅವನು ತಿನ್ನುವ ಪರಿ ಮನೆಯನ್ನೇ ಮಸಣ ಮಾಡುವ ಸಾಧ್ಯತೆಯಿರುವುದರಿಂದ ಇಂಥವರಿಗೆ ಅವಕಾಶವಿರಬಾರದು. ಮಾನವದ್ವೇಷಿಗೆ ಆಶ್ರಯವಿತ್ತರೆ ಅನಾಹುತ ತಪ್ಪಿದ್ದಲ್ಲ. ಆಶ್ರಯ ಕೊಟ್ಟವರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಿಬರಬಹುದು. ಆದ್ದರಿಂದ ಇವರನ್ನು ದೂರವಿರಿಸಬೇಕು.

ಮಹಾಮೋಸಗಾರ, ವಂಚಕ, ಕ್ರೂರಿ ಇವರಿಗಂತೂ ಆಶ್ರಯ ಕಲ್ಪಿಸಬಾರದು. ಇವರಿಂದ ಅಪಾಯವೆಂದೂ ತಪ್ಪಿದ್ದಲ್ಲ. ಇಂದಲ್ಲದಿದ್ದರೆ ನಾಳೆಯಾದರೂ ವಂಚಿಸಿ ಪರಾರಿಯಾಗುತ್ತಾರೆ. ಕೃತಜ್ಞತೆಯ ಗಂಧವಿಲ್ಲದ ಇಂಥವರಿಗೆ ಆಶ್ರಯವನ್ನು ನಿರಾಕರಿಸಬೇಕು. ದೇಶ-ಕಾಲಗಳ ಅರಿವಿಲ್ಲದವನಿಗೆ ವಾಸಕ್ಕೆ ಅವಕಾಶ ಕಲ್ಪಿಸಿದರೆ ಮನೆಯ ವ್ಯವಹಾರವೇ ಅಸ್ತವ್ಯಸ್ತವಾದೀತು. ಮನೆಯೇ ಕುರುಕ್ಷೇತ್ರವಾಯಿತು.

ಕೊನೆಯದಾಗಿ ನಮಗೆ ಇಷ್ಟವಲ್ಲದವನಿಗೆ ಆಶ್ರಯ ನೀಡಬಾರದು. ಒಂದೊಮ್ಮೆ ಆಶ್ರಯವಿತ್ತರೆ ಮನೆಯ ನೆಮ್ಮದಿ ಹಾಳಾಗುತ್ತದೆ. ಇಷ್ಟವಿಲ್ಲದಿದ್ದರೂ ಅವನ ವ್ಯವಹಾರವನ್ನು ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಇದರಿಂದ ಮನೆಯ ವಾತಾವರಣವೇ ಕಲುಷಿತಗೊಳ್ಳುತ್ತದೆ. ಇಂಥವರಿಗೆ ಆಶ್ರಯವಿತ್ತು ನೆಮ್ಮದಿಯ ಬದುಕನ್ನು ಹಾಳು ಮಾಡಿಕೊಳ್ಳುವುದರ ಬದಲು ಆಶ್ರಯ ನೀಡದಿರುವುದೇ ಒಳ್ಳೆಯದು.

ಆಸಿಯಾ ಅಂದ್ರಾಬಿ- ಈಕೆ ಕಾಶ್ಮೀರಿಗರಿಗೇ ಶತ್ರು!

ಕಾಶ್ಮೀರದ ಜನತೆಯ ಅತ್ಯಂತ ದೊಡ್ಡ ವೈರಿಗಳೆಂದರೆ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರೇ ಆಗಿದ್ದಾರೆ.

▸ ಒಮರ್ ಘಾಜಿ

'ಅಸಹಾಯಕ ವೃದ್ಧೆಯಾದ, ಮಕ್ಕಳ ತಾಯಿಯಾಗಿರುವ, ಓರ್ವ ಮಹಿಳೆಯಾದ 66ರ ಹರಯದ ಆಸಿಯಾ ಅಂದ್ರಾಬಿಯನ್ನು ಕಠೋರ ಕಾನೂನುಬಾಹಿರ ಚಟುವಟಿಕೆ ನಿರ್ಬಂಧ ಕಾನೂನಿನಡಿಯಲ್ಲಿ ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಗಿದೆ. ಕಾಶ್ಮೀರದ ಜನರ ಪರವಾಗಿ ಧ್ವನಿಯೆತ್ತಿದ್ದಕ್ಕಾಗಿ ಆಕೆಗೆ ಈ ಶಿಕ್ಷೆ ವಿಧಿಸಲಾಗಿದೆ.' ಹಾಗೆಂದು ಬಿಂಬಿಸುತ್ತಿವೆ ಪಾಕಿಸ್ತಾನಿ ಮಾಧ್ಯಮಗಳು. ಜತೆಗೇ ಅವರಿಂದ ಹಣ ಪಡೆದ ಭಾರತದ ಕೆಲವರು, ಇನ್ನು ಕೆಲವು ಲಿಬರಲ್‌ಗಳು, ಹಲವಾರು ಅಂತಾರಾಷ್ಟ್ರೀಯ ಮಾಧ್ಯಮಗಳೂ ಅದೇ ರಾಗ ಹಾಡುತ್ತಿವೆ. ಅಂದ್ರಾಬಿಗೆ ನ್ಯಾಯಾಲಯವು ಇತ್ತೀಚೆಗೆ ಜೀವಾವಧಿ ಶಿಕ್ಷೆ ಪ್ರಕಟಿಸಿದ ಬಳಿಕ ಇವರೆಲ್ಲ ಇಂತಹ ಸಂಕಥನ(ನರೇಟಿವ್)ವನ್ನು ತೇಲಿಬಿಡುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರ ಕಾರ್ಯಚಟುವಟಿಕೆಗಳನ್ನು ಪರಾಮರ್ಶಿಸಿದರೆ ಆಕೆಗೆ ನೀಡಲಾಗಿರುವ ಶಿಕ್ಷೆಯು ಕಡಿಮೆಯೆಂದೇ ತೋರಿಬರುತ್ತದೆ.



ಆಕೆಯ ಪುತ್ರ ಇತ್ತೀಚೆಗೆ ಮಾಧ್ಯಮದಲ್ಲಿ ಲೇಖನವೊಂದನ್ನು ಬರೆದು ಭಯೋತ್ಪಾದನೆಗೆ ಸಂಬಂಧಿಸಿ ಬಂಧಿಸಲ್ಪಟ್ಟ ತನ್ನ ತಂದೆ, ತಾಯಿ ಇಬ್ಬರೂ ಸರಕಾರದ ದೌರ್ಜನ್ಯದ ಬಲಿಪಶುಗಳಾಗಿದ್ದಾರೆ ಎಂದು ಬಣ್ಣಿಸಿದ್ದಾನೆ. ಇದು ಕ್ರೂರ ಸಿದ್ಧಾಂತವಾದಿಗಳನ್ನು ಬಲಿಪಶುಗಳೆಂಬಂತೆ ಬಿಂಬಿಸುವ ಜಾಗತಿಕ ಸಂಚಿನ ಒಂದು ಭಾಗವಾಗಿದೆ. ಆಸಿಯಾ ಅಂದ್ರಾಬಿ, ಹಾಗೂ ಆಕೆಯೊಂದಿಗೆ ಶಿಕ್ಷೆಗೆ ಗುರಿಯಾಗಿರುವ ಸೋಫಿ ಫೆಹ್ಮೀದಾ ಮತ್ತು ನಹಿದಾ ನಸ್ರೀನ್ ಅವರನ್ನೆಲ್ಲಾ ಅಮಾಯಕರೆಂಬಂತೆ ಬಿಂಬಿಸಲಾಗುತ್ತಿದೆ.

ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಅಸಹಾಯಕ, ಅಮಾಯಕ ಮಹಿಳೆ ಎಂದು ಬಿಂಬಿಸಲ್ಪಡುವ ಆಸಿಯಾ ಅಂದ್ರಾಬಿ 'ದುಖ್ತರನ್ -ಇ-ಮಿಲ್ಲತ್' ಎಂಬ ಮಹಿಳಾ ಉಗ್ರಗಾಮಿ ಸಂಘಟನೆಯನ್ನು ಕಟ್ಟಿದವಳು. ಈ ಸಂಘಟನೆಯು ಜಿಹಾದ್‌ನ್ನು ಪ್ರತಿಪಾದಿಸುತ್ತಾ ಕಾಶ್ಮೀರದಲ್ಲಿ ಇಸ್ಲಾಮಿಕ್ ಕಾನೂನನ್ನು ಜಾರಿಗೊಳಿಸಬೇಕು ಹಾಗೂ ಕಾಶ್ಮೀರವನ್ನು ಪಾಕಿಸ್ತಾನದೊಂದಿಗೆ ವಿಲೀನಗೊಳಿಸಬೇಕೆಂದು ಪ್ರತಿಪಾದಿಸುತ್ತಿತ್ತು. ಈ ಸಂಘಟನೆಯು ಹಿಜ್‌ಬುಲ್ಲಾ ಮುಜಾಹಿದ್‌ನೊಂದಿಗೆ ಸಹಕರಿಸಿ ಕಾರ್ಯಾಚರಿಸುತ್ತಿತ್ತು. ಆಸಿಯಾ ಅಂದ್ರಾಬಿ ನಾಯಕತ್ವದಲ್ಲಿ 1987ರಲ್ಲಿ ಸ್ಥಾಪಿಸಲ್ಪಟ್ಟ ಈ ಸಂಘಟನೆಯು ತನ್ನ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದುದಷ್ಟೇ ಅಲ್ಲದೆ ಅದರ ಕಾರ್ಯಾಚರಣೆಗೂ ಕಾರ್ಯಶೀಲವಾಗಿತ್ತು. 1990ರ ದಶಕದಲ್ಲಿ ಕಾಶ್ಮೀರದಲ್ಲಿ ಉಗ್ರಗಾಮಿ ಚಟುವಟಿಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಈಕೆಯ ಸಂಘಟನೆಯು ಕಾಶ್ಮೀರಿ ಮಹಿಳೆಯರಿಗೆ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುವಂತೆ ಆದೇಶಿಸಿತ್ತು. ಸದಾ ಹಿಜಾಬ್ ಧರಿಸುವಂತೆ, ಅದಕ್ಕೆ ತಪ್ಪಿದವರಿಗೆ ಶಿಕ್ಷೆ ನೀಡುವುದಾಗಿ ಅದು ಹೇಳಿತ್ತು. ಅದರಂತೆ ಹಿಜಾಬ್ ಧರಿಸದ ಕೆಲ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲಾಗಿತ್ತು. ಕೆಲವರ ಮೇಲೆ ಆ್ಯಸಿಡ್ ದಾಳಿಯೂ ನಡೆದಿತ್ತು. ಇವಷ್ಟೇ ಆಕೆಗೆ ಜೀವಾವಧಿ ಶಿಕ್ಷೆ ನೀಡಲು ಸಾಕಾಗುತ್ತದೆ. ಆದರೆ ಕಥೆ ಇನ್ನೂ ಇದೆ.

ಆಸಿಯಾ ಅಂದ್ರಾಬಿ ಲಷ್ಕರ್-ಇ-ತೊಯ್ಬಾದ ಸ್ಥಾಪಕ ಹಫೀಜ್ ಸಯೀದ್ ಜತೆ ನಿಕಟ ಸಂಪರ್ಕ ಹೊಂದಿದ್ದು ಇದು ಆಕೆಯ ಸೈದ್ಧಾಂತಿಕ ಮತ್ತು ಕಾರ್ಯಾಚರಣಾ ಶೈಲಿಯ ಮೇಲೆ ಪ್ರಭಾವ ಬೀರಿತ್ತು. ಆಕೆ ಹಫೀಜ್ ಸಯೀದ್ ಜತೆ ಸಂಪರ್ಕ ಹೊಂದಿದ್ದುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಳು. ಹಫೀಜ್‌ನ ಚಿಂತನೆಗಳನ್ನು ತಾನು ಪ್ರತಿಪಾದಿಸುತ್ತಾ ಭಾರತ ವಿರೋಧಿ ನಿಲುವುಗಳನ್ನು ಬಹಿರಂಗವಾಗಿ ಪ್ರಕಟಿಸುತ್ತಿದ್ದಳು. 2015ರ ಆಗಸ್ಟ್‌ನಲ್ಲಿ ಹಫೀಜ್ ಸಯೀದ್ ಪಾಕಿಸ್ತಾನದ ಮುಲ್ತಾನ್‌ನಲ್ಲಿ ಆಯೋಜಿಸಿದ್ದ ರ‍್ಯಾಲಿಯಲ್ಲಿ ಆಸಿಯಾ ಅಂದ್ರಾಬಿ ವಿಡಿಯೋ ಕರೆ ಮೂಲಕ ಭಾಷಣ ಮಾಡಿದ್ದಳು. ಆ ರ‍್ಯಾಲಿಯಲ್ಲಿ ಭಾರತವನ್ನು ವಿಭಜಿಸಲು ಕರೆ ನೀಡಲಾಗಿತ್ತು. ಇದನ್ನು ಆಸಿಯಾ ಅಂದ್ರಾಬಿ ಕೂಡಾ ಬೆಂಬಲಿಸಿದ್ದಲ್ಲದೆ ಭಾರತದ ಮೇಲೆ ಯುದ್ಧ ಸಾರುವಂತೆ ಕರೆ ನೀಡಿ ಅದಕ್ಕೆ ಪಾಕಿಸ್ತಾನದ ನೆರವನ್ನು ಕೋರಿದ್ದಳು. ಹಫೀಜ್ ಸಯೀದ್ ಆಸಿಯಾಳನ್ನು 'ಪ್ರೀತಿಯ ತಂಗಿ' ಎಂದು ಕರೆಯುತ್ತಿದ್ದ.

ಇನ್ನೂ ಹಲವು ಬಾರಿ ಆಸಿಯಾ ಅಂದ್ರಾಬಿ ತನ್ನ ವರ್ತನೆಗಳ ಮೂಲಕ ಭಾರತ ವಿರೋಧಿ ನಿಲುವನ್ನು ಪ್ರಕಟಿಸಿದ್ದಿದೆ. ಶ್ರೀನಗರದಲ್ಲಿ ಪಾಕಿಸ್ತಾನದ ಸ್ವಾತಂತ್ರ್ಯ ದಿನವನ್ನು ಆಚರಿಸಿದ್ದಲ್ಲದೆ ಪಾಕಿಸ್ತಾನದ ಧ್ವಜವನ್ನು ಹಾರಿಸಿದ್ದಳು.ಆಕೆಯ ನಾಯಕತ್ವದಲ್ಲಿ 'ದುಖ್ತರನ್-ಇ- ಮಿಲ್ಲತ್' ಸಂಘಟನೆಯು ಕಾಶ್ಮೀರಿಗರ ಸಂಸ್ಕೃತಿ ಮತ್ತು ದೈನಂದಿನ ಬದುಕಿನ ಮೇಲೂ ಹಿಡಿತ ಹೊಂದುವ ಪ್ರಯತ್ನ ನಡೆಸಿತ್ತು. ಕಾಶ್ಮೀರದ ಮೊತ್ತಮೊದಲ ಹುಡುಗಿಯರ ರಾಕ್ ಬ್ಯಾಂಡ್ ಮೇಲೆ ದಾಳಿ ನಡೆಸಲಾಗಿತ್ತು. ಕಾಶ್ಮೀರದಲ್ಲಿ ಕಲೋಪಾಸನೆಯನ್ನು ವಿರೋಧಿಸಿ ಬೆದರಿಕೆಗಳನ್ನು ಹಾಕಲಾಗಿತ್ತು.ಸೇನೆಯು ಸಂಘಟಿಸಿದ್ದ ಪ್ರವಾಸದಲ್ಲಿ ಕಾಶ್ಮೀರದ ಹುಡುಗಿಯರು ಪಾಲ್ಗೊಂಡುದ್ದಕ್ಕಾಗಿ ಅಂತವರ ಕುಟುಂಬಕ್ಕೆ ಬೆದರಿಕೆ ಒಡ್ಡಲಾಗಿತ್ತು. ಯುವಜನಾಂಗದ ಸಹಜ ಆಚರಣೆಗಳಾದ ಹೊಸ ವರ್ಷಾಚರಣೆ, ನೃತ್ಯ, ಗಾಯನ ಮುಂತಾದವುಗಳಿಗೆ ಈ ಸಂಘಟನೆ ಬೆದರಿಕೆಯೊಡ್ಡಿತ್ತು.

ಇದೆಲ್ಲವೂ ಕಾಶ್ಮೀರದ ಹಕ್ಕುಗಳಿಗಾಗಿ ಅಥವಾ ಘನತೆಗಾಗಿ ನಡೆದ ಹೋರಾಟವಲ್ಲ. ಅದಕ್ಕಿಂತಲೂ ಇಸ್ಲಾಮಿಕ್ ಕಠಿಣ ಕಾನೂನುಗಳನ್ನು ಜನರ ಮೇಲೆ ಹೇರುವ ಪ್ರಯತ್ನವಾಗಿತ್ತು.

ಆಸಿಯಾ ಅಂದ್ರಾಬಿಯ ಬಂಧನ ಮತ್ತು ಆಕೆಗೆ ಜೈಲು ಶಿಕ್ಷೆ ವಿಧಿಸಿರುವುದನ್ನು ಆಕೆಯ ಕಾರ್ಯ ಚಟುವಟಿಕೆಗಳಿಂದ ಪ್ರತ್ಯೇಕವಾಗಿ ನೋಡುವುದು ತಪ್ಪು. ಆಕೆ ನಡೆಸಿದ ಪ್ರತ್ಯೇಕತಾವಾದಿ ಚಳವಳಿ, ಉಗ್ರವಾದಿ ಪ್ರಚಾರ ಮತ್ತು ಕುಖ್ಯಾತ ಭಯೋತ್ಪಾದಕರೊಂದಿಗಿನ ಆಕೆಯ ಸಖ್ಯ ಮುಂತಾದವನ್ನು ಕಡೆಗಣಿಸಬಾರದು. ಅದನ್ನೆಲ್ಲ ಬಿಟ್ಟು ಆಕೆಯನ್ನು ಬಲಿಪಶು ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ.ಆಕೆಯ ವೈಯಕ್ತಿಕ ಬದುಕು ಕೂಡಾ ಉಗ್ರವಾದಿತ್ವವನ್ನೇ ಪ್ರತಿಬಿಂಬಿಸುತ್ತದೆ. ಆಕೆ ವಿವಾಹವಾದುದು ಹಿಜ್‌ಬುಲ್ ಮುಜಾಹಿದ್ದೀನ್‌ನ ಮುಖಂಡರಲ್ಲೊಬ್ಬನಾದ ಆಶಿಕ್ ಹುಸೇನ್ ಫಕ್ತು ಎಂಬಾತನನ್ನು. ಆತ ಮಾನವ ಹಕ್ಕುಗಳ ಪ್ರಮುಖ ಕಾರ್ಯಕರ್ತನೊಬ್ಬನನ್ನು ಹತ್ಯೆಗೈದ ಆರೋಪದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ. ಅಂದ್ರಾಬಿ ಪಾಕಿಸ್ತಾನದ ಸೇನೆಯೊಂದಿಗೆ ಕೂಡಾ ಕೌಟುಂಬಿಕ ಸಂಬಂಧವನ್ನು ಹೊಂದಿದ್ದಾಳೆ. ಆಕೆಯ ಸಂಬಂಧಿಕರು ಪಾಕಿಸ್ತಾನದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿ ದ್ದಾರೆ. ಹಾಗಾಗಿ ಆಕೆಯದು ಕೇವಲ ಕಾಶ್ಮೀರ ಪರ ಧ್ವನಿ ಎಂದು ಪರಿಗಣಿಸಲಾಗುವುದಿಲ್ಲ. ಆಕೆ ಪಾಕಿಸ್ತಾನದ ಕಾರ್ಯಸೂಚಿಯಂತೆಯೂ ಕಾರ್ಯಾಚರಿಸುತ್ತಿದ್ದಳು.

ಹಾಗಾಗಿ '66ರ ಹರೆಯದ ವಯೋವೃದ್ಧೆ , ಮಾತೆ, ಮಹಿಳೆ' ಎಂಬುದಾಗಿ ಸಂಭೋಧಿಸುತ್ತಾ ಆಕೆಯ ಕುರಿತಂತೆ ಕರುಣೆ ಉಕ್ಕುವ ರೀತಿಯಲ್ಲಿ ವರ್ಣಿಸುವುದಕ್ಕೆ ಏನನ್ನಬೇಕು? ಮಹಿಳೆಯರು ಕಡ್ಡಾಯವಾಗಿ ಹಿಜಾಬ್ ಧರಿಸಲೇಬೇಕು ಮತ್ತು ಅದಕ್ಕೆ ತಪ್ಪಿದಲ್ಲಿ ಶಿಕ್ಷೆ ಎದುರಿಸಬೇಕು ಎಂದು ಆಕೆ ಪ್ರತಿಪಾದಿಸುವಾಗ ಮಹಿಳೆಯಾಗಿರಲಿಲ್ಲವೆ? ಕಾಶ್ಮೀರಿ ಯುವಕರನ್ನು ಉಗ್ರಗಾಮಿ ಚಟುವಟಿಕೆಗೆ ಪ್ರೇರೇಪಿಸುತ್ತಿರುವಾಗ ಆಕೆ ಒಬ್ಬ ತಾಯಿಯಾಗಿರಲಿಲ್ಲವೆ? ಭಾರತ ಸರಕಾರದ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಕರೆ ನೀಡುವಾಗ ಆಕೆ ವೃದ್ಧೆಯಾಗಿರಲಿಲ್ಲವೆ? ಹೀಗಿರುವಾಗ ಈಗ ಆಕೆಯ ಪುತ್ರನೂ ಸೇರಿದಂತೆ ಹಲವರು ಆಕೆಯನ್ನು ಅಮಾಯಕ, ಅಸಹಾಯಕ ಮತ್ತು ವೃದ್ಧ ಮಾತೆ, ಮಹಿಳೆ ಎಂಬಂತೆ ಬಿಂಬಿಸಿ ಅನುಕಂಪ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. 2010ರಿಂದ 2019ರ ಅವಧಿಯಲ್ಲಿ ಬಹಳಷ್ಟು ಕಾಶ್ಮೀರಿ ಯುವಕರು ಸರಕಾರ ವಿರೋಧಿ ಪ್ರತಿಭಟನೆಯಲ್ಲಿ ತೊಡಗಿಕೊಂಡರು. ಅವರಲ್ಲಿ ಹಲವರು ಮನೆಗೆ ಮರಳಲೇ ಇಲ್ಲ. ಅವರ ಕಥೆ ಅಥವಾ ಹೆಸರನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಅವರ ಕುಟುಂಬದ ಗತಿ ಏನಾಯಿತು ಎಂಬ ಬಗ್ಗೆಯೂ ಹೇಳುವವರು ಇಲ್ಲ. ಆದರೆ ಆಸಿಯಾ ಅಂದ್ರಾಬಿಯ ಕುರಿತಂತೆ ಮಾತ್ರ ಇಷ್ಟೆಲ್ಲಾ ಬರೆಯಲಾಗುತ್ತದೆ.

ಕಾಶ್ಮೀರದ ಜನತೆಯ ಪರವಾಗಿ ಕರುಣೆ ತೋರುವುದು ಮತ್ತು ಆಸಿಯಾ ಅಂದ್ರಾಬಿಯನ್ನು ಬೆಂಬಲಿಸುವುದು ಎರಡೂ ವೈರುಧ್ಯ ವಿಷಯಗಳು. ಇವನ್ನು ತಾರ್ಕಿಕವಾಗಿ ಒಂದುಗೂಡಿಸಲಾಗುವುದಿಲ್ಲ. ಕಾಶ್ಮೀರದ ಜನತೆಯ ಅತ್ಯಂತ ದೊಡ್ಡ ವೈರಿಗಳೆಂದರೆ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರು. ಆಕೆ ಕೆಲವು ಪೀಳಿಗೆಗಳ ಕಾಶ್ಮೀರಿ ಯುವಕರ ಜೀವನವನ್ನು ಹಾಳುಗೆಡವಿದ್ದಾಳೆ. ಆಕೆಯನ್ನು ಬೆಂಬಲಿಸುವ ಎಲ್ಲರೂ ಕಟ್ಟಾ ಇಸ್ಲಾಮಿಕ್‌ವಾದಿಗಳಲ್ಲ. ಅವರಲ್ಲಿ ಬಹಳಷ್ಟು ಮಂದಿ ಸ್ವಾಯತ್ತತೆ, ಸ್ವಾತಂತ್ರ್ಯ ಎಂಬ ಘೋಷಣೆಯ ಹಿಂದೆ ಅಡಗಿಕೊಂಡ ಮೂರ್ಖರೂ ಇದ್ದಾರೆ. ಅವರೆಲ್ಲಾ ಸ್ವಾತಂತ್ರ್ಯ, ಹಕ್ಕುಗಳನ್ನು ರಕ್ಷಿಸಲು ಯತ್ನಿಸುತ್ತಿರುವುದಲ್ಲ. ಆದಕ್ಕಿಂತಲೂ ಅವರು ಉಗ್ರವಾದಿ, ಮತೀಯವಾದಿ, ಸುಧಾರಣಾವಿರೋಧಿ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಿದ್ದಾರೆ. ◈

ಆಪ್‌ಗೆ ಅಪಥ್ಯವಾಗುತ್ತಿರುವ ರಾಘವ್ ಚಡ್ಡಾ

▸ ಎಸ್. ಎನ್. ಭಟ್, ಸೈಪಂಗಲ್ಲು



ಇಂದಿನ ಡಿಜಿಟಲ್ ಯುಗದಲ್ಲಿ ನಮ್ಮ ಬದುಕು ಕೇವಲ ಭೌತಿಕ ಗಡಿಗಳಿಗೆ ಸೀಮಿತವಾಗಿಲ್ಲ. ನಾವು ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಬಳಸುವ ಸ್ಮಾರ್ಟ್‌ಫೋನ್‌ಗಳು, ಡೇಟಾ ಪ್ಯಾಕೇಜ್‌ಗಳು ಮತ್ತು ಸಾಮಾಜಿಕ ಜಾಲತಾಣಗಳು ನಮ್ಮ ಆಲೋಚನೆ ಹಾಗೂ ಆದಾಯದ ಮೇಲೆ ಅತಿಕ್ರಮಣ ಮಾಡುತ್ತಿವೆ. ಇಂತಹ ಸಂಕೀರ್ಣ ಸಂದರ್ಭದಲ್ಲಿ, ಸಂಸತ್ತಿನ ವೇದಿಕೆಯಲ್ಲಿ ತಂತ್ರಜ್ಞಾನ ಮತ್ತು ಸಾಮಾನ್ಯ ಜನರ ಹಕ್ಕುಗಳ ಬಗ್ಗೆ ಗಂಭೀರವಾಗಿ ದನಿ ಎತ್ತಿದವರು ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ. ರಾಜಕೀಯ ಮೇಲಾಟಗಳ ನಡುವೆಯೂ ಅವರು ಮಂಡಿಸಿದ ಡಿಜಿಟಲ್ ನ್ಯಾಯದ ಪರಿಕಲ್ಪನೆ ಭಾರತೀಯ ರಾಜಕಾರಣದಲ್ಲಿ ಹೊಸ ಸಂಚಲನ ಮೂಡಿಸಿದೆ.

ರಾಘವ್ ಚಡ್ಡಾ ಅವರು ಆಮ್ ಆದ್ಮಿ ಪಕ್ಷದ ಪ್ರಮುಖ ಯುವ ನಾಯಕರು ಮತ್ತು ಪ್ರಸ್ತುತ ಪಂಜಾಬ್ ರಾಜ್ಯವನ್ನು ಪ್ರತಿನಿಧಿಸುವ ರಾಜ್ಯಸಭಾ ಸದಸ್ಯರಾಗಿದ್ದಾರೆ. ವೃತ್ತಿಯಿಂದ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಇವರು, 2022ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ ಸಂಸತ್ತಿನ ಅತ್ಯಂತ ಕಿರಿಯ ಸದಸ್ಯರಲ್ಲಿ ಒಬ್ಬರೆಂಬ ಹೆಗ್ಗಳಿಕೆಗೆ ಪಾತ್ರರಾದರು. ಇದಕ್ಕೂ ಮೊದಲು ಅವರು ದೆಹಲಿಯ ರಾಜೇಂದ್ರ ನಗರ ಕ್ಷೇತ್ರದ ಶಾಸಕರಾಗಿ ಮತ್ತು ದೆಹಲಿ ಜಲ ಮಂಡಳಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸಂಸತ್ತಿನಲ್ಲಿ ಡಿಜಿಟಲ್ ಹಕ್ಕುಗಳು, ಡೇಟಾ ಗೌಪ್ಯತೆ ಮತ್ತು ಆರ್ಥಿಕ ಹೊಣೆಗಾರಿಕೆಯಂತಹ ಸಮಕಾಲೀನ ವಿಷಯಗಳ ಬಗ್ಗೆ ಧ್ವನಿ ಎತ್ತುತ್ತಾ ಬಂದಿದ್ದಾರೆ.

ರಾಘವ್ ಚಡ್ಡಾ ಅವರ ರಾಜಕೀಯ ನಡೆಗಳು ತೀವ್ರ ಚರ್ಚೆಗೆ ಗ್ರಾಸವಾಗಿವೆ. ಆಮ್ ಆದ್ಮಿ ಪಕ್ಷದ ನಾಯಕತ್ವದೊಂದಿಗೆ ಉಂಟಾಗಿರುವ ಬಿರುಕಿನ ಹಿನ್ನೆಲೆಯಲ್ಲಿ, ಅವರನ್ನು ರಾಜ್ಯಸಭೆಯ ಪಕ್ಷದ ಉಪ ನಾಯಕನ ಸ್ಥಾನದಿಂದ ಅಧಿಕೃತವಾಗಿ ತೆಗೆದುಹಾಕಲಾಗಿದೆ ಮತ್ತು ಅವರ ಸ್ಥಾನಕ್ಕೆ ಅಶೋಕ್ ಕುಮಾರ್ ಮಿತ್ತಲ್ ಅವರನ್ನು ನೇಮಿಸಲಾಗಿದೆ. ಅಷ್ಟೇ ಅಲ್ಲದೆ, ಪಕ್ಷದ ಕೋಟಾದಡಿ ಅವರಿಗೆ ಸಂಸತ್ತಿನಲ್ಲಿ ಮಾತನಾಡಲು ಸಮಯ ನೀಡಬಾರದೆಂದು ಆಪ್ ನಾಯಕತ್ವವು ರಾಜ್ಯಸಭಾ ಸಚಿವಾಲಯಕ್ಕೆ ವಿನಂತಿಸಿದೆ. ಸದ್ಯಕ್ಕೆ ಅವರು ಸಂಸದರಾಗಿ ಮುಂದುವರಿಯುತ್ತಿದ್ದರೂ, ಪಕ್ಷದ ಪ್ರಮುಖ ಕಾರ್ಯಕ್ರಮಗಳಿಂದ ಮತ್ತು ಪ್ರಚಾರದಿಂದ ಅವರನ್ನು ದೂರವಿಡಲಾಗಿದೆ. ಈ ಬೆಳವಣಿಗೆಗಳು ಅವರು ಆಮ್ ಆದ್ಮಿ ಪಕ್ಷದಿಂದ ಹೊರಬಂದು ಹೊಸ ರಾಜಕೀಯ ಹಾದಿ ತುಳಿಯಬಹುದು ಎಂಬ ಮುನ್ಸೂಚನೆಯನ್ನು ನೀಡುತ್ತಿದೆ.

ರಾಘವ್ ಚಡ್ಡಾ ಅವರು ಮಂಡಿಸಿದ ಅತ್ಯಂತ ಪ್ರಬಲ ವಾದವೆಂದರೆ 'ಡೇಟಾ ರೋಲ್‌ಓವರ್' ಹಕ್ಕು. ನಾವು ಹಣ ಪಾವತಿಸಿ ಖರೀದಿಸಿದ ಇಂಟರ್ನೆಟ್ ಡೇಟಾ, ನಿಗದಿತ ಅವಧಿಯಲ್ಲಿ ಬಳಕೆಯಾಗದಿದ್ದರೂ ಎಕ್ಸ್‌ಪೈರ್ ಆಗಿ ಕಂಪನಿಗಳ ಪಾಲಾಗುವುದು ಗ್ರಾಹಕರಿಗೆ ಮಾಡುವ ಅನ್ಯಾಯ ಎಂಬುದು ಅವರ ನಿಲುವು. 'ಹಾಲಿನ ಪ್ಯಾಕೆಟ್ ಕೆಡುವಂತೆ ಡೇಟಾ ಕೆಡುವುದಿಲ್ಲ' ಎಂಬ ಅವರ ತರ್ಕಬದ್ಧ ಹೋಲಿಕೆಯು, ಡೇಟಾ ಎಂಬುದು ಕೇವಲ ಒಂದು ಸೌಲಭ್ಯವಲ್ಲ, ಅದು ಗ್ರಾಹಕನ ಆಸ್ತಿ ಎಂಬ ಹೊಸ ಸಂವಿಧಾನಿಕ ಆಯಾಮವನ್ನು ಸಂಸತ್ತಿನ ಮುಂದೆ ಇಟ್ಟಿದೆ. ಇದರೊಂದಿಗೆ, ಸೋಶಿಯಲ್ ಮೀಡಿಯಾ ಅಲ್ಗಾರಿದಮ್‌ಗಳ 'ಅದೃಶ್ಯ ಸರ್ವಾಧಿಕಾರ'ದ ಬಗ್ಗೆ ಅವರು ವ್ಯಕ್ತಪಡಿಸಿದ ಆತಂಕ ಇಂದಿನ ಯುವ ಪೀಳಿಗೆಯ ಬದುಕಿಗೆ ಅತ್ಯಂತ ಪ್ರಸ್ತುತವಾಗಿದೆ. ಯಾವುದೇ ಮುನ್ಸೂಚನೆ ಇಲ್ಲದೆ ಕೃತಕ ಬುದ್ಧಿಮತ್ತೆಯ ಅಲ್ಗಾರಿದಮ್‌ಗಳು ಕಂಟೆಂಟ್ ಕ್ರಿಯೇಟರ್‌ಗಳ ರೀಚ್ ಕಡಿಮೆ ಮಾಡುವುದು ಅಥವಾ ಚಾನೆಲ್ ಬ್ಲಾಕ್ ಮಾಡುವುದು ಲಕ್ಷಾಂತರ ಜನರ ಜೀವನೋಪಾಯದ ಮೇಲೆ ಹೊಡೆತ ನೀಡುತ್ತಿದೆ. ಈ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು 1957ರ ಹಳೆಯ ಕಾಪಿರೈಟ್ ಕಾಯಿದೆಗಳನ್ನು ಇಂದಿನ 'ಫೇರ್ ಯೂಸ್' ಮತ್ತು ಡಿಜಿಟಲ್ ಯುಗದ ಅಗತ್ಯಗಳಿಗೆ ತಕ್ಕಂತೆ ತುರ್ತಾಗಿ ಪರಿಷ್ಕರಿಸಬೇಕೆಂದು ಅವರು ಪ್ರತಿಪಾದಿಸಿದ್ದಾರೆ.

ಕೇವಲ ತಂತ್ರಜ್ಞಾನಕ್ಕೆ ಸೀಮಿತವಾಗದ ಅವರ ಸಂಸದೀಯ ಕಾರ್ಯವೈಖರಿಯು ಸಾಮಾನ್ಯ ಜನರ ಜೀವನಕ್ಕೆ ಹತ್ತಿರವಾದ ಬೆಲೆ ಏರಿಕೆ, ರೈತರ ಕನಿಷ್ಠ ಬೆಂಬಲ ಬೆಲೆ ಮತ್ತು ಒಕ್ಕೂಟ ವ್ಯವಸ್ಥೆಯ ರಕ್ಷಣೆಯಂತಹ ವಿಷಯಗಳನ್ನೂ ಒಳಗೊಂಡಿದೆ. ಚಾರ್ಟರ್ಡ್ ಅಕೌಂಟೆಂಟ್ ಆಗಿ ಅವರ ವೃತ್ತಿಪರ ಹಿನ್ನೆಲೆಯು ಹಣದುಬ್ಬರ ಮತ್ತು ಜಿಎಸ್‌ಟಿ ಹೊರೆಯ ಮಗ್ಗುಲುಗಳನ್ನು ಸಂಶೋಧನಾತ್ಮಕವಾಗಿ ವಿಶ್ಲೇಷಿಸಲು ಅವರಿಗೆ ನೆರವಾಗಿದೆ.

ಆದರೆ, ಈ ಎಲ್ಲ ದಕ್ಷತೆಯ ನಡುವೆಯೂ ಆಮ್ ಆದ್ಮಿ ಪಕ್ಷದೊಳಗಿನ ಇತ್ತೀಚಿನ ಬೆಳವಣಿಗೆಗಳು ಒಂದು ವಿಪರ್ಯಾಸದಂತೆ ತೋರುತ್ತಿವೆ. ಪಕ್ಷದ ತಾಂತ್ರಿಕ ಚತುರ ಎಂದೇ ಹೆಸರಾಗಿದ್ದ ಚಡ್ಡಾ ಅವರನ್ನೇ ಇಂದು ಪ್ರಮುಖ ಜವಾಬ್ದಾರಿಗಳಿಂದದೂರವಿಟ್ಟಿರುವುದುಹಲವುಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ. ಪಕ್ಷದ ಸ್ಥಾಪಕ ಸದಸ್ಯ ಕುಮಾರ್ ವಿಶ್ವಾಸ್ ಅಂದು ಆಡಿದ್ದ ಮಾತುಗಳು ಅಕ್ಷರಶಃ ನಿಜವಾಗುತ್ತಿರುವಂತೆ ಭಾಸವಾಗುತ್ತಿದೆ. "ಪಕ್ಷದಲ್ಲಿ ಯಾರಾದರೂ ಸ್ವತಂತ್ರ ಬ್ರ್ಯಾಂಡ್ ಆಗಿ ಬೆಳೆಯುತ್ತಿದ್ದಾರೆ ಎನಿಸಿದರೆ ಅವರನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಲಾಗುತ್ತದೆ" ಎಂಬ ಅವರ ಎಚ್ಚರಿಕೆ ಇಂದು ಚಡ್ಡಾ ಅವರ ವಿಷಯದಲ್ಲಿ ಮರುಕಳಿಸುತ್ತಿದೆ.

ಪ್ರಶ್ನಿಸುವ ಮನೋಭಾವದ ನಾಯಕರಿಗಿಂತ, ಹೈಕಮಾಂಡ್ ಸಂಸ್ಕೃತಿಗೆ ಒಗ್ಗಿಕೊಳ್ಳುವವರಿಗೆ ಆದ್ಯತೆ ಸಿಗುತ್ತಿದೆ ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿ ಬಲವಾಗಿದೆ. ಇತ್ತೀಚಿನ ಈ ಬೆಳವಣಿಗೆಗಳು ರಾಘವ್ ಚಡ್ಡಾ ಅವರ ಮುಂದಿನ ನಡೆಯ ಬಗ್ಗೆ ಕುತೂಹಲ ಮೂಡಿಸಿವೆ. ಆಪ್ ನಾಯಕತ್ವದೊಂದಿಗೆ ಹೆಚ್ಚುತ್ತಿರುವ ಅಂತರ ಮತ್ತು ಸಂಸತ್ತಿನಲ್ಲಿ ಅವರು ಮಂಡಿಸುವ ವಿಷಯಗಳು ಕೆಲವೊಮ್ಮೆ ಕೇಂದ್ರ ಸರ್ಕಾರದ ನೀತಿಗಳಿಗೆ ಪೂರಕವಾಗಿರುವಂತೆ ಕಾಣುತ್ತಿರುವುದು, ಅವರು ಬಿಜೆಪಿಯತ್ತ ವಾಲುತ್ತಿರಬಹುದೇ ಎಂಬ ಸಂಶಯವನ್ನು ಹುಟ್ಟುಹಾಕಿದೆ.

ಬಿಜೆಪಿ ಕೂಡ ಪಂಜಾಬ್‌ನಲ್ಲಿ ಒಬ್ಬ ಪ್ರಬಲ ಸಿಖ್ ಯುವ ನಾಯಕನಿಗಾಗಿ ಹುಡುಕಾಟ ನಡೆಸುತ್ತಿದ್ದು, ಚಡ್ಡಾ ಅವರಿಗೆ ಅಲ್ಲಿ ಉತ್ತಮ ವೇದಿಕೆ ಸಿಗಬಹುದು ಎಂಬ ಊಹೆಗಳಿವೆ. ಸದ್ಯಕ್ಕೆ ಅವರು ಯಾವುದೇ ಅಧಿಕೃತ ಘೋಷಣೆ ಮಾಡದಿದ್ದರೂ, ಪಕ್ಷದೊಳಗಿನ ನಿರ್ಲಕ್ಷ್ಯ ಮತ್ತು ಅಮಾನತು ಅವರನ್ನು ಬಂಡಾಯದ ಹಾದಿಗೆ ಅಥವಾ ರಾಷ್ಟ್ರೀಯ ಮಟ್ಟದ ಮತ್ತೊಂದು ಪರ್ಯಾಯದತ್ತ ನಡೆಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ. ◈

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಎರಡು ವಾರಗಳ ಕದನ ವಿರಾಮ

ಶ್ವೇತಭವನ ನಿರ್ದೇಶನದಂತೆ ಪಾಕ್ ಮಧ್ಯಸ್ಥಿಕೆ

ಟೆಹ್ರಾನ್: ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಎರಡು ವಾರಗಳ ಕದನ ವಿರಾಮ ಏರ್ಪಡಿಸಲು ಅಮೆರಿಕ ಪಾಕಿಸ್ತಾನದ ಮೇಲೆ ಒತ್ತಡ ಹೇರಿತ್ತು ಎಂದು ಫೈನಾನ್ಷಿಯಲ್ ಟೈಮ್ಸ್ ವರದಿ ಮಾಡಿದೆ. ಈ ವರದಿ, ತಾನು ತಟಸ್ಥ ಮಧ್ಯಸ್ಥಗಾರ ಎಂಬ ಪಾಕಿಸ್ತಾನ ವಾದವನ್ನು ಪ್ರಶ್ನಿಸಿದೆ.

ಮಧ್ಯವರ್ತಿಯ ಪಾತ್ರ: ಯುದ್ಧವನ್ನು ಸ್ಥಗಿತಗೊಳಿಸಲು ಮತ್ತು ಹಾರ್ಮುಜ್ ಜಲಸಂಧಿಯಲ್ಲಿ ಸಂಚಾರ ಮರು ಪ್ರಾರಂಭಿಸಲು ಇರಾನ್ ಅನ್ನು ಒಪ್ಪಿಸಲು ಟ್ರಂಪ್ ಆಡಳಿತ ವಾರಗಳ ಕಾಲ ಪಾಕಿಸ್ತಾನದ ಮೇಲೆ ಒತ್ತಡ ಹೇರಿತ್ತು. ಅಮೆರಿಕ ಬೆಂಬಲಿತ ಪ್ರಸ್ತಾಪವನ್ನು ತಲುಪಿಸಲು ಮುಸ್ಲಿಂ ಬಹುಸಂಖ್ಯಾತ ನೆರೆ ರಾಷ್ಟ್ರವಾದ ಪಾಕಿಸ್ತಾನ ಸೂಕ್ತ ಮಾಧ್ಯಮ ಎಂದು ಅಮೆರಿಕ ನಂಬಿತ್ತು ಎನ್ನಲಾಗಿದೆ.

ರಾಜತಾಂತ್ರಿಕ ಕ್ರಮಗಳು: ಪಾಕಿಸ್ತಾನದ ರಕ್ಷಣಾ ಮುಖ್ಯಸ್ಥ ಆಸಿಮ್ ಮುನೀರ್ ನೇತೃತ್ವದ ತೆರೆಮರೆಯ ಪ್ರಯತ್ನಗಳು ಮಂಗಳವಾರ ರಾತ್ರಿ ಫಲ ನೀಡಿದ್ದವು. ಮುನೀರ್ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತು ವಿಶೇಷ ಪ್ರತಿನಿಧಿ ಸ್ಟೀವ್ ವಿಟ್ಕಾಫ್ ರೊಂದಿಗೆ ಸರಣಿ ಮಾತುಕತೆ ನಡೆಸಿದ್ದರು. ಬಳಿಕ ಮುನೀರ್ ಎರಡು ವಾರಗಳ ಕದನ ವಿರಾಮದ ಪ್ರಸ್ತಾಪವನ್ನು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿಗೆ ತಿಳಿಸಿದ್ದರು. ಅಮೆರಿಕ ಹೇಳಿಕೆಯನ್ನು ಪರಿಶೀಲಿಸಿ ಅನುಮೋದಿಸಿದ ನಂತರ ಪ್ರಧಾನಿ ಶೆಹಬಾಜ್ ಷರೀಫ್ ಈ ಒಪ್ಪಂದವನ್ನು ಸಾರ್ವಜನಿಕವಾಗಿ ಘೋಷಿಸಿದ್ದರು.



ತೆರೆಮರೆಯ ವಿದ್ಯಮಾನಗಳು

ಈ ಒಪ್ಪಂದ, ಪಾಕಿಸ್ತಾನದ ಸ್ವತಂತ್ರ ಯೋಜನೆಯಲ್ಲ, ಬದಲಾಗಿ ವಾಷಿಂಗ್ಟನ್‌ನ ನಿರ್ದೇಶನದಂತೆ ನಡೆದಿದೆ ಎಂಬುದಕ್ಕೆ ಪುರಾವೆಗಳು ಲಭ್ಯವಾಗಿವೆ. ಷರೀಫ್, ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಅಧಿಕೃತ ಪ್ರಕಟಣೆಯಲ್ಲಿ ಶ್ವೇತಭವನ ಸಿದ್ಧಪಡಿಸಿದ್ದ ಕರಡು ವಿಷಯದ ಸಾಲುಗಳು ಹಾಗೆಯೇ ಉಳಿದಿದ್ದವು, ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಮಾತುಕತೆಯ ವೇಳೆ ಪಾಕಿಸ್ತಾನಿ ಅಧಿಕಾರಿಗಳು 15 ಅಂಶಗಳ ಅಮೆರಿಕದ ಪ್ರಸ್ತಾಪವನ್ನು ಇರಾನ್‌ನ ರಾಜಕೀಯ ಮತ್ತು ಮಿಲಿಟರಿ ನಾಯಕರಿಗೆ ಹಸ್ತಾಂತರಿಸಿದ್ದರು.



ಪಾಕಿಸ್ತಾನದ ಪಾತ್ರ ಪ್ರಶ್ನಿಸಿದ ಇಸ್ರೇಲ್

ಹೊಸದಿಲ್ಲಿ: ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಕದನ ವಿರಾಮ ಮಾತುಕತೆಯಲ್ಲಿ ಪಾಕಿಸ್ತಾನವನ್ನು ವಿಶ್ವಾಸಾರ್ಹ ಮಧ್ಯಸ್ಥಗಾರ ಎಂದು ಇಸ್ರೇಲ್ ಪರಿಗಣಿಸುವುದಿಲ್ಲ ಎಂದು ಭಾರತಕ್ಕೆ ಇಸ್ರೇಲ್ ರಾಯಭಾರಿ ರೆವುನ್ ಅಜರ್ ತಿಳಿಸಿದ್ದಾರೆ.

ರಾಜತಾಂತ್ರಿಕ ಸಂಘರ್ಷ

ಪಾಕಿಸ್ತಾನದ ಸೇವೆಗಳನ್ನು ಬಳಸಿಕೊಳ್ಳಲು ಅಮೆರಿಕಕ್ಕೆ ತನ್ನದೇ ಆದ ಕಾರಣಗಳಿರಬಹುದು, ಆದರೆ ಮಾತುಕತೆಯ ಸಾರಾಂಶದ ವಿಷಯಕ್ಕೆ ಸಂಬಂಧಿಸಿದಂತೆ, ಇಸ್ರೇಲ್ ಅಮೆರಿಕದೊಂದಿಗೆ ಸಮನ್ವಯತೆ ಕಾಯ್ದುಕೊಳ್ಳಲಿದೆ ಎಂದು ಅಜರ್ ಹೇಳಿದ್ದಾರೆ. ಏ.11ರಂದು ಪಾಕಿಸ್ತಾನದಲ್ಲಿ ನಡೆಯಲಿರುವ ಅಮೆರಿಕ ಮತ್ತು ಇರಾನ್ ನೇರ ಮಾತುಕತೆಗೆ ಮುನ್ನ ಈ ಹೇಳಿಕೆ ಹೊರಬಿದ್ದಿದೆ. ಈ ಮಾತುಕತೆಯಲ್ಲಿ ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಭಾಗವಹಿಸುವ ಸಾಧ್ಯತೆಯಿದೆ.

ಲೆಬನಾನ್ ಸಂಘರ್ಷ

ಇರಾನ್ ಕದನ ವಿರಾಮ ಮತ್ತು ಲೆಬನಾನ್ ಕಾರ್ಯಾಚರಣೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿದ ಅಜರ್ ಇಸ್ರೇಲ್ ವಾಯುಪಡೆ ಇತ್ತೀಚೆಗೆ 250 ಕ್ಕೂ ಹೆಚ್ಚು ಹೆಜ್ಬೊಲ್ಲಾ ಸದಸ್ಯರನ್ನು ಹತ್ಯೆ ಮಾಡಿದೆ ಎಂದು ದೃಢಪಡಿಸಿದರು. ಲಿಟಾನಿ ನದಿಯ ದಕ್ಷಿಣ ಭಾಗದಲ್ಲಿ ಹೆಜ್ಬೊಲ್ಲಾ ನಿಶ್ಶಸ್ತ್ರೀಕರಣವಾಗಬೇಕು ಎಂದು ಅವರು ಒತ್ತಾಯಿಸಿದರು. ಇರಾನ್ ಜತೆಗಿನ ತಾತ್ಕಾಲಿಕ ಕದನ ವಿರಾಮದ ವೇಳೆ, ಇಸ್ರೇಲ್‌ನ ಉತ್ತರದ ಸಮುದಾಯಗಳನ್ನು ರಕ್ಷಿಸಲು ಲೆಬನಾನ್ ಸರ್ಕಾರ ಹೆಜ್ಬೊಲ್ಲಾ ಸಂಘಟನೆಯ ಮೂಲಸೌಕರ್ಯಗಳನ್ನು ತೆರವುಗೊಳಿಸಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ.

ಅಮೆರಿಕದ ಉದ್ದೇಶಗಳು

ತೈಲ ಬೆಲೆ ಏರಿಕೆ ಮತ್ತು ಇರಾನ್ ಆಡಳಿತದ ಪ್ರತಿರೋಧದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಅಧ್ಯಕ್ಷ ಟ್ರಂಪ್, ಕದನ ವಿರಾಮಕ್ಕಾಗಿ ಉತ್ಸುಕರಾಗಿದ್ದರು. ಮಾ.21 ರಂದು ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ನಾಶಪಡಿಸುವುದಾಗಿ ಸಾರ್ವಜನಿಕವಾಗಿ ಎಚ್ಚರಿಕೆ ನೀಡಿದ್ದರೂ, ತೆರೆಮರೆಯಲ್ಲಿ ಟ್ರಂಪ್ ಆಡಳಿತ ಪಾಕಿಸ್ತಾನದ ಮೂಲಕ ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಪ್ರಯತ್ನಿಸುತ್ತಿತ್ತು ಎಂಬುದು ಈಗ ಬಯಲಾಗಿದೆ.

ಇರಾನ್‌ನ ಆಂತರಿಕ ಸಂಘರ್ಷ

ಇರಾನ್‌ನ ರಾಜಕೀಯ ನಾಯಕರು ಕದನ ವಿರಾಮಕ್ಕೆ ತಾತ್ವಿಕವಾಗಿ ಒಪ್ಪಿಗೆ ನೀಡಿದ್ದರೂ, ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ನಿಂದ ವಿರೋಧ ವ್ಯಕ್ತವಾಗಿತ್ತು. ಅಮೆರಿಕ ಮತ್ತು ಇಸ್ರೇಲ್‌ನ ಸತತ ಬಾಂಬ್ ದಾಳಿಯ ನಂತರ ಐಆರ್‌ಜಿಸಿಯ ಕೆಲವು ವಿಭಾಗಗಳು ಮಾತುಕತೆಗೆ ಮರಳಲು ಅಥವಾ ಜಲಸಂಧಿಯ ಮೇಲಿನ ನಿಯಂತ್ರಣ ಬಿಟ್ಟುಕೊಡಲು ನಿರಾಕರಿಸಿದ್ದವು.

ಅಂತಿಮ ಮಾತುಕತೆಗಳು

ಮಂಗಳವಾರ ಸೌದಿ ಅರೇಬಿಯಾದ ಜುಬೈಲ್ ಪೆಟ್ರೋಕೆಮಿಕಲ್ ಕೇಂದ್ರದ ಮೇಲೆ ನಡೆದ ಡ್ರೋನ್ ದಾಳಿ, ಮಾತುಕತೆಯನ್ನು ಹಳಿತಪ್ಪಿಸುವ ಭೀತಿ ಮೂಡಿಸಿತ್ತು. ಸೌದಿ ಅರೇಬಿಯಾದೊಂದಿಗೆ ರಕ್ಷಣಾ ಒಪ್ಪಂದ ಹೊಂದಿರುವ ಪಾಕಿಸ್ತಾನ, ಇಂತಹ ದಾಳಿಗಳು ಮುಂದುವರಿದರೆ ಇರಾನ್ ಅಂತರಾಷ್ಟ್ರೀಯ ಮಟ್ಟದಲ್ಲಿ ಒಂಟಿಯಾಗಲಿದೆ ಎಂದು ಎಚ್ಚರಿಸಿತ್ತು. ಬುಧವಾರ ಶೆಹಬಾಜ್ ಷರೀಫ್ ಅವರೊಂದಿಗೆ ಮಾತನಾಡಿದ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಇಸ್ಲಾಮಾಬಾದ್‌ಗೆ ಮಾತುಕತೆಗಾಗಿ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಐಆರ್‌ಜಿಸಿ ನಿಲುವೇನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಲೆಬನಾನ್ ಕುರಿತು ಭಿನ್ನಮತ

ಲೆಬನಾನ್ ಮೇಲಿನ ಇಸ್ರೇಲ್ ದಾಳಿ ಎರಡು ವಾರಗಳ ಕದನ ವಿರಾಮ ಮತ್ತು ಪ್ರಾದೇಶಿಕ ಸ್ಥಿರತೆಗೆ ಧಕ್ಕೆ ತರಬಹುದು, ಎಂದು ಟೆಹ್ರಾನ್ ಎಚ್ಚರಿಸಿದೆ. ಆದರೆ, ಲೆಬನಾನ್ ಈ ಕದನ ವಿರಾಮ ಒಪ್ಪಂದದ ಭಾಗವಲ್ಲ ಎಂದು ಟ್ರಂಪ್ ಮತ್ತು ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ.

ಎಲ್‌ಪಿಜಿ ಟ್ಯಾಂಕರ್ ಗ್ರೀನ್ ಆಶಾ ಭಾರತಕ್ಕೆ ಸುರಕ್ಷಿತ ಆಗಮನ



ದೇಶೀಯ ಪೂರೈಕೆ

ದೇಶೀಯ ಇಂಧನ ಪೂರೈಕೆಯು ಸ್ಥಿರವಾಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ. ಇಂಧನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ವಲಸೆ ಕಾರ್ಮಿಕರಿಗಾಗಿ 5 ಕೆಜಿ ಸಿಲಿಂಡರ್‌ಗಳ ದೈನಂದಿನ ಪೂರೈಕೆಯನ್ನು ದ್ವಿಗುಣಗೊಳಿಸಲು ಅಧಿಕಾರಿಗಳು ಸೂಚಿಸಿದ್ದಾರೆ.

ಮುಂಬೈ: ಭಾರತದ ಧ್ವಜ ಹೊಂದಿರುವ ಗ್ರೀನ್ ಆಶಾ ನೌಕೆ, ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದ್ದು, 15,000 ಟನ್‌ಗಳಿಗಿಂತ ಹೆಚ್ಚು ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತು ಗುರುವಾರ ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರ ತಲುಪಿದೆ.

ಭಾರತದ ಈ ನೌಕೆ, ಇರಾನ್, ಅಮೆರಿಕ, ಇಸ್ರೇಲ್ ನಡುವಿನ ಸಂಘರ್ಷ ಆರಂಭವಾದ ನಂತರ ಈ ಬಂದರಿಗೆ ಬಂದಿಳಿದ ಮೊದಲ ಟ್ಯಾಂಕರ್ ಆಗಿದೆ. ಸಂಚಾರದ ಒತ್ತಡದ ನಡುವೆಯೂ ನೌಕೆ, ಅದರ ಸರಕು ಮತ್ತು ಎಲ್ಲಾ ಸಿಬ್ಬಂದಿ ಸುರಕ್ಷಿತವಾಗಿ ದ್ದಾರೆ, ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ. ಗ್ರೀನ್ ಆಶಾ ನೌಕೆ, ಗ್ರೀನ್ ಸಾನ್ವಿ ನೌಕೆಯ ಬಳಿಕ ಈ ಮಾರ್ಗವನ್ನು ಯಶಸ್ವಿಯಾಗಿ ದಾಟಿದ ಭಾರತದ ಮತ್ತೊಂದು ನೌಕೆ ಎನಿಸಿದೆ. ಸಂಘರ್ಷದ ಆರಂಭದಲ್ಲಿ ಈ ಪ್ರದೇಶದಲ್ಲಿದ್ದ 28 ಭಾರತೀಯ ನೌಕೆಗಳ ಪೈಕಿ 10 ನೌಕೆಗಳು ಇದುವರೆಗೆ ಜಲಮಾರ್ಗವನ್ನು ಯಶಸ್ವಿಯಾಗಿ ದಾಟಿವೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯ ನಂತರ ಈ ಜಲಮಾರ್ಗ ಇರಾನ್ ನಿಯಂತ್ರಣದಲ್ಲಿದೆ.

ಒಪ್ಪಂದ ಜಾರಿವರೆಗೆ ಇರಾನ್ ಬಳಿ ಅಮೆರಿಕ ಸೇನೆ ನಿಯೋಜನೆ

ವಾಷಿಂಗ್ಟನ್: ಅಮೆರಿಕದ ಎಲ್ಲಾ ಹಡಗುಗಳು, ವಿಮಾನಗಳು ಮತ್ತು ಮಿಲಿಟರಿ ಸಿಬ್ಬಂದಿ, ಅಧಿಕೃತ ಒಪ್ಪಂದ ಪೂರ್ಣವಾಗಿ ಜಾರಿಯಾಗುವವರೆಗೆ ಇರಾನ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಯೋಜಿತರಾಗಿರುತ್ತಾರೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಘೋಷಿಸಿದ್ದಾರೆ.

ಅಮೆರಿಕ ಮಿಲಿಟರಿ ಸ್ಥಿತಿ: ಯುಎಸ್ ಮಿಲಿಟರಿ ಹೆಚ್ಚುವರಿ ಮದ್ದುಗುಂಡುಗಳು ಮತ್ತು ಶಸ್ತ್ರಾಸ್ತ್ರಗಳೊಂದಿಗೆ ತನ್ನ ಸ್ಥಾನಗಳಲ್ಲಿ ಮುಂದುವರಿದಿದೆ. ಒಪ್ಪಂದದ ಷರತ್ತುಗಳ ಅನುಸರಣೆಯನ್ನು ಖಚಿತ ಪಡಿಸಿಕೊಳ್ಳಲು ಪಡೆಗಳು ಅಲ್ಲಿಯೇ ಇರುತ್ತವೆ. ಸೈನ್ಯ ಪ್ರಸ್ತುತ ಸನ್ನದ್ಧತೆಯನ್ನು ಕಾಯ್ದುಕೊಳ್ಳುವ ಜತೆಗೆ ಮುಂದಿನ ಕಾರ್ಯಾಚರಣೆಗಳಿಗೆ ಸಿದ್ಧವಾಗುತ್ತಿದೆ ಎಂದು ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ.

ಒಪ್ಪಂದದ ನಿಯಮಗಳು: ಹಾರ್ಮುಜ್ ಜಲಸಂಧಿ ಸಂಚಾರಕ್ಕೆ ಮುಕ್ತವಾಗಿರಬೇಕು ಮತ್ತು ಸುರಕ್ಷಿತವಾಗಿರಬೇಕು, ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ. ವರದಿಯಾಗಿರುವ ನಿಯಮಗಳ ಪ್ರಕಾರ, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ಒಂದು ವೇಳೆ ಒಪ್ಪಂದ ಪಾಲಿಸದಿದ್ದರೆ ಮಿಲಿಟರಿ ಕ್ರಮ ಒಂದು ಆಯ್ಕೆಯಾಗಿ ಉಳಿಯಲಿದೆ ಎಂದು ಟ್ರಂಪ್ ಸೂಚಿಸಿದ್ದಾರೆ.

ಹೆಜ್ಬೊಲ್ಲಾ ಮುಖ್ಯಸ್ಥನ ಸಲಹೆಗಾರ ಹತ

ಇರಾನ್‌ನೊಂದಿಗಿನ ಅಮೆರಿಕ-ಇಸ್ರೇಲಿ ಯುದ್ಧದಲ್ಲಿ ಕದನ ವಿರಾಮ ಘೋಷಣೆಯ ಹೊರತಾಗಿಯೂ ಲೆಬನಾನ್ ಮೇಲೆ ಇಸ್ರೇಲಿ ದಾಳಿಗಳು ಮುಂದುವರೆದಿದ್ದು, ಬೈರೂತ್ ಮೇಲೆ ದಾಳಿಯಲ್ಲಿ ಹೆಜ್ಬೊಲ್ಲಾ ನಾಯಕ ನೈಮ್ ಖಾಸಿಮ್‌ನ ಸೋದರಳಿಯನನ್ನು ಹತ್ಯೆಗೈದಿದ್ದೇವೆ ಎಂದು ಇಸ್ರೇಲ್ ಗುರುವಾರ ಹೇಳಿದೆ. ಐಡಿಎಫ್ ಬೈರೂತ್ ಪ್ರದೇಶದಲ್ಲಿ ದಾಳಿ ನಡೆಸಿ ಹೆಜ್ಬೊಲ್ಲಾ ಪ್ರಧಾನ ಕಾರ್ಯದರ್ಶಿ ನೈಮ್ ಖಾಸಿಮ್ ಸೋದರಳಿಯ ಮತ್ತು ವೈಯಕ್ತಿಕ ಕಾರ್ಯದರ್ಶಿ ಅಲಿ ಯೂಸುಫ್ ಹರ್ಷಿಯನ್ನು ನಿರ್ಮೂಲನೆ ಮಾಡಿದೆ ಎಂದು ಸೇನೆ ತಿಳಿಸಿದೆ.

ಇಸ್ರೇಲ್ ದಾಳಿಗೆ ಲೆಬನಾನ್‌ನ 203 ಸಾವು

ಬೈರೂತ್: ಮಧ್ಯ ಬೈರೂತ್ ಮತ್ತು ಲೆಬನಾನ್‌ನ ಇತರ ಪ್ರದೇಶಗಳಲ್ಲಿ ಇಸ್ರೇಲಿ ದಾಳಿಯಲ್ಲಿ ಕನಿಷ್ಠ 203 ಮಂದಿ ಮೃತಪಟ್ಟಿದ್ದು, 1,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ. ಇಸ್ರೇಲ್ ಮತ್ತು ಲೆಬನಾನಿನ ಉಗ್ರಗಾಮಿ ಗುಂಪು ಹೆಜ್ಬೊಲ್ಲಾಹ್ ನಡುವೆ ಐದು ವಾರಗಳಿಗೂ ಹೆಚ್ಚು ಕಾಲ ನಡೆದ ಯುದ್ಧದಲ್ಲಿ ಬುಧವಾರ ಲೆಬನಾನ್‌ನ ಒಂದೇ ದಿನದ ಗರಿಷ್ಠ ಸಾವಿನ ಸಂಖ್ಯೆಯಾಗಿದೆ. ಇಸ್ರೇಲಿ ಮಿಲಿಟರಿ ಹೆಜ್ಬೊಲ್ಲಾ ತಾಣಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಹೇಳಿದೆ. ಮಧ್ಯಾಹ್ನದ ಜನದಟ್ಟಣೆ ವೇಳೆ ಅಪ್ಪಳಿಸಿದ ಕ್ಷಿಪಣಿ ಕಟ್ಟಡಗಳು ದಟ್ಟವಾದ ವಾಣಿಜ್ಯ ಮತ್ತು ವಸತಿ ಮೇಲೆ ಬಿದ್ದಿದ್ದೆ. ಇದು ವ್ಯಾಪಕ ನಾಗರಿಕ ಸಾವುನೋವುಗಳಿಗೆ ಕಾರಣವಾಗಿದೆ.

ಹಾರ್ಮುಜ್ ಹಾದು ಹೋಗುವ ಹಡಗುಗಳಿಗೆ ಇರಾನ್‌ನಿಂದ ಶುಲ್ಕ

ಹೊಸದಿಲ್ಲಿ: ಎರಡು ವಾರಗಳ ಕದನ ವಿರಾಮದ ಅವಧಿಯಲ್ಲಿ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುವ ಹಡಗುಗಳು ಕ್ರಿಪ್ಟೋಕರೆನ್ಸಿ ಅಥವಾ ಚೀನೀ ಯುವಾನ್‌ನಲ್ಲಿ ಶುಲ್ಕ ಪಾವತಿಸಬೇಕು ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಸೂಚಿಸಿದೆ. ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿಯ ಪ್ರಕಾರ, ಸರಕು ತುಂಬಿದ ಟ್ಯಾಂಕರ್‌ಗಳಿಗೆ ಇರಾನ್ ಪ್ರತಿ ಬ್ಯಾರೆಲ್‌ಗೆ ಸುಮಾರು 1 ಡಾಲರ್ ಶುಲ್ಕ ವಿಧಿಸುತ್ತಿದೆ. ಹಡಗುಗಳು ತಮ್ಮ ಸರಕಿನ ವಿವರಗಳನ್ನು ಮುಂಚಿತವಾಗಿ ಇಮೇಲ್ ಮೂಲಕ ನೀಡಬೇಕು ಮತ್ತು ಇರಾನ್ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು. ಬಳಿಕ ಖೇಶ್ಮ್ ಮತ್ತು ಲಾರಕ್ ದ್ವೀಪಗಳ ನಡುವಿನ ಉತ್ತರದ ಕಾರಿಡಾರ್ ಅನ್ನು ಬಳಸಬೇಕಾಗುತ್ತದೆ.

ಕಿರುಸುದ್ದಿ

ರಾಜ್ಯಸಭೆ ಸದಸ್ಯರಾಗಿ ಇಂದು ನಿತೀಶ್ ಪ್ರಮಾಣ



ಹೊಸದಿಲ್ಲಿ: ಬಿಹಾರದ ದೀರ್ಘಕಾಲದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಶುಕ್ರವಾರ ರಾಜ್ಯಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ರಾಜ್ಯಸಭೆಯ ಸಭಾಪತಿ ಸಿ. ಪಿ. ರಾಧಾಕೃಷ್ಣನ್ ಅವರ ಕೊಠಡಿಯಲ್ಲಿ ಅವರಿಗೆ ಮೇಲ್ಮನೆಯ ಸದಸ್ಯರಾಗಿ ಪ್ರಮಾಣ ವಚನ ಬೋಧಿಸಲಾಗುವುದು. ನಿತೀಶ್ ಈಗಾಗಲೇ ರಾಜ್ಯ ವಿಧಾನ ಪರಿಷತ್ತಿನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು ರಾಜ್ಯಸಭೆಗೆ ಆಯ್ಕೆಯಾದ ನಂತರ ಮಾ. 30ರಂದು ಎಂಎಲ್‌ಸಿ ಹುದ್ದೆಗೆ ರಾಜೀನಾಮೆ ನೀಡಿದ್ದರು.

3 ಮಕ್ಕಳನ್ನು ಹೊಂದಬೇಕು: ಹಿಂದುಗಳಿಗೆ ಸೀಮಾ ಹೈದರ್

ಹೊಸದಿಲ್ಲಿ: ಭಾರತದಲ್ಲಿರುವ ಪ್ರತಿ ಹಿಂದು ಕುಟುಂಬವು ಕನಿಷ್ಠ 2 ರಿಂದ ಮೂರು ಮಕ್ಕಳನ್ನು ಹೊಂದಬೇಕು . ಸಣ್ಣ ಕುಟುಂಬಗಳಿಂದ ಜನಸಂಖ್ಯಾ ಸಮತೋಲನದ ಮೇಲೆ ದುಷ್ಪರಿಣಾಮ ಬೀರಬಹುದು ಎಂದು ಪಾಕಿಸ್ತಾನದಿಂದ ಭಾರತಕ್ಕೆ ಬಂದಿರುವ ಸೀಮಾ ಹೈದರ್ ಹೇಳಿದ್ದಾರೆ.ಸೀಮಾ ಅವರು ಪಾಕಿಸ್ತಾನದಿಂದ ನೇಪಾಳ ಮೂಲಕವಾಗಿ ಭಾರತಕ್ಕೆ ಬಂದು ಸಚಿನ್ ಮೀನಾ ಅವರನ್ನು ವಿವಾಹವಾಗಿದ್ದರು. ಸಂದರ್ಶನವೊಂದರಲ್ಲಿ ಮಾತನಾಡುತ್ತಾ ಮಕ್ಕಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡ ಸೀಮಾ ಹೈದರ್, ದೇಶದಲ್ಲಿ ಇಂದು ಅನೇಕರು ಜನರು ಒಂದು ಅಥವಾ ಎರಡು ಮಕ್ಕಳನ್ನು ಮಾತ್ರ ಹೊಂದುತ್ತಿದ್ದಾರೆ. ಇದರಿಂದ ಹಿಂದು ಜನಸಂಖ್ಯೆಯಲ್ಲಿ ಕುಸಿತಕ್ಕೆ ಕಾರಣವಾಗುತ್ತಿದೆ ಎಂದಿದ್ದಾರೆ.

ಕತಾರ್‌ಗೆ ಸಚಿವ ಪುರಿ ಭೇಟಿ

ಹೊಸದಿಲ್ಲಿ: ಎರಡು ದಿನಗಳ ಭೇಟಿಗಾಗಿ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಗುರುವಾರ ಕತಾರ್ ತಲುಪಿದ್ದಾರೆ. ಇರಾನ್ ಯುದ್ಧದಿಂದ ಉಂಟಾದ ಇಂಧನ ಪೂರೈಕೆಯ ಕಳವಳದ ನಡುವೆ ಈ ಭೇಟಿ ಪ್ರಾಮುಖ್ಯತೆ ಹೊಂದಿದೆ. ಭಾರತವು ತನ್ನ ಎಲ್‌ಎನ್‌ಜಿ ದಾಸ್ತಾನಿನ ಶೇ.50ರಷ್ಟನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಆಮದು ಮಾಡಿಕೊಳ್ಳುತ್ತದೆ ಎಂದು ತೈಲ ಅರ್ಥಶಾಸ್ತ್ರಜ್ಞ ಕಿರಿಟ್ ಪಾರಿಖ್ ಹೇಳಿದ್ದಾರೆ.

ಸಂಸ್ಕೃತಿಗೆ ವಿರುದ್ಧವಾದ ಸ್ಥಳದ ಹೆಸರು ಬದಲು

ಕೋಲ್ಕತ್ತಾ: ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚಿಸಿದರೆ ಪಶ್ಚಿಮ ಬಂಗಾಳದ ಸಂಸ್ಕೃತಿ ಮತ್ತು ನೀತಿಗೆ ವಿರುದ್ಧವಾದ ಸ್ಥಳಗಳ ಹೆಸರುಗಳನ್ನು ಬದಲಾಯಿಸುತ್ತದೆ ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಗುರುವಾರ ಹೇಳಿದ್ದಾರೆ.

ಬಾಂಗ್ಲಾದೇಶದ ಒಳನುಸುಳುಕೋರರು ರಾಜ್ಯದಲ್ಲಿ ಮಹಿಳೆಯರ ಭದ್ರತೆಗೆ ಅಪಾಯವನ್ನುಂಟುಮಾಡುತ್ತಿದೆ ಎಂದು ಪ್ರತಿಪಾದಿಸಿದ ಅವರು, ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದರಿಂದ ಒಳನುಸುಳುಕೋರರು ಕಾನೂನು ಕ್ರಮ ಎದುರಿಸುತ್ತಾರೆ. ಅವರನ್ನು ಮರಳಿ ಕಳುಹಿಸಲಾಗುತ್ತದೆ ಹೇಳಿದರು. ಉತ್ತರ ದಿನಾಜ್ಪುರ ಜಿಲ್ಲೆಯ ಚಾಕುಲಿಯಾದಲ್ಲಿ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ನವೀನ್, ಅಲಿಪುರ್ದುವಾರ್‌ನಿಂದ ಇಸ್ಲಾಂಪುರದವರೆಗಿನ ಪಶ್ಚಿಮ ಬಂಗಾಳದ ಸಂಸ್ಕೃತಿಗೆ ವಿರುದ್ಧವಾದ ಸ್ಥಳಗಳ ಹೆಸರುಗಳನ್ನು ಬಿಜೆಪಿ ಸರ್ಕಾರದ ಆಡಿಯಲ್ಲಿ ಉಳಿಯಲು ಬಿಡುವುದಿಲ್ಲ ಎಂದು ಹೇಳಿದರು. ಮೇ 4ರ ನಂತರ, ಈ ಸ್ಥಳಗಳ ಹೆಸರುಗಳಲ್ಲಿನ ಬದಲಾವಣೆಗಳ ಜತೆಗೆ ನಿಮ್ಮ ಜೀವನದಲ್ಲಿ ಬದಲಾವಣೆಗಳು ಉಂಟಾಗುತ್ತವೆ ಎಂದು ಅವರು ಹೇಳಿದರು. ಈ ಚುನಾವಣೆಯು ರಾಜ್ಯದ ಭ್ರಷ್ಟಾಚಾರ, ದಬ್ಬಾಳಿಕೆ, ಕಾನೂನುಬಾಹಿರತೆ ಮತ್ತು 'ಮಹಾಜನ್ ಲಾಲ್ ರಾಜ್' ಅನ್ನು ಸೂಚಿಸುವ ದಬ್ಬಾಳಿಕೆಯ ಸರ್ಕಾರ ಮತ್ತು ದೇಶದ ಜನರಿಗೆ ನಂಬಿಕೆಯಿರುವ ಬಿಜೆಪಿ ನಡುವಿನ ಹೋರಾಟವಾಗಿದೆ ಎಂದು ನವೀನ್ ಹೇಳಿದರು. ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಡಬಲ್ ಎಂಜಿನ್ ಸರ್ಕಾರವನ್ನು ನೀಡಬೇಕೆಂದು ಅವರು ರಾಜ್ಯದ ಜನರನ್ನು ಒತ್ತಾಯಿಸಿದರು.

ಮಿಸ್ರಿ ಅಮೆರಿಕ ಭೇಟಿ: ಒಪ್ಪಂದಗಳ ಬಗ್ಗೆ ಚರ್ಚೆ



ವಾಷಿಂಗ್ಟನ್: ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಅಮೆರಿಕದ ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ ರಕ್ಷಣಾ ಮತ್ತು ವ್ಯಾಪಾರ ಸಂಬಂಧಗಳನ್ನು ಮತ್ತಷ್ಟು ಗಾಢವಾಗಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದರು.

ಇಂಡೋ-ಪೆಸಿಫಿಕ್ ಮತ್ತು ಪಶ್ಚಿಮ ಏಷ್ಯಾದ ಬೆಳವಣಿಗೆಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಇಲ್ಲಿ ಮೂರು ದಿನಗಳ ಭೇಟಿಯಲ್ಲಿ, ಮಿಸ್ರಿ ಅವರು ರಕ್ಷಣಾ ಇಲಾಖೆಯ ಕಾರ್ಯದರ್ಶಿಗಳಾದ ಮೈಕೆಲ್ ಡಫ್ಫಿ ಮತ್ತು ಎಲ್ಬ್ರಿಡ್ಜ್ ಕಾಲ್ಬಿ ಮತ್ತು ವಾಣಿಜ್ಯ ಇಲಾಖೆಯ ಅಧೀನ ಕಾರ್ಯದರ್ಶಿಗಳಾದ ಜೆಫ್ರಿ ಕೆಸ್ಲರ್ ಮತ್ತು ವಿಲಿಯಂ ಕಿಮ್ಮಿಟ್ ಅವರನ್ನು ಭೇಟಿಯಾದರು.

ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಪೆಂಟಗನ್‌ನಲ್ಲಿ ಅಂಡರ್ ಸೆಕ್ರೆಟರಿ ಆಫ್ ವಾರ್ ಫಾರ್ ಪಾಲಿಸಿ ಎಲ್ಬ್ರಿಡ್ಜ್ ಕೋಲ್ಬಿ ಅವರೊಂದಿಗೆ ಇಂಡೋ-ಪೆಸಿಫಿಕ್ ಪ್ರದೇಶ ಮತ್ತು ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಒಳಗೊಂಡ ಮತ್ತೊಂದು ವ್ಯಾಪಕವಾದ ಸಂಭಾಷಣೆಯನ್ನು ನಡೆಸಿದರು.

ಕರಾವಳಿ ರಾಜ್ಯಗಳ ಸವಾಲು ಅವಕಾಶಗಳಾಗಿ ಪರಿವರ್ತನೆ

ಪಣಜಿ: ಕರಾವಳಿ ರಾಜ್ಯಗಳು ತಮಗೆದುರಾದ ಸವಾಲುಗಳನ್ನೇ ಅವಕಾಶಗಳಾಗಿ ಪರಿವರ್ತಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಈ ಸಾಧನೆ ಮೆರೆದಿದ್ದಾರೆ ಎಂದು ಲೋಕಸಭಾ ಸಭಾಪತಿ ಓಂ ಬಿರ್ಲಾ ಗುರುವಾರ ಪ್ರಶಂಸೆಯ ನುಡಿಯಾಡಿದ್ದಾರೆ.

ಸಂಪನ್ನ ಭಾರತ ನಿರ್ಮಾಣದಲ್ಲಿ ಶಾಸಕಾಂಗ ಸಂಸ್ಥೆಗಳ ಪಾತ್ರ ಅತಿ ನಿರ್ಣಾಯಕ. ಸಂಪನ್ನ ಭಾರತದ ಗುರಿ ಸಾಕಾರದಲ್ಲಿ ಯುವ ಶಾಸಕರಿಗೆ ಮಹಾನ್ ಜವಾಬ್ದಾರಿಯಿದೆ. ಗುಜರಾತ್, ಮಹಾರಾಷ್ಟ್ರ, ಗೋವಾದಂತಹ ಕರಾವಳಿ ರಾಜ್ಯಗಳು ಹಲವು ಸವಾಲುಗಳನ್ನು ಎದುರಿಸುತ್ತಿರುವ ರಾಜ್ಯಗಳು.ಆದರೂ ಈ ರಾಜ್ಯಗಳ ನಾಯಕತ್ವ ಸವಾಲುಗಳನ್ನು ಅವಕಾಶವಾಗಿ ಪರಿವರ್ತಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಬರಗಾಲ, ಸುದೀರ್ಘ ಕರಾವಳಿ ವ್ಯಾಪ್ತಿ, ಬುಡಕಟ್ಟು ವಲಯಗಳು ಹೀಗೆ ಸಾಕಷ್ಟು ಸವಾಲುಗಳ ಸರಮಾಲೆ ಅವರೆದುರಿಗಿತ್ತು. ಆದರೆ ಮೋದಿ ಕೈಗಾರಿಕೀಕರಣವನ್ನು ಉತ್ತೇಜಿಸಿದರು. ವ್ಯಾಪಾರ, ಪ್ರವಾಸೋದ್ಯಮಕ್ಕೆ ಉತ್ತೇಜನವಿತ್ತರು. ಸಂಕಷ್ಟಗಳನ್ನು ಅಭಿವೃದ್ಧಿಯಾಗಿ ಪರಿವರ್ತಿಸಿಬಿಟ್ಟರು. ಜಲಕ್ಷಾಮವಿದ್ದ ಪ್ರದೇಶಗಳಿಗೆ ನರ್ಮದೆಯ ನೀರು ಹರಿಸಿದರು. ಜಾಗತಿಕ ಬದಲಾವಣೆಗಳಿಗೆ ಪೂರಕವಾಗಿ ಹೊಸ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಿದರು ಎಂದು ಬಿರ್ಲಾ ಕೊಂಡಾಡಿದರು. ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಶನ್(ಸಿಪಿಎ) ಇಂಡಿಯಾ ರೀಜನ್ ಝೋನ್ ಐಐ ಸಮಾವೇಶ ಉದ್ಘಾಟಿಸಿ ಬಿರ್ಲಾ ಮಾತನಾಡಿದರು.

ಇದೇ ತೆರ ಇತರ ಕೆಲವು ರಾಜ್ಯಗಳೂ ನೈಸರ್ಗಿಕ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿವೆ.

ಸುನೇತ್ರಾ ಪವಾರ್ ಅವಿರೋಧ ಆಯ್ಕೆ ಖಚಿತ

ಬಾರಾಮತಿ: ಏ.23ರಂದು ನಡೆಯಲಿರುವ ಬಾರಾಮತಿ ವಿಧಾನಸಭಾ ಉಪ ಚುನಾವಣೆಯಲ್ಲಿ ಸುನೇತ್ರಾ ಪವಾರ್ ಅವರ ಅವಿರೋಧ ಆಯ್ಕೆಗಾಗಿ ಪಕ್ಷದ ಅಭ್ಯರ್ಥಿ ಆಕಾಶ್ ಮೋರ್ ಅವರ ನಾಮಪತ್ರವನ್ನು ಹಿಂಪಡೆಯಲಾಗುವುದು ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ಹರ್ಷವರ್ಧನ್ ಸಪ್ಕಲ್ ಘೋಷಿಸಿದ್ದಾರೆ.

ಜ.28ರಂದು ವಿಮಾನ ಅಪಘಾತದಲ್ಲಿ ಮೃತರಾದ ನ್ಯಾಶನಲಿಸ್ಟ್ ಕಾಂಗ್ರೆಸ್ ಪಕ್ಷದ ನಾಯಕ ಅಜಿತ್ ಪವಾರ್ ಅವರ ಗೌರವಾರ್ಥವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಾಂಗ್ರೆಸ್ ಆರಂಭದಲ್ಲಿ ಸುನೇತ್ರಾ ಪವಾರ್ ವಿರುದ್ಧ ಮೋರ್ ಅವರನ್ನು ಕಣಕ್ಕಿಳಿಸಿತ್ತು. ಆದರೆ, ಹಿರಿಯ ರಾಜಕಾರಣಿಗೆ ಗೌರವ ಸಲ್ಲಿಸಲು ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಎನ್‌ಸಿಪಿ-ಎಸ್‌ಪಿ ನಾಯಕಿ ಸುಪ್ರಿಯಾ ಸುಳೆ ಮಾಡಿದ ಮನವಿಯ ಮೇರೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಹಿಂಪಡೆದಿದೆ.ಆರಂಭದಲ್ಲಿ ಶಿವಸೇನೆ (ಉದ್ಧವ್ ಬಣ) ಬೆಂಬಲಿಸಿದರೂ ಕಾಂಗ್ರೆಸ್ ಬೆಂಬಲಿಸಿರಲಿಲ್ಲ.

ಕೇಂದ್ರ ಸರ್ಕಾರದಿಂದ ಬಲವಾದ ವಾದ ಮಂಡನೆ | ಶಬರಿಮಲೆ ವಿಚಾರಣೆ ವೇಳೆ ನಾನಾ ಸಂಗತಿ ಚರ್ಚೆ

ಅರ್ಚಕರ ನೇಮಕ ಧಾರ್ಮಿಕ ವಿಷಯ

ಹೊಸದಿಲ್ಲಿ: ದೇವಾಲಯಗಳಲ್ಲಿ ಅರ್ಚಕರ ನೇಮಕಾತಿ ಸರ್ಕಾರದ ಮಂಡಳಿಗಳ ನಿಯಂತ್ರಣಕ್ಕೆ ಒಳಪಡುವ ಲೌಕಿಕ ಕ್ರಮವಲ್ಲ, ಅದು ಧಾರ್ಮಿಕ ಪರಂಪರೆ ಮತ್ತು ಆಚರಣೆಗಳಿಗೆ ಸಂಬಂಧಿಸಿದ ವಿಷಯವಾಗಿದೆ ಎಂದು ಸುಪ್ರೀಂಕೋರ್ಟ್ ಮುಂದೆ ಕೇಂದ್ರ ಸರ್ಕಾರ ವಾದ ಮಂಡಿಸಿದೆ. ಹಾಗೆಯೇ, ಪಂಥಾಧಾರಿತವಾಗಿ ದೇವಾಲಯ ಪ್ರವೇಶ ನಿರ್ಬಂಧಿಸಿದರೆ ಹಿಂದೂ ಧರ್ಮವೇ ಹಾನಿಗೊಳಗಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದ ಪ್ರಸಂಗವೂ ನಡೆಯಿತು.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಮಹಿಳೆಯರ ಧಾರ್ಮಿಕ ಸ್ಥಳ ಪ್ರವೇಶ, ಧಾರ್ಮಿಕ ಸ್ವಾತಂತ್ರ್ಯ, ಪಂಥಾಧಾರಿತ ಹಕ್ಕುಗಳು ಮತ್ತು ದೇವಾಲಯ ನಿರ್ವಹಣೆಯ ವ್ಯಾಪ್ತಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸುತ್ತಿದೆ.

ಅರ್ಚಕರ ನೇಮಕ ಧಾರ್ಮಿಕ ವಿಷಯ: ಕೇಂದ್ರ ಸರ್ಕಾರದ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದಿಸಿ, ಅರ್ಚಕರ ನೇಮಕಾತಿಯನ್ನು 'ಸೆಕ್ಯುಲರ್ ಆಕ್ಟ್' ಎಂದು ಹಿಂದಿನ ತೀರ್ಪುಗಳಲ್ಲಿ ಪರಿಗಣಿಸಿರುವುದು ತಪ್ಪು ಎಂದರು. ದೇವಸ್ಥಾನಗಳ ಆಗಮ, ಸಂಪ್ರದಾಯ, ಆಚರಣೆಗಳ ಪ್ರಕಾರ ಅರ್ಹತೆಯುಳ್ಳವರನ್ನು ಆಯ್ಕೆ ಮಾಡುವ ಹಕ್ಕು ಸಂಬಂಧಿತ ಧಾರ್ಮಿಕ ಸಮುದಾಯಕ್ಕೇ ಸೇರಬೇಕು; ಸರ್ಕಾರದ ಮಂಡಳಿಗಳಿಗೆ ಅಲ್ಲ ಎಂದು ಹೇಳಿದರು.



ತಮಿಳುನಾಡಿನಲ್ಲಿ ಅರ್ಚಕರ ನೇಮಕಾತಿ ಅಧಿಕಾರವನ್ನು ಸರ್ಕಾರದ ಮಂಡಳಿಗಳಿಗೆ ನೀಡಿದ ಕಾನೂನಿಗೆ ಸುಪ್ರೀಂ ಕೋರ್ಟ್ ಮಾನ್ಯತೆ ನೀಡಿರುವುದನ್ನು ಉಲ್ಲೇಖಿಸಿ, 'ಇದರಿಂದ ಧಾರ್ಮಿಕ ಪಂಥಗಳ ಸಂಪ್ರದಾಯಗಳಲ್ಲಿ ರಾಜ್ಯ ಹಸ್ತಕ್ಷೇಪಕ್ಕೆ ದಾರಿ ತೆರೆದಂತಾಗಿದೆ. ಇದೇ ತರ್ಕ ಮುಂದುವರಿದರೆ ನಾಳೆ ಶಂಕರಾಚಾರ್ಯರನ್ನೂ ತೆಗೆದುಹಾಕುವ ಪರಿಸ್ಥಿತಿ ಬರಬಹುದು' ಎಂದು ಮೆಹ್ತಾ ಎಚ್ಚರಿಸಿದರು.

ಸುಧಾರಣೆ ಹೆಸರಿನಲ್ಲಿ ಧರ್ಮಕ್ಕೆ ಧಕ್ಕೆ ಬೇಡ

ಧರ್ಮ ಮತ್ತು ನಂಬಿಕೆಗಳ ವಿಚಾರದಲ್ಲಿ ನ್ಯಾಯಾಲಯಗಳು 'ಸೆಕ್ಯುಲರಿಸಂ' ಮತ್ತು 'ಸಂವಿಧಾನಾತ್ಮಕ ನೈತಿಕತೆ' ಹೆಸರಿನಲ್ಲಿ ಹಸ್ತಕ್ಷೇಪ ಮಾಡಬಾರದು. ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳನ್ನು ವಿಧಾನಮಂಡಲವೇ ನಿರ್ಧರಿಸಬೇಕು ಎಂದು ತುಷಾರ್ ಮೆಹ್ತಾ ವಾದಿಸಿದರು. ಇದಕ್ಕೆ ಪೀಠ ಪ್ರಾಥಮಿಕವಾಗಿ ಒಪ್ಪಿಗೆ ಸೂಚಿಸಿ, 'ಸುಧಾರಣೆಯ ಹೆಸರಿನಲ್ಲಿ ಮೂಲ ನಂಬಿಕೆ ಮತ್ತು ಭಕ್ತಿಗೆ ಧಕ್ಕೆಯಾಗುವಂತಿಲ್ಲ; ಧರ್ಮಕ್ಕೇ ಹಾನಿಯಾಗಬಾರದು' ಎಂದು ಅಭಿಪ್ರಾಯಪಟ್ಟಿತು.

ರಾಜ್ಯ ಮಧ್ಯಪ್ರವೇಶಕ್ಕೆ ಸಂವಿಧಾನ ಅವಕಾಶ

ಪೀಠವು ಸಂವಿಧಾನದ ವಿಧಿ 25(2)(ಬಿ) ಅಡಿಯಲ್ಲಿ ಎಲ್ಲ ವರ್ಗಗಳಿಗೂ ದೇವಾಲಯ ಪ್ರವೇಶ ಕಲ್ಪಿಸಲು ರಾಜ್ಯ ಮಧ್ಯಪ್ರವೇಶಿಸಬಹುದು ಎಂದು ಸ್ಪಷ್ಟಪಡಿಸಿತು. ವಿಧಿ 26(ಬಿ)ಯ ಧಾರ್ಮಿಕ ಪಂಥ ಹಕ್ಕುಗಳನ್ನು ಪ್ರತ್ಯೇಕವಾಗಿ ಓದಲು ಸಾಧ್ಯವಿಲ್ಲ, ಅವು ವಿಧಿ 25ರೊಂದಿಗೆ ಹೊಂದಾಣಿಕೆಯಲ್ಲಿ ಪರಿಗಣಿಸಬೇಕೆಂದು ಸೂಚಿಸಿತು.

ಪಂಥಾಧಾರಿತ ಪ್ರವೇಶ ನಿರ್ಬಂಧಕ್ಕೆ ಪೀಠದ ಆಕ್ಷೇಪ

ಅಯ್ಯಪ್ಪ ಭಕ್ತರ ಪರ ಹಿರಿಯ ವಕೀಲ ಸಿ.ಎಸ್. ವೈದ್ಯನಾಥನ್, ಶಬರಿಮಲೆ ಶಬರಿಮಲೆ ಅಯ್ಯಪ್ಪ ದೇವಸ್ಥಾನ ಭಕ್ತರು ಪ್ರತ್ಯೇಕ ಧಾರ್ಮಿಕ ಪಂಥವಾಗಿದ್ದು, ಪಂಥಾಧಾರಿತ ದೇವಸ್ಥಾನಗಳು ತಮ್ಮ ಪಂಥದವರಿಗಷ್ಟೇ ಪ್ರವೇಶ ನೀಡುವ ಹಕ್ಕು ಹೊಂದಿವೆ ಎಂದು ವಾದಿಸಿದರು. ಆದರೆ ನ್ಯಾ. ಬಿ.ವಿ. ನಾಗರತ್ನಾ ತೀವ್ರ ಆಕ್ಷೇಪ ವ್ಯಕ್ತಪಡಿಸಿ, 'ಪ್ರತಿ ಪಂಥವೂ ತಮ್ಮದೇ ದೇವಸ್ಥಾನಕ್ಕೆ ಮಾತ್ರ ಪ್ರವೇಶ ಎಂದು ಹೇಳಲಾರಂಭಿಸಿದರೆ ಅದು ಹಿಂದೂಧರ್ಮಕ್ಕೆ ಹಾನಿಕಾರಕ. ದೇವಾಲಯಗಳು ಮತ್ತು ಮಠಗಳು ಎಲ್ಲರಿಗೂ ಮುಕ್ತವಾಗಿರಬೇಕು' ಎಂದು ಹೇಳಿದರು. ನ್ಯಾ. ಅರವಿಂದ ಕುಮಾರ್ ಸಹ, ಇಂತಹ ನಿರ್ಬಂಧಗಳು ಸಮಾಜವನ್ನು ವಿಭಜಿಸುವ ಅಪಾಯವಿದೆ ಎಂದು ಅಭಿಪ್ರಾಯಪಟ್ಟರು.



ಶಬರಿಮಲೆ ಕುರಿತು ಭಕ್ತರ ವಾದ

ವೈದ್ಯನಾಥನ್, 'ಶಬರಿಮಲೆಯಲ್ಲಿ ಯಾರಿಗೂ ಧರ್ಮದ ಆಧಾರದ ಪ್ರವೇಶ ನಿಷೇಧ ಇಲ್ಲ. ಕ್ರೈಸ್ತರು, ಮುಸ್ಲಿಮರೂ ಅಯ್ಯಪ್ಪನಲ್ಲಿ ನಂಬಿಕೆ ಇಟ್ಟು 40 ದಿನಗಳ ವ್ರತ ಪಾಲಿಸಿದರೆ ಬರಬಹುದು' ಎಂದು ವಾದಿಸಿದರು. 2018ರ ಶಬರಿಮಲೆ ತೀರ್ಪಿನಲ್ಲಿ ವೈಯಕ್ತಿಕ ಹಕ್ಕುಗಳಿಗೆ ಸಮೂಹ ಧಾರ್ಮಿಕ ಹಕ್ಕುಗಳಿಗಿಂತ ಮೇಲುಗೈ ನೀಡಿದ್ದು ತಪ್ಪು ಎಂದೂ ಅಭಿಪ್ರಾಯಪಟ್ಟರು. ವಿಚಾರಣೆ ಮುಂದಿನ ವಾರವೂ ಮುಂದುವರಿಯಲಿದೆ.

CHANGE OF NAME

I, **MR. YATHISH KUMAR**, S/o. Bhoja Kottari, Aged about 56 years, R/at D.No. 17-13-1102, Somappa Kottari Compound, Melinamogaru, Attavara, Mangalore-575 001 do hereby solomnly affirm that my daughter's birth certificate the name is mentioned as **MEGHNA** instead of **MEGHNA YATHISH KOTTARY** and my name is wrongly entered as **YATHISH KUAMR** instead of **YATHISH KUMAR**. I Swear that both **MEGHNA alias MEGHNA YATHISH KOTTARY** pertain my daughter's Names only. Henceforth I state that for all purposes my daughter's name as **MEGHNA YATHISH KOTTARY** vide affidavit dated 09th April 2026 sworn and signed before the Notary Kushalappa K. Mangalore.

ಸಾರ್ವಜನಿಕ ಪ್ರಕಟಣೆ

ಈ ಕೆಳಗೆ ತಪಶೀಲಿನಲ್ಲಿ ವಿವರಿಸಿದ ಕ್ರ.ಸಂ. 1ರ ಜಮಿನು ಸರ್ವಾದಿಯು ಎಸ್ ಎಂ ಸುಧಾಕರ ಆಚಾರ್ಯ, ಗೋಪಾಲಕೃಷ್ಣ ಆಚಾರ್ಯ ಮತ್ತು ಪುಷ್ಪಲತಾ ಜೆ ಆಚಾರ್ಯ ರವರು ಸೇರಿ ಜಂಟಿಯಾಗಿ ದಿನಾಂಕ : 01-12-2015 ರಂದು ಬಂಟ್ವಾಳ ಸ.ರಿ. ಆಫೀಸಿನ 1ನೇ ಪುಸ್ತಕದ ದಸ್ತಾವೇಜು ನಂಬ್ರ BNT -1-03727/2015-16 ರಂತೆ ನೋಂದಣಿಯಾದ ಕೃಷಿಯೇತರ ಸ್ಥಳದ ಖಂಡಿತ ಕ್ರಯ ದಸ್ತಾವೇಜು ಪ್ರಕಾರ ಮರಿಯಮ್ಮ, ಪಿ ಮುಹಮ್ಮದ್ ಮತ್ತು ಪಿ ಅಬ್ದುಲ್ ಲತೀಫ್ ಇವರಿಂದ ಕ್ರಯಕ್ಕೆ ಖರೀದಿಸಿರುತ್ತಾರೆ. ಸದ್ರಿ ದಸ್ತಾವೇಜಿನ ಹಿಂದಿನ ದಾಖಲೆಯಾದ ದಿನಾಂಕ: 25-04-1996 ರಂದು ಬಂಟ್ವಾಳ ಸ.ರಿ. ಆಫೀಸಿನ 1ನೇ ಪುಸ್ತಕದ 601ನೇ ಸಂಚಿಕೆಯ 353-362ನೇ ಪುಟಗಳ ದಸ್ತಾವೇಜು ನಂಬ್ರ 116/1996-97 ರಂತೆ ನೋಂದಣಿಯಾದ ಸ್ಥಿರಾಸ್ತಿಯ ಖಂಡಿತ ಕ್ರಯ ದಸ್ತಾವೇಜು ಪ್ರಕಾರ ಮರಿಯಮ್ಮ, ಪಿ ಮುಹಮ್ಮದ್ ಮತ್ತು ಪಿ ಅಬ್ದುಲ್ ಲತೀಫ್ ರವರ ತಂದೆ ಪಿ. ಇಬ್ರಾಹಿಂ ಇವರಿಗೆ ಸೇಸಪ್ಪ ಪೂಜಾರಿಯವರು ಬರೆದುಕೊಟ್ಟಿರುತ್ತಾರೆ.

ಈ ಕೆಳಗೆ ತಪಶೀಲಿನಲ್ಲಿ ವಿವರಿಸಿದ ಕ್ರ.ಸಂ. 2ರ ಜಮಿನು ಸರ್ವಾದಿಯು ಎಸ್ ಎಂ ಸುಧಾಕರ ಆಚಾರ್ಯ, ಎಸ್ ಎಂ ಜನಾರ್ಧನ ಆಚಾರ್ಯ ಮತ್ತು ಗೋಪಾಲಕೃಷ್ಣ ಆಚಾರ್ಯ ರವರು ಸೇರಿ ಜಂಟಿಯಾಗಿ ದಿನಾಂಕ : 16-02-2015 ರಂದು ಬಂಟ್ವಾಳ ಸ.ರಿ. ಆಫೀಸಿನ 1ನೇ ಪುಸ್ತಕದ ದಸ್ತಾವೇಜು ನಂಬ್ರ BNT -1-05079/2014-15 ರಂತೆ ನೋಂದಣಿಯಾದ ಕೃಷಿಯೇತರ ಸ್ಥಳ ಮತ್ತು ಕಟ್ಟಡದ ಖಂಡಿತ ಕ್ರಯ ದಸ್ತಾವೇಜು ಪ್ರಕಾರ ಶ್ರೀಮತಿ ಸಿ ರುಕಿಯಾ ಇವರಿಂದ ಕ್ರಯಕ್ಕೆ ಖರೀದಿಸಿರುತ್ತಾರೆ. ಸದ್ರಿ ದಸ್ತಾವೇಜಿನ ಹಿಂದಿನ ದಾಖಲೆಯಾದ ದಿನಾಂಕ: 13-12-2000 ರಂದು ಬಂಟ್ವಾಳ ಸ.ರಿ. ಆಫೀಸಿನ 1ನೇ ಪುಸ್ತಕದ 782ನೇ ಸಂಚಿಕೆಯ 525-536ನೇ ಪುಟಗಳ ದಸ್ತಾವೇಜು ನಂಬ್ರ 782/2000-01 ರಂತೆ ನೋಂದಣಿಯಾದ ಸ್ಥಿರಾಸ್ತಿಯ ಖಂಡಿತ ಕ್ರಯ ದಸ್ತಾವೇಜು ಪ್ರಕಾರ ಸಿ. ರುಕಿಯಾ ಇವರಿಗೆ ಬಿ ಉಮರಬ್ಬ ರವರು ಬರೆದುಕೊಟ್ಟಿರುತ್ತಾರೆ.

ಈ ಕೆಳಗೆ ತಪಶೀಲಿನಲ್ಲಿ ವಿವರಿಸಿದ ಕ್ರ. ಸಂ. 3ರ ಜಮಿನು ಸರ್ವಾದಿಯನ್ನು ಎಸ್ ಎಂ ಸುಧಾಕರ ಆಚಾರ್ಯರವರುಸದ್ರಿಯವರಸಹೋದರರಾದ ಎಸ್ ಎಂ ಜನಾರ್ಧನ ಆಚಾರ್ಯ ಮತ್ತು ಗೋಪಾಲಕೃಷ್ಣ ರವರಿಗೆ ಜಂಟಿಯಾಗಿ ದಿನಾಂಕ : 03-11-2014 ರಂದು ಬಂಟ್ವಾಳ ಸ.ರಿ. ಆಫೀಸಿನ 1ನೇ ಪುಸ್ತಕದ ದಸ್ತಾವೇಜು ನಂಬ್ರ BNT -1-03332/2014-15 ರಂತೆ ನೋಂದಣಿಯಾದ ದಾನ ಪತ್ರ ದಸ್ತಾವೇಜು ಪ್ರಕಾರ ತಲಾ 33.3% ಅಂಶದ ಹಕ್ಕಿನಂತೆ ತಪಶೀಲು ಕ್ರ.ಸಂ.3 ರಲ್ಲಿ ವಿವರಿಸಿದ ಜಮೀನಿನಲ್ಲಿ ಒಟ್ಟು 66.6% ಹಕ್ಕನ್ನು ಬರೆದುಕೊಟ್ಟಿರುತ್ತಾರೆ. ಸದ್ರಿ ದಸ್ತಾವೇಜಿನ ಹಿಂದಿನ ದಾಖಲೆಯಾದ ದಿನಾಂಕ: 11-06-2009 ರಂದು ಬಂಟ್ವಾಳ ಸ.ರಿ. ಆಫೀಸಿನ 1ನೇ ಪುಸ್ತಕದ ದಸ್ತಾವೇಜು ನಂಬ್ರ ಆಫೆಖ -1-00841/2009-10 ರಂತೆ ನೋಂದಣಿಯಾದ ಕೃಷಿಯೇತರ ಸ್ಥಳದ ಖಂಡಿತ ಕ್ರಯ ದಸ್ತಾವೇಜು ಪ್ರಕಾರ ಎಸ್ ಎಂ ಸುಧಾಕರ ಆಚಾರ್ಯ ರವರಿಗೆ ಎಂ ಹೆಚ್ ಸಾವುಂಞ ರವರು ಬರೆದುಕೊಟ್ಟಿರುತ್ತಾರೆ.

ಸದ್ರಿ ಮೇಲೆ ವಿವರಿಸಿದ ಕ್ರ.ಸಂ. 1, 2 & 3 ರಲ್ಲಿ ವಿವರಿಸಿದ ಒಟ್ಟು 5 ಕ್ರಯ ಪತ್ರದ ಮೂಲ ಪ್ರತಿಗಳು ಮತ್ತು 1 ದಾನ ಪತ್ರದ ಮೂಲ ಪ್ರತಿಯು ದಿನಾಂಕ : 01-02-2026 ರಂದು ಪಾಣೆಮಂಗಳೂರು ಇಲ್ಲಿಂದ ಬಿ.ಸಿ ರೋಡು ಕಡೆಗೆ ಕಾರಿನಲ್ಲಿ ಹೋಗುತ್ತಿರುವಾಗ ಎಸ್ ಎಂ ಸುಧಾಕರ ಆಚಾರ್ಯ ರವರ ವಶದಿಂದ ಕಳೆದು ಹೋಗಿರುವುದಾಗಿ ತಿಳಿಸಿದ್ದು ಆ ಬಗ್ಗೆ ದಿನಾಂಕ: 06-03-2026 ರಂದು ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪಿರ್ಯಾದಿ ದಾಖಲಿಸಿರುತ್ತಾರೆ, ಸದ್ರಿ ಮೇಲೆ ವಿವರಿಸಿದ ಕ್ರ.ಸಂ. 1, 2 & 3 ರಲ್ಲಿ ವಿವರಿಸಿದ ಒಟ್ಟು 5 ಕ್ರಯ ಪತ್ರದ ಮೂಲ ಪ್ರತಿಗಳು ಮತ್ತು 1 ದಾನ ಪತ್ರದ ಮೂಲ ಪ್ರತಿ ಆಧಾರದಲ್ಲಿ ನಾವು ಯಾವುದೇ ಸಹಕಾರಿ ಸಂಘ, ರಾಷ್ಟ್ರೀಕೃತ ಬ್ಯಾಂಕ್, ಶೆಡ್ಯೂಲ್ ಬ್ಯಾಂಕ್, ಸೊಸೈಟಿ ಇಲ್ಲಿಂದ ಆರ್ಥಿಕ ಸಹಾಯವನ್ನು ಪಡೆಯುವ ಅಭಿಪ್ರಾಯದಲ್ಲಿದ್ದೇವೆ. ಸದ್ರಿ ಮೇಲೆ ವಿವರಿಸಿದ ಕ್ರ.ಸಂ. 1, 2 & 3 ರಲ್ಲಿ ವಿವರಿಸಿದ ಒಟ್ಟು 5 ಕ್ರಯ ಪತ್ರದ ಮೂಲ ಪ್ರತಿಗಳು ಮತ್ತು 1 ದಾನ ಪತ್ರದ ಮೂಲ ಪ್ರತಿಯನ್ನು ಯಾರಾದರೂ ಹೊಂದಿದವರಿದ್ದಲ್ಲಿ ಯಾ ಸದ್ರಿ ಕೃಷಿಯೇತರ ಜಮೀನುಗಳ ಮೇಲೆ ಋಣಭಾರ ಯಾ ಜವಾಬ್ದಾರಿಯನ್ನು ಹೊಂದಿದವರಿದ್ದಲ್ಲಿ ಹಾಗೂ ಸದ್ರಿ ಕೃಷಿಯೇತರ ಜಮೀನುಗಳನ್ನು ಯಾವುದೇ ಸಹಕಾರಿ ಸಂಘ, ರಾಷ್ಟ್ರೀಕೃತ ಬ್ಯಾಂಕ್, ಶೆಡ್ಯೂಲ್ ಬ್ಯಾಂಕ್, ಸೊಸೈಟಿಗೆ ಅಡವು ಹಾಕುವಲ್ಲಿ ಆಕ್ಷೇಪಣೆಗಳಿದ್ದಲ್ಲಿ ಆಧಾರಸಹಿತ ಆಕ್ಷೇಪಣದಾರರು ಲಿಖಿತ ರೂಪದಲ್ಲಿ ಈ ಕೆಳಗೆ ಸಹಿ ಮಾಡಿದವರ ವಿಳಾಸಕ್ಕೆ ಈ ಪ್ರಕಟಣೆಯ ಏಳು ದಿನಗಳ ಒಳಗಾಗಿ ತಿಳಿಸಬೇಕಾಗಿ ವಿನಂತಿ.

ತಪಶೀಲು ಕೃಷಿಯೇತರ ಜಮೀನುಗಳ ವಿವರ ಬಂಟ್ವಾಳ ಸ.ರಿ. ಕಛೇರಿಗೆ ಸೇರಿದ, ಬಂಟ್ವಾಳ ತಾಲೂಕು, ಬಂಟ್ವಾಳ ಪುರಸಭೆ ವ್ಯಾಪ್ತಿಗೆ ಒಳಪಟ್ಟ ಪಾಣೆಮಂಗಳೂರು ಗ್ರಾಮದ ಬಾಬ್ತು

ಕ್ರ.ಸಂ	ಸರ್ವೆ ನಂಬ್ರ (ಪಹಣಿ ಪ್ರಕಾರ)	ಕಿಸಂ	ವಿಸ್ತೀರ್ಣ (ಎ.ಸೆ.)
1	135/2ಬಿ1	ಕೃಷಿಯೇತರ	0.15.50
2	135/2ಬಿ1	ಕೃಷಿಯೇತರ	0.20
3	135/2ಬಿ1	ಕೃಷಿಯೇತರ	0.30

ಪುರಸಭಾ ಖಾತಾ ಸಂಖ್ಯೆ: 40-4-111ಸಿ, ನಿವೇಶನ ವಿಸ್ತೀರ್ಣ : 2650.78 ಚ.ಮೀ.

ಈ ತಪಶೀಲು ಕೃಷಿಯೇತರ ಜಮೀನುಗಳು, ಇದಕ್ಕೊಳ್ಪಿದ ಮಾಮೂಲು ದಾರಿ, ರಸ್ತೆ, ನೀರು ಹಾಗೂ ಇತರ ಈಸ್‌ಮೆಂಟ್ ಹಕ್ಕು ಕೂಡಿರುವ ಸರ್ವಾದಿ.

ಸಹಿ /- ಎಸ್. ಎಮ್. ಸುಧಾಕರ ಆಚಾರ್ಯ. ಬಿನ್. ದಿ. ಸೋಮಯ ಆಚಾರ್ಯ. ಪ್ರಾಯ ಸುಮಾರು 54 ವರ್ಷ, ದಾಸರಗುಡ್ಡೆ ಮನೆ, ಸಜೀಪಮುನ್ನೂರು ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು. ಮೊ. 9632792726.

ಸ್ಥಳ: ಬಂಟ್ವಾಳ ದಿನಾಂಕ: 07-04-2026

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2026–27/ಐ.ಎಫ್.ಟಿ. ನಂ.05/120 ದಿನಾಂಕ: 08–04–2026

ಟೆಂಡರ್ ಪ್ರಕಟಣೆ

(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ೧ ಪ್ರಕಾರ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: ವಿತಾವಿಯ ಯುಬಿಡಿಟಿ, ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿಯ ಹೊಸ ತರಗತಿಯ ಸಂಕೀರ್ಣದಲ್ಲಿ ಮೊದಲನೇ ಮಹಡಿ ಸೆಮಿನಾರ್ ಹಾಲ್ ಅಲಂಕಾರ ಮಾಡುವ ಕಾಮಗಾರಿ ಮೊತ್ತ ರೂ. 1,66,04,441/– (ತೆರಿಗೆ ರಹಿತ). ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: 07–04–2026 ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/70/ಅಡ್ವರ್ಟೈಸ್/2026–27

ಕರ್ನಾಟಕ ಸರ್ಕಾರ

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಕಛೇರಿ, ರಜತಾದ್ರಿ, ಮಣಿಪಾಲ, ಉಡುಪಿ

"ಸಿ" ಬ್ಲಾಕ್, ಎರಡನೆ ಮಹಡಿ, ರೂಂ. ನಂ. 302

Email ID: dsodes.udupi@gmail.com ದೂರವಾಣಿ: 0820–2574932

ಪ್ರಕಟಣೆ ಸಂಖ್ಯೆ:ಜಿಸಉ:ಆಡಳಿತ:ವಾಬಾಸೇ:2026–27 ದಿನಾಂಕ: 09.04.2026

ಅಲ್ಪಾವಧಿ ಮರು ದರಪಟ್ಟಿ ಆಹ್ವಾನ ಪ್ರಕಟಣೆ

ಉಡುಪಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಕಚೇರಿಗೆ 2026–27ನೇ ಸಾಲಿಗೆ ಅಂದಾಜು 1 ವರ್ಷದ ಅವಧಿಗೆ ಹೊರಗುತ್ತಿಗೆ ಮುಖಾಂತರ ಬಾಡಿಗೆ ಆಧಾರದಲ್ಲಿ ಮಾಸಿಕ 2,500 ಕಿ.ಮೀ ದೂರ ಕ್ರಮಿಸುವ ಬಗ್ಗೆ ಶಿಫ್ಟ್ ಡಿಸೈರ್ ಅಥವಾ ಸಮಾನ ಮಾದರಿಯ ಹವಾನಿಯಂತ್ರಿತ ಕಾರನ್ನು ಚಾಲಕ ಸಹಿತ ನೀಡುವಂತೆ ಆಸಕ್ತ ಟ್ರಾವೆಲಿಂಗ್‌ಏಜೆನ್ಸಿ / ವಾಹನ ಮಾಲೀಕರಿಂದ ದರಪಟ್ಟಿ ಆಹ್ವಾನಿಸಲಾಗಿದೆ. ಶರ್ತಗಳ ಸಹಿತ ದರಪಟ್ಟಿ ಸಲ್ಲಿಸಬೇಕಾದ ನಮೂನೆಗಳು ಮೇಲೆ ನಮೂದಿಸಿದ ಕಚೇರಿಯಲ್ಲಿ ಲಭ್ಯವಿದ್ದು, ದಿನಾಂಕ 10.04.2026 ರಿಂದ 16.04.2026 ರವರೆಗೆ ಕಚೇರಿ ವೇಳೆಯಲ್ಲಿ (ಸಾರ್ವಜನಿಕ ರಜೆಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ. ಆಸಕ್ತರು ನಮೂನೆಗಳನ್ನು ಪಡೆದು ದಿನಾಂಕ: 16.04.2026 ರ ಸಾಯಂಕಾಲ 5.00 ಗಂಟೆಯೊಳಗಾಗಿ ಭರ್ತಿಗೊಳಿಸಿದ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ಫಾರಂಗಳನ್ನು 2 ಪ್ರತ್ಯೇಕ ಲಕೋಟೆಗಳಲ್ಲಿ ಶೀಲು ಮಾಡಿ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸ್ವೀಕರಿಸಿದ ದರಪಟ್ಟಿಗಳನ್ನು ದಿನಾಂಕ 17.04.2026 ರಂದು ಬೆಳಿಗ್ಗೆ 11–30 ಕ್ಕೆ ಕಚೇರಿಯಲ್ಲಿ ಹಾಜರಿರುವ ಬಿಡ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಇ.ಎಮ್.ಡಿ ಮೊತ್ತ ರೂ. 9,600/– ಆಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 0820–2574932 ರಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ,
ಉಡುಪಿ ಜಿಲ್ಲೆ, ಉಡುಪಿ

ವಾಸಾಇ/ಸನಿಉ/ಕೆಎಸ್‌ಎಂಸಿಎ/30/26–27 ದಿ: 09.04.2026

(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2025–26 ದಿನಾಂಕ:08.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ರವರು, ಅರಕಲಗೂಡು ಉಪ ವಿಭಾಗ ವ್ಯಾಪ್ತಿಯ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮೂಲಸೌಕಾರ್ಯ ಅಭೀವೃದ್ಧಿ ಯೋಜನೆಯಡಿINDENT NO: (1)RDPR/2025-26/RD/WORK_INDENT25407 (2) RDPR/2025-26/RD/ WORK_ INDENT25410 (3)RDPR/2025-26/RD/WORK_INDENT25405 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ಅಡಿ KW-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 09.04.2026 ರಿಂದ ದಿ:24.04.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:24.04.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:23.04.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಪ್ರೀ–ಬಿಡ್ ಮೀಟಿಂಗನ್ನು ದಿನಾಂಕ:16.04.2026 ಬೆಳಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು,ಪಂಚಾಯತ್ ರಾಜ್ ಇಂಜಿನಿಯಿರಿಂಗ್ ವಿಭಾಗ,ಹಾಸನ ಕಛೇರಿಯಲ್ಲಿ ನಿಗಧಿ ಪಡಿಸಲಾಗಿದೆ. ದಿ:27.04.2026 ರಂದು ಬೆಳಗೆ 11.00 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/30/ಕೆಎಸ್‌ಎಂಸಿಎ/2026–27

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯಡಿಯೂರು ವಿಭಾಗ, 4ನೇ ಕ್ರಾಸ್, ಜಯನಗರ 7ನೇ ಬ್ಲಾಕ್, ಬೆಂಗಳೂರು–560070

ಸಂಖ್ಯೆ: ಕಾಪಾಅ(ಯಡಿ)/ಟೆಂಡರ್/01/2026–27 ದಿನಾಂಕ: 07–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಟೆಂಡರ್ ದಾಖಲೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ, ಬೆಂ.ಪ.ನ.ಪಾಲಿಕೆ ಇವರು, ಆಯುಕ್ತರು ಬೆಂ.ಪ.ನ.ಪಾಲಿಕೆ ಬೆಂಗಳೂರು ಇವರ ಪರವಾಗಿ, ಬೆಂ.ಪ.ನ.ಪಾಲಿಕೆ ತತ್ಸಮಾನವಾಗಿ ಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಟೆಂಡರುದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳು ಕೆಡಬ್ಲ್ಯೂ–3 & 4 ರಂತೆ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು
1.	ಪದ್ಮನಾಭನಗರ ಕ್ಷೇತ್ರ, ಕಾಮಾಕ್ಯ **ವಾರ್ಡ್ ಸಂಖ್ಯೆ–109**ರಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.394.16 ಲಕ್ಷಗಳು, ಇಎಂಡಿ ಮೊತ್ತ:₹. 5,91,250/–
2.	ಪದ್ಮನಾಭನಗರ ಕ್ಷೇತ್ರ, **ವಾರ್ಡ್ ಸಂಖ್ಯೆ–110**, ಚಿಕ್ಕಲ್ಲಸಂದ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.394.15 ಲಕ್ಷಗಳು, ಇಎಂಡಿ ಮೊತ್ತ:₹. 5,91,250/–
3.	ಪದ್ಮನಾಭನಗರ ಕ್ಷೇತ್ರ, **ವಾರ್ಡ್ ಸಂಖ್ಯೆ–111**, ಇಟ್ಟಮಡುವಿನಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹. 394.32 ಲಕ್ಷಗಳು, ಇಎಂಡಿ ಮೊತ್ತ:₹. 5,91,500/–
4.	ಪದ್ಮನಾಭನಗರ ಕ್ಷೇತ್ರ, **ವಾರ್ಡ್ ಸಂಖ್ಯೆ–112**, ಹೊಸಕೆರೆಹಳ್ಳಿಯಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ ₹. 394.16 ಲಕ್ಷಗಳು, ಇಎಂಡಿ ಮೊತ್ತ:₹. 5,91,250/–

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **10–04–2026**ರ ಸಂಜೆ **4:30** ಗಂಟೆಯ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **27–04–2026**ರ ಸಂಜೆ **4:00** ಗಂಟೆಯವರೆಗೆ (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ಮಲ್ಲೇಶ್ವರಂ ವಲಯ, ಬೆಂ.ಪ.ನ.ಪಾಲಿಕೆ, ಪಾಲಿಕೆ ಸೌಧ ಕಟ್ಟಡ, 1ನೇ ಮಹಡಿ, 14ನೇ ಅಡ್ಡರಸ್ತೆ, ಚಂದ್ರಾ ಲೇಔಟ್ ಬೆಂಗಳೂರು – 560072 ಇಲ್ಲಿ ದಿನಾಂಕ **18–04–2026**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ದಾಖಲೆಗಳನ್ನು ದಿನಾಂಕ: **28–04–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು (5) ಆರ್ಥಿಕ ಬಿಡ್ ತೆರೆಯುವಿಕೆ ದಿನಾಂಕವನ್ನು ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಯಡಿಯೂರು ವಿಭಾಗ, ಬೆಂ.ಪ.ನ.ಪಾಲಿಕೆ

ಪುತ್ತೂರು ಮಾರುಕಟ್ಟೆ ಧಾರಣೆ

09-04-2026

ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	460 - 500
ಚೋಲ್ ಅಡಿಕೆ	530 - 555
ಡಬಲ್ ಚೋಲ್	530 - 555
ಹೊಸ ಪಟೋರ	350 - 400
ಹಳೆ ಪಟೋರ	380 - 410
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	226.00
ಆರ್‌ಎಸ್‌ಎಸ್ 2	196.00
ಸ್ಕ್ರಾಪ್ 1	137.50
ಸ್ಕ್ರಾಪ್ 2	125.00

IN THE COURT OF SENIOR CIVIL JUDGE AND JMFC BANTWAL D.K.

CRL MC NO: 285/2025

Between,
Rajeevi & Others ...*Petitioners*

AND

The Registrar of Births & Deaths Town Manicipality, Bantwal, D.K ...*Respondent*

NOTICE

Please take notice that in the above case petitioner has filed the petition before this court seeking direction to the respondent to register the death of the petitioner No. 1 to 3 are children's, Petitioner No. 4 is daughter in law, petitioner No. 5 to 9 are Grand children's of Late. Chennamma the case is posted to **13th day of May 2026** before this court at **11.00 AM.** Any person who has got of objection may appear either in person or through advocate and file objection if any, otherwise the matter will be decided exparte.

Given Under my hand and seal of the Court on this 25th day of March-2026

BY ORDER OF COURT
Sd/- Chief Ministerial Officer
Senior Civil judge & Jmfc
Bantwal Taluk D.K
Sd/- (PPK)
Advocate for Petitioners

BANTWAL
25.03.2026

ಕರ್ನಾಟಕ ಸರಕಾರ

ಆಯುಷ್ ಇಲಾಖೆ ದಕ್ಷಿಣ ಕನ್ನಡ

50 ಹಾಸಿಗೆಗಳ ಆಯುಷ್ ಸಂಯುಕ್ತ ಆಸ್ಪತ್ರೆ ವೆನ್ಲಾಕ್ ಆಸ್ಪತ್ರೆ ಆವರಣ, ಮಂಗಳೂರು-575001

ದೂರವಾಣಿ: 0824-2446272 E-mail- gahwenlockadm.dkn@gmail.com

ಸಂಖ್ಯೆ:ಆಸಂಆಮಂ/ನ್ಯಾಮ್.ಹೊ.ಗು/07/2026-27 ದಿನಾಂಕ: 09.04.2026

ಇ-ಟೆಂಡರ್ ಪ್ರಕಟಣೆ

50 ಹಾಸಿಗೆಗಳ ಆಯುಷ್ ಸಂಯುಕ್ತ ಆಸ್ಪತ್ರೆ, ಮಂಗಳೂರು ಸಂಸ್ಥೆಗೆ 2026-27 ನೇ ಸಾಲಿಗೆ ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆಯಡಿ ಮಂಜೂರಾದ 27 ವೈದ್ಯಕೀಯ ಮತ್ತು ಅರೆವೈದ್ಯಕೀಯ ಹುದ್ದೆಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ: 24.04.2026 ರ ಒಳಗಾಗಿ ಟೆಂಡರ್ ನಮೂನೆ, ಇಎಂಡಿ, ಟೆಂಡರ್ ವಿವರಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ Web site https://kppp.karnataka.gov.in ನಲ್ಲಿ ನೋಡಬಹುದಾಗಿದೆ.

ಸಹಿ/-
ವೈದ್ಯಕೀಯ ಅಧೀಕ್ಷಕರು (ಪ್ರಭಾರ)
50 ಹಾಸಿಗೆಗಳ ಆಯುಷ್ ಸಂಯುಕ್ತ ಆಸ್ಪತ್ರೆ
ವೆನ್ ಲಾಕ್ ಆವರಣ ಮಂಗಳೂರು

DIPR/DK/MPL/57/26-27

ಕರ್ನಾಟಕ ಸರ್ಕಾರ (ಕೃಷಿ ಇಲಾಖೆ)

ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕುಂದಾಪುರ

E-mail: kundapurada@gmail.com

ಸಂ: ಸಕೃನಿ/ಕುಂ/ಸಿಬ್ಬಂದಿ–1/ಹೊಗುಸಿಸೇ/ಟೆಂಡರ್/2026–27 ದಿನಾಂಕ: 08.04.2026

ಟೆಂಡರ್ ಪ್ರಕಟಣೆ

2026–27 ಮತ್ತು 2027–28ನೇ ಸಾಲಿಗೆ ಅನ್ವಯಿಸುವಂತೆ ಕುಂದಾಪುರ ತಾಲೂಕು ಕೃಷಿ ಇಲಾಖೆ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆಯಲು ಅರ್ಹ ಹೊರಗುತ್ತಿಗೆ ಸಂಸ್ಥೆಗಳ ಆಯ್ಕೆಗಾಗಿ e-Procurement ಮೂಲಕ ಎರಡು ವರ್ಷಗಳ ಟೆಂಡರ್‌ನ್ನು ಆಹ್ವಾನಿಸಿದ್ದು, ಸದರಿ ಸೇವೆಯನ್ನು ಒದಗಿಸಲು ಆಸಕ್ತ ಗುತ್ತಿಗೆದಾರರು ಕರ್ನಾಟಕ ಸರ್ಕಾರದ ಇ–ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಡಾಕ್ಯುಮೆಂಟ್‌ನ್ನು ಇ–ಪೋರ್ಟಲ್‌ನಿಂದ ಪಡೆಯಬಹುದು. ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಸಕೃನಿ/ಉ/ಸಿಬ್ಬಂದಿ/ಹೊಗುಸಿಸೇ/ಟೆಂಡರ್/2026–27 ದಿನಾಂಕ 08.04.2026.

(1) ಇ–ಟೆಂಡರ್‌ನಲ್ಲಿ ಭಾಗವಹಿಸಲು ಪ್ರಾರಂಭವಾಗುವ ದಿನಾಂಕ: **08.04.2026.** ಬೆಳಿಗ್ಗೆ **10:00** ಕ್ಕೆ (2) ಇ–ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ & ಸಮಯ: **07.05.2026** ಸಂಜೆ **04:00** ಕ್ಕೆ (3) ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **08.05.2026** ಸಂಜೆ **04:00** ಕ್ಕೆ. (4) ಕುಂದಾಪುರ ಸಹಾಯಕ ಕೃಷಿ ನಿರ್ದೇಶಕರು ಕಛೇರಿ ಪ್ರಕಟಣೆ ತಿಳಿಸಿದೆ.

ಸಹಿ/– ಸಹಾಯಕ ಕೃಷಿ ನಿರ್ದೇಶಕರು
ಕುಂದಾಪುರ

ವಾಸಾಇ/ಸನಿಉ/ಕೆಎಸ್‌ಎಂಸಿಎ/32/26–27 ದಿ: 09.04.2026

ಕರ್ನಾಟಕ ಸರಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರವರ ಕಛೇರಿ, ನಗರ ಕೇಂದ್ರ ಗ್ರಂಥಾಲಯ

ಬಾವುಟಗುಡ್ಡೆ, ಮಂಗಳೂರು–575 003.

ದೂರವಾಣಿ ಸಂಖ್ಯೆ: 2425873 E-mail : cclmangalore@gmail.com

ಸಂ: ನಕೇಗ್ರಂ/ಲೆ.ಪ.ವಿ/ಸಂ.ಗ್ರಂ.ಚಾ.ದ/3/29/2026–27 ದಿನಾಂಕ: 06.04.2026

ಟೆಂಡರ್ ಪ್ರಕಟಣೆ

ನಗರ ಕೇಂದ್ರ ಗ್ರಂಥಾಲಯ, ಮಂಗಳೂರು ಇಲ್ಲಿನ ಸಂಚಾರಿ ಗ್ರಂಥಾಲಯ ವಾಹನಕ್ಕೆ ದಿನಾಂಕ : 01.06.2026 ರಿಂದ ದಿನಾಂಕ: 31.05.2027ರ ವರೆಗಿನ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ 1 (ಒಂದು) ವಾಹನ ಚಾಲಕರ ಹುದ್ದೆಯ ಭರ್ತಿಗಾಗಿ ಆಸಕ್ತ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಟೆಂಡರ್ ಅರ್ಜಿಗಳನ್ನು ಕಛೇರಿ ವೇಳೆಯಲ್ಲಿ ರೂ. 100.00ನ್ನು ಪಾವತಿಸಿ ಪಡೆದುಕೊಳ್ಳಬಹುದಾಗಿದೆ. ಭರ್ತಿ ಮಾಡಿದ ಸೀಲ್ಡ್ ಟೆಂಡರ್‌ಗಳನ್ನು ದಿನಾಂಕ: 05.05.2026ರ ಪೂರ್ವಾಹ್ನ 11.00 ಘಂಟೆ ಒಳಗಾಗಿ ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ಮಂಗಳೂರು ಇವರ ಹೆಸರಿನಲ್ಲಿ ಡಿ.ಡಿ. ಮುಖಾಂತರ ರೂ. 6000.00 ಇ.ಎಮ್.ಡಿ. ಪಾವತಿಸಿ ಟೆಂಡರನ್ನು ಈ ಕಛೇರಿಗೆ ಸಲ್ಲಿಸುವುದು ಹಾಗೂ ಅದೇ ದಿನ ಅಪರಾಹ್ನ ಘಂಟೆ 11.30ಕ್ಕೆ ಟೆಂಡರನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಪಡೆದುಕೊಳ್ಳಬಹುದಾಗಿದೆ.

ಸಹಿ/- (ರಾಘವೇಂದ್ರ ಕೆ.ವಿ.)
ಉಪನಿರ್ದೇಶಕರು
ನಗರ ಕೇಂದ್ರ ಗ್ರಂಥಾಲಯ, ಮಂಗಳೂರು

DIPR/DK/MPL/54/26-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಮ್ಯಾಮಮಮೂಸೌಅಯೋ/ತಾಸ–1/2026–27/14 ದಿನಾಂಕ: 08.04.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW - 4

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ಹೆಸರು ಇಂಟೆಂಡ್ ಸಂಖ್ಯೆ: (1) ಶಹಾಪೂರ ತಾಲೂಕಿನ ಕಂದಳ್ಳಿ ದಿಂದ ಭೀಮಾನದಿ ಬ್ರಿಡ್ಜ್ ವರೆಗೆ 2.00 ಕಿ.ಮೀ. RDPR/2025-26/RD/WORK_INDENT24848)2) ಸುರಪೂರ ತಾಲ್ಲೂಕಿನ ಬೇವಿನಾಳ ಮುಖ್ಯರಸ್ತೆ ಯಿಂದ ಮುಷ್ಟಳ್ಳಿ ವರೆಗೆ ರಸ್ತೆ ಸುಧಾರಣೆ (ವ್ಹಾಯಾ ರಾಮನಗರ ಕ್ಯಾಂಪ್) RDPR/2025-26/RD/WORK_INDENT24863 (3) ಹುಣಸಗಿ ತಾಲ್ಲೂಕಿನ ಕೋಳಿಹಾಳ ದಿಂದ ಸಲಗುಂದ ರಸ್ತೆ ನಿರ್ಮಾಣ RDPR/2025-26/RD/WORK_INDENT24864 **2) ಲೆಕ್ಕ ಶೀರ್ಷಿಕೆ:** 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ** :ಕನಿಷ್ಠ 120.00 ಮತ್ತು ಗರಿಷ್ಠ ರೂ. 150.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:**10.04.2026 ರಿಂದ 21.04.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 21.04.2026 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 23.04.2026 ಬೆಳ್ಳಿಗೆ 11:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್:** 29.04.2026 ಬೆಳ್ಳಿಗೆ 11:00 ನಂತರ **10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸೂಚನೆ: ಟೆಂಡರರಿಗೆಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್
ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/15/ಕೆ.ಎಸ್.ಎಂ.ಸಿ&ಎ/2026–27

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichura@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ/2025–26 ದಿನಾಂಕ:07–04–2026.

ಅಲ್ಪಾವಧಿ / ಟೆಂಡರ್ ಪ್ರಕಟಣೆ (ಕೆ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	ಮಹಾನಗರ ಪಾಲಿಕೆ ಅನುದಾನದಲ್ಲಿ	Providing and Erection of Barricading Bamboo Thatti and Ballies For Water Kiosk at Various Places In Raichur City **Estimate Cost Rs.13,80,000/- (07 Days)**	DMA/2026-27/ OW/ WORK_ INDENT57224
2		Repair and Renovation of Public Toilets and Community Toilets Within The Limits of Raichur City Corporation (PHASE-1) **Estimate Cost Rs.2,40,00,000/- (15 Days)**	DMA/2025-26/ BD/ WORK_ INDENT55726/ CALL-2
3		Providing and Fixing Membrane for Water Proofing for Corporation (OLD DC) Office Building In Raichur City. **Estimate Cost Rs. 20,50,000/- (07 Days)**	DMA/2025-26/ OW/ WORK_ INDENT55744 /CALL-2
4		Providing and Fixing of Cistern and Fixing of Gate to the Safai Karmachari Gravayard at Ward No. 12 In Raichur City **Estimate Cost Rs. 1,80,000/-**	DMA/2025-26/ OW/WORK_ INDENT56756/ CALL-2

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/13KSMCA/15/2026-27

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ–577 204

Ph: 08182–250785 Email: cfworkingplansmg@gmail.com

ಸಂಖ್ಯೆ: ಕಾಯೋಮೋಶಿ /ಎ2/ಹೊರಗುತ್ತಿಗೆ–ಟೆಂಡರ್/ಸಿಆರ್–01/2026–27
ದಿನಾಂಕ:04.04.2026

ಇ–ಟೆಂಡರ್ ಪ್ರಕಟಣೆ

ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗರವರ ಕಛೇರಿಗೆ ಅಗತ್ಯವಿರುವ ವಿವಿಧ ವೃಂದದ ಮಾನವ ಸೇವೆಯನ್ನು ಹೊರಗುತ್ತಿಗೆ ಮೂಲಕ ಪೂರೈಕೆ ಮಾಡುವ ಬಗ್ಗೆ, 2026–27 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಈ ಕಛೇರಿಯಲ್ಲಿ ಅಥವಾ ಯಾವುದೇ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿತರಾದಂತಹ ಹಾಗೂ ನೊಂದಾಯಿತ ಸೇವಾ ಸಂಸ್ಥೆ (Outsourcing) ಮೂಲಕ ಪಡೆಯಲು ಉದ್ದೇಶಿಸಿದ್ದು, ಟೆಂಡರ್‌ನ ಅಂದಾಜು ಮೊತ್ತ ರೂ.51.56 ಲಕ್ಷ ಆಗಿದ್ದು, ಅರ್ಹ ಆಸಕ್ತರು ಈ ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ದಿನಾಂಕ:21.04.2026 ರ ಸಂಜೆ 4.30 ಗಂಟೆಯವರೆಗೆ ಟೆಂಡರ್ ನಮೂದಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182–250785 ನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–(ವೀರೇಶಗೌಡ ಪೋಲಿಸ್ ಪಾಟೀಲ್)
ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/51/04/56

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ ಟೆಂಡರ್ ಪ್ರಕಟಣೆ ಸಂಖ್ಯೆ : 01/2026–27 ದಿನಾಂಕ : 04.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 07.04.2026 ರಿಂದ 17.04.2026 ರವರೆಗೆ ಸಂಜೆ 17.30 ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : 13.04.2026 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18.04.2026 ರಂದು 17.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **After obtaining approval of technical bid from competent authority** 5) ಕಾಲಾವಧಿ : 08 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 97.40 ಲಕ್ಷಗಳು. 7) ಇಎಂಡಿ ಮೊತ್ತ : ರೂ. 1,95,000/–.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/–
ಕಾರ್ಯಪಾಲಕ ಇಂಜನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.44–04/ ಝೇಂಕಾರ್/2026–27

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನಿಯರಿಂಗ್ ಘಟಕ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಆ&ಕು.ಕ.ಇ.ಇಂ ವಿಭಾಗ, ಫೋರ್ಟ್ ರೋಡ್, ಧಾರವಾಡ–580008

ದೂರವಾಣಿ ಸಂ : 0836 – 2955800

(E-Mail : eehfwedvndwd1@gmail.com)

ಸಂಖ್ಯೆ: ಕಾನಿಅ/ಆಕುಕಇಇಂ/ವಿಭಾಗ–ಧಾ/ಪಿ.ಎಮ್. ಅಭಿಮ್/17/26–27
ದಿನಾಂಕ : 08.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (Through KPP Portal only)

ಕಾರ್ಯನಿರ್ವಾಹಕ ಅಭಿಯಂತರರು, ಆ&ಕು.ಕ.ಇ.ಇಂ., ವಿಭಾಗ, ಧಾರವಾಡ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆ ವರ್ಗದ ಗುತ್ತಿಗೆದಾರರಿಂದ ಕಾಮಗಾರಿವಾರು ಹಾಗೂ ಜಿಲ್ಲಾವಾರು ಸಂಬಂಧಿಸಿದ ಈ ವಿಭಾಗದಡಿಯಲ್ಲಿಯ 1} ಪಿ.ಎಮ್. ಅಭಿಮ್: ಬೆಳಗಾವಿ ಜಿಲ್ಲೆಯ: 3 ಸಂಖ್ಯೆ, 2} ಡಿ.ಪಿ.ಆರ್. ಹಾವೇರಿ ಜಿಲ್ಲೆ: 2 ಸಂಖ್ಯೆ, ಬೆಳಗಾವಿ ಜಿಲ್ಲೆ: 01 ಸಂಖ್ಯೆ ಕಾಮಗಾರಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ ಕಾಮಗಾರಿವಾರು Double cover system, ಐಟಂವಾರು ದರದ ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ದಿನಾಂಕ : **09.04.2026** ರಿಂದ **17.04.2026** ರ ಸಾಯಂಕಾಲ 4.00 ಘಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ, ಹಾಗೂ ಸದರಿ ಕಾಮಗಾರಿಯ ಬಿಡ್‌ಗಳನ್ನು ದಿ : **18.04.2026** ರಂದು ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಒಂದು ವೇಳೆ ಮಾಹಿತಿ ಹಾಗೂ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ನಿಖರವಾದ ಮಾಹಿತಿ ಹಾಗೂ ದಿನಾಂಕಗಳನ್ನು ಕೆ.ಪಿ.ಪಿ.ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಬಿಡ್‌ಗಳನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಇನ್ನೂ ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ನಲ್ಲಿ ವೀಕ್ಷಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಆ&ಕು.ಕ.ಇ. ಇಂಜನೀಯರಿಂಗ್ ವಿಭಾಗ, ಧಾರವಾಡ.

ವಾಸಾಸಂಇ/ಧಾ/ಕೆಎಸ್‌ಎಂಸಿಎ/40/2026–27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2026–27/30
ದಿನಾಂಕ 06–04–2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ, 2025–26 ನೇ ಸಾಲಿನ ಸಿ.ಐ.ಎಮ್.ಡಿ.ಪಿ.2025–26 ನೇ ಸಾಲಿನ 5054 ಎಸ್.ಸಿ.ಪಿ/ಟಿ.ಎಸ್.ಪಿ ಒಟ್ಟು 11 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–

1.RDPR/2025-26/BD/WORK_INDENT25783
2.RDPR/2025-26/BD/WORK_INDENT25817
3.RDPR/2025-26/BD/WORK_INDENT25784
4.RDPR/2025-26/RD/WORK_INDENT25813
5.RDPR/2025-26/RD/WORK_INDENT25818
6.RDPR/2025-26/BD/WORK_INDENT24269/CALL-4
7.RDPR/2025-26/BD/WORK_INDENT24141/CALL-4
8.RDPR/2025-26/BD/WORK_INDENT24442/CALL-4
9.RDPR/2025-26/RD/WORK_INDENT25657/CALL-2
10.RDPR/2025-26/RD/WORK_INDENT24749/CALL-3
11.RDPR/2025-26/BD/WORK_INDENT24441/CALL-4

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ ದಿನಾಂಕ 06–04–2026 ರಿಂದ ದಿನಾಂಕ 13–04–2026 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 13–04–2026 ರ 16.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 15–04–2026 ರಂದು ಬೆಳ್ಗಗೆ 10.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/41

ಪುತ್ತೂರಿನ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯ

ಇಂದು ಜಾತ್ರೆಗೆ ಧ್ವಜಾರೋಹಣ

ಪುತ್ತೂರು: ಸೀಮೆಯ ದೇವಾಲಯವಾದ ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ವಾರ್ಷಿಕ ಜಾತ್ರೋತ್ಸವದ ಅಂಗವಾಗಿ ಏ.10ರಂದು ಧ್ವಜಾರೋಹಣ ನಡೆಯಲಿದೆ.



ಏ.17ರಂದು ಶ್ರೀ ದೇವರ ಬ್ರಹ್ಮರಥೋತ್ಸವ, ಪುತ್ತೂರು ಬೆಡಿ ನಡೆಯಲಿದೆ. ಸೀಮಾತೀತ ಭಕ್ತರನ್ನು ಹೊಂದಿರುವ ಮಹಾಲಿಂಗೇಶ್ವರ ದೇವಾಲಯದ ಜಾತ್ರೆ ಎಂದರೆ ಬಹು ದಿನಗಳ ಮತ್ತು ದೊಡ್ಡ ಉತ್ಸವ. ಪೂರ್ವ ಶಿಷ್ಟ ಸಂಪ್ರದಾಯದಂತೆ ನಡೆಯುವ ವಿಶೇಷಗಳ ಜಾತ್ರೆಗೆ ಊರ, ಪರವೂರ ಭಕ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

ಏ.1ರಂದು ಗೊನೆ ಮುಹೂರ್ತ ನಡೆದಿದೆ. ಏ.10ರಂದು ಬೆಳಗ್ಗೆ ಗಂಟೆ 9.30 ಅನಂತರ ವೃಷಭ ಲಗ್ನದಲ್ಲಿ ಧ್ವಜಾರೋಹಣ, ಕುರಿಯ ಏಳ್ನಾಡುಗುತ್ತುವರಿಂದ ಅನ್ನ ಸಂತರ್ಪಣೆ, ಸಂಜೆ ಅಂಕುರಾರ್ಪಣ, ಬಲಿ ಹೊರಟು ಉತ್ಸವ, ಬೊಳುವಾರು, ಶ್ರೀರಾಮ ಪೇಟೆ ಕಾರ್ಜಾಲು, ರಕ್ತೇಶ್ವರಿ ದೇವಸ್ಥಾನ, ಕಲ್ಲೆಗ, ಕರ್ಮಲ ಸವಾರಿ, ಏ.11ರಂದು ಸಂಜೆ ಉತ್ಸವ, ನೆಲ್ಲಿಕಟ್ಟೆ, ಸಾಲ್ಮರ ಸೂತ್ರಬೆಟ್ಟು ಸವಾರಿ, ಏ.12ರಂದು ಸಂಜೆ ಉತ್ಸವ, ಶಿವಪೇಟೆ, ತೆಂಕಿಲ, ಕೊಟ್ಟಿಬೆಟ್ಟು, ಏಳ್ನಾಡುಗುತ್ತು, ಬೈಪಾಸ್ ಹೆದ್ದಾರಿ ರಾಧಾಕೃಷ್ಣ ಮಂದಿರ ಸವಾರಿ, ಏ.13ರಂದು ಸಂಜೆ ಉತ್ಸವ, ಕೋರ್ಟು ರಸ್ತೆ, ಸೈನಿಕ ಭವನ ರಸ್ತೆ, ಬಪ್ಪಳಿಗೆ, ಉರ್ಲಾಂಡಿ, ಬೋಳುವಾರು ಬೈಲ್ ಸವಾರಿ, ಏ.14ರಂದು ಮೇಷ ಸಂಕ್ರಮಣ, ರಾತ್ರಿ, ಕೊಂಬೆಟ್ಟು, ಬೋಳುವಾರು, ಹಾರಾಡಿ ತಾಳೆಪ್ಪಾಡಿ, ದ್ರಾವಿಡ ಬ್ರಾಹ್ಮಣ ಹಾಸ್ಟೆಲ್, ಸಕ್ಕರೆ ಕಟ್ಟೆ ಸವಾರಿ, ಏ.15ರಂದು ಸೌರಮಾನ ಯುಗಾದಿ (ವಿಷು), ಬೆಳಗ್ಗೆ ಉತ್ಸವ, ವಸಂತಕಟ್ಟೆ ಪೂಜೆ, ರಾತ್ರಿ ಉತ್ಸವ, ಬಂಡಿ ಉತ್ಸವ, ಬನ್ನೂರು, ಅಶೋಕನಗರ, ರೈಲ್ವೇ ಮಾರ್ಗ ಸವಾರಿ, ಏ.16ರಂದು ಬೆಳಗ್ಗೆ 8.30ರಿಂದ ತುಲಾಭಾರ, ಸಂಜೆ ಉತ್ಸವ, ಶ್ರೀ ಮಹಾಲಿಂಗೇಶ್ವರ ಹಾಗೂ ಶ್ರೀ ದಂಡನಾಯಕ ಉಳ್ಳಾಳ್ತಿ ಭೇಟಿ, ಪಾಲಕಿ ಉತ್ಸವ, ಸಣ್ಣ ರಥೋತ್ಸವ, ಕೆರೆ ಆಯನ ತೆಪ್ಪೋತ್ಸವ ನಡೆಯಲಿದೆ.

ಏ.17ರಂದು ಬೆಳಗ್ಗೆ ವಸಂತಕಟ್ಟೆ ಪೂಜೆ, ದರ್ಶನ ಬಲಿ, ಬಟ್ಟಲು ಕಾಣಿಕೆ, ರಾತ್ರಿ ವೈಭವದ ಬ್ರಹ್ಮರಥೋತ್ಸವ, ಪುತ್ತೂರು ಬೆಡಿ, ಬಂಗಾರ್ ಕಾಯರ್ ಕಟ್ಟೆ ಸವಾರಿ, ಶ್ರೀ ದಂಡನಾಯಕ–ಉಳ್ಳಾಲ್ತಿ ದೈವಗಳ ಬೀಳ್ಕೊಡುಗೆ, ಶ್ರೀ ಭೂತಬಲಿ, ಶಯನ ನಡೆಯಲಿದೆ.

ಏ.18ರಂದು ಬೆಳಗ್ಗೆ ಬಾಗಿಲು ತೆಗೆಯುವ ಮುಹೂರ್ತ, 8.30 ತುಲಾಭಾರ ಸೇವೆ, ಉತ್ಸವ, ಸಂಜೆ ವೀರಮಂಗಿಲ ಅವಭೃತ ಸ್ನಾನಕ್ಕೆ ಸವಾರಿ, ಏ.19ರಂದು ಧ್ವಜಾವರೋಹಣ, ರಾತ್ರಿ ಚೂರ್ಣೋತ್ಸವ, ವಸಂತ ಪೂಜೆ ಪ್ರಾರಂಭ, ಏಳ್ನಾಡ್ ದೈವ ಪಿಲಿ ಭೂತ, ರಕ್ತೇಶ್ವರಿ ನೇಮ, ಏ.20ರಂದು ಸಂಪ್ರೋಕ್ಷಣೆ, ರಾತ್ರಿ ಮಂತ್ರಾಕ್ಷತೆ, ಅಂಜಣತ್ತಾಯ, ಪಂಜುರ್ಲಿ ವಗೈರೆ ದೈವಗಳ ನೇಮ ನಡೆಯಲಿದೆ.

ಜೀರ್ಣೋದ್ಧಾರದ ನಾನಾ ಕಾರ್ಯಗಳು ನಡೆಯುತ್ತಿರುವ ದೇವಸ್ಥಾನದಲ್ಲಿ ಹೊರಾಂಗಣದ 5 ಕಟ್ಟೆಗಳನ್ನು ಶಿಲಾಮಯವಾಗಿ ಮರು ನಿರ್ಮಿಸಲಾಗಿದೆ. ಈ ಎಲ್ಲಾ ಕಟ್ಟೆಗಳಲ್ಲಿ ಬುಧವಾರ ರಾತ್ರಿ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಇವರ ನೇತೃತ್ವದಲ್ಲಿ ವಾಸ್ತು ಹೋಮ ನಡೆಸಲಾಯಿತು. ಗುರುವಾರ ಬೆಳಗ್ಗೆ ಗಣಹೋಮ, ಕಟ್ಟೆಗಳಲ್ಲಿ ಧಾರ್ಮಿಕ ವಿಧಿ ವಿಧಾನ ನಡೆಸಿ ಕಲಶ ಸ್ಥಾಪನೆ, ಕಲಶಾಭಿಷೇಕ ನಡೆಯಿತು. ಕಟ್ಟೆಗಳ ನಿರ್ಮಾಣಕ್ಕೆ ತಲಾ 25 ಲಕ್ಷ ರೂ. ದೇಣಿಗೆ ನೀಡಿದ ದಾನಿಗಳು, ಕುಟುಂಬಸ್ಥರು, ಭಕ್ತರು ಉಪಸ್ಥಿತರಿದ್ದರು. ರೇವತಿ ಟೀಚರ್, ಕೇಶವ ಭಟ್ ಕೂವೆತೋಟ, ಪರ್ಕಳ ಸತೀಶ್, ಅಚ್ಯುತ, ನಾರಾಯಣ ಕುಟುಂಬಸ್ಥರು, ಕೆ. ನಾಗೇಶ್ ರಾವ್ ಅತ್ತಾಳ ಮತ್ತು ಶ್ರೀ ಶಿವಾಜಿ ಛತ್ರಪತಿ ಗೋಲ್ಡ್ ಆ್ಯಂಡ್ ಸಿಲ್ವರ್ ಅಸೋಸಿಯೇಶನ್ 5 ಕಟ್ಟೆಗಳ ನಿರ್ಮಾಣಕ್ಕೆ ತಲಾ ರೂ.25 ಲಕ್ಷ ದೇಣಿಗೆ ನೀಡಿದ್ದಾರೆ.

> **ವ್ಯವಸ್ಥಿತ ಸಿದ್ಧತೆ**
> ಜಾತ್ರೋತ್ಸವದಲ್ಲಿ ಪೂರ್ವಶಿಷ್ಟ ಸಂಪ್ರದಾಯದಂತೆ ಎಲ್ಲಾ ಧಾರ್ಮಿಕ ವಿಧಿಗಳು ನಡೆಯಲಿವೆ. ಪ್ರತೀ ದಿನ ರಾಜಗೋಪುರದಲ್ಲಿ ಭಜನಾ ಸಂಕೀರ್ತನೆ ನಡೆಯಲಿದೆ. ಕೆರೆಯ ಬಳಿ ಬೃಹತ್ ಅನ್ನಛತ್ರ ನಿರ್ಮಿಸಲಾಗಿದ್ದು, ಅಲ್ಲಿ ನಿರಂತರ ಅನ್ನದಾಸೋಹ ನಡೆಯಲಿದೆ. ನಟರಾಜ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಜಾತ್ರಾ ಗದ್ದೆಯಲ್ಲಿ ಈ ಬಾರಿ ಉತ್ಸವಕ್ಕೆ ಹೆಚ್ಚಿನ ಸ್ಥಳಾವಕಾಶ ಸಿಕ್ಕಿದೆ. ಹೆಚ್ಚುವರಿ ಜಾಗ ಖರೀದಿಸಲಾಗಿದೆ. ಲಕ್ಷಾಂತರ ಭಕ್ತರು ಉತ್ಸವಕ್ಕೆ ಬರಲಿದ್ದು ಸರ್ವ ಸಿದ್ಧತೆ ಮಾಡಲಾಗಿದೆ. ಅನ್ನ ಸಂತರ್ಪಣೆಗೆ ವ್ಯವಸ್ಥಿತ ಸಿದ್ಧತೆ ಕೈಗೊಳ್ಳಲಾಗಿದೆ.
> ■ ಪಂಜಿಗುಡ್ಡೆ ಈಶ್ವರ ಭಟ್, ಅಧ್ಯಕ್ಷರು, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ

ಹಿಂದು ಸಮಾಜದ ಏಕತೆ, ಲೋಕಕಲ್ಯಾಣಾರ್ಥ | ವಿಶ್ವ ಹಿಂದು ಪರಿಷತ್ ಉಳ್ಳಾಲ ಪ್ರಖಂಡ ನೇತೃತ್ವ

ಏ.12: 'ಕೊರಗಜ್ಜನ ಆದಿ ಕ್ಷೇತ್ರಕ್ಕೆ ನಮ್ಮ ನಡೆ' ಕಾರ್ಯಕ್ರಮ



ಮಂಗಳೂರು: ವಿಶ್ವ ಹಿಂದು ಪರಿಷತ್ ಮಂಗಳೂರು ಜಿಲ್ಲೆ ಉಳ್ಳಾಲ ಪ್ರಖಂಡದ ವತಿಯಿಂದ ಹಿಂದು ಸಮಾಜದ ಏಕತೆ ಹಾಗೂ ಲೋಕಕಲ್ಯಾಣಾರ್ಥವಾಗಿ 6ನೇ ವರ್ಷದ 'ಕೊರಗಜ್ಜನ ಆದಿ ಕ್ಷೇತ್ರಕ್ಕೆ ನಮ್ಮ ನಡೆ' ಕಾರ್ಯಕ್ರಮ ಏ.12ರಂದು ನಡೆಯಲಿದೆ.

10 ಸಾವಿರಕ್ಕೂ ಅಧಿಕ ಮಂದಿ

ಅಂದು ಬೆಳಗ್ಗೆ 6ಕ್ಕೆ ಕದ್ರಿ ಶ್ರೀ ಮಂಜುನಾಥ ಕ್ಷೇತ್ರದಿಂದ ಕುತ್ತಾರ್ ಕೊರಗಜ್ಜನ ಆದಿಕ್ಷೇತ್ರಕ್ಕೆ ಪಾದಯಾತ್ರೆ ಆರಂಭಗೊಳ್ಳಲಿದೆ. ಪಾದಯಾತ್ರೆಯಲ್ಲಿ 10 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆಯಿದೆ. ಕುತ್ತಾರಿಗೆ ತೆರಳಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಬೆಳಗ್ಗೆ 9.30ಕ್ಕೆ ನಡೆಯುವ ಸಮಾರೋಪ ಕಾರ್ಯಕ್ರಮದಲ್ಲಿ ಕೃಷ್ಣ ಅಡಿಗ ಕದ್ರಿ ಅವರು ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ ಎಂದು ವಿಶ್ವ ಹಿಂದು ಪರಿಷತ್ ಪ್ರಾಂತ ಪ್ರಚಾರ ಪ್ರಸಾರ ಸಹ ಪ್ರಮುಖ್ ಪ್ರದೀಪ್ ಸರಿಪಲ್ಲ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಾದಯಾತ್ರೆ ಸಾಗುವ ದಾರಿಯುದ್ದಕ್ಕೂ ಪಾನೀಯದ ವ್ಯವಸ್ಥೆ ಮಾಡಲಾಗಿದೆ. ವಾಪಸ್ ಆಗಮಿಸಲು ಬಸ್ ಮಾಲಕರ ಸಂಘದ ವತಿಯಿಂದ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಕಳೆದ ಐದು ವರ್ಷದ ಹಿಂದೆ ಹಿಂದು ಧಾರ್ಮಿಕ ಕ್ಷೇತ್ರಗಳನ್ನು ಅಪವಿತ್ರಗೊಳಿಸಿದ ಸಂದರ್ಭದಲ್ಲಿ ಕದ್ರಿ ಶ್ರೀ ಮಂಜುನಾಥ ಕ್ಷೇತ್ರದಿಂದ ಕುತ್ತಾರಿನ ಕೊರಗಜ್ಜನ ಆದಿ ಸನ್ನಿಧಿಗೆ ಪಾದಯಾತ್ರೆ ಪ್ರಾರಂಭಿಸಲಾಗಿತ್ತು. ಹಿಂದು ವಿರೋಧಿ ಕೃತ್ಯಗಳು ಮಾಯವಾಗಿ, ಸಮಸ್ತ ಹಿಂದು ಸಮಾಜದ ಐಕ್ಯತೆ, ಲೋಕಕಲ್ಯಾಣದ ಸದುದ್ದೇಶದಿಂದ ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ಹೇಳಿದರು.

ನಮ್ಮ ನಡೆ ಆಯೋಜನ ಸಮಿತಿ ಅಧ್ಯಕ್ಷ ಪ್ರವೀಣ್ ಕುತ್ತಾರ್, ವಿಹಿಂಪ ಜಿಲ್ಲಾ ಸಹಕಾರ್ಯದರ್ಶಿ ನವೀನ್ ಕೋಣಾಜೆ, ಸಂತೋಷ್ ಕದ್ರಿ, ರವಿ ಅಸೈಗೋಳಿ, ದೀಪಕ್ ಮರೋಳಿ ಉಪಸ್ಥಿತರಿದ್ದರು.

ಮಂಗಳೂರಿನಲ್ಲೂ ಖರ್ಗೆ ವಿರುದ್ಧ ದೂರು ಸಲ್ಲಿಕೆ

ಆರ್‌ಎಸ್‌ಎಸ್, ಬಿಜೆಪಿ ವಿಷಕಾರಿ ಹಾವುಗಳಂತೆ, ನಮಾಜ್ ಅರ್ಧಕ್ಕೆ ನಿಲ್ಲಿಸಿ ಅವರನ್ನು ಹೊಡೆದು ಕೊಲ್ಲಬೇಕು' ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಖಂಡನೀಯ. ಖರ್ಗೆ ಅವರ ಈ ಹೇಳಿಕೆ ವಿರುದ್ಧ ಮಂಗಳೂರಿನಲ್ಲೂ ಪೊಲೀಸರಿಗೆ ದೂರು ನೀಡಲಾಗುವುದು ಎಂದು ವಿಶ್ವಹಿಂದು ಪರಿಷತ್ ಪ್ರಾಂತ ಪ್ರಚಾರ ಪ್ರಸಾರ ಸಹ ಪ್ರಮುಖ್ ಪ್ರದೀಪ್ ಸರಿಪಲ್ಲ ಹೇಳಿದರು.

ಅವರ ಹೇಳಿಕೆ ಗುಂಪು ಹತ್ಯೆಗೆ ಪ್ರಚೋದನೆ ನೀಡಿದಂತೆ. ಅಲ್ಪಸಂಖ್ಯಾತರಲ್ಲಿ ಭಯವನ್ನು ಹುಟ್ಟಿಸಿ ಹಿಂದೂಗಳ ವಿರುದ್ಧ ದಾಳಿಗೆ ಈ ಹೇಳಿಕೆ ಪ್ರೇರೇಪಿಸಿದಂತಿದೆ. ಈ ಹೇಳಿಕೆಯನ್ನು ವಿಹಿಂಪ ಬಲವಾಗಿ ಖಂಡಿಸುತ್ತದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ರಾಷ್ಟ್ರೀಯ ಚಿಂತನೆಯೊಂದಿಗೆ ದೇಶದ ಹಿತಕ್ಕಾಗಿ ಕೆಲಸ ಮಾಡುವ ಹಿಂದೂಗಳನ್ನು ವಿಷಕಾರಿ ಹಾವುಗಳು ಎಂದು ಹೇಳುವುದರ ಜೊತೆಗೆ ಅವರನ್ನು ಕೊಲ್ಲಬೇಕು ಮತ್ತು ನೀವು ಕೊಲ್ಲದಿದ್ದರೆ ನಿಮ್ಮನ್ನು ಅವರು ಕೊಲ್ಲುತ್ತಾರೆ ಎಂದ ಖರ್ಗೆಯವರ ಮಾತುಗಳು ಬಹುಸಂಖ್ಯಾತ ಹಿಂದೂಗಳಿಗೆ ಸಂಪೂರ್ಣ ಅವಮಾನವಾಗಿದೆ. ಇಂತಹ ಹೇಳಿಕೆ ಸಾಮಾಜಿಕ ಸೌಹಾರ್ದತೆಗೆ ಅಪಾಯಕಾರಿಯೂ ಆಗಿದೆ. ಈ ಹೇಳಿಕೆ ಅವರ ಬೌದ್ಧಿಕ ದಿವಾಳಿತನವನ್ನು ಬಹಿರಂಗಪಡಿಸುತ್ತದೆ. ಹಾಗಾಗಿ ಖರ್ಗೆಯವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ತೋಟಕ್ಕೆ ಬಿದ್ದ ಬೆಂಕಿ ನಂದಿಸಲು ಹೋಗಿ ವ್ಯಕ್ತಿಗೆ ಗಂಭೀರ ಗಾಯ

ಕಾರ್ಕಳ : ತೋಟಕ್ಕೆ ಆಕಸ್ಮಿಕವಾಗಿ ತಗುಲಿದ ಬೆಂಕಿಯನ್ನು ನಂದಿಸಲು ಹೋದ ವ್ಯಕ್ತಿಯೊಬ್ಬರು ಬೆಂಕಿಯ ಜ್ವಾಲೆಗೆಸಿಲುಕಿ ಗಂಭೀರವಾಗಿ ಗಾಯಗೊಂಡ ಘಟನೆ ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮದ ಬಜೆಕಳ ಎಂಬಲ್ಲಿ ಗುರುವಾರ (ಏ.9) ಬೆಳಿಗ್ಗೆ ಸಂಭವಿಸಿದೆ. ಬಜೆಕಳದ 'ಶಿವಪೂಜ' ನಿವಾಸದ ನಿವಾಸಿ ಜಯಕರ ಶೆಟ್ಟಿ (80) ಗಾಯಗೊಂಡವರಾಗಿದ್ದು, ಕಾರ್ಕಳ ಅಗ್ನಿಶಾಮಕ ದಳದವರು ಕಾರ್ಯಾಚರಣೆ ನಡೆಸಿ ಅವರನ್ನು ರಕ್ಷಿಸಿದ್ದಾರೆ. ಗಾಯಾಳು ಪ್ರಸ್ತುತ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗುರುವಾರ ಬೆಳಿಗ್ಗೆ ಜಯಕರ ಶೆಟ್ಟಿ ಅವರ ತೋಟದಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿತ್ತು. ತೋಟದಲ್ಲಿ ತೆಂಗು, ಅಡಿಕೆ ಮರಗಳಿದ್ದು, ಒಣಗಿದ ಗಿಡಗಂಟಿಗಳಿಗೆ ತಗುಲಿದ ಬೆಂಕಿ ಕ್ಷಣಾರ್ಧದಲ್ಲಿ ತೋಟದಾದ್ಯಂತ ವ್ಯಾಪಿಸಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಜಯಕರ ಶೆಟ್ಟಿ ತಾವೇ ಬೆಂಕಿ ನಂದಿಸಲು ಮುಂದಾಗಿದ್ದಾರೆ. ಆದರೆ ಬೆಂಕಿಯ ತೀವ್ರತೆ ಹೆಚ್ಚಾದ ಪರಿಣಾಮ ಅವರೇ ಜ್ವಾಲೆಗೆ ಸಿಲುಕಿದ್ದಾರೆ. ಬೆಂಕಿ ಆವರಿಸಿಕೊಂಡಿದ್ದನ್ನು ಕಂಡು ಅವರ ಪತ್ನಿ ಪುಷ್ಪಾ ಬೊಬ್ಬೆ ಹಾಕಿದ್ದು, ಕೂಡಲೇ ಸ್ಥಳೀಯ ನಿವಾಸಿ ಸದಾನಂದ ಹೆಗ್ಡೆ ಹಾಗೂ ಇತರರು ಸ್ಥಳಕ್ಕೆ ಧಾವಿಸಿದ್ದಾರೆ. ಅಷ್ಟರಲ್ಲಾಗಲೇ ಜಯಕರ ಶೆಟ್ಟಿ ಅವರ ದೇಹದ ಕೆಲವು ಭಾಗಗಳು ಸುಟ್ಟು ಹೋಗಿದ್ದವು. ಅಸ್ವಸ್ಥಗೊಂಡಿದ್ದ ಅವರನ್ನು ಅಗ್ನಿಶಾಮಕ ದಳದವರು ಸಕಾಲದಲ್ಲಿ ಕಾರ್ಯಾಚರಣೆ ನಡೆಸಿ ರಕ್ಷಿಸಿ, ಆಂಬುಲೆನ್ಸ್ ಮೂಲಕ ಮಣಿಪಾಲ ಆಸ್ಪತ್ರೆಗೆ ರವಾನಿಸಿದರು.

ಕಿರುಸುದ್ದಿ

ವಿವೇಕಾನಂದ ಕಾಲೇಜಿನ ಕವಿತಾಗೆ ಡಾಕ್ಟರೇಟ್ ಪದವಿ

ಪುತ್ತೂರು: ನಗರದ ವಿವೇಕಾನಂದ ಪದವಿ ಕಾಲೇಜಿನ ರಾಜಕೀಯ ಶಾಸ್ತ್ರ ವಿಭಾಗದ ಉಪನ್ಯಾಸಕಿ ಕವಿತಾ ಅವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ 'ಅಗ್ರಿಕಲ್ಚರಲ್ ಪಾಲಿಸೀಸ್ –ಸೋಶಿಯಲ್ ರೆಸ್ಪಾನ್ಸ್ ಎಂಡ್ ಇಟ್ಸ್ ಇಂಪ್ಲಿಕೇಶನ್ಸ್ ಇನ್ ಕರ್ನಾಟಕ – ಎ ಕೇಸ್ ಸ್ಟಡಿ ಆಫ್ ಎಂಡೋಸಲಾನ್ ಇನ್ ದಕ್ಷಿಣ ಕನ್ನಡ' ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ದೊರೆತಿದೆ.



ಅವರು ಮಂಗಳೂರು ವಿಶ್ವವಿದ್ಯಾನಿಲಯದ ರಾಜಕೀಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ದಯಾನಂದ ನಾಯಕ್ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಮಂಡಿಸಿದ್ದು, ಅವರು ಸುಮಾರು 17 ವರ್ಷಗಳಿಂದ ವಿವೇಕಾನಂದ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ಕೊರಗಪ್ಪ ಮತ್ತು ವೆಂಕಮ್ಮ ದಂಪತಿಯ ಪುತ್ರಿಯಾಗಿದ್ದು, ಮಂಗಳೂರಿನ ಶೈಲೇಶ್ ಕದ್ರಿಯವರ ಪತ್ನಿ.

ಮಾಜಿ ರಿಜಿಸ್ಟ್ರಾರ್ ಅಮಾನತು

ಮಂಗಳೂರು: ಇಲ್ಲಿನ ಸುರತ್ಕಲ್ ಎನ್‌ಐಟಿಕೆ ಆಡಳಿತ ಮಂಡಳಿಯು ಮಾಜಿ ರಿಜಿಸ್ಟ್ರಾರ್ ರವೀಂದ್ರನಾಥ್ ಕೆ. ಅವರನ್ನು ಸೇವೆಯಿಂದ ವಜಾ ಮಾಡಿದೆ. ಶಿಕ್ಷಣ ಸಚಿವಾಲಯದ ನಿರ್ದೇಶನದ ಮೇರೆಗೆ ಹಾಗೂ ಆಡಳಿತ ಮಂಡಳಿಯ ನಿರ್ಣಯದಂತೆ 2025ರ ಸೆಪ್ಟೆಂಬರ್ 12ರಿಂದ ಅವರನ್ನು ಅಮಾನತುಗೊಳಿಸಲಾಗಿತ್ತು. ಬಳಿಕ ಇಲಾಖಾ ತನಿಖೆ ಆರಂಭವಾಗಿದ್ದು, ಕೇಂದ್ರ ನಾಗರಿಕ ಸೇವಾ (ನಡವಳಿಕೆ) ನಿಯಮಗಳು– 1964ರ ಉಲ್ಲಂಘನೆ, ಕಾರ್ಯ ವಿಧಾನದಲ್ಲಿನ ಅಕ್ರಮಗಳು ಮತ್ತು ವೃತ್ತಿಪರ ಅನುಚಿತತೆ ಆರೋಪಗಳ ಮೇಲೆ ತನಿಖೆ ನಡೆಯಿತು. ಈ ತನಿಖೆಯಲ್ಲಿ ರವೀಂದ್ರನಾಥ್ ಅವರ ಮೇಲಿನ ಗಂಭೀರ ಆರೋಪಗಳು ಸಾಬೀತಾಗಿದ್ದರಿಂದ ಆಡಳಿತ ಮಂಡಳಿಯು ಸರ್ವಾನುಮತದಿಂದ ಅವರನ್ನು ಸೇವೆಯಿಂದ ವಜಾ ಮಾಡುವ ನಿರ್ಣಯ ಕೈಗೊಂಡಿದೆ. ಇದಕ್ಕೂ ಮೊದಲು, ನಿಯಮಾವಳಿಗಳ ಪ್ರಕಾರ 5 ವರ್ಷಕ್ಕಿಂತ ಹೆಚ್ಚು ಅವಧಿ ರಿಜಿಸ್ಟ್ರಾರ್ ಹುದ್ದೆಯಲ್ಲಿ ಮುಂದುವರಿಯಲು ಅವಕಾಶವಿಲ್ಲದ ಕಾರಣ, ಅವರ ಹುದ್ದೆಯ ಅವಧಿಯನ್ನು ಕೂಡ ಮುಕ್ತಾಯಗೊಳಿಸಲಾಗಿತ್ತು.

ಮರದಿಂದ ಬಿದ್ದು ವ್ಯಕ್ತಿ ಮೃತ್ಯು

ಕಾಸರಗೋಡು: ಹಲಸಿನಕಾಯಿ ಕೊಯ್ಯಲೆಂದು ಮರಕ್ಕೇರಿದ ವ್ಯಕ್ತಿಯೋರ್ವ ಬಿದ್ದು ಮೃತಪಟ್ಟ ಘಟನೆ ನಡೆದಿದೆ. ಕಯ್ಯೂರು ಚೀಮೇನಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಚೆರಿಯಾಕ್ಕರ ಕಾವುಂಗಾಲ್ ನಿವಾಸಿ ಬಾಲಕೃಷ್ಣನ್ (64) ಸಾವಿಗೀಡಾದವರು. ಬುಧವಾರ ಸಂಜೆ ಮನೆ ಹಿತ್ತಿಲಿನ ಹಲಸಿನ ಮರದಿಂದ ಹಲಸಿನಕಾಯಿ ಕೊಯ್ಯಲೆಂದು ಮರಕ್ಕೇರಿದ್ದ ಅವರು ಕೆಳಗೆ ಬಿದ್ದು ಅಸುನೀಗಿದರು. ಮೃತರು ಪತ್ನಿ, ಮಕ್ಕಳನ್ನು ಅಗಲಿದ್ದಾರೆ.

ಏ.11ರಿಂದ ಮಂಗಳೂರಿನಲ್ಲಿ ಚಾಕೊಲೇಟ್ ಹಬ್ಬ

ಮಂಗಳೂರು: ಕ್ಯಾಂಪ್ಕೋ ಸಂಸ್ಥೆಯ ಸಹಯೋಗದಲ್ಲಿ ಮಂಗಳೂರಿನ ಫಿಜಾ ಬೈ ನೆಕ್ಸಸ್ ಮಾಲ್‌ನಲ್ಲಿ ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಶನ್ ಸಂಸ್ಥೆಯು (ನಿಕೋ) ಏ.11 ಮತ್ತು 12ರಂದು 7ನೇ ಆವೃತ್ತಿಯ ಚಾಕೊಲೇಟ್ ಹಬ್ಬ 'ಚಾಕೊಲೇಟ್ ಸ್ಟ್ರೀಟನ್ನು ಆಯೋಜಿಸಿದೆ ಎಂದು ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಶನ್ ಮುಖ್ಯಸ್ಥೆ ಡಾ. ಮೌಲ್ಯ ಬಾಲಾಡಿ ತಿಳಿಸಿದ್ದಾರೆ. ಏ.11ರಂದು ಪೂರ್ವಾಹ್ನ 10.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಸೊಲ್ಮೆಲು ಚಾಕೊಲೇಟ್ ಸಂಸ್ಥೆಯ ಸ್ಥಾಪಕ ಮಯೂರ್ ಶೆಟ್ಟಿ ಹಬ್ಬಕ್ಕೆ ಚಾಲನೆ ನೀಡಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಸಂಯೋಜಕ ಪ್ರಕಾಶ್, ಇವೆಂಟ್ ಮ್ಯಾನೇಜರ್ ಹಲೀಮ ಶಿರ್ಫಾ, ರಾಹುಲ್ ವಿ.ಬಿ. ಉಪಸ್ಥಿತರಿದ್ದರು.

ಬಂಟರ ಯಾನೆ ನಾಡವರ ಮಾತೃ ಸಂಘ: ಏ. 12ರಂದು ಬಹಿರಂಗ ಅಧಿವೇಶನ



ಮಂಗಳೂರು: ಬಂಟರ ಯಾನೆ ನಾಡವರ ಮಾತೃ ಸಂಘದ ಬಹಿರಂಗ ಅಧಿವೇಶನ ಏ. 12ರಂದು ಬೆಳಿಗ್ಗೆ 9ಕ್ಕೆ ಮಂಗಳೂರಿನ ಪುರಭವನದಲ್ಲಿ ನಡೆಯಲಿದೆ.

ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶರಾದ ನ್ಯಾ. ವಿಶ್ವಜಿತ್ ಶೆಟ್ಟಿ ಸವಣೂರು ಹಾಗೂ ನ್ಯಾ. ರಾಜೇಶ್ ರೈ ಕಲ್ಲಂಗಳ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಾತೃಸಂಘದ ಅಧ್ಯಕ್ಷ ಮಾಲಾಡಿ ಅಜಿತ್‌ಕುಮಾರ್ ರೈ ಅಧ್ಯಕ್ಷತೆ ವಹಿಸುವರು. ಕೊಡ್ಮಾನ್ ಮೋಹನದೇವ್ ಆಳ್ವ, ಡಾ. ಎಂ. ಕೆ. ಶೈಲಜಾ ಆಳ್ವ ಪಾಲ್ಗೊಳ್ಳುವರು ಎಂದು ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷ ಮಾಲಾಡಿ ಅಜಿತ್ ಕುಮಾರ್ ರೈ ಕೊಡಿಯಾಲ್‌ಗುತ್ತು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾರಂಭದಲ್ಲಿ ಡಾ. ಕೊಡ್ಮಾಣ್ ನಾಗಪ್ಪ ಆಳ್ವ ಮತ್ತು ಕಲ್ಯಾಣಿ ಆಳ್ವ ಅವರ ಸ್ಮರಣಾರ್ಥವಾಗಿ ಪ್ರಶಸ್ತಿ ಪ್ರದಾನ ಮತ್ತು ಸನ್ಮಾನ ನಡೆಸಲಾಗುವುದು. ವೈದ್ಯಕೀಯ ಕ್ಷೇತ್ರ: ಡಾ. ಸತೀಶ್ ಭಂಡಾರಿ, ಶೈಕ್ಷಣಿಕ ಕ್ಷೇತ್ರ: ಪ್ರೊ. ವಸಂತ್ ಶೆಟ್ಟಿ ಮುಳ್ಳಾಡ್, ಸಾಹಿತ್ಯ ಕ್ಷೇತ್ರ: ಕೆ. ಉಷಾ ಪಿ. ರೈ, ಸಂಗೀತ ಕ್ಷೇತ್ರ: ಗುರುಕಿರಣ್ ಶೆಟ್ಟಿ, ನೃತ್ಯ: ವಿದುಷಿ ನಯನ ವಿ.ರೈ ಕುದ್ಕಾಡಿ, ದೇಶ ಸೇವೆ : ಲೆ.ಕ. ಅಜಿತ್ ಕುಮಾರ್ ಶೆಟ್ಟಿ ಆರ್ಡಿ ಕುಂದಾಪುರ, ಕ್ರೀಡಾ ಕ್ಷೇತ್ರ: ಪ್ರಶಾಂತ್ ರೈ ಪುತ್ತೂರು, ಕ್ರೀಡಾ ಕ್ಷೇತ್ರ: ಚಿಂತನ್ ಎಸ್. ಶೆಟ್ಟಿ ಮಂಜೇಶ್ವರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಬಂಟರ ಯಾನೆ ನಾಡವರ ಮಾತೃ ಸಂಘದ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಏರ್ಪಡಿಸಲಾಗಿದೆ. ಕೈಗಾರಿಕೆ: ವಿವೇಕ್ ಶೆಟ್ಟಿ ಬೊಳಗುತ್ತು, ಸಾಂಸ್ಕೃತಿಕ ಕ್ಷೇತ್ರ: ಪ್ರಕಾಶ್ ಭಂಡಾರಿ ಮುಂಬೈ, ಧಾರ್ಮಿಕ ಕ್ಷೇತ್ರ: ಕೆ. ಕೆ. ಶೆಟ್ಟಿ ಕುತ್ತಿಕಾರ್, ಕೈಗಾರಿಕಾ ಕ್ಷೇತ್ರ: ಕರುಣಾಕರ ಎಂ. ಶೆಟ್ಟಿ ಮಧ್ಯಗುತ್ತು, ಸಹಕಾರಿ ಕ್ಷೇತ್ರ: ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು, ಆತಿಥ್ಯ ಉದ್ಯಮ: ವೇಣುಗೋಪಾಲ್ ಎಲ್. ಶೆಟ್ಟಿ, ನಿರ್ಮಾಣ ಕ್ಷೇತ್ರ: ಮುಗ್ರೋಡಿ ಸುಧಾಕರ ಶೆಟ್ಟಿ, ಸಂಶೋಧನೆ: ಡಾ. ನವೀನ್‌ಚಂದ್ರ ಶೆಟ್ಟಿ, ದೈವಾರಾಧನೆ: ಡಾ. ಅಶೋಕ್ ಆಳ್ವ, ಸಮಾಜ ಸೇವೆ: ಕೆಂಚನೂರು ಸೋಮಶೇಖರ ಶೆಟ್ಟಿ, ಶಿಕ್ಷಣ ಕ್ಷೇತ್ರ: ದಿನೇಶ್ ಆಳ್ವ, ಕೃಷಿ ಕ್ಷೇತ್ರ: ಮುರ ಸದಾಶಿವ ಶೆಟ್ಟಿ, ಎಕ್ಕಾರು, ಕೃಷಿ ಕ್ಷೇತ್ರದ ಬೆಳವಣಿಗೆ : ಡಾ. ಸರಿತಾ ಹೆಗ್ಡೆ, ಉತ್ಪಾದನಾ ಕ್ಷೇತ್ರ: ರವೀಂದ್ರನಾಥ ಮಾರ್ಲ ಅವರನ್ನುಸನ್ಮಾನಿಸಲಾಗುವುದು. ಕೊಡಿಯಾಲ್‌ಗುತ್ತು ಭಾಸ್ಕರ ರೈ ಸ್ಮರಣಾರ್ಥ ಕಲಾ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ನೀಡುವ ಸನ್ಮಾನವನ್ನು ಪಿ. ಕಿಶನ್ ಹೆಗ್ಡೆ ಅವರಿಗೆ ನೀಡಲಾಗುವುದು. ಸಮಾಜ ಬಾಂಧವರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಬಂಟರ ಯಾನೆ ನಾಡವರ ಮಾತೃಸಂಘದ ಉಪಾಧ್ಯಕ್ಷ ಕಾವು ಹೇಮನಾಥಶೆಟ್ಟಿ, ಪ್ರಧಾನಕಾರ್ಯದರ್ಶಿ ಕೆ.ಎಂ. ಶೆಟ್ಟಿ, ಕೋಶಾಧಿಕಾರಿ ಸಿಎ ರಾಮ್ ಮೋಹನ್ ರೈ ಉಪಸ್ಥಿತರಿದ್ದರು.

ಇಂದು '90 ಎಮ್‌ಎಲ್' ತುಳು ಸಿನಿಮಾ ಬೆಳ್ಳಿತೆರೆಗೆ



ಮಂಗಳೂರು: ತುಳು ಚಿತ್ರರಂಗದಲ್ಲಿ ಮತ್ತೊಂದು ಸಿನೆಮಾ ಸದ್ದು ಮಾಡಲು ಸಜ್ಜಾಗಿದೆ. ಡೋಲ್ಫಿ ಡಿಸೋಜ ನಿರ್ಮಾಣದ '90 ಎಂಎಲ್' ಚಿತ್ರ ಈಗಾಗಲೇ ತನ್ನ ಟ್ರೈಲರ್‌ಗಳ ಮೂಲಕವೇ ಸಿನಿ ಪ್ರಿಯರ ಮನಗೆದ್ದಿದ್ದು, ಇಂದು (ಏ.10) ಕರಾವಳಿಯಾದ್ಯಂತ ಎಲ್ಲಾ ಚಿತ್ರ ಮಂದಿರಗಳಲ್ಲಿ ತೆರೆ ಕಾಣಲಿದೆ.

ಹಾಸ್ಯದೊಂದಿಗೆ ಉತ್ತಮ ಕಥಾಹಂದರ ಒಳಗೊಂಡಿರುವ ಈ ಚಿತ್ರ ಖಂಡಿತವಾಗಿಯೂ ಜನತೆಗೆ ಇಷ್ಟವಾಗಲಿದೆ. ತುಳು ಚಿತ್ರವನ್ನು ತುಳುನಾಡಿನ ಜನತೆ ಬೆಂಬಲಿಸಿ ಪ್ರೋತ್ಸಾಹಿಸಬೇಕು ಎಂದು ನಿರ್ಮಾಪಕ ಡೋಲ್ಫಿ ಡಿಸೋಜ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿ ಡಿ ಪ್ರೊಡಕ್ಷನ್ ಲಾಂಛನದಲ್ಲಿ ರಂಜಿತ್ ಸಿ. ಬಜಾಲ್ ನಿರ್ದೇಶನದಲ್ಲಿ ಈ ಚಿತ್ರ ನಿರ್ಮಾಣವಾಗಿದ್ದು, ಮಂಗಳೂರು, ಉಡುಪಿ, ಪುತ್ತೂರು, ಬೆಳ್ತಂಗಡಿ ಕಾರ್ಕಳ, ದೇರಳಕಟ್ಟೆ ಮೊದಲಾದೆಡೆ ಬಿಡುಗಡೆಗೊಳ್ಳಲಿದೆ. ಸಿನಿಮಾವು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಚಿತ್ರೀಕರಣ ನಡೆದಿದೆ ಎಂದರು.

ವಿನೀತ್ ಕುಮಾರ್ ಅಭಿನಯದ 90 ಎಮ್ ಎಲ್ ಸಿನಿಮಾದಲ್ಲಿ ರುಹಾನಿ ಶೆಟ್ಟಿ , ನವೀನ್ ಡಿ. ಪಡೀಲ್, ಅರವಿಂದ ಬೋಳಾರ್, ರೋಶನ್ ಶೆಟ್ಟಿ, ದೀಪಕ್ ರೈ ಪಾಣಾಜೆ, ಉಮೇಶ್ ಮಿಜಾರ್, ಪುಷ್ಪರಾಜ್ ಬೊಳ್ಳೂರು, ನಮಿತ, ಶೈಲಾಶ್ರೀ ಧೃತಿ ಮುಂತಾದವರು ನಟಿಸಿದ್ದಾರೆ.

ರಂಜಿತ್ ಸಿ. ಬಜಾಲ್ ಕಥೆ. ಚಿತ್ರಕಥೆ, ನಿರ್ದೇಶನ ಮಾಡಿದ್ದು, ಸಂಭಾಷಣೆ ತುಳಸಿದಾಸ್ ಮಂಜೇಶ್ವರ್ ವರದ್ದಾಗಿದೆ. ಛಾಯಾಗ್ರಾಹಣ ಅರ್ಜುನ್ ಎಂ.ವಿ., ಸಂಗೀತ ಸೃಜನ್ ಕುಮಾರ್ ತೋನ್ಸೆ, ಸಂಕಲನ ಸಚಿನ್ ರಾಮ್, ಡಿಸೈನ್ ಆಚಾರ್ಯ ಗುರು ಅವರು ಒದಗಿಸಿದ್ದಾರೆ.

90 ಎಮ್ ಎಲ್ ತುಳು ಸಿನಿಮಾ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ, ಹಾಸ್ಯ ಮನರಂಜನೆಯೊಂದಿಗೆ ಉತ್ತಮ ಕತೆಯನ್ನು ಒಳಗೊಂಡಿದೆ ಎಂದು ಅವರು ವಿವರಿಸಿದರು.

ಅಪಘಾತದ ಗಾಯಾಳು ಯುವಕ ಸಾವು

ಕಾಸರಗೋಡು: ಕಾರು ಮತ್ತು ಸ್ಕೂಟರ್ ಡಿಕ್ಕಿ ಹೊಡೆದು ಗಂಭೀರ ಗಾಯ ಗೊಂಡು ಚಿಕಿತ್ಸೆಯಲ್ಲಿದ್ದ ಯುವಕ ಸಾವನ್ನಪ್ಪಿದ ಘಟನೆ ನಡೆದಿದೆ. ಚೆಟ್ಟುಂಗುಳಿ ಶಾಲೆಯ ವಿದ್ಯಾರ್ಥಿ, ಸಿ.ಎಚ್.ಮಂಜಿಲ್‌ನ ಮೊಹಮ್ಮದ್ ನಿಹಾಲ್ (19) ಸಾವನ್ನಪ್ಪಿದ ವ್ಯಕ್ತಿ. ಸ್ಕೂಟರ್‌ನಲ್ಲಿ ಕಳೆದ ಭಾನುವಾರ ಉಳಿಯತ್ತಡ್ಕ ಇಸತ್‌ನಗರದ ಮೂಲಕ ಸಾಗುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿತ್ತು. ಮೃತರು ತಂದೆ, ತಾಯಿ, ಸಹೋದರ, ಸಹೋದರಿಯರನ್ನು ಅಗಲಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ
1. ಬಿ. ವೆಂಕಟ್ರಮಣ ಕುಂಜತ್ತಾಯ, 'ರಾಘವೇಂದ್ರ ನಿಲಯ', ಎಲಂತೋಡಿ, ಕಿನ್ನಿಗೋಳಿ, ಮುಲ್ಕಿ.
2. ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜಾ ಭಜನಾ ಮಂಡಳಿ, ಗುಂಡೂರಿ, ತುಂಬೆದಲ್ಕೆ, ಬೆಳ್ತಂಗಡಿ (ತಾ).
3. ಸತ್ಯದೇವತಾ ಚಾರಿಟೇಬಲ್ ಟ್ರಸ್ಟ್ (ರಿ), ನರಿಕೊಂಬು, ಪಾಣೆ ಮಂಗಳೂರು, ಬಂಟ್ವಾಳ (ತಾ).
4. ದಯಾನಂದ ಶೆಟ್ಟಿ, ಅರವಾರು ಹೌಸ್, ಬಾಕ್ರೆಬೈಲು, ಪಾತೂರು.
5. ಶ್ರೀ ರಾಮ ಭಜನಾ ಮಂದಿರ ಹತ್ತು ಸಮಸ್ತರು, ಕುಂಬ್ರ ವಯಾ ಪುತ್ತೂರು (ತಾ).
6. ಬನಾನ್ ಬ್ರದರ್ಸ್ ಮತ್ತು ಕುಟುಂಬಸ್ಥರು, ಕಿನ್ನರ್‌ಕಟ್ಟ, ನಕ್ರೆ, ಕಾರ್ಕಳ.
7. ಭಾಸ್ಕರ ಆಳ್ವ, ಪತ್ನಿ, ಮಕ್ಕಳು, ನಡಿಗುತ್ತು ಪಾದೆಮನೆ, ಬಾಳೆಪುಣಿ, ಕೋಣಿಬೈಲು ಬಾಳಿಕೆ ತರವಾಡು ಮನೆ ವಠಾರ.

ಶ್ರೀ ಧರ್ಮಸ್ಥಳ ಮೇಳ
ಕಟ್ಟೆಲ್ಲೂರು ಭದ್ರಕಾಳಿ
ಶ್ರೀ ಕೆ. ಗೋಪಾಲ ಪೂಜಾರಿ, ಮಾಜಿ ಶಾಸಕರು, ಬೈಂದೂರು

ಶ್ರೀ ಪೆರ್ಡೂರು ಮೇಳ
ಮಂಕಿಯಲ್ಲಿ
ಸಂಪೂರ್ಣ ಶ್ರೀ ದೇವಿ ಮಹಾತ್ಮೆ

ಶ್ರೀ ಹನುಮಗಿರಿ ಮೇಳ
ಹನುಮಗಿರಿಯಲ್ಲಿ

ಶ್ರೀ ಪಾವಂಜೆ ಮೇಳ
ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಬ್ರಹ್ಮಾವರ -ದಕ್ಷಯಜ್ಞ, ತಾರಕಾಸುರ ವಧೆ

ಕಿರುಸುದ್ದಿ

ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ಕಾಲೇಜು: ಶೇ.97 ಫಲಿತಾಂಶ



• **ಬಂಟ್ವಾಳ:** ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ 348 ವಿದ್ಯಾರ್ಥಿ ಗಳ ಪೈಕಿ 338 ವಿದ್ಯಾರ್ಥಿಗಳು ತೇರ್ಗಡೆ ಗೊಂಡು 97% ಫಲಿತಾಂಶ



ದಾಖಲಿಸಿದೆ ಕಾಲೇಜಿನ ಪ್ರಕಟಣೆ ತಿಳಿಸಿದೆ. ಕಲಾ ವಿಭಾಗದಲ್ಲಿ 27 ವಿದ್ಯಾರ್ಥಿಗಳಲ್ಲಿ 24 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 203 ವಿದ್ಯಾರ್ಥಿಗಳಲ್ಲಿ 198 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ 118 ವಿದ್ಯಾರ್ಥಿಗಳಲ್ಲಿ 116 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪ್ರೀತೇಶ್ 600ರಲ್ಲಿ 594 ಅಂಕ ಪಡೆದು ಪ್ರಥಮ ಸ್ಥಾನವನ್ನು, ಶ್ರೀ ವಿದ್ಯಾ 600ರಲ್ಲಿ 589 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ವಾಸವಿ ಕೆ ಸಿ ಹಾಗೂ ಭೂಷಣ್ 600ರಲ್ಲಿ 593 ಅಂಕ ಪಡೆದು ಪ್ರಥಮ ಸ್ಥಾನವನ್ನು, ಸಾಯಿಶಾ 600ರಲ್ಲಿ 586 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ಕಲಾ ವಿಭಾಗದಲ್ಲಿ ಶ್ರೇಯಾ ಸಿ ಯಸ್ 600ರಲ್ಲಿ 569 ಅಂಕ ಪಡೆದು ಪ್ರಥಮ ಸ್ಥಾನವನ್ನು, ಇಂಚರಾ ಸುರೇಶ್ ಗೌಡ 600ರಲ್ಲಿ 563 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ.

ರಕ್ಷಿತಾ ಮಂಜುನಾಥ್ ವಿಜ್ಞಾನ ವಿಭಾಗದಲ್ಲಿ ಪ್ರಥಮ ರ್‍ಯಾಂಕ್

• **ಮೂಡುಬಿದಿರೆ:** ಆಳ್ವಾಸ್ ಪದವಿಪೂರ್ವ ಕಾಲೇಜಿನ ರಕ್ಷಿತಾ ಮಂಜುನಾಥ್ ವಿಜ್ಞಾನ ವಿಭಾಗದಲ್ಲಿ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದುಕೊಂಡಿದ್ದಾಳೆ. ಈಕೆ



ಮೂಲತಃ ಗದಗ ಜಿಲ್ಲೆಯ ಲಕ್ಷ್ಮೇಶ್ವರದ ಹುಡುಗಿ. ಭವಿಷ್ಯದಲ್ಲಿ ಡಾಕ್ಟರ್ ಆಗುವ ಕನಸು ಹೊತ್ತಿದ್ದಾಳೆ. ನೀಟ್ ಪರೀಕ್ಷೆಗೆ ಸಿದ್ಧತೆ ಮಾಡಿಕೊಂಡಿದ್ದೇನೆ. ಆಳ್ವಾಸ್ ಸಂಸ್ಥೆಯಲ್ಲಿ ಪಠ್ಯಕ್ಕೆ ಬೇಕಾದ ಎಲ್ಲಾ ರೀತಿಯ ಸಹಕಾರಗಳನ್ನು ನೀಡುತ್ತಾ ಬಂದಿದ್ದಾರೆ. ಕಾಲ ಕಾಲಕ್ಕೆ ಪೂರಕ ಪರೀಕ್ಷೆಗಳನ್ನು ಮಾಡುತ್ತಾ, ವಿಶೇಷವಾದ ತರಬೇತಿಗಳನ್ನು ನೀಡುತ್ತಾ ಬಂದಿರುವುದು ಈ ಸಾಧನೆಗೆ ಪೂರಕವಾಗಿದೆ. ಸಂಸ್ಥೆಯ ಅಧ್ಯಕ್ಷರು, ಕಾಲೇಜಿನ ಶಿಕ್ಷಕವೃಂದದವರ ಸಂಪೂರ್ಣ ಸಹಕಾರ, ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಹೇಳಿದ್ದಾಳೆ.

ಪಿ.ಯು.: ಸೃಜನ್‌ಗೆ ಶೇ.98 ಅಂಕ



ಉಡುಪಿ ಎಂಜಿಎಂ ಕಾಲೇಜಿನ ವಿದ್ಯಾರ್ಥಿ ಸೃಜನ್ ಎಸ್.ಆಚಾರ್ಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 587 (ಶೇ.98) ಅಂಕ ಗಳಿಸಿದ್ದಾನೆ. ಈತ ಉಡುಪಿಯ ಶ್ರೀನಿವಾಸ ಆಚಾರ್ಯ ಮತ್ತು ಸುಮನ ಎಂ.ಎಸ್. ದಂಪತಿಯ ಪುತ್ರ.

ಅರುಣ್ ಉಪಾಧ್ಯಾಯರಿಗೆ ಪಿ.ಎಚ್.ಡಿ ಪದವಿ ಪ್ರದಾನ


• **ಶಿರ್ವ:** ಬಂಟಕಲ್ಲು ಶ್ರೀ ಮಧ್ವ ವಾದಿರಾಜತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಸಹ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾಗಿರುವ ಅರುಣ್ ಉಪಾಧ್ಯಾಯ ಇವರು ಎಜೆ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್



ಆ್ಯಂಡ್ ಟೆಕ್ನಾಲಜಿ, ಮಂಗಳೂರು ಇಲ್ಲಿನ ಪ್ರಾಂಶುಪಾಲರಾದ ಡಾ. ಶಾಂತರಾಮ ರೈ ಸಿ, ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಸೆಕ್ಯೂರಿಟಿಎನ್‌ಹೆನ್ಸ್ಡ್ ಹೈಬ್ರೀಡ್ ಡಿಜಿಟಲ್ ಇಮೇಜ್ ಎನ್ ಕ್ರಿಪ್ಷನ್ ಟೆಕ್ನಿಕ್ಸ್ ಎಂಬ ಸಂಶೋಧನಾ ಪ್ರಬಂಧಕ್ಕೆ ಬೆಳಗಾವಿಯ ವಿಶ್ವೇಶ್ವರಯ್ಯತಾಂತ್ರಿಕ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಇವರ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ.ರಾಧಾಕೃಷ್ಣ ಎಸ್. ಐತಾಳ್, ಸಂಸ್ಥೆಯ ಪ್ರಾಂಶುಪಾಲರಾದ ಡಾ. ನಾಗರಾಜ್ ಭಟ್ ಮತ್ತು ಸಂಸ್ಥೆಯ ಬೋಧಕ–ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

ನದಿಗೆ ಹಾರಿದ್ದ ಯುವಕನ ಮೃತದೇಹ ಪತ್ತೆ

ಕೈಕಂಬ: ಮಂಗಳೂರು–ಮೂಡಬಿದ್ರಿ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ ಫಲ್ಗುಣಿ ಸೇತುವೆಯಿಂದ ಬುಧವಾರ ನದಿಗೆ ಹಾರಿದ್ದ ಬಜಪೆ ಸಮೀಪದ ಕಜೆ ಪಡ್ಡಾಯಿಬೆಟ್ಟು ನಿವಾಸಿ ಕೌಶಿಕ್ ಬೆಲ್ಚಡ (30) ಎಂಬ ಯುವಕನ ಮೃತದೇಹ ಗುರುವಾರ ಮಧ್ಯಾಹ್ನ ಪತ್ತೆಯಾಗಿದ್ದು, ನದಿಯಿಂದ ಶವ ಮೇಲೆತ್ತಲಾಗಿದೆ.



ಈತ ಜೀವನದಲ್ಲಿ ಜುಗುಪ್ಸೆಗೊಂಡು ಈ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ಬಜಪೆ ಪೊಲೀಸರು ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದಾರೆ.

ಹೆಬ್ರಿ: ನೀರಿನ ಟ್ಯಾಂಕ್‌ನಲ್ಲಿ ಬಿದ್ದು ವ್ಯಕ್ತಿ ಸಾವು

• **ಹೆಬ್ರಿ:** ನೀರಿನ ಟ್ಯಾಂಕ್ ಇಣುಕಿ ನೋಡಲು ಹೋದ ವ್ಯಕ್ತಿ ನೀರಿಗೆ ಬಿದ್ದು ಮೃತಪಟ್ಟಿರುವ ಘಟನೆ ಹೆಬ್ರಿಯ ಇಂದಿರಾನಗರದಲ್ಲಿ ಮಂಗಳವಾರ (ಏ.7) ನಡೆದಿದೆ. ಶೇಖರ ನಾಯ್ಕ (57) ಎಂಬವರು ಮೃತಪಟ್ಟವರು. ನೀರು ಇರುವುದನ್ನು ಇಣುಕಿ ನೋಡುವಾಗ ಅವರ ಮೊಬೈಲ್ ಟ್ಯಾಂಕ್ ಒಳಗೆ ಬಿದ್ದಿತ್ತು. ಬಾಗಿ ಮೊಬೈಲ್ ತೆಗೆಯುತ್ತಿದ್ದ ವೇಳೆ ಮಗುಚಿ ಬಿದ್ದು ಮೇಲೆ ಬರಲಾಗದೆ ನೀರಿನಲ್ಲಿ ಮುಳುಗಿದ್ದರು. ಅಸ್ವಸ್ಥಗೊಂಡ ಅವರನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ದರೂ ಆ ವೇಳೆಗಾಗಲೇ ಮೃತಪಟ್ಟಿದ್ದರು.

ರಾಜ್ಯದ ಅಗ್ರ 10 ಸ್ಥಾನಗಳಲ್ಲಿ ಗುರುವಾಯನಕೆರೆಯ ಎಕ್ಸೆಲ್‌ನ 50 ವಿದ್ಯಾರ್ಥಿಗಳಿಗೆ ಸ್ಥಾನ

‘ಎಕ್ಸೆಲ್’ ಮುಡಿಗೇರಿತು ಮತ್ತೊಂದು ಗರಿ!

• **ಗುರುವಾಯನಕೆರೆ:** ದ್ವಿತೀಯ ಪಿಯು ಪರೀಕ್ಷೆಯಲ್ಲಿ ರಾಜ್ಯದ ಅಗ್ರ 10 ಸ್ಥಾನಗಳಲ್ಲಿ ಗುರುವಾಯನಕೆರೆಯ ಎಕ್ಸೆಲ್‌ನ 50 ವಿದ್ಯಾರ್ಥಿಗಳು ಸ್ಥಾನ ಪಡೆದು ಸಾಧನೆಗೈದಿದ್ದಾರೆ. ರಾಜ್ಯದಲ್ಲಿ ತೃತೀಯ ಮತ್ತು ಬೆಳ್ತಂಗಡಿ ತಾಲೂಕಿನ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಎಕ್ಸೆಲ್ ಗುರುವಾಯನಕೆರೆಯ ಪಾಲಿಗೆ ದೊರಕಿದೆ.

ಯಾನ ಪೊನ್ನಮ್ಮ–597, ಶ್ರೀವತ್ಸ ಯು.–597, ಅಕ್ಷಯ್ ಎ.–595, ಸುಸ್ಮಿತ– 594, ಅನಿಶಾ–594, ರೋಹಿತ್ ಮಹಾಂತೇಶ್–594, ಶಿಲ್ಪಿತಾ ಹೆಚ್. ಎಸ್.–594, ಮೋನಿಕಾ ಹೆಚ್. 593, ಅನ್ವೇಷಾ ಜಿ. ಭಟ್–592, ಕಾಶ್ವೀ ಎ. ಯು.–592, ನಿಶ್ಚಿತಾ ಸಿ.–592, ಪರೇಶ್ ಪಿ. ಗೋವಂಕರ್–592, ಪ್ರಗತಿ ಎಂ. ಆರ್.–592, ರಿಹಾ ಪರ್ವಿನ್–592, ಅಭೀಷ್ಟ–592, ಆಶಿತಾ–592, ಕೃಪಾಶ್ರೀ–592, ಯುಕ್ತಿ– 592, ಅಖಿಲ್ ಅನಿಲ್– 591, ಭೂಮಿಕಾ–591, ಮನ್ವಿತ್ ಕೃಷ್ಣ ಎಸ್. ವಿ.–591, ಮಿಶ್ಚಾ– 591, ಅಭಿನವ್–590, ಆದವಿಯ ಯು.–590, ಆಶೀಫಾ ಫಾತಿಮಾ–590, ಅಕ್ಷರಾ–590, ಧನ್ಯಶ್ರೀ–590, ದರ್ಶನ್ ರಾವ್ –590, ಕೌಶಲ್ ಎಲ್. ಕುಲಾಲ್–590, ನಿತ್ಯಾ ಶಿವಪ್ರಸಾದ್ ದಿಂಡೆ–590, ಪಿ. ಪೂರ್ವಿ ಶಾನ್‌ಭಾಗ್ –590, ಸೌಧಾ ಅಂಬರ್–590, ತಜ್ಞಾ ಟಿ. ಎಸ್.–590, ವಿವೇಕ್ ಎಸ್. ಭಟ್–590, ಅನುಜ್ಞಾ ಸಾಲಿಯಾನ್–589, ಭುವನಾ–589, ಮೊಹಮ್ಮದ್ ಜಿಯಾದ್–589, ಸುಮುಖ ಕೃಷ್ಣ–589, ಭೂಮಿಕಾ–588, ದೀಕ್ಷಿತಾ ಎಸ್.–588, ದೀತ್ಯಾ ಎಂ.–588, ಜ್ಞಾನೇಶ್ವರಿ ಎಸ್.–588, ಮನೋಜ್ ಪಿ. ಅಡವಿ–588, ಮನ್ವಿತ್ ಬಿ. ಎಂ. –588, ಮೊಹಮ್ಮದ್ ಶಬೀಬ್ ಅಕ್ತರ್ –588, ಮೌಲ್ಯ ಎನ್. –588, ಪಲ್ಲವಿ ಹೆಚ್. ವಿ.–588, ರೋಶಿನಿ ಜಿ.–588, ಸಾಮ್ಯಕ್ ವಿನಯ್ –588, ವಿಯೋನಾ ರೇಗೋ–588 ಅಂಕ ಗಳಿಸಿದ್ದಾರೆ.





- ಸತತ ಐದು ವರ್ಷಗಳಿಂದ 100% ಫಲಿತಾಂಶ, 90% ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದ ರಾಜ್ಯದ ಏಕಮೇವ ವಿದ್ಯಾಸಂಸ್ಥೆ (1334 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್)
- ಇತ್ತೀಚೆಗೆ ನಡೆದ ಜೇ ಮೇನ್ಸ್ ಪರೀಕ್ಷೆಯಲ್ಲಿ ದ.ಕ ಜಿಲ್ಲೆಗೆ ಎಕ್ಸೆಲ್ ಪ್ರಥಮ
- ಇದುವರೆಗೂ 17 ವಿದ್ಯಾರ್ಥಿಗಳನ್ನು ಐಐಟಿಗೆ ಕಳಿಸಿರುವ ಗ್ರಾಮೀಣ ಪ್ರದೇಶದ ಮಕ್ಕಳ ನೆಚ್ಚಿನ ವಿದ್ಯಾಸಂಸ್ಥೆ
- 58 % ವಿದ್ಯಾರ್ಥಿಗಳ ಅಂಕ ಹತ್ತನೇ ತರಗತಿಗಿಂತ 40% ಹೆಚ್ಚಳ
- ಮೆಡಿಕಲ್ ಕ್ಷೇತ್ರದಲ್ಲಿ ಇದುವರೆಗೂ 6 ಮಕ್ಕಳನ್ನು ಏಮ್ಸ್ ಮತ್ತು ಜಿಪ್ ಮೆರ್ ಕಳುಹಿಸಿದ ಹೆಮ್ಮೆ ಎಕ್ಸೆಲ್ ನದ್ದು.
- ಕಳೆದ ವರ್ಷ 248 ವಿದ್ಯಾರ್ಥಿಗಳಿಗೆ ಮೆಡಿಕಲ್ ಸೀಟ್ ಮಾಡಿಸಿರುವ ಕರ್ನಾಟಕದ ಅದ್ವಿತೀಯ ಪಿಯು ಕಾಲೇಜು.
- ಕಳೆದ ವರ್ಷ ವಿದ್ಯಾರ್ಥಿಗಳ ಎನ್‌ಡಿಎ ಪರೀಕ್ಷೆಯ ಕನಸನ್ನು ನನಸು ಮಾಡಿದ ಸಾರ್ಥಕತೆ ಎಕ್ಸೆಲ್‌ನದ್ದು


ಜನತಾ 4ನೇ ವರ್ಷವೂ ಉತ್ತಮ ಸಾಧನೆ

• **ಕುಂದಾಪುರ :** 2025– 26ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯು ಫಲಿತಾಂಶ ಪ್ರಕಟಗೊಂಡಿದ್ದು ಕುಂದಾಪುರ ಭಾಗದ ಪ್ರತಿಷ್ಠಿತ ಹೆಮ್ಮಾಡಿಯ ಜನತಾ ಪದವಿ ಪೂರ್ವ ಕಾಲೇಜು ಸತತ 4ನೇ ವರ್ಷವೂ ಉತ್ತಮ ಶೈಕ್ಷಣಿಕ ಸಾಧನೆ ಮಾಡಿದೆ.

15 ವಿದ್ಯಾರ್ಥಿಗಳು ಅತ್ಯಧಿಕ ಅಂಕಗಳಿಸಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ರಶ್ಮಿ ಪೈ 598, ಶ್ರಾವ್ಯ ದೇವಾಡಿಗ 597, ಅಕ್ಷತಾ ವೀರಣ್ಣ 596, ಪ್ರಜ್ಞಾ ಎಸ್. ಪೂಜಾರಿ 594, ಇಂಚರಾ ಅಶೋಕ್ 594, ಮಾನ್ಯ 592, ಪ್ರಸಾದ್ ಪೂಜಾರಿ 591, ಸ್ಮೃತಿಕಾ 590 ಅತ್ಯುತ್ತಮ ಸಾಧನೆ ಮಾಡಿದರೆ,

ವಾಣಿಜ್ಯ ವಿಭಾಗದಲ್ಲಿ ಶಮ್ಯ ಶೆಟ್ಟಿ 597, ಪ್ರಥಮ ಕಾಂಚನ್ 596, ಸುಚಿತ್ರ 595, ಅನ್ವಿತಾ 594, ಸಾನಿಕಾ 593, ರನ್ವಯ್ 592, ಪ್ರೀತನ್ 591, ಕಲ್ಪಿತಾ 592 ಅಂಕ ಗಳಿಸಿ ರಾಜ್ಯ ಮಟ್ಟದಲ್ಲೇ ವಿಶೇಷ ಸಾಧನೆ ಮಾಡಿದ್ದಾರೆ, ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಈ ಸಾಧನೆ ಮೆಚ್ಚುಗೆಗೆ ಪಾತ್ರವಾಗಿದೆ.





ರಶ್ಮಿ ಪೈ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್: ಎಸ್.ಎಸ್.ಎಲ್.ಸಿ ತನಕ ಸರಕಾರಿ ಶಾಲೆಯಲ್ಲಿ ಓದಿದ್ದ ಇವರು ಪಿಯುಸಿಯನ್ನು ಹೆಮ್ಮಾಡಿಯ ಜನತಾ ಕಾಲೇಜಿನಲ್ಲಿ ಮುಂದುವರಿಸಿದ್ದರು. ಇದೀಗ ಜಿಲ್ಲೆಗೆ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಇವರು ರಾಜೇಶ ಪೈ ಮತ್ತು ಪೂಜಾ ಪೈ ದಂಪತಿಯ ಪುತ್ರಿ.


ಪದವಿ ಪೂರ್ವ ಶಿಕ್ಷಣದಲ್ಲಿ ಪ್ರಾಂಶುಪಾಲರ ಮಾರ್ಗದರ್ಶನ ಮತ್ತು ಅನುಭವಿ ಉಪನ್ಯಾಸಕರ ಅರ್ಥಪೂರ್ಣ ಪಾಠ ಪ್ರವಚನ ಜೊತೆಗೆ ಹೆತ್ತವರ ಪ್ರೋತ್ಸಾಹ ನನ್ನ ಸಾಧನೆಗೆ ದಾರಿದೀಪವಾಗಿದೆ ಎನ್ನುತ್ತಾಳೆ ರಶ್ಮಿ ಪೈ.

ಕ್ರಿಯೇಟಿವ್ ಪದವಿ ಪೂರ್ವ ಕಾಲೇಜು ಸಾಧನೆ

• **ಕಾರ್ಕಳ:** ದ್ವಿತೀಯ ಪಿಯುಸಿಯಲ್ಲಿ ಹಿರ್ಗಾನದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಅತ್ಯುತ್ತಮ ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿಗೆ ಮತ್ತು ಹೆತ್ತವರಿಗೆ ಕೀರ್ತಿ ತಂದಿದ್ದಾರೆ.

ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಪ್ರೇರಣಾ ರಾಮಚಂದ್ರ ಹೆಗ್ಡೆ ಅವರು ಒಟ್ಟು 598 ಅಂಕಗಳನ್ನು ಪಡೆಯುವ ಮೂಲಕ ಅತ್ಯುನ್ನತ ಸಾಧನೆ ಮಾಡಿದ್ದಾರೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕಾರವಾರದವರಾದ ಇವರು, ರಾಮಚಂದ್ರ ಹೆಗ್ಡೆ ಮತ್ತು ಶಿಲ್ಪಗಿರಿ ಬಿ. ಎಂ ದಂಪತಿಯ ಪುತ್ರಿ. ಕಠಿಣ ಪರಿಶ್ರಮ ಮತ್ತು ಕಾಲೇಜಿನ ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಮಿಂಚಿದ ಪ್ರತಿಭೆ: ಪಿಯುಸಿ ವಿಜ್ಞಾನ ವಿಭಾಗದಲ್ಲಿ 597 ಅಂಕ: ಗ್ರಾಮೀಣ ಪ್ರತಿಭೆ ಪ್ರಾರ್ಥನಾ ಶೆಟ್ಟಿ ಸಾಧನೆ. ರಾಜ್ಯಕ್ಕೆ ಎರಡನೇ ರ್‍ಯಾಂಕ್: ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ರಲ್ಲಿ 597 ಅಂಕಗಳನ್ನು ಗಳಿಸಿ ಪ್ರಾರ್ಥನಾ ಶೆಟ್ಟಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ನಿಟ್ಟೆ ಅತ್ತೂರು ಬಲಿಪಗುತ್ತು ನಿವಾಸಿ ಪ್ರಾರ್ಥನಾ, ಬಲಿಪಗುತ್ತು ಪ್ರಮೀಳ ಮತ್ತು ಹರೀಶ್ ದಂಪತಿ ಪುತ್ರಿ. ಪ್ರಾರ್ಥನಾ ಒಬ್ಬಳೆ ಮಗಳು. ಅವರ ತಾಯಿ ಪ್ರಮೀಳ ಲಮಿನಾ ಸಂಸ್ಥೆಯಲ್ಲಿ ಆಫೀಸ್ ಕ್ಲರ್ಕ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಪ್ರಾರ್ಥನಾ ತನ್ನ ಪರಿಶ್ರಮ ಮತ್ತು ಏಕಾಗ್ರತೆಯಿಂದ ಈ ಸಾಧನೆ ಮಾಡಿದ್ದಾರೆ. ಅವರು ಸಂಸ್ಕೃತ, ಇಂಗ್ಲಿಷ್ ಮತ್ತು ಗಣಿತದಲ್ಲಿ ತಲಾ 100 ಅಂಕಗಳನ್ನು ಗಳಿಸಿದ್ದು, ರಸಾಯನಶಾಸ್ತ್ರ, ಭೌತಶಾಸ್ತ್ರ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯಗಳಲ್ಲಿ ತಲಾ 99 ಅಂಕಗಳನ್ನು ಪಡೆದಿದ್ದಾರೆ. ವಿಶೇಷವಾಗಿ ಯಾವುದೇ ಖಾಸಗಿ ಕೋಚಿಂಗ್ ತೆಗೆದುಕೊಳ್ಳದೆ, ದಿನಕ್ಕೆ ಸುಮಾರು 5 ಗಂಟೆಗಳ ಕಾಲ ಓದುತ್ತಿದ್ದುದೇ ಅವರ ಯಶಸ್ಸಿನ ಗುಟ್ಟು.





ಪ್ರಾರ್ಥನಾ ಕ್ರಿಯೇಟಿವ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ಕಾಲೇಜಿನ ಶಿಕ್ಷಕರು ಹಾಗೂ ಸಿಬ್ಬಂದಿಗಳ ಮಾರ್ಗದರ್ಶನವೂ ಅವರಿಗೆ ಪ್ರೇರಣೆಯಾಗಿದೆ. ಜೊತೆಗೆ ತಾಯಿ ಪ್ರಮೀಲಾ, ತಂದೆ ಹರೀಶ್ ಶೆಟ್ಟಿ ಮತ್ತು ಮಾವ ಸುರೇಶ್ ಶೆಟ್ಟಿ ಅವರ ಪ್ರೋತ್ಸಾಹವೂ ಮಹತ್ವದ ಪಾತ್ರ ವಹಿಸಿದೆ.

ಇದಕ್ಕೂ ಮುನ್ನ ಪ್ರಾರ್ಥನಾ ಅವರ ತಾಯಿಗೆ ಎರಡು ಬಾರಿ ಅಪಘಾತವಾಗಿದ್ದು, ಕುಟುಂಬದ ಪರಿಸ್ಥಿತಿ ಇನ್ನಷ್ಟು ಕಠಿಣವಾಗಿತ್ತು. ಆದರೂ ಈ ಎಲ್ಲ ಸವಾಲುಗಳನ್ನು ಮೀರಿ ಪ್ರಾರ್ಥನಾ ಸಾಧನೆ ಮಾಡಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂಜಿನಿಯರಿಂಗ್ ಶಿಕ್ಷಣವನ್ನು ಮುಂದುವರಿಸಬೇಕೆಂಬ ಕನಸು ಹೊಂದಿರುವ ಪ್ರಾರ್ಥನಾ, ತನ್ನ ಸಾಧನೆಯ ಮೂಲಕ ಇತರ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾರೆ.

ಕಾಲೇಜಿನ ಹೆಮ್ಮೆ

ವಿದ್ಯಾರ್ಥಿನಿಯರ ಈ ಅದ್ಭುತ ಸಾಧನೆಗೆ ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಉಪನ್ಯಾಸಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

ಕೊಡಿಯಾಲಬೈಲ್, ತಲಪಾಡಿ ಶಾರದಾ ಅದ್ಭುತ ಸಾಧನೆ

14 ರ್‍ಯಾಂಕ್‌ಗಳ ಸುರಿಮಳೆ

• **ಮಂಗಳೂರು:** ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಮಂಗಳೂರಿನ ಶಾರದಾ ಪದವಿ ಪೂರ್ವ (ಕೊಡಿಯಾಲಬೈಲ್, ತಲಪಾಡಿ) ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ವೈಭವಿ ಎಸ್. ಕರ್ಕೇರಾ ಅವರು 600ರಲ್ಲಿ 598 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಗಾಯತ್ರಿ ಅವರು 600ರಲ್ಲಿ 596 ಅಂಕಗಳನ್ನು ಪಡೆದು ರಾಜ್ಯಕ್ಕೆ ಐದನೇ ರ್‍ಯಾಂಕ್ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ರಚನಾ ರಾಘವೇಂದ್ರ (596), ಧನ್ಯತಾ (594), ತನ್ವಿ ಬಿ. (593), ಶ್ರೇಯಾ ಬಳ್ಳಾಲ್ (592), ಮಹಾಲಕ್ಷ್ಮಿ ಜಿ. ಶೆಟ್ಟಿ (591), ರಿಶಿಕಾ ಕೆ. ಕುಲಾ (590), ವೈಷ್ಣವಿ ಎಸ್. ಕರ್ಕೇರಾ (590), ಪಿ.ಎಸ್. ಆಯುಷ್ (590) ಅವರು ರಾಜ್ಯಕ್ಕೆ ಹತ್ತರೊಳಗಿನ ರ್‍ಯಾಂಕುಗಳನ್ನು ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಮೇಧಾ ಜಿ. ಭಟ್ (595), ಕಿಶನ್ ಶೆಟ್ಟಿಗಾರ್ (593), ನೇಹಾಶ್ರೀ ಟಿ. ಎ. (593), ವಿ.ಎಸ್. ಪೂರ್ವಿಕಾ (590) ಅವರು ಉತ್ತಮ ಅಂಕಗಳನ್ನು ಪಡೆದು ರಾಜ್ಯದಲ್ಲಿ ಹತ್ತರೊಳಗಿನ ರ್‍ಯಾಂಕ್‌ಗಳನ್ನುಪಡೆದಿದ್ದಾರೆ.





59 ವಿದ್ಯಾರ್ಥಿಗಳು ಸಂಸ್ಕೃತದಲ್ಲಿ 100 ಪೂರ್ಣ ಅಂಕಗಳನ್ನು ಪಡೆದಿದ್ದಾರೆ.

ಇವರ ಅತ್ಯುತ್ತಮ ಸಾಧನೆಗೆ ಶಾರದಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ. ಎಂ.ಬಿ. ಪುರಾಣಿಕ್, ನಿರ್ದೇಶಕರಾದ ಸಮೀರ್ ಪುರಾಣಿಕ್, ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳು ಹಾಗೂ ಪ್ರಾಂಶುಪಾಲರುಗಳು ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಅದಮಾರು ಪೂರ್ಣಪ್ರಜ್ಞ ಕಾಲೇಜು: ವಿಜ್ಞಾನ ವಿಭಾಗದಲ್ಲಿ ಶೇ.100 ಫಲಿತಾಂಶ

• **ಪಡುಬಿದ್ರಿ :** ಇಲ್ಲಿನ ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ಅಂಕಿತ ಎಸ್. ಭಟ್ 597 ಅಂಕಗಳೊಂದಿಗೆ ರಾಜ್ಯಕ್ಕೆ ಮೂರನೆಯ ರ್‍ಯಾಂಕ್ ಗಳಿಸಿದ್ದಾಳೆ. ವಿಜ್ಞಾನ ವಿಭಾಗದಲ್ಲಿ ಪ್ರಿಯಾಂಕ ಎ.ಎಸ್. 594 ಅಂಕಗಳೊಂದಿಗೆ 5ನೇ ರ್‍ಯಾಂಕ್, ಅನಘ ಕಾವೂರ್ 92 ಅಂಕಗಳೊಂದಿಗೆ 7ನೇ ರ್‍ಯಾಂಕ್ ಗಳಿಸಿದ್ದಾರೆ. ದ್ವಿತೀಯ ಪಿಯುಸಿ ಪಬ್ಲಿಕ್ ಪರೀಕ್ಷೆಯಲ್ಲಿ ಶೇಕಡಾ 98 ಫಲಿತಾಂಶ ದಾಖಲಿಸಿದ್ದು ಪರೀಕ್ಷೆಗೆ ಹಾಜರಾದ 298 ವಿದ್ಯಾರ್ಥಿಗಳಲ್ಲಿ 292 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

158 ಡಿಸ್ಟಿಂಕ್ಷನ್, 112 ಪ್ರಥಮ ದರ್ಜೆಯಲ್ಲಿ ಹಾಗೂ 19 ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಶೇಕಡಾ 100 ಫಲಿತಾಂಶ ಬಂದಿದೆ. ಪ್ರಿಯಾಂಕಾ ಎಸ್. 594, ಅನಘ ಕಾವೂರ್ 592, ಅನ್ವಯ ಯಾಜಿ 591, ಕೃತಿಜಿ 588, ಅನ್ವಿತಾ ಎಸ್. ಭಟ್ 588 ಅಂಕ ಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಅಂಕಿತಾ ಎಸ್. ಭಟ್ 597, ಹಿತೇಶ ಕೆ.ಯು. 588, ಸಿಯಾಎಸ್. ಮೆಂಡನ್ 588, ಸುಜನಯ ವಿಜಯ ಶೆಟ್ಟಿ 587 ಅಂಕ ದಾಖಲಿಸಿದ್ದಾರೆ. ಸಂಸ್ಥೆಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು, ಗೌರವ ಕಾರ್ಯದರ್ಶಿ ಶ್ರೀಧರ್ ಕೆ.ರಾವ್, ಗೌರವ ಕೋಶಾಧಿಕಾರಿ ಗಣೇಶ ಹೆಬ್ಬಾರ್, ಕಾಲೇಜು ಪ್ರಾಂಶುಪಾಲ ಸಂಜೀವ ನಾಯ್ಕ್ ಅಭಿನಂದಿಸಿದ್ದಾರೆ.




ರಾಜ್ಯದ ಮೊದಲ 10 ರ್‍ಯಾಂಕ್ ಪಟ್ಟಿಯಲ್ಲಿ ಸ್ಥಾನ: ಮೂಡುಬಿದ್ರೆ ಎಕ್ಸಲೆಂಟ್ ಸಾಧನೆ

• **ಮೂಡಬಿದಿರೆ:** ಇಲ್ಲಿನ ಎಕ್ಸಲೆಂಟ್ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು ಅಭೂತಪೂರ್ವ ಯಶಸ್ಸನ್ನು ದಾಖಲಿಸಿದೆ.

ಕಾಲೇಜಿನ ಒಟ್ಟು 32 ವಿದ್ಯಾರ್ಥಿಗಳು ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ರಾಜ್ಯಮಟ್ಟದ ಮೊದಲ ಹತ್ತು ರ್‍ಯಾಂಕ್ ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ಸಂಸ್ಥೆಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಕಾಲೇಜಿನ ಶಿಸ್ತುಬದ್ಧ ಶಿಕ್ಷಣ ಮತ್ತು ತಾಂತ್ರಿಕ ಆಧಾರಿತ ಬೋಧನೆಯ ಫಲವಾಗಿ ಈ ಕೆಳಗಿನ ವಿದ್ಯಾರ್ಥಿಗಳು ಗರಿಷ್ಠ ಅಂಕಗಳನ್ನು ಪಡೆದು ಮಿಂಚಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ತನ್ಮಯಿ ಎ. ಕೋಟಿ 597 ಅಂಕಗಳು (99.50%), ನಕ್ಷಾ ವಿಜೀತ್ ಪಟೇಲ್ 593 (98.83%), ಗೋಕುಲ್ ಎಂ 593 (98.83%), ಪೂರ್ವಿ ಪಿ. ಶೆಟ್ಟಿ 593 (98.83%), ವರುಣ್ ಆರ್. 593 (98.83%), ಸಾತ್ವಿಕ್ ದತ್ತ ಬೋಯ 592 (98.67%), ಹಂಸಿಕಾ ಹೆಚ್. ಎಸ್. 592 (98.67%), ಸಮರ್ಥ ಕೆ. ಎಸ್. 592 (98.67%), ಶ್ಯಾಮಕಲ್ಯಾಣ್ ಬೆಣ್ಣೂರು 592 (98.67%), ತರುಣಿಕಾ ಎಸ್. 592 (98.67%), ಎಂ. ಆರ್. ಅಕ್ಷಿತಾ ರಾಮ್ 591 (98.50%), ಸ್ವರೂಪ ಎಂ. ಸಜ್ಜನಶೆಟ್ಟಿ 591 (98.50%), ಕುಸುಮ ಎಸ್. 591 (98.50%), ಭಾರ್ಗವ್ ಎಸ್. ಭಟ್ 590 (98.33%), ಹಿಮವಂತ್ ಪಿ. 590 (98.33%), ಗುರುಚರಣ್ ಎಂ. ಶೆಟ್ಟಿ 590 (98.33%), ಹಿಮೇಶ್ ಶಂಕರ್ 590 (98.33%), ಹೇಮಾ ಯು. 589 (98.17%), ಸಂಜನಾ ಹಳ್ಳದಮನಿ 589 (98.17%), ರಿಶಿಕಾ ಜೈರಾಮ್ ಕೊಟ್ರೇಕರ್ 589 (98.17%), ನಿಖಿಲ್ ಎಸ್. ಎಸ್. 589 (98.17%), ಲಾಕ್ಷ ವೈ. 589 (98.17%). ವಾಣಿಜ್ಯ ವಿಭಾಗದಲ್ಲಿ ಕೆ. ಎಚ್. ಅದಿತಿ ಭೂಷಣ್ 597 (99.50%), ಶೇಕ್ ಮೊಹಮ್ಮದ್ ರಮೀಜ್ 595 (99.17%), ಸುವಿತ್ ಭಂಡಾರಿ 594 (99.00%), ಶ್ರಾವಣಿ ಎಂ. 594 (99.00%), ಸುಹಾನ ಸಚಿನ್ 593 (98.83%), ಶಮಂತ್ ಕೆ. ಎಂ. 592 (98.67%), ಹೃತಿಕ್ ಎಂ. ಎನ್. 592 (98.67%), ಹರ್ಷಿತ್ ಕಲಾಲ್ 592 (98.67%), ವಿಕ್ರಮ್ 592 ಅಂಕಗಳು (98.67%), ಕಾರ್ತಿಕ್ ಸುರೇಶ್ ಅಗಡಿ 591 (98.50%).



ಅಧ್ಯಕ್ಷರ ಮೆಚ್ಚುಗೆ

ಈ ಅದ್ಭುತ ಸಾಧನೆಯ ಕುರಿತು ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಯುವರಾಜ್ ಜೈನ್ ಅವರು, 'ನಮ್ಮ ಕಾಲೇಜಿನ ಆಧುನಿಕ ಗುರುಕುಲ ಪದ್ಧತಿ, ನಿರಂತರ ಪರಿಶ್ರಮ ಮತ್ತು ವಿದ್ಯಾರ್ಥಿಗಳ ಛಲ ಈ ಯಶಸ್ಸಿಗೆ ಕಾರಣ. ಕೇವಲ ಅಂಕಗಳಿಗಾಗಿಮಾತ್ರವಲ್ಲದೆ, ಜ್ಞಾನಮತ್ತು ಸ್ಪರ್ಧಾತ್ಮಕ ಯುಗಕ್ಕೆ ಪೂರಕವಾಗಿ ನಾವು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿದ್ದೇವೆ. ಈ ಸಾಧನೆ ನಮ್ಮ ಶೈಕ್ಷಣಿಕ ಗುಣಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ' ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಸಂಸ್ಥೆಯ ಈ ಸಾಧನೆಗೆ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಬೋಧಕ ವೃಂದದವರು ವಿದ್ಯಾರ್ಥಿಗಳನ್ನು ಮತ್ತು ಅವರ ಪೋಷಕರನ್ನು ಅಭಿನಂದಿಸಿದ್ದಾರೆ.

ಕಿರುಸುದ್ದಿ



ಟಿಟಿ: ಅಗ್ರ ಮಿಯೊ ಸೋಲಿಸಿದ ಬಾತ್ರಾ

ಹೊಸದಿಲ್ಲಿ: ಅಗ್ರ ಶ್ರೇಯಾಂಕದ ಮಿಯೂ ಕಿಹರಾ ಅವರನ್ನು ಸೋಲಿಸಿರುವ ಭಾರತದ ಅನುಭವಿ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ ಚೀನಾದ ತೈಯು ಯಾನ್‌ನಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಕಂಟೆಂಡರ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದರು. ಮೊದಲನೇ ಸುತ್ತಿನ ಪಂದ್ಯದಲ್ಲಿ ಕಠಿಣ ಪೈಪೋಟಿ ಎದುರಿಸಿದ್ದ ಅವರು, ವಿಶ್ವದ ನಂಬರ್ 25ನೇ ಶ್ರೇಯಾಂಕದ ಆಟಗಾರ್ತಿಯನ್ನು 3–2ರಿಂದ ಸೋಲಿಸಿದರು. ರೋಚಕ ಹಣಾಹಣಿ ಕೊನೆಯ ಸೆಟ್‌ವರೆಗೂ ಹೋಯಿತು. ಮೊದಲನೇ ಸೆಟ್‌ನಲ್ಲಿ ವಿಶ್ವಾಸದೊಂದಿಗೆ ಕಣಕ್ಕಿಳಿದ ಭಾರತೀಯ ಆಟಗಾರ್ತಿ 11–8ರಿಂದ ಸೋಲಿಸಿದರು. ಕಂಬ್ಯಾಕ್ ಮಾಡಿದ ಮಿಯೊ 12–10ರಿಂದ ಎರಡನೇ ಸೆಟ್ ಅನ್ನು ಗೆದ್ದರು. ಮೂರನೇ ಸೆಟ್‌ನಲ್ಲಿ ಪ್ರಭಲ ಸ್ಪರ್ಧೆ ಮಾಡಿದ ಇಬ್ಬರೂ ಪಂದ್ಯದ ಗೆಲುವಿಗಾಗಿ ಹೋರಾಡಿದರು. ಟೈಬ್ರೇಕರ್‌ನಲ್ಲಿ 49ನೇ ಶ್ರೇಯಾಂಕದ ಬಾತ್ರಾ 14–12ರಿಂದ ಗೆಲುವು ಸಾಧಿಸಿ ಮತ್ತೊಮ್ಮೆ ಮುನ್ನಡೆ ಪಡೆದರು. ನಾಲ್ಕನೇ ಸೆಟ್‌ನಲ್ಲಿ ಎದುರಾಳಿ ಗೆಲ್ಲುತ್ತಿದ್ದಂತೆ ಪಂದ್ಯ ನಿರ್ಣಾಯಕ ಹಂತಕ್ಕೆ ಹೋಯಿತು. ಅಲ್ಲಿ ಮೊದಲಿನಿಂದಲೂ ಕರಾರುವಾಕ್ ಪ್ರದರ್ಶನ ನೀಡಿದ ಬಾತ್ರಾ, 11–9ರಿಂದ ಗೆದ್ದು ಬೀಗಿದರು.

ಶುಭಮನ್ ಗಿಲ್‌ಗೆ 12 ಲಕ್ಷ ರೂ. ದಂಡ

ಹೊಸದಿಲ್ಲಿ: ಗುಜರಾತ್ ಟೈಟಾನ್ಸ್ ತಂಡದ ನಾಯಕ ಶುಭಮನ್ ಗಿಲ್ ಅವರಿಗೆ ನಿಧಾನಗತಿ ಓವರ್ ಮಾಡಿಸಿರುವ ನಿಟ್ಟಿನಲ್ಲಿ 12 ರೂ. ದಂಡ ವಿಧಿಸಲಾಗಿದೆ. ದಿಲ್ಲಿ ಹಾಗೂ ಗುಜರಾತ್ ನಡುವಿನ ಪಂದ್ಯವನ್ನು ಗೆದ್ದಿರುವ ಶುಭಮನ್ ಗಿಲ್ ಪಡೆ ನಿಧಾನವಾಗಿ ಆಡಿದೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ. ಈ ಹಿಂದೆ ಶ್ರೇಯಸ್ ಅಯ್ಯರ್ ಅವರಿಗೂ ಎರಡು ಬಾರಿ ದಂಡವನ್ನು ವಿಧಿಸಲಾಗಿತ್ತು. ನಿಗದಿತ ಸಮಯದಲ್ಲಿ 20 ಓವರ್‌ಗಳು ಮುಕ್ತಾಯಗೊಳ್ಳದಿದ್ದರೆ ಅದು ಐಪಿಎಲ್ ಮಾನದಂಡದ ವಿಧೀ 2.2ರ ಅಡಿಯಲ್ಲಿ ತಪ್ಪೆಂದು ಬಣ್ಣಿಸಲಾಗುತ್ತದೆ. ಪರಿಣಾಮ ಶುಭಮನ್ ಗಿಲ್ ಅವರಿಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ. ಎರಡನೇ ತಪ್ಪಿಗೆ 24 ಲಕ್ಷ ರೂ. ದಂಡ ವಿಧೀಸಲಾಗುತ್ತದೆ.

ಇಂಡಿಯನ್ ಅಥ್ಲೆಟಿಕ್ಸ್‌ನಲ್ಲಿ ಹೆಚ್ಚಿದ ಪೈಪೋಟಿ

ಹೊಸದಿಲ್ಲಿ: ದಿಲ್ಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಡಿಯನ್ ಅಥ್ಲೆಟಿಕ್ಸ್ ಸರಣಿ 3ರಲ್ಲಿ ಶನಿವಾರ ತಾರೆಗಳ ಪೈಪೋಟಿ ಕಣ್ತುಂಬಿಕೊಳ್ಳಲಿದೆ. ಇತ್ತೀಚೆಗೆ ಅಳವಡಿಸಿದ ಹೊಸ ಮೋಂಡೋ ಟ್ರ್ಯಾಕ್‌ನಲ್ಲಿ ಪ್ರದರ್ಶನ ನೀಡುವ ಉತ್ಸಾಹ ಕ್ರೀಡಾಪಟುಗಳಲ್ಲಿ ಹೆಚ್ಚಾಗಿದೆ. ರಾಷ್ಟ್ರೀಯ ದಾಖಲೆಧಾರಿಗಳಾದ ಅನಿಮೇಶ್ ಕುಜೂರ್ (ಪುರುಷರ 100 ಮೀ ಮತ್ತು 200 ಮೀ), ವಿಶಾಲ್ ಟಿ ಕೆ (ಪುರುಷರ 400 ಮೀ), ತಜಿಂದರ್ ಪಾಲ್ ಸಿಂಗ್ ತೂರ್ (ಶಾಟ್ ಪುಟ್) ಮತ್ತು ಹಿಮಾ ದಾಸ್ (ಮಹಿಳೆಯರ 400 ಮೀ) ಸೇರಿದಂತೆ ಹಲವು ಪ್ರಮುಖರು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಜಾವೆಲಿನ್ ತೂರಾಟಗಾರ ಸಚಿನ್ ಯಾದವ್ ಕೂಡ ಕಣಕ್ಕಿಳಿಯಲಿದ್ದಾರೆ. ಅವರು 2025ರ ಟೋಕಿಯೋ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಈ ಕ್ರೀಡಾಪಟುಗಳ ಹೆಸರುಗಳು ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ ಪ್ರಕಟಿಸಿದ ಪ್ರವೇಶ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದು, ಅಂತಿಮ ಪಟ್ಟಿಯನ್ನು ಶುಕ್ರವಾರ ಪ್ರಕಟಿಸಲಾಗುತ್ತದೆ.

ಟಿ20 ಪಂದ್ಯದಲ್ಲಿ 9 ವಿಕೆಟ್ ಕಿತ್ತ ಬ್ರೆಜಿಲ್‌ನ ಲಾರಾ

ಹೊಸದಿಲ್ಲಿ: ಬ್ರೆಜಿಲಿಯನ್ ವೇಗಿ ಲಾರಾ ಕಾರ್ಡೋಸೊ ಗುರುವಾರ ಟಿ20ಐ ಇನ್ನಿಂಗ್ಸ್‌ನಲ್ಲಿ ಒಂಬತ್ತು ವಿಕೆಟ್ ಗಳನ್ನು ಪಡೆದ ಮೊದಲ ಕ್ರಿಕೆಟ್ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಮೂಲಕ ಇತಿಹಾಸ ಬರೆದರು.21 ವರ್ಷದ ಆಲ್‌ರೌಂಡರ್ ಗ್ಯಾಬೊರೋನ್‌ನ ಬೋಟ್ಸ್ವಾನಾ ಕ್ರಿಕೆಟ್ ಅಸೋಸಿಯೇಷನ್ ಓವಲ್ 2 ರಲ್ಲಿ ಲೆಸೊಥೊದ ಬ್ಯಾಟಿಂಗ್ ಲೈನ್‌ಅಪ್ ಅನ್ನು ಛಿದ್ರಗೊಳಿಸಿದರು, ಎರಡು ಮೇಡನ್ ಓವರ್‌ಗಳು ಸೇರಿದಂತೆ 9/4 (3) ರ ಅದ್ಭುತ ಸ್ಪೆಲ್ ಮಾಡಿದರು. ಇದು 2024 ರಲ್ಲಿ ಮಂಗೋಲಿಯಾ ವಿರುದ್ಧದ ಮಹಿಳಾ ಪಂದ್ಯದಲ್ಲಿ ರೋಹ್ಮಾಲಿಯಾ (ಇಂಡೋನೇಷ್ಯಾ) ಅವರ ಯಾವುದೇ ರನ್‌ಗಳಿಗೆ ಏಳು ವಿಕೆಟ್‌ಗಳ ಸ್ಪೆಲ್ ಮತ್ತು 2025 ರಲ್ಲಿ ಪುರುಷರ ಪಂದ್ಯದಲ್ಲಿ ಸೋನಮ್ ಯೆಶೆ (ಭೂತಾನ್) ಅವರ 8/7 ಸ್ಪೆಲ್‌ಗಿಂತ ಉತ್ತಮವಾಗಿದೆ.

ಲಖನೌ ತಂಡಕ್ಕೆ ಸ್ಪರ್ಧಾತ್ಮಕ ಗುರಿ | ಮಿಂಚಿದ ಪೋವೆಲ್

ಕೆಕೆಆರ್‌ಗೆ ರಹಾನೆ, ರಘುವಂಶಿ ಆಸರೆ

ಕೋಲ್ಕತ್ತಾ: ಅಜಿಂಕ್ಯಾ ರಹಾನೆ, ರಘುವಂಶಿ ಹಾಗೂ ರೋಮನ್ ಪೋವೆಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಉತ್ತಮ ಸ್ಕೋರ್ ನಿರ್ಮಿಸಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಲಖನೌ ಸೂಪರ್ ಜೇಂಟ್ಸ್ ವಿರುದ್ಧ ಸ್ಪರ್ಧಾತ್ಮಕ ಸ್ಕೋರ್ ಕಲೆ ಹಾಕಿದೆ.

ಶಮಿ ಎಂದಿನಂತೆ ಮೊದಲಿಗೆ ವಿಕೆಟ್ ಪಡೆದು ಪೆಟ್ಟು ನೀಡಿದರೂ, ಮೂರನೇ ಕ್ರಮಾಂಕದಲ್ಲಿ ಬಂದ ರಘುವಂಶಿ ಮತ್ತೊಮ್ಮೆ ಮಿಂಚಿದರು. ಮಧ್ಯಮ ಓವರ್‌ಗಳಲ್ಲಿ ಕೆಕೆಆರ್ ಗೆ ಮತ್ತೊಮ್ಮೆ ಆಘಾತವಾಯಿತು. ಅಂತಿಮದಲ್ಲಿ ಕೆಕೆಆರ್ ಮತ್ತೊಮ್ಮೆ ಉತ್ತಮ ಪ್ರದರ್ಶನ ನೀಡಿತು. ಇದರೊಂದಿಗೆ ಮೊದಲು ಬ್ಯಾಟಿಂಗ್ ಮಾಡಿರುವ ಕೆಕೆಆರ್ 20 ಓವರ್‌ಗಳಲ್ಲಿ 181 ರನ್ ಗಳಿಸಿದೆ. ಲಖನೌ ಸೂಪರ್ ಜೇಂಟ್ಸ್ 4 ವಿಕೆಟ್ ಪಡೆದಿದೆ.

ಮೊದಲನೇ ಆರು ಓವರ್‌ಗಳಲ್ಲಿ 56, ನಂತರದ 9 ಓವರ್‌ಗಳಲ್ಲಿ 59 ಮತ್ತು ಕೊನೆಯ 4 ಓವರ್‌ಗಳಲ್ಲಿ 66 ರನ್‌ಗಳು ಮೂಡಿಬಂದವು, ಮಧ್ಯಮ ಕ್ರಮಾಂಕ ಕುಸಿತ ಕಂಡರೂ ಪೋವೆಲ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು. ಇತ್ತ ಲಖನೌ ಪರ ಮತ್ತೊಮ್ಮೆ ಶಮಿ ಮಿಂಚಿದರು.

ಆರಂಭಿಕ ಆಘಾತ: ಟಾಸ್ ಸೋಲಿನಿಂದಿಗೆ ಬ್ಯಾಟಿಂಗ್‌ಗಿಳಿದ ಕೋಲ್ಕತ್ತಾ ನೈಟ್ ರೈಡರ್ಸ್ ಎರಡನೇ ಓವರ್‌ನಲ್ಲೇ ಆಲೆನ್ ವಿಕೆಟ್ ಕಳೆದುಕೊಂಡಿತು. ಮೂರನೇ ಕ್ರಮಾಂದಲ್ಲಿ ಬಂದ ರಘುಷಂಶಿ ಮತ್ತು ರಹಾನೆ ಕೊಂಚ ಹೊತ್ತು ಆಸರೆಯಾದರು. ನಾನ್‌ಸ್ಟ್ರೈಕ್‌ನಲ್ಲಿ ಉಳಿದಿದ್ದ ರಹಾನೆ ಬಾನೆತ್ತರದ ಸಿಕ್ಸರ್ ಬಾರಿಸಲು ಶುರು ಮಾಡಿದರು. ಇತ್ತ ಅಂಗ್ರಿಶ್ ತಮ್ಮ ಸ್ವಾಭಾವಿಕ ಆಟದಂತೆ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಈ ಜೋಡಿ ಬರೋಬ್ಬರಿ 84 ರನ್ ಗಳಿಸಿತು. ರಹಾನೆ 41 ರನ್‌ಗಳಿಸಿ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗುತ್ತಿರುವಾಗ ದಿಗ್ವೇಶ್‌ಗೆ ಕ್ಯಾಚ್ ಆದರು. ರಘುವಂಶಿ ಕೂಡ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಒಂದೆರಡು ಬೌಂಡರಿ ಬಾರಿಸಿದ ನಂತರ 33 ಎಸೆತಗಳಲ್ಲಿ 45 ರನ್‌ಗಳಿಸಿದ ನಂತರ ಸಿದ್ಧಾರ್ಥ್‌ಗೆ ಕ್ಯಾಚ್ ಆದರು. ಕ್ಯಾಮರನ್ ಗ್ರೀನ್ ಹಾಗೂ ರಿಂಕು ಸಿಂಗ್ ಮಧ್ಯಮ ಓವರ್‌ಗಳಲ್ಲಿ ರನ್‌ರೇಟ್ ಇಳಿಸಿದರು.



ಪೋವೆಲ್–ಗ್ರೀನ್ ಜೊತೆಯಾಟ

ಒತ್ತಡ ಹೇರಿದ ಲಖನೌ ಸೂಪರ್ ಜೇಂಟ್ಸ್ 11ರಿಂದ 14ನೇ ಓವರ್‌ಗಳವರೆಗೂ ಒಂದು ಬೌಂಡರಿ ಕೂಡ ಬಿಟ್ಟುಕೊಡಲಿಲ್ಲ. ಕೇವಲ 11 ರನ್ ಬಿಟ್ಟು ಕೊಟ್ಟು ಪ್ರಮುಖ 3 ವಿಕೆಟ್ ಕೂಡ ಪಡೆಯಿತು. ಶಮಿ ಎಂದಿನಂತೆ ಮತ್ತೊಮ್ಮೆ ಎಕನಾಮಿಕ್ ಬೌಲಿಂಗ್ ಮಾಡಿ ಮಿಂಚಿದರು. ರಿಂಕು ಸಿಂಗ್ 4 ರನ್ ಮಾತ್ರಕ್ಕೆ ವಿಕೆಟ್ ಒಪ್ಪಿಸಿದರು. ಮುಂದೆ ಬಂದ ಪೋವೆಲ್ ಅಲ್ಪ ಹೊಡೆದಾಟ ಆರಂಭಿಸಿದರು. ಸ್ಫೋಟಕ ಸಿಕ್ಸರ್‌ಗಳೊಂದಿಗೆ ಭರ್ಜರಿ ಬೌಂಡರಿಗಳನ್ನು ಬಾರಿಸಿದ ಅವರು, 24 ಬಾಲ್‌ಗಳಲ್ಲಿ ಔಟಾಗದೆ 39 ರನ್‌ಗಳಿಸಿದರು. ಗ್ರೀನ್ 24 ಬಾಲ್‌ಗಳಲ್ಲಿ 32 ರನ್ ಗಳಿಸಿದರು. ಗ್ರೀನ್ ಹಾಗೂ ಪೋವೆಲ್ ಕೊನೆಯಲ್ಲಿ 70 ರನ್‌ಗಳ ಜೊತೆಯಾಟ ನಿರ್ಮಿಸಿದರು.

ಕನ್ನಡಿಗ ಆಯುಷ್ ಕ್ವಾರ್ಟರ್‌ಫೈನಲ್‌ಗೆ

ನಿಂಗ್ಬೋ(ಚೀನಾ): ಬುಧವಾರದಂದು ವಿಶ್ವದ ಏಳನೇ ಶ್ರೇಯಾಂಕಿತ ಫೆಂಗ್ ಅವರನ್ನು ಸೋಲಿಸಿದ್ದ ಕನ್ನಡಿಗ, ಭಾರತದ ಭರವಸೆಯ ಶಟ್ಲರ್ ಆಯುಷ್ ಶೆಟ್ಟಿ ಗುರುವಾರ ನಡೆದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ತೈವಾನ್‌ನ ವೈ. ಆ ಅವರೊಂದಿಗೆ ಗೆದ್ದು ಕ್ವಾರ್ಟರ್‌ಫೈನಲ್ ಗೆ ಲಗ್ಗೆ ಹಾಕಿದರು. ಮತ್ತೋರ್ವ ಭಾರತೀಯ ಪ್ರಣೋಯ್ ಸೋತು ಹೊರಬಿದ್ದ ನಂತರ ಪ್ರತಿಷ್ಠಿತ ಏಷ್ಯನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಆಯುಷ್ ಮಾತ್ರ ಉಳಿದ ಸಿಂಗಲ್ ಆಟಗಾರ ಅನಿಸಿಕೊಂಡರು. ಚಿ ಅವರನ್ನು ಎದುರಿಸಿದ್ದ ಆಯುಷ್ ಪಂದ್ಯದುದ್ದಕ್ಕೂ ಆಕ್ರಮಣಕಾರಿ ಪ್ರದರ್ಶನ ನೀಡಿ ನೇರ ಸೆಟ್ ಗೆಲುವು ಸಾಧಿಸಿದರು. ಆರಂಭದಲ್ಲಿ ಶುರುವಾದ ಅವರ ಗೆಲುವಿನಾಟ ಕೊನೆಯವರೆಗೂ ನಿಲ್ಲಲಿಲ್ಲ. ಇತ್ತ ಎದುರಾಳಿ ಪೈಪೋಟಿಗೂ ಅವಕಾಶ ಸಿಗಲಿಲ್ಲ.

ಮೊದಲನೇ ಸೆಟ್‌ನಲ್ಲಿ ಸರ್ವ್‌ಗಳ ಮೂಲಕ ಮುನ್ನಡೆ ಸಾಧಿಸಿದ ಶೆಟ್ಟಿ, 6 ಅಂಕಗಳ ಆರಂಭಿಕ ಮುನ್ನಡೆ ಪಡೆದರು. ಅದೇ ಆಟವನ್ನು ಮುಂದುವರಿಸುತ್ತಾ ಮುನ್ನಡೆಯನ್ನು ಹಿಗ್ಗಿಸಿದರು. ಎದುರಾಳಿ 16 ಅಂಕ ಗಳಿಸುವಷ್ಟರಲ್ಲಿ ಶೆಟ್ಟಿ ಸೆಟ್ ಅನ್ನು ಗೆದ್ದುಕೊಂಡರು. ಇನ್ನು ಮುನ್ನಡೆಯೊಂದಿಗೆ ಎರಡನೇ ಸೆಟ್‌ಗೆ ಲಗ್ಗೆ ಹಾಕಿದ ಅವರು, ಅದರಲ್ಲೂ ಆರಂಭಿಕ ಮುನ್ನಡೆ ಗಳಿಸಿದರು. ಈ ಬಾರಿ ಮೊದಲಿನಿಗಿಂತಲೂ ಹಿಡಿತ. ಸರ್ವ್‌ನೊಂದಿಗೆ ವಿಶ್ವಾಸಭರಿತ ಸ್ಮ್ಯಾಷ್‌ಗಳನ್ನೂ ಬಾರಿಸಿದ ಅವರು, 21–12ರಿಂದ ಗೆದ್ದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅವರು ಇಂಡೋನೇಷ್ಯಾದ ಜೋನಾಥನ್ ಕ್ರಿಸ್ಟಿ ಅವರನ್ನು ಎದುರಿಸಲಿದ್ದಾರೆ.



ಪ್ರಣೋಯ್‌ಗೆ ಸೋಲು

ಬುಧವಾರದ ಪಂದ್ಯದಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನದೊಂದಿಗೆ ಗೆದ್ದು 16ರ ಸುತ್ತಿಗೆ ಲಗ್ಗೆ ಹಾಕಿದ್ದ ಪ್ರಣೋಯ್ ಚೀನಾದ ಎಚ್. ವೈ. ವೆಂಗ್ ಅವರೊಂದಿಗೆ ನೇರ ಸೆಟ್ ಪಂದ್ಯದಲ್ಲಿ ಸೋತರು. ವಿಶ್ವಾಸದೊಂದಿಗೆ ಕಣಕ್ಕಿಳಿದ ಅವರು ನಿರೀಕ್ಷಿತ ಪ್ರದರ್ಶನ ನೀಡಲಿಲ್ಲ. ಆರಂಭಿಕ ಸುತ್ತಿನಲ್ಲಿ ವೆಂಗ್ ಮುನ್ನಡೆ ಸಾಧಿಸಿದರು. ಅಲ್ಲಿ 21–12ರಿಂದ ಗೆದ್ದ ಅವರು ಎರಡನೇ ಸೆಟ್‌ನಲ್ಲೂ ಅದೇ ಪ್ರದರ್ಶನದೊಂದಿಗೆ ಮಿಂಚಿದರು. ಅಲ್ಲಿ 21–19ರಿಂದ ಗೆದ್ದರು.

ಮಹಿಳೆಯರ ಅಭಿಯಾನ ಅಂತ್ಯ

ಶಟ್ಲರ್‌ಗಳಾದ ಪಿ.ವಿ ಸಿಂಧು ಹಾಗೂ ಉನ್ನತಿ ಹೂಡಾ ಅವರು 16ರ ಸುತ್ತಿನ ಪಂದ್ಯದಲ್ಲಿ ಸೋತು ಹೊರಬಿದ್ದ ನಂತರ ಪಂದ್ಯಾವಳಿಯಲ್ಲಿ ಭಾರತೀಯ ಮಹಿಳೆಯರ ಅಭಿಯಾನ ಅಂತ್ಯವಾಯಿತು. ಚೀನಾದ ವಾಂಗ್ ಅವರನ್ನು ಎದುರಿಸಿದ್ದ ಭಾರತದ ಹಿರಿಯ ಆಟಗಾರ್ತಿ ಪಿ.ವಿ ಸಿಂಧು ಎರಡು ಸೆಟ್‌ಗಳ ಪಂದ್ಯದಲ್ಲಿ ಭಾರೀ ಸೋಲನುಭವಿಸಿದರು. ಮೊದಲಿನಿಂದಲೂ ಎದುರಾಳಿ ಮೇಲುಗೈ ಸಾಧಿಸಿದರು. ಮೊದಲನೇ ಸೆಟ್ ಅನ್ನು 21–18ರಿಂದ ಗೆದ್ದರೆ ಎರಡನೇ ಸೆಟ್ ಅನ್ನು 21–8ರಿಂದ ಗೆದ್ದು ಕ್ವಾರ್ಟರ್‌ಫೈನಲ್‌ಗೇರಿದರು. ಇನ್ನು ಮಿಶ್ರ ಡಬಲ್ಸ್‌ನಲ್ಲಿ ಕಪಿಲಾ ಹಾಗೂ ಕ್ರಾಸ್ಟೋ ಚೆನ್–ತೊ ಅವರೊಂದಿಗೆ ಸೋತು ಅಭಿಯಾನ ಮುಗಿಸಿದರು. ಕ್ವಾರ್ಟರ್‌ಫೈನಲ್ ಪಂದ್ಯಗಳು ಶುಕ್ರವಾರದಂದು ನಡೆಯಲಿವೆ.

ಆರ್‌ಸಿಬಿಗೆ ಹ್ಯಾಟ್ರಿಕ್ ಜಯದ ವಿಶ್ವಾಸ





ಗುವಾಹಟಿ: ಸತತ ಎರಡು ಗೆಲುವು ಸಾಧಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಇಲ್ಲಿ ನಡೆಯಲಿರುವ 16ನೇ ಪಂದ್ಯದಲ್ಲಿ ರಾಜಸ್ಥಾನ ತಂಡವನ್ನು ಎದುರಿಸಲಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಗೆಲುವುಗಳೊಂದಿಗೆ ಮೇಲಿರುವ ಉಭಯ ತಂಡಗಳು ಎದುರಾಗುತ್ತಿವೆ. ಸಾಂಘಿಕ ಬ್ಯಾಟಿಂಗ್ ಮತ್ತು ಡಫಿ ಸೇರಿದಂತೆ ವಿವಿಧ ಆಟಗಾರರ ಬೌಲಿಂಗ್‌ನೊಂದಿಗೆ ಆರ್‌ಸಿಬಿ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ. ಇತ್ತ ವೈಭವ್ ಸೂರ್ಯವಂಶಿ ಹಾಗೂ ಯಶಸ್ವಿ ಜೈಸ್ವಾಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಜೋಫ್ರಾ ಆರ್ಚರ್ ಅವರ ಬೌಲಿಂಗ್‌ನೊಂದಿಗೆ ರಾಜಸ್ಥಾನ ಸೋಲಿಲ್ಲದ ತಂಡವಾಗಿದೆ. ಮೊದಲನೇ ಪಂದ್ಯದಲ್ಲಿ ಹೈದರಾಬಾದ್, ನಂತರ ಚೆನ್ನೈ ತಂಡವನ್ನು ಆರ್‌ಸಿಬಿ ಸೋಲಿಸಿದ್ದರೆ, ಇತ್ತ ರಾಜಸ್ಥಾನ ಮುಂಬೈ, ಚೆನ್ನೈ ಹಾಗೂ ಗುಜರಾತ್ ತಂಡಗಳನ್ನು ಸೋಲಿಸಿ ಅಗ್ರಸ್ಥಾನದಲ್ಲಿದೆ. ಪಂದ್ಯ ಗುವಾಹಟಿಯಲ್ಲಿ ನಡೆಯಲಿದೆ.

ಆರ್‌ಸಿಬಿಗೆ ಆತ್ಮವಿಶ್ವಾಸ: ಹಾಲಿ ಚಾಂಪಿಯನ್ ತಂಡಕ್ಕೆ ಸೋಲೇ ಇಲ್ಲ. ಮೊದಲನೇ ಪಂದ್ಯದಿಂದಲೂ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಶಿಸ್ತಿನ ಬೌಲಿಂಗ್ ದಾಳಿ ಸೇರಿಕೊಂಡ ನಂತರ ಎರಡೂ ಪಂದ್ಯಗಳಲ್ಲಿ ಭರ್ಜರಿ ಗೆಲುವು ಸಾಧಿಸಿದೆ. ಸಮತೋಲಿತ ಪ್ರದರ್ಶನ ತಂಡದ ಶಕ್ತಿಯಾಗಿದೆ. ಬ್ಯಾಟರ್‌ಗಳು ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಸಾಲ್ಟ್, ಕೊಹ್ಲಿ, ಪಾಟಿದಾರ್, ಪಡಿಕ್ಕಲ್ ಎಲ್ಲರೂ ಅದ್ಭುತ ಲಯದಲ್ಲಿದ್ದಾರೆ. ಟೀಮ್ ಡೆವಿಡ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ಇನ್ನು ಬೌಲಿಂಗ್‌ನಲ್ಲಿ ಡಫಿ, ಕೃಣಾಲ್, ಸಾಯುಷ್ ಲಯದಲ್ಲಿದ್ದು, ಅಭಿನಂದನ್ ದುಬಾರಿಯಾಗಿದ್ದಾರೆ. ಮೂರನೇ ಗೆಲುವಿನ ನಿರೀಕ್ಷೆಯಲ್ಲಿರು ಆರ್‌ಸಿಬಿಗೆ ಶೆಫರ್ಡ್ ಬಲ ಕೂಡ ಇರಲಿದೆ.

ರಾಜಸ್ಥಾನಕ್ಕೆ ಬ್ಯಾಟಿಂಗ್ ಬಲ: ಇನ್ನು ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಭರ್ಜರಿ ಬ್ಯಾಟಿಂಗ್ ಪಡೆ ಇದೆ. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅಬ್ಬರದ ಬ್ಯಾಟಿಂಗ್ ಮಾಡಿದ್ದಾರೆ. ಕಳೆದ ಪಂದ್ಯದಲ್ಲಿ ಜೈಸ್ವಾಲ್ ಆಡಿರುವ ರೀತಿ ತಂಡದ ವಿಶ್ವಾಸವನ್ನೇ ಹೆಚ್ಚಿಸಿದೆ. ಇನ್ನು ಮಧ್ಯಮ ಕ್ರಮಾಂಕದಲ್ಲಿ ಜುರೇಲ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದ್ದಾರೆ. ಬೌಲಿಂಗ್‌ನಲ್ಲಿ ಆರ್ಚರ್, ಬಿಷ್ಣೋಯ್ ಹಾಗೂ ದೇಶಪಾಂಡೆ ವಿಶ್ವಾಸ ಹೆಚ್ಚಿಸಿದ್ದಾರೆ.

ಪಿಚ್: ಗುವಾಹಟಿ ಪಿಚ್ ಸ್ಫೋಟಕ ಬ್ಯಾಟಿಂಗ್‌ಗೆ ಅವಕಾಶ ಮಾಡಿಕೊಡಲಿದೆ. ಅಲ್ಲಿ ನಡೆದಿರುವ ಐಪಿಎಲ್ ಪಂದ್ಯಗಳಲ್ಲಿ ಬ್ಯಾಟರ್‌ಗಳೇ ಉತ್ತಮ ಪ್ರದರ್ಶನ ನೀಡಿದ್ದಾರೆ. ಬೌಲಿಂಗ್‌ನಲ್ಲಿ ಸ್ಪಿನ್ನರ್‌ಗಳು ಹೆಚ್ಚಿನ ಲಾಭ ಪಡೆದಿದ್ದಾರೆ. ಕಳೆದ ಪಂದ್ಯಕ್ಕೆ ಮಳೆ ಅಡ್ಡಿಯಾಗಿತ್ತು. ಮೊದಲು ಬೌಲಿಂಗ್ ಮಾಡುವ ತಂಡ ಲಾಭ ಪಡೆಯಲಿದೆ.

ಮುಖಾಮುಖಿ
- ಪಂದ್ಯ: 34
- ಆರ್‌ಸಿಬಿ: 17
- ರಾಜಸ್ಥಾನ: 14
- ಫಲಿತಾಂಶ ರಹಿತ: 3

ಅಗ್ರಸ್ಥಾನಕ್ಕೇರಿದ ವೈಶಾಲಿ

ಹೊಸದಿಲ್ಲಿ: ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಒಂಬತ್ತನೇ ಸುತ್ತಿನ ನಂತರ ಭಾರತದ ಆರ್. ವೈಶಾಲಿ ಗೆಲುವು ಸಾಧಿಸಿ ಸಂಯುಕ್ತ ಅಗ್ರಸ್ಥಾನಕ್ಕೆ ಏರಿದರು. ಸ್ವದೇಶದ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಅವರನ್ನು ಎದುರಿಸಿದ್ದ ಅವರು, ಚೀನಾದ ಝು ಜಿನರ್ ಜೊತೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ವೈಶಾಲಿ ಪಂದ್ಯದಲ್ಲಿ ದಿವ್ಯಾ ಮಾಡಿದ ಮಧ್ಯಭಾಗದ ತಪ್ಪನ್ನು ಚಾತುರ್ಯದಿಂದ ಬಳಸಿಕೊಂಡರು. ಏಳನೇ ಸಾಲಿನಲ್ಲಿ ಮಾಡಿದ ದಾಳಿ ನಿರ್ಣಾಯಕವಾಗಿದ್ದು, ದಿವ್ಯಾಳ ದುರ್ಬಲ ಪ್ಯಾನ್‌ಗಳನ್ನು ಗುರಿಯಾಗಿಸಿಕೊಂಡು ಸಂಪೂರ್ಣ ನಿಯಂತ್ರಣ ಸಾಧಿಸಿದರು. ಸಮಯದ ಒತ್ತಡದಲ್ಲಿದ್ದ ದಿವ್ಯಾ ಕೊನೆಗೆ ರಾಜೀನಾಮೆ ನೀಡಬೇಕಾಯಿತು. ಇನ್ನೊಂದೆಡೆ, ಭಾರತದ ಪ್ರಜ್ಞಾನಂದ ಚೀನಾದ ವೇಯಿ ಯಿ ವಿರುದ್ಧ ಉತ್ತಮ ಒತ್ತಡ ನಿರ್ಮಿಸಿದರೂ ಜಯ ಸಾಧಿಸಲು ಸಾಧ್ಯವಾಗಲಿಲ್ಲ. ಎರಡೂ ಆಟಗಾರರು ಸಮಬಲದ ಆಟ ಪ್ರದರ್ಶಿಸಿದ ಪರಿಣಾಮ ಪಂದ್ಯ ಡ್ರಾದಲ್ಲಿ ಅಂತ್ಯವಾಯಿತು. ಇತರೆ ಪಂದ್ಯಗಳಲ್ಲಿ ಉಜ್ಬೆಕಿಸ್ತಾನದ ಸಿಂದಾರೊವ್ ಮತ್ತೊಂದು ಡ್ರಾ ಸಾಧಿಸಿದರೆ, ನೆದರ್‌ಲ್ಯಾಂಡ್ಸ್‌ನ ಆನಿಶ್ ಗಿರಿ ಅಮೆರಿಕದ ಫ್ಯಾಬಿಯಾನೊ ಕರುವಾನಾ ವಿರುದ್ಧ ಗೆಲುವು ದಾಖಲಿಸಿದರು. ಅಂಡ್ರೇ ಮತ್ತು ಹಿಕಾರು ನಾಕಾಮುರಾ ನಡುವೆ ನಡೆದ ಪಂದ್ಯ ಡ್ರಾದಲ್ಲಿ ಅಂತ್ಯವಾಯಿತು. ಮಹಿಳಾ ವಿಭಾಗದಲ್ಲಿ ಅನ್ನಾ ಮುಝುಚಕ್ ಮತ್ತು ಟ್ಯಾನ್ ಝೋಂಗಿ ನಡುವೆ ಪಂದ್ಯ ಡ್ರಾ ಆಗಿದ್ದು, ಅಲೆಕ್ಸಂದ್ರಾ ಗೊರ್ಯಾಚ್ಕಿನಾ ಮತ್ತು ಬಿಬಿಸಾರಾ ಕೂಡ ಅಂಕ ಹಂಚಿಕೊಂಡರು. ಈ ಗೆಲುವಿನೊಂದಿಗೆ ವೈಶಾಲಿ ಪ್ರಶಸ್ತಿಗಾಗಿ ಬಲಿಷ್ಠ ಸ್ಪರ್ಧಿಯಾಗಿ ಹೊರಹೊಮ್ಮಿದ್ದಾರೆ.



ಜಪಾನ್‌ನಲ್ಲಿ ವಿಶ್ವಕಪ್ ಅರ್ಹತಾ ಸುತ್ತು

ಹೊಸದಿಲ್ಲಿ: ವರ್ಷದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗಾಗಿ ನಿರ್ಮಿಸಲಾಗಿರುವ ಜಪಾನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಟಿ20 ವಿಶ್ವಕಪ್ ಪಂದ್ಯಾವಳಿಯ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ. ಗುರುವಾರ ಐಸಿಸಿ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಬೇಸ್‌ಬಾಲ್ ಮ್ಯಾಡ್ ನಿರ್ಮಿಸಿರುವ ಹೊಸ ಕ್ರೀಡಾಂಗಣದಲ್ಲಿ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ ಎಂದು ಘೋಷಿಸಿದೆ. ಅಲ್ಲಿನ ನಗೋಯಾ ಮತ್ತು ಐಚಿಯಲ್ಲಿ ಸೆಪ್ಟೆಂಬರ್ 19ರಿಂದ ಅಕ್ಟೋಬರ್ 4ರ ವರೆಗೆ ಪಂದ್ಯಗಳು ನಡೆಯಲಿವೆ. ನಗೋಯಾದಲ್ಲಿ ಈಸ್ಟ್ ಏಷ್ಯಾ ಪೆಸಿಫಿಕ್ ಪಂದ್ಯಗಳು ನಡೆಯಲಿವೆ. ಒಟ್ಟು 9 ತಂಡಗಳು 2028ರಲ್ಲಿ ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ಪಂದ್ಯಾವಳಿಯ ಅರ್ಹತೆಗೆ ಪೈಪೋಟಿ ನಡೆಯಲಿವೆಫ ವಿಶ್ವಕಪ್ ಅರ್ಹತಾ ಸುತ್ತುಗಳನ್ನು ಆಯೋಜಿಸುವ ಅವಕಾಶ ಸಿಕ್ಕಿರುವುದು ನಮಗೆ ಖುಷಿಯ ವಿಚಾರ. ಇದರಿಂದ ನಮಗೆ ದೊಡ್ಡ ಪಂದ್ಯಾವಳಿಗಳನ್ನು ಆಯೋಜಿಸುವ ಸಾಮರ್ಥ್ಯ ಸಾಬೀತು ಪಡಿಸಲು ಅವಕಾಶ ಸಿಗುತ್ತದೆಫ ಎಂದು ಅಲ್ಲಿನ ಸಂಸ್ಥೆಯ ಮುಖ್ಯಸ್ಥ ಅಲೆನ್ ಕರ್ರ್ ಹೇಳಿದ್ದಾರೆ.

ಬಿಲ್ಲಿ ಜೀನ್ ಕಿಂಗ್ ಕಪ್: ಭಾರತಕ್ಕೆ ಭರ್ಜರಿ ಗೆಲುವು

ಹೊಸದಿಲ್ಲಿ: ಹಿನ್ನಡೆ ಅನುಭವಿಸಿದ ನಂತರವೂ ಅತ್ಯುತ್ತಮ ಪ್ರದರ್ಶನ ನೀಡಿರುವ ಭಾರತೀಯ ಮಹಿಳೆಯರ ಟೆನಿಸ್ ತಂಡವು ಬಿಲ್ಲಿ ಜೀನ್ ಕಿಂಗ್ ಕಪ್ ಪಂದ್ಯಾವಳಿಯ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಗೆದ್ದಿದೆ. ಇದರೊಂದಿಗೆ ಮೊದಲನೇ ಸುತ್ತಿನ ಪಂದ್ಯಗಳ ನಂತರ ಅಗ್ರ ಎರಡರಲ್ಲಿ ಕಾಣಿಸಿಕೊಂಡಿದೆ.

ಬುಧವಾರದಂದು ದಿಲ್ಲಿಯಲ್ಲಿ ನಡೆದ ಪಂದ್ಯದಲ್ಲಿ 3–0ರಿಂದ ಗೆದ್ದಿರುವ ಭಾರತ ತಂಡವು ಥೈಲ್ಯಾಂಡ್ ಸೋಲಿನಿಂದ ಹೊರಬಂದಿದೆ. ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಉದಯೋನ್ಮುಖ ತಾರೆ ವೈಷ್ಣವಿ ಅಡ್ಕರ್ ಹಾಗೂ ಸಹಜಾ ಯಮಲಾಪಲ್ಲಿ ಅತ್ಯುತ್ತಮ ಪ್ರದರ್ಶನದೊಂದಿಗೆ ಮುನ್ನಡೆ ತಂದುಕೊಟ್ಟರು. ಇಬ್ಬರೂ ಗೆಲುವಿನೊಂದಿಗೆ ಭಾರತಕ್ಕೆ 2–0ರ ಮುನ್ನಡೆ ತಂದುಕೊಟ್ಟಿತು. ಮಂಗಳವಾರ ನಡೆದಿದ್ದ ಪಂದ್ಯದಲ್ಲಿ ಅಡ್ಕರ್ ಐಶಿ ದಾಸ್ ಅವರನ್ನು ಎದುರಿಸಿದ್ದರು. 6–2, 6–4ರಿಂದ ಗೆದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಅವರು ಯಾವುದೇ ಹಂತದಲ್ಲೂ ಎದುರಾಳಿಗೆ ಅವಕಾಶ ನೀಡಿರಲಿಲ್ಲ. ಎರಡನೇ ಪಂದ್ಯದಲ್ಲಿ ವಾಲೆಂಟಿನಾ ಅವರೊಂದಿಗೆ ಆಡಿದ ಸಹಜಾ 6–1, 6–3 ರಿಂದ ಗೆಲುವು ಸಾಧಿಸಿದರು. ಮುಂದಿನ ಜೋಡಿ ಪಂದ್ಯದಲ್ಲಿ ಅಂಕಿತಾ ಹಾಗೂ ಭೋಸ್ಲೇ ಕಣಕ್ಕಿಳಿದರು. ನ್ಯೂಜಿಲೆಂಡ್‌ನ ಬ್ಯಾರಿ ಮತ್ತು ಇರಿನ್ ಅವರನ್ನು ಎದುರಿಸಿದ್ದ ಈ ಜೋಡಿ 6–4, 6–2 ರಿಂದ ಗೆಲುವು ಸಾಧಿಸಿತು.



- ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ 3–0ರಿಂದ ಜಯ
- ಅಡ್ಕರ್, ಸಹಜಾ ಅಬ್ಬರ
- ಅಗ್ರ ಎರಡರಲ್ಲಿ ಭಾರತ

ರಾಹುಲ್, ಮಿಲ್ಲರ್ ಪರಾಕ್ರಮಕ್ಕಿಲ್ಲ ಜಯ

ಹೊಸದಿಲ್ಲಿ: ಕೊನೆ ಬಾಲ್ ರೋಚಕ ಪಂದ್ಯದಲ್ಲಿ ಸೋಲೊಪ್ಪಿಕೊಳ್ಳದೆ ಹೋರಾಡಿದ ಗುಜರಾತ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 14ನೇ ಪಂದ್ಯದಲ್ಲಿ ದಿಲ್ಲಿ ತಂಡವನ್ನು 1 ರನ್‌ನಿಂದ ಸೋಲಿಸಿದೆ.


ಗಾಯಗೊಂಡಿದ್ದ ಡೆವಿಡ್ ಮಿಲ್ಲರ್ ಸ್ಫೋಟಕ ಬ್ಯಾಟಿಂಗ್ ಆಟವು ಮತ್ತೊಮ್ಮೆ ವ್ಯರ್ಥವಾದಂತಾಯಿತು. ಕೊನೆ ಬಾಲ್‌ನಲ್ಲಿ 2 ರನ್ ಬೇಕಿದ್ದಾಗ ರನೌಟ್ ಆಗಿದ್ದು, ದಿಲ್ಲಿ ಕ್ಯಾಪಿಟಲ್ಸ್ ಪಡೆ ಗುಜರಾತ್ ಟೈಟಾನ್ಸ್ ನೀಡಿದ್ದ 210 ರನ್ ಗಳ ಗುರಿಯನ್ನು ಪೇರಿಸಲಿಲ್ಲ. 209 ರನ್ ಮಾತ್ರ ಗಳಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಗುಜರಾತ್ 20 ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿತು. ಗಿಲ್, ಬಟ್ಲರ್, ವಾಷಿಂಗ್ಟನ್ ಸುಂದರ್ ಅವರ ಅರ್ಧ ಶತಕಗಳ ನೆರವಿನಿಂದ 210 ರನ್ ಗಳಿಸಿತ್ತು. ಗುರಿ ಬೆನ್ನಟ್ಟುವಾಗ ದಿಲ್ಲಿ ತಂಡ ಕೆ.ಎಲ್.ರಾಹುಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿತು. ಬೇಗನೆ ವಿಕೆಟ್ ಗಳನ್ನು ಕಳೆದುಕೊಂಡಿದ್ದರು. ರಾಹುಲ್ ಏಕಾಂಗಿ ಹೋರಾಟ ನಡೆಸಿದರು. ಕೊನೆಯ ಓವರ್‌ಗಳಲ್ಲಿ ಮಿಲ್ಲರ್ ಅಬ್ಬರಿಸಿದರು. ಇದರೊಂದಿಗೆ 20 ಓವರ್ ಗಳಲ್ಲಿ 8 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿ ಸೋತಿತು.



ಮಿಲ್ಲರ್ ಅಬ್ಬರಕ್ಕೆ ಸಿಗದ ಜಯ: ಗುರಿ ಬೆನ್ನತ್ತುವಾಗ ರಾಹುಲ್ ಹಾಗೂ ನಿಸ್ಸಂಕಾ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. 76 ರನ್ ಜೊತೆಯಾಟದ ನಂತರ ನಿಸ್ಸಂಕಾ ವಿಕೆಟ್ ಒಪ್ಪಿಸಿದರು. ನಂತರ ರಾಹುಲ್ ತಮ್ಮ ಸ್ಫೋಟಕ ಬ್ಯಾಟಿಂಗ್ ಮುಂದುವರಿಸುತ್ತಲೇ ಇದ್ದರು. ಇನ್ನೇನು ಪಂದ್ಯ ಕಸಿದರು ಅನ್ನುವಷ್ಟರಲ್ಲಿ ರಶೀದ್ ಖಾನ್ ಸರಸರನೇ 2 ವಿಕೆಟ್ ಪಡೆದರು. ಆದರೆ ರಾಹುಲ್ ಅವರ ಆಟ ಮಾತ್ರ ನಿಲ್ಲಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಮಿಲ್ಲರ್ ಬಂದು ಒಂದೆರಡು ಬೌಂಡರಿ ಬಾರಿಸಿ ಮತ್ತೆ ನಿವೃತ್ತರಾದರು. ರಾಹುಲ್ 92 ರನ್‌ಗಳಿಗೆ ವಿಕೆಟ್ ಒಪ್ಪಿಸಿದ ನಂತರ ಗುಜರಾತ್ ಪಂದ್ಯಕ್ಕೆ ಮರಳಿತು. ಆದರೆ ಮತ್ತೊಮ್ಮೆ ಬ್ಯಾಟಿಂಗ್ ಗಿಳಿದ ಮಿಲ್ಲರ್ ಬಾನೆತ್ತರದ ಸಿಕ್ಸರ್‌ಗಳೊಂದಿಗೆ ಪಂದ್ಯವನ್ನು ಮರಳಿ ತಂದರು. 21 ಬಾಲ್‌ಗಳಲ್ಲಿ 36 ರನ್ ಬೇಕಿತ್ತು. ಡೆವಿಡ್ 23 ರನ್ ಚಚ್ಚಿದರು. ಕೊನೆಯ ಓವರ್‌ನಲ್ಲಿ 13 ರನ್ ಬೇಕಿತ್ತು. ಪ್ರಸಿದ್ಧ ಕೃಷ್ಣ ಬೌಲಿಂಗ್‌ಗೆ ಬಂದರು. ಮೊದಲನೇ ಬಾಲ್ ಅಲ್ಲೇ ಬೌಂಡರಿ ನಾಲ್ಕನೇ ಬಾಲ್‌ನಲ್ಲಿ ಸಿಕ್ಸರ್ ಬಾರಿಸಿದ ಮಿಲ್ಲರ್ ಪಂದ್ಯವನ್ನು ಬಹುತೇಕ ಗೆಲ್ಲಿಸಿದ್ದರು. 2 ಬಾಲ್‌ಗಳಲ್ಲಿ 2 ರನ್ ಬೇಕಿದ್ದಾಗ ಸಿಂಗಲ್ ಸಿಕ್ಕರೂ ಮಿಲ್ಲರ್ ನಿರಾಕರಿಸಿದರು. ಕೊನೆಯ ಬಾಲ್‌ಗೆ 2 ರನ್ ಬೇಕಿತ್ತು. ಸ್ಲೋವರ್ ಶಾರ್ಟ್ ಬಾಲ್ ಡಾಟ್ ಆದ ತಕ್ಷಣ ಬಟ್ಲರ್ ರೋಮಾಂಚನಕಾರಿ ರನೌಟ್ ಮೂಲಕ ಪಂದ್ಯವನ್ನು ಗೆಲ್ಲಿಸಿದರು.

ಪದಬಂಧ 5949

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಕೊಲೆ–ಕಳ್ಳತನ ಕಂಡುಹಿಡಿಯುವವನು (4)
5.ಆಶ್ರಯ–ಅವಲಂಬನವಿದು (3)
6.ದೇವರನ್ನು ಪೂಜಿಸುವ ಸ್ಥಳ (3)
8.ಶಹನಾಯಿಯ ಇನ್ನೊಂದು ಹೆಸರು (3)
9.ನೀರಿನಲ್ಲಿ ಚಲಿಸುವ ಸಂಚಾರ ಸಾಧನ (3)
10.ಬಿಸಿ ಕಡೆಯಲ್ಲಿರುವ ಶೌರ್ಯ (3)
14.ಇಸ್ಲಾಮಿಕ್ ರಾಷ್ಟ್ರದ ಪ್ರಧಾನಮಂತ್ರಿ (3)
16.ಸಾಧನೆಯ ಸ್ಮರಣಿಕೆಯಾಗಿ ನೀಡುವ ಲೋಹದ ಬಿಲ್ಲೆ (3)
17.ಇದು ಒಳ್ಳೆಯ ನಡಿಗೆ–ಮೋಕ್ಷ (3)
18.ಸಂಪೂರ್ಣವಾಗಿ ಪಕ್ವವಾಗಿರುವುದು (4)

ಮೇಲಿನಿಂದ ಕೆಳಕ್ಕೆ :
2.ದಾರದ ನಡುವೆ ನೀರಡಿಕೆಯಡಗಿದೆ (3)
3.ವೀರರ ನಡುವಿನ ಮುನಿಸು (3)
4.ಪ್ರತಿದಿನಕ್ಕೆ ಸಂಬಂಧಿಸಿದುದು (4)
5.ದವಾಖಾನೆ–ವೈದ್ಯಶಾಲೆಯಿದು (3)
7.ಸ್ವರ್ಗದಲ್ಲಿ ಹುಟ್ಟಿದವನು–ದೇವತೆ (3)
11.ಪದದ ನಡುವೆ ಅಡಗಿದ ವ್ಯಾಪಾರಿ (3)
12.ಈಶ್ವರನ ಭಕ್ತಸಮೂಹ (4)
13.ವಂತಿಗೆಯ ಬಗ್ಗೆ ಜನರಾಡಿಕೊಳ್ಳುವ ಮಾತು (3)
15.ರಾಕ್ಷಸ ತಲೆಕೆಳಗಾಗಿದ್ದಾನೆ (3)
16.ಪಲಾಯನಗೈಯುವಿಕೆ (3)

5948 ಉತ್ತರ

ಎಡದಿಂದ ಬಲಕ್ಕೆ: 3.ಮದಗಜ 5.ಸಕ್ಕರೆ 7.ಹಸಿರು 8.ಸಬಲೆ 10.ಪಟ್ಟಾಂಗ 11.ಮಾಳಿಗೆ 14.ಕಟಕಿ 16.ವೈಭವ 17.ಸ್ವದೇಶಿ 18.ದೇಶಾಟನ

ಮೇಲಿನಿಂದ ಕೆಳಕ್ಕೆ : 1.ಹಾಲಾಹಲ 2.ಮೊಸರು 4.ದವಸ 6.ತಾವರೆ 9.ಬಡಿಗೆ 10.ಪಲ್ಲಟ 12.ಸ್ವಗೃಹ 13.ಮಾವಟಿಗ 15.ಕಿರೀಟ 16.ವೈಶಿಷ್ಟ

ಕಿರು ಸುದ್ದಿ



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಎಲ್.ಅಶ್ವಿನಿ ಅವರು ವರ್ಕಾಡಿ ಪಂಚಾಯತ್‌ನ ಕೊಡ್ಲಮೊಗರು ಶ್ರೀ ವಾಣೀ ವಿಜಯ ಎಯುಪಿ ಶಾಲೆಯ 49ನೇ ನಂಬ್ರ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಏ.14ರಿಂದ ಕಟೀಲು ಜಾತ್ರೆ

ಕಟೀಲು : ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಏ. 14ರಂದು ಧ್ವಜಾರೋಹಣದೊಂದಿಗೆ ವರ್ಷಾವಧಿ ಉತ್ಸವ ನಡೆಯಲಿದೆ. ಏ. 13ರಂದು ರಾತ್ರಿ ಅಂಕುರ ಬಲಿ, ಏ. 15ರಂದು ಯುಗಾದಿ ದೀಪದ ಬಲಿ, ಏ. 16ಕ್ಕೆ ಭ್ರಾಮರೀವನದಲ್ಲಿ ಪ್ರತಿಷ್ಠಾ ವರ್ಧಂತಿ, ಮೂಡುಸವಾರಿ, ಏ. 17ರಂದು ದೀಪದ ಬಲಿ, ಉತ್ಸವ ಬಲಿ, ಏ.18ರಂದು ರಾತ್ರಿ ಬೆಳ್ಳಿ ರಥೋತ್ಸವ, ಏ. 19ರಂದು ಬ್ರಹ್ಮಸನ್ನಿಧಿಯಲ್ಲಿ ಪರ್ವ, ಪಡುಸವಾರಿ, ಏ. 20ರಂದು ಹಗಲು ಬ್ರಹ್ಮರಥೋತ್ಸವ, ರಾತ್ರಿ ಶಯನ, ಏ.21ರಂದು ಬೆಳಿಗ್ಗೆ ಕವಾಟೋದ್ಘಾಟನೆ, ರಾತ್ರಿ ಅವಭೃತೋತ್ಸವ, ಎಕ್ಕಾರು ಯಾತ್ರೆ, ಬ್ರಹ್ಮರಥೋತ್ಸವ, ತೂಟೆದಾರ ನಡೆಯಲಿದೆ. ದಿನಂಪ್ರತಿ ಚಿನ್ನದ ಪಲ್ಲಕ್ಕಿ ಉತ್ಸವ, ಚಿನ್ನದ ರಥೋತ್ಸವ ಹಾಗೂ ಸರಸ್ವತೀ ಸದನದಲ್ಲಿ ದಿನವಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ವಾಹನದಿಂದ ಸರಳು ಇಳಿಸುತ್ತಿದ್ದ ವೇಳೆ ದೇಹದ ಮೇಲೆ ಬಿದ್ದು ಚಾಲಕ ಮೃತ್ಯು

ಕಾಸರಗೋಡು: ವಾಹನದಿಂದ ಸರಳುಗಳನ್ನು ಇಳಿಸುತ್ತಿದ್ದ ವೇಳೆ ಮೈಮೇಲೆ ಬಿದ್ದು ಚಾಲಕ ಸಾವನ್ನಪ್ಪಿದ ಘಟನೆ ನಡೆದಿದೆ. ಕಾಸರಗೋಡು ಅಣಂಗೂರು ಕೊಲ್ಲಂಪಾಡಿ ನಿವಾಸಿ ಅಶ್ರಫ್ (56) ಮೃತಪಟ್ಟ ದುರ್ದೈವಿ. ನುಳ್ಳಿಪ್ಪಾಡಿಯಲ್ಲಿರುವ ಕಟ್ಟಡ ನಿರ್ಮಾಣ ಸಾಮಗ್ರಿ ಮಾರಾಟದಂಗಡಿಯ ವಾಹನ ಚಾಲಕರಾಗಿದ್ದ ಅವರು, ಬುಧವಾರ ಮಧ್ಯಾಹ್ನ ವಾಹನದಲ್ಲಿ ಸರಳು ಸಹಿತ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಹೇರಿಕೊಂಡು ಚೆಂಗಳ ಸಂತೋಷ್‌ನಗರಕ್ಕೆ ತೆರಳಿ ಅವುಗಳನ್ನು ಇಳಿಸಲೆಂದು ವಾಹನದ ಮೇಲೇರಿ ಹಗ್ಗವನ್ನು ಬಿಡಿಸುತ್ತಿದ್ದ ಸಂದರ್ಭ ಲಾರಿ ಒಂದು ಭಾಗಕ್ಕೆ ವಾಲಿ ಸರಳು ಸಹಿತ ಅಶ್ರಫ್‌ರ ಮೇಲೆ ಬಿದ್ದಿದೆ. ಪರಿಸರದಲ್ಲಿದ್ದವರು ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸಿದರೂ ಪ್ರಯೋಜನವಾಗಲಿಲ್ಲ. ವಿದ್ಯಾನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತರು ಪತ್ನಿ, ನಾಲ್ಕು ಮಂದಿ ಮಕ್ಕಳನ್ನು ಅಗಲಿದ್ದಾರೆ.

ಅರಂಪಾಡಿ: ಮನೆ ಅಂಗಳದಿಂದ ನಾಯಿ ಹೊತ್ತೊಯ್ದ ಚಿರತೆ

ಸುಬ್ರಹ್ಮಣ್ಯ: ಯೇನೆಕಲ್ಲು ಸಮೀಪದ ಏನೆಕಲ್ಲು ಗ್ರಾಮದ ಅರಂಪಾಡಿ ಈಶ್ವರ ಗೌಡ ಎಂಬವರ ಮನೆಯಲ್ಲಿ ಬುಧವಾರ ತಡ ರಾತ್ರಿ ನಾಯಿಯನ್ನು ಚಿರತೆ ಕೊಂಡೊಯ್ದ ಘಟನೆ ನಡೆದಿದೆ. ಮಲಗಿದ್ದ ನಾಯಿಯನ್ನು ಚಿರತೆ ಬಂದು ಕೊಂಡೊಯ್ದಿರುವ ವೀಡಿಯೊ ಸಿ.ಸಿ. ಕ್ಯಾಮರಾದಲ್ಲಿ ಸೆರೆಯಾಗಿದೆ. ಕೆಲ ದಿನಗಳ ಹಿಂದೆ ಕಿಶೋರ್ ಅರಂಪಾಡಿಯ ಮನೆಯ ನಾಯಿಯನ್ನು ಚಿರತೆ ಕೊಂದಿತ್ತು ಎನ್ನಲಾಗಿದೆ. ಅರಂಪಾಡಿ ವ್ಯಾಪ್ತಿಯಲ್ಲಿ ಕಾಡು ಪ್ರದೇಶವಿದ್ದು ರಸ್ತೆಯಲ್ಲಿ ನಡೆದುಕೊಂಡು ಹೋಗಲು ಭಯವಾಗಲಾರಂಭಿಸಿದ್ದು, ಈ ಕುರಿತು ರಸ್ತೆ ಬದಿಯಲ್ಲಿ ಪಂಚಾಯತ್ ವತಿಯಿಂದ ಸೋಲಾರ್ ಲೈಟ್ ಅಳವಡಿಸಲು ಮನವಿ ಮಾಡಲಾಗಿದೆ. ಜನರಲ್ಲಿ ಭೀತಿಯನ್ನು ಮೂಡಿಸುತ್ತಿರುವ ಚಿರತೆಯನ್ನು ಬೋನಿಟ್ಟು ಹಿಡಿದು ಸ್ಥಳಾಂತರಿಸಲು ಅರಣ್ಯ ಸಚಿವರಲ್ಲಿ ಹಾಗೂ ಅರಣ್ಯ ಅಧಿಕಾರಿಗಳಲ್ಲಿ ಮನವಿ ಸಲ್ಲಿಸಲು ನಿರ್ಧರಿಸುವುದಾಗಿ ತಿಳಿದು ಬಂದಿದೆ.

ವಿಧಾನಸಭಾ ಚುನಾವಣೆ ಶಾಂತಿಯುತ | ಮತಯಂತ್ರಗಳಲ್ಲಿ 32 ಮಂದಿ ಅಭ್ಯರ್ಥಿಗಳ ಭವಿಷ್ಯ ಭದ್ರ

ಕಾಸರಗೋಡು ಜಿಲ್ಲೆ: ಶೇ.79.03 ಮತದಾನ

ಕಾಸರಗೋಡು: 2026ನೇ ಕೇರಳ ರಾಜ್ಯ ವಿಧಾನಸಭಾ ಚುನಾವಣೆಯು ಗುರುವಾರ ಶಾಂತಿಯುತವಾಗಿ ನಡೆಯಿತು. ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಾದ ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನವು ಬಹುತೇಕ ಯಶಸ್ವಿಯಾಯಿತು. ಜಿಲ್ಲೆಯಲ್ಲಿ ರಾತ್ರಿ 9.30ರ ವರೆಗಿನ ಅಂಕಿ ಅಂಶಗಳ ಪ್ರಕಾರ ಶೇಕಡಾ 79.03ರಷ್ಟು ಮತದಾನವಾಗಿದೆ.

ಮಂಜೇಶ್ವರದಲ್ಲಿ ಶೇಕಡಾ 80.64, ಕಾಸರಗೋಡಿನಲ್ಲಿ ಶೇಕಡಾ 79.61, ಉದುಮದಲ್ಲಿ ಶೇಕಡಾ 78.06, ಕಾಞಂಗಾಡಿನಲ್ಲಿ ಶೇಕಡಾ 77.24, ತೃಕ್ಕರೀಪುರದಲ್ಲಿ ಶೇಕಡಾ 79.65 ಮತದಾನ ದಾಖಲಾಗಿದೆ.

ಕಾಸರಗೋಡು ಜಿಲ್ಲೆಯಲ್ಲಿ ಹೆಚ್ಚಿನ ಬೂತ್‌ಗಳಲ್ಲೂ ಬೆಳಗ್ಗೆ ಮತದಾನವು ನೀರಸವಾಗಿತ್ತು. ಮಧ್ಯಾಹ್ನ ಮತ್ತು ಸಂಜೆ ವೇಳೆಗೆ ಉತ್ತಮ ಮತದಾನವಾಗಿದ್ದು, ಸರದಿ ಸಾಲು ವ್ಯಾಪಕವಾಗಿ ಕಂಡುಬಂದಿತ್ತು. 85 ವರ್ಷ ಮೇಲ್ಪಟ್ಟವರಿಗೆ ಮತ್ತು ದಿವ್ಯಾಂಗ ವಿಭಾಗದವರಿಗೆ ಈ ಮೊದಲೇ ಮನೆಯಲ್ಲೇ ಮತದಾನ ವ್ಯವಸ್ಥೆ ಮಾಡಲಾಗಿತ್ತು. ಪ್ರತೀ ಮತಗಟ್ಟೆಗಳಲ್ಲೂ ವೀಲ್ ಚೆಯರ್ ವ್ಯವಸ್ಥೆ ಏರ್ಪಡಿಸಿದ್ದರಿಂದ ಹಿರಿಯ ನಾಗರಿಕರಿಗೆ ಮತ್ತು ದಿವ್ಯಾಂಗರಿಗೆ ಅತೀ ಹೆಚ್ಚು ಪ್ರಯೋಜನವಾಯಿತು.

ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯಿಂದ ಕೆ.ಸುರೇಂದ್ರನ್, ಮುಸ್ಲಿಂಲೀಗ್‌ನಿಂದ ಎ.ಕೆ.ಎಂ.ಅಶ್ರಫ್, ಸಿಪಿಎಂನಿಂದ ಕೆ.ಆರ್.ಜಯಾನಂದ ಹಾಗೂ ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯಿಂದ ಎಂ.ಎಲ್. ಅಶ್ವಿನಿ, ಮುಸ್ಲಿಂಲೀಗ್‌ನಿಂದ ಕಲ್ಲಟ್ರ ಮಾಹಿನ್ ಹಾಜಿ, ಎಲ್‌ಡಿಎಫ್ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಶಾನವಾಸ್ ಪಾದೂರು ಕಣದಲ್ಲಿದ್ದಾರೆ.

ಉದುಮ ಕ್ಷೇತ್ರದಲ್ಲಿ ಬಿಜೆಪಿಯಿಂದ ಮನುಲಾಲ್ ಮೇಲತ್, ಸಿಪಿಎಂನಿಂದ ಸಿ.ಎಚ್. ಕುಂಞಂಬು, ಕಾಂಗ್ರೆಸ್‌ನಿಂದ ಕೆ.ನೀಲಕಂಠನ್, ಕಾಞಂಗಾಡು ಕ್ಷೇತ್ರದಲ್ಲಿ ಬಿಜೆಪಿಯಿಂದ ಎಂ.ಬಲರಾಜ್, ಸಿಪಿಐಯಿಂದ ಗೋವಿಂದನ್ ಪಳ್ಳಿಕಾಪಿಲ್, ಕೇರಳ ಕಾಂಗ್ರೆಸ್‌ನಿಂದ ಶೈಜಿ ಒಟ್ಟಪ್ಪಳ್ಳಿ, ತೃಕ್ಕರೀಪುರ ಕ್ಷೇತ್ರದಲ್ಲಿ ಎನ್‌ಡಿಎಯಿಂದ ರವಿ ಕುಳಂಗರ, ಸಿಪಿಎಂನಿಂದ ಡಾ.ವಿ.ಪಿ.ಪಿ.ಮುಸ್ತಾಫ, ಕಾಂಗ್ರೆಸ್‌ನಿಂದ ಸಂದೀಪ್ ವಾರಿಯರ್ ಪ್ರಮುಖವಾಗಿ ಕಣದಲ್ಲಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 32 ಮಂದಿ ಅಭ್ಯರ್ಥಿಗಳ ಭವಿಷ್ಯ ಮತಯಂತ್ರದಲ್ಲಿ ಭದ್ರವಾಗಿದ್ದು, ಮೇ 4ರಂದು ಮತ ಎಣಿಕೆ ಫಲಿತಾಂಶ ಹೊರಬೀಳಲಿದೆ.

ಕಾಸರಗೋಡಿನ ಮಾದರಿ ಬೂತ್‌ಗಳಿಗೆ ಜಿಲ್ಲಾಧಿಕಾರಿ ಭೇಟಿ

ಕಾಸರಗೋಡು: ವಿಧಾನಭಾ ಚುನಾವಣೆಯ ಪ್ರಯುಕ್ತ ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮತದಾನ ಏರ್ಪಡಿಸಲಾದ ವಿವಿಧ ಮಾದರಿ ಮತಗಟ್ಟೆಗಳಿಗೆ ಭೇಟಿ ನೀಡಿ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿದರು. ಜಿಲ್ಲಾಧಿಕಾರಿಗಳು ಮಂಜೇಶ್ವರ ಮಂಡಲದ ಮೀಯಪದವು ಶ್ರೀ ವಿದ್ಯಾವರ್ಧಕ ಎಯುಪಿ ಶಾಲೆ, ಪೈವಳಿಕೆ ನಗರ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯ ಹಸಿರು ಮತಗಟ್ಟೆ, ಕುಂಬಳೆ ಹೋಲಿ ಫ್ಯಾಮಿಲಿ ಅನುದಾನಿತ ಹಿರಿಯ ಮಾಧ್ಯಮಿಕ ಶಾಲೆಯ ಗುಲಾಬಿ ಮತಗಟ್ಟೆ ಮತ್ತು ಮೊಗ್ರಾಲ್ ಪುತೂರು ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯ ಯುವ ಮತಗಟ್ಟೆಗೆ ಭೇಟಿ ನೀಡಿದರು. ಈ ಸಂದರ್ಭ ಚುನಾವಣಾ ವ್ಯವಸ್ಥೆಗಳನ್ನು ಪರಿಶೀಲಿಸಿದ ಅವರು ಅಗತ್ಯದ ಮಾರ್ಗದರ್ಶನ ನೀಡಿದರು.



ನಕಲಿ ಮತದಾನಕ್ಕೆ ಯತ್ನ: ಓರ್ವ ಬಂಧನ

ಮಂಜೇಶ್ವರ ಕ್ಷೇತ್ರದ ಕಯ್ಯಾರಿನ 128ನೇ ಮತಗಟ್ಟೆಯಲ್ಲಿ ನಕಲಿ ಮತ ಚಲಾಯಿಸಲೆತ್ನಿಸಿದ ಓರ್ವನನ್ನು ಪೊಲೀಸರು ಬಂಧಿಸಿದ್ದಾರೆ. ಈ ಮತಗಟ್ಟೆಯ ಮತದಾರನೋರ್ವ ಗಲ್ಫ್ ಉದ್ಯೋಗಿ ಖಾಲಿದ್ ಎಂಬವರ ಮತವನ್ನು ಜಾಫರ್ ಎಂಬಾತ ನಕಲಿಯಾಗಿ ಚಲಾಯಿಸಲೆತ್ನಿಸಿದ್ದು, ಆತನನ್ನು ಚುನಾವಣಾಧಿಕಾರಿ ತಡೆದು ನಿಲ್ಲಿಸಿ ಬಳಿಕ ಪೊಲೀಸರಿಗೆ ಹಸ್ತಾಂತರಿಸಿದರು. ನಂತರ ಆತನನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಪ್ರಕರಣ ದಾಖಲಿಸಲಾಯಿತು. ಇದೇ ವೇಳೆ ಮಂಜೇಶ್ವರ, ಕಾಸರಗೋಡು ಮಂಡಲಗಳು ಸಹಿತ ವಿವಿಧ ವಿಧಾನಸಭಾ ಕ್ಷೇತ್ರಗಳ ಕೆಲವು ಮತಗಟ್ಟೆಗಳಲ್ಲಿ ಮತಯಂತ್ರಗಳು ಕೈಕೊಟ್ಟ ಘಟನೆಗಳೂ ಸಂಭವಿಸಿವೆ. ಬಳಿಕ ಬದಲಿ ವ್ಯವಸ್ಥೆ ಕೈಗೊಂಡು ಸಾಂಗವಾಗಿ ಮತದಾನವನ್ನು ಮುಂದುವರಿಸಲಾಯಿತು.

ಮತ ಚಲಾಯಿಸಿ ಇತಿಹಾಸ ಬರೆದ ಮಂಗಳಮುಖಿ ಚಾರುಲತಾ

ಕಾಸರಗೋಡು: ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮಂಗಳ ಮುಖಿ (ಟ್ರಾನ್ಸ್ ಜೆಂಡರ್) ಚಾರುಲತಾ ಅವರು ಮತ ಚಲಾಯಿಸಿ ಇತಿಹಾಸ ನಿರ್ಮಿಸಿದರು. ಮಲೆಯಾಳದ ಮೊದಲ ಟ್ರಾನ್ಸ್‌ಜೆಂಡರ್ ಗಾಯಕಿಯೂ ಆಗಿರುವ ಚಾರುಲತಾ, ಕಾಞಂಗಾಡು ಕ್ಷೇತ್ರದ ಕಿನಾನೂರು ಸರ್ಕಾರಿ ಎಲ್‌ಪಿ ಶಾಲೆಯಲ್ಲಿ ತಮ್ಮ ಚೊಚ್ಚಲ ಮತ ಚಲಾಯಿಸುವ ಮೂಲಕ ಇತಿಹಾಸದ ಭಾಗವಾದರು.

ಪ್ರಜಾಪ್ರಭುತ್ವದ ಭಾಗವಾಗಿರುವುದಕ್ಕೆ ನನಗೆ ತುಂಬಾ ಹೆಮ್ಮೆಯಾಗುತ್ತಿದೆ ಎಂದು ಚಾರುಲತಾ ಮತ ಚಲಾಯಿಸಿದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಹೇಳಿದರು. 2025ರ ಸ್ಥಳೀಯಾಡಳಿತ ಚುನಾವಣೆಯಲ್ಲಿ ಚಾರುಲತಾ ಅವರು ಮೊದಲ ಬಾರಿಗೆ ಮತ ಚಲಾಯಿಸಿದ್ದರು. ಇದೀಗ ವಿಧಾನಸಭಾ ಚುನಾವಣೆಗೆ ಮೊದಲ ಬಾರಿಗೆ ತಮ್ಮ ಹಕ್ಕು ಚಲಾಯಿಸಿದರು.

ಕಿನಾನೂರು ಕರಿಂದಳಂ ಗ್ರಾ. ಪಂ.ನಲ್ಲಿ ಅವರು ಮೊದಲ ಟ್ರಾನ್ಸ್‌ಜೆಂಡರ್ ಮತದಾರೆಯಾಗಿದ್ದಾರೆ. ಈ ಮಧ್ಯೆ ಟ್ರಾನ್ಸ್‌ಜೆಂಡರ್ ಇಶಾ ಕಿಶೋರ್ ಅವರು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಮತ ಚಲಾಯಿಸಿದರು. ಈ ಬಾರಿ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಾಗಿ 12 ಮಂದಿ ಮಂಗಳಮುಖಿಯರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆ.



ಚಾರುಲತಾ



ಇಶಾ ಕಿಶೋರ್

ಅಡುಗೆ ಅನಿಲ ಕ್ಷಾಮ: ಕುಟುಂಬಶ್ರೀ ನೇತೃತ್ವದಲ್ಲಿ ಆಹಾರ ವಸ್ತುಗಳ ಪೂರೈಕೆ

ಕಾಸರಗೋಡು: ಅಡುಗೆ ಅನಿಲದ ಕೊರತೆಯಿಂದಾಗಿ ವಿಧಾನಸಭಾ ಚುನಾವಣಾ ಕರ್ತವ್ಯದ ಅಧಿಕಾರಿಗಳಿಗೆ ಆಹಾರ ಪದಾರ್ಥಗಳ ಲಭ್ಯತೆ ಕಡಿಮೆ ಇರುವುದರಿಂದ ಕುಟುಂಬಶ್ರೀ ನೇತೃತ್ವದಲ್ಲಿ ಆಹಾರ ತಯಾರಿಸಿ ಒದಗಿಸಲಾಯಿತು.

ಕಾರ್ಯಕರ್ತೆರೇ ಆಹಾರ ತಲುಪಿಸಿದರು

ಕಾಸರಗೋಡು ಜಿಲ್ಲೆಯೂ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುರುವಾರ ಈ ವ್ಯವಸ್ಥೆ ಜಾರಿಗೆ ತರಲಾಯಿತು. ಆಹಾರದ ಅಗತ್ಯವಿದೆಯೇ ಎಂಬುದನ್ನು ಗಮನಿಸಿದ ಬಳಿಕ ಮತಗಟ್ಟೆಗಳಿಗೆ ಕುಟುಂಬಶ್ರೀ ಕಾರ್ಯಕರ್ತೆಯರು ಆಹಾರ ವಸ್ತುಗಳನ್ನು ತಯಾರಿಸಿ ತಲುಪಿಸಿದ್ದಾರೆ.

ಅಡುಗೆ ಅನಿಲದ ಕೊರತೆಯಿಂದ ಕಾಸರಗೋಡು ಜಿಲ್ಲೆಯ ಗ್ರಾಮೀಣ ಪ್ರದೇಶಗಳು ಸೇರಿದಂತೆ ಮತಗಟ್ಟೆಗಳ ಬಳಿಯ ಹೊಟೇಲ್‌ಗಳು ಮುಚ್ಚಲ್ಪಟ್ಟಿರುವ ಹಿನ್ನೆಲೆಯಲ್ಲಿ ಕುಟುಂಬಶ್ರೀ ನೇತೃತ್ವ ಈ ವ್ಯವಸ್ಥೆ ಕೈಗೊಳ್ಳಲಾಯಿತು. ಇದರ ಜೊತೆಗೆ ಕುಟುಂಬಶ್ರೀ ಘಟಕಗಳ ಆಶ್ರಯದಲ್ಲಿ ಮತಯಂತ್ರಗಳ ವಿತರಣಾ ಮತ್ತು ಸ್ವಾಗತ ಕೇಂದ್ರಗಳಲ್ಲಿ ಕೆಫೆ ಕೂಡಾ ಸ್ಥಾಪಿಸಲಾಯಿತು.

ಅಧಿಕಾರಿಗಳು ಮತ ಯಂತ್ರ ಕೊಂಡೊಯ್ಯಲು ವಿತರಣಾ ಮತ್ತು ಸ್ವಾಗತ ಕೇಂದ್ರಗಳಿಗೆ ಆಗಮಿಸಿದ್ದರು. ಇದನ್ನು ಗಮನದಲ್ಲಿಟ್ಟುಕೊಂಡು ಹಲವೆಡೆ ಕುಟುಂಬಶ್ರೀ ಸ್ಟಾಲ್‌ಗಳು ಬೆಳಿಗ್ಗೆ 7ರಿಂದ ಮಧ್ಯಾಹ್ನ 2ರವರೆಗೆ ಕಾರ್ಯನಿರ್ವಹಿಸಿತು.

ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಕುಟುಂಬದೊಂದಿಗೆ ಮತ ಚಲಾವಣೆ

ಕಾಸರಗೋಡು: ವಿಧಾನಸಭಾ ಚುನಾವಣೆಯ ಭಾಗವಾಗಿ ಕಾಸರಗೋಡು ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ತಮ್ಮ ಕುಟುಂಬದೊಂದಿಗೆ ಆಗಮಿಸಿ ಮತ ಚಲಾಯಿಸಿದರು. ಅವರು ಬೆಳಗ್ಗೆ ಪಡನ್ನಕ್ಕಾಡ್‌ನ ಎಸ್ ಎನ್ ಎಯುಪಿ ಶಾಲೆಯಲ್ಲಿರುವ ಮತಗಟ್ಟೆಗೆ ತಮ್ಮ ಪತ್ನಿ ಎಸ್. ಸುಧಾಕುಮಾರಿ ಅವರೊಂದಿಗೆ ಆಗಮಿಸಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ಎಲ್ಲಾ ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಬೇಕು ಎಂದು ಸಂಸದರು ಇದೇ ವೇಳೆ ಕರೆ ನೀಡಿದರು.



1ನೇ ಕ್ಷೇತ್ರದ ಒಂದನೇ ಬೂತ್‌ನಲ್ಲಿ ಅಶ್ವಿನಿ ಮೊದಲ ಮತದಾನ

ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಚುನಾವಣೆಯ ಇತಿಹಾಸದಲ್ಲಿ ಮತದಾರೆ ಅಶ್ವಿನಿ ವಿಶಿಷ್ಟ ನಂಬರ್ ಒನ್ ಸಾಧನೆ ಮಾಡಿದ್ದಾರೆ. ರಾಜ್ಯದ ಮೊದಲ ಕ್ಷೇತ್ರವಾದ ಮಂಜೇಶ್ವರದ ಒಂದನೇ ಸಂಖ್ಯೆಯ ಮತಗಟ್ಟೆಯಲ್ಲಿ ಅಶ್ವಿನಿ ಮೊದಲು ಮತ ಚಲಾಯಿಸುವ ಮೂಲಕ ಕೀರ್ತಿ ಪಡೆದುಕೊಂಡರು.

ಕುಂಜತ್ತೂರು ಜಿವಿಎಚ್‌ಎಸ್ ಶಾಲೆಯ ಬೂತ್ ಸಂಖ್ಯೆ 1ರಲ್ಲಿ ಮೊದಲ ಮತದಾರೆ ಅಶ್ವಿನಿ ಅವರು ಈ ಚುನಾವಣೆಯಲ್ಲಿ ವಿಶೇಷ ಗಮನ ಸೆಳೆದಿದ್ದಾರೆ. ಮಂಜೇಶ್ವರದ ಗೇರುಕಟ್ಟೆಯಲ್ಲಿ ಅಂಗನವಾಡಿ ಶಿಕ್ಷಕಿಯಾಗಿರುವ ಅಶ್ವಿನಿ ಈ ಬಾರಿ ಚುನಾವಣಾ ಕರ್ತವ್ಯದಲ್ಲಿದ್ದರು. ಉದ್ಯಾವರ ಜಿಎಲ್‌ಪಿ ಶಾಲೆಯಲ್ಲಿ ಬೂತ್ ಮಟ್ಟದ ಅಧಿಕಾರಿಯಾಗಿ ನೇಮಕಗೊಂಡಿದ್ದರಿಂದ ಅವರು ಬೇಗನೆ ಕರ್ತವ್ಯಕ್ಕೆ ತಲುಪಬೇಕಾಗಿತ್ತು. ಈ ನಿಟ್ಟಿನಲ್ಲಿ ಅವರು ವಿಶೇಷ ಅನುಮತಿಯೊಂದಿಗೆ ಬೆಳಗ್ಗೆ ಬೇಗನೆ ಮತಗಟ್ಟೆಗೆ ತಲುಪಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು.

ಇದೇ ವೇಳೆ ಅಶ್ವಿನಿ ಅವರ ಪುತ್ರ ಕಾರ್ತಿಕ್ ಅವರು ಒಂದನೇ ಮತಗಟ್ಟೆಯಲ್ಲಿ ಪ್ರಥಮ ಬಾರಿಗೆ ಮತ ಚಲಾಯಿಸಿದರು. ಬೆಂಜನಪದವು ಕೆನರಾ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಯಾದ ಕಾರ್ತಿಕ್ ಮೊದಲ ಬಾರಿಗೆ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾಗವಹಿಸಿದರು.

1087 ಮತದಾರರನ್ನು ಹೊಂದಿರುವ ಕುಂಜತ್ತೂರು ಜಿವಿಎಚ್‌ಎಸ್ ಶಾಲೆಯಲ್ಲಿ ಬೂತ್ ಸಂಖ್ಯೆ ಒಂದರ ಹೊರತಾಗಿ ಇನ್ನೂ ಮೂರು ಮತಗಟ್ಟೆಗಳು ಕಾರ್ಯನಿರ್ವಹಿಸಿದವು.





- ಮಂಜೇಶ್ವರದ ಗೇರುಕಟ್ಟೆಯಲ್ಲಿ ಅಂಗನವಾಡಿ ಶಿಕ್ಷಕಿಯಾಗಿರುವ ಅಶ್ವಿನಿ ಈ ಬಾರಿ ಚುನಾವಣಾ ಕರ್ತವ್ಯದಲ್ಲಿದ್ದರು.
- 1087 ಮತದಾರರನ್ನು ಹೊಂದಿರುವ ಕುಂಜತ್ತೂರು ಜಿವಿಎಚ್‌ಎಸ್ ಶಾಲೆಯಲ್ಲಿ ಬೂತ್ ಸಂಖ್ಯೆ ಒಂದರ ಹೊರತಾಗಿ ಇನ್ನೂ ಮೂರು ಮತಗಟ್ಟೆಗಳು ಕಾರ್ಯನಿರ್ವಹಿಸಿದವು.

ವಿದೇಶದಲ್ಲಿ ತಲೆಮರೆಸಿಕೊಂಡಿರುವ ಇಬ್ಬರು ಆರೋಪಿಗಳ ಪತ್ತೆಗೆ ರೆಡ್‌ಕಾರ್ನರ್ ನೋಟೀಸ್

ಮಂಗಳೂರು: ವಿದೇಶದಲ್ಲಿ ತಲೆಮರೆಸಿಕೊಂಡಿರುವ ಇಬ್ಬರು ಖತರ್ನಾಕ್ ಆರೋಪಿಗಳ ಪತ್ತೆಗೆ ಇಂಟರ್ ಪೋಲ್ ಮೂಲಕ ರೆಡ್ ಕಾರ್ನರ್ ನೋಟಿಸ್ ಜಾರಿಗೊಳಿಸಲಾಗಿದೆ. ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಕೋರ್ಟ್‌ಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಕುಶಾಲನಗರ ಸುಲೈಮಾನ್ ಆಲಿಯಾಸ್ ಶಮೀರ್ (38) ಮತ್ತು ಶಂಶುದ್ದೀನ್ (36)ಗೆ ರೆಡ್ ಕಾರ್ನರ್ ನೋಟಿಸ್ ಜಾರಿ ಮಾಡಲಾಗಿದೆ.

ಕುಶಾಲನಗರ ಸುಲೈಮಾನ್ ಆಲಿಯಾಸ್ ಶಮೀರ್ 2017ರಲ್ಲಿ ಮಂಗಳೂರಿನ ಲೇಡಿಹಿಲ್ ಬಳಿ ಉರ್ವ ಠಾಣೆಯಲ್ಲಿ ಆಗ ಎಎಸ್ ಐ ಆಗಿದ್ದ ಐತಪ್ಪ ಅವರ ಮೇಲೆ ರಾಡ್‌ನಿಂದ ಹಲ್ಲೆ ನಡೆಸಿ ಕೊಲೆ ಮಾಡಲು ಯತ್ನಿಸಿದ್ದ ಆರೋಪಿಗಳಲ್ಲಿ ಓರ್ವನಾಗಿದ್ದಾನೆ. ಕೊಣಾಜೆ ಠಾಣಾ ವ್ಯಾಪ್ತಿಯ ದೇರಳಕಟ್ಟೆಯಲ್ಲಿ 2013 ನಡೆದ ಗ್ಯಾಂಗ್ ರೇಪ್ ಪ್ರಕರಣದಲ್ಲಿಯೂ ಈತ ಆರೋಪಿಯಾಗಿದ್ದಾನೆ. ಇವನ ವಿರುದ್ಧ 14 ಪ್ರಕರಣಗಳಿವೆ. ಸೌದಿ ಅರೇಬಿಯಾದಲ್ಲಿ ತಲೆಮರೆಸಿಕೊಂಡಿರುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ.

ಇನ್ನೋರ್ವ ಆರೋಪಿ ಸಂಶುದ್ದೀನ್ ಆಲಿಯಾಸ್ ಅಲ್ತಾಫ್ ಆಲಿಯಾಸ್ ಅಲ್ತಾಫ್ ಇಮ್ರಾನ್ ಆಲಿಯಾಸ್ ಇಮ್ರಾನ್ ಹಾಗೂ ಸಹಚರರು 2008ರಲ್ಲಿ ಮೂಲ್ಕಿಯ ಪಾವಂಜೆ ಬಳಿ ರಾ.ಹೆ. ಯಲ್ಲಿ ಪ್ರವೀಣ್ ಎಂಬವರನ್ನು ಕಿಡ್ನಾಪ್ ಮಾಡಿ ಅವರ ಕಾರು ಮತ್ತು ಬೆಲೆ ಬಾಳುವ ಸೊತ್ತುಗಳನ್ನು ದೋಚಿ, ಕಳವಾರು ಬಳಿಯ ಕೋರೆಯೊಂದಕ್ಕೆ ಕರೆದುಕೊಂಡು ಹೋಗಿ ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿದ್ದರು. ಈ ಪ್ರಕರಣದಲ್ಲಿ ಎಲ್ಲರೂ ಜೀವಾವಧಿಶಿಕ್ಷೆಗೆ ಗುರಿಯಾಗಿದ್ದರು. ಆದರೆ ಸಂಶುದ್ದೀನ್ ನಕಲಿ ದಾಖಲೆಗಳ ಮೂಲಕ ಹೆಸರನ್ನು ಶೇಕ್ ಮೊಹಮ್ಮದ್ ಸಿದ್ದಿಕ್ ಎಂದು ಬದಲಾಯಿಸಿ, ಪಾಸ್‌ಪೋರ್ಟ್ ಪಡೆದು ವಿದೇಶಕ್ಕೆ ಪರಾರಿಯಾಗಿದ್ದಾನೆ. ಈತನೂ ಸೌದಿಅರೇಬಿಯಾದಲ್ಲಿರುವ ಸಾಧ್ಯತೆಯಿದೆ ಎನ್ನಲಾಗಿದೆ. ರೆಡ್ ಕಾರ್ನರ್ ನೋಟಿಸ್ ಜಾರಿ ಬಳಿಕ, ಎಲ್ಲ ದೇಶಗಳ ನೋಡಲ್ ಏಜೆನ್ಸಿಗಳು ಆರೋಪಿಗಳಿಗಾಗಿ ಹುಡುಕಾಟ ನಡೆಸಲಿವೆ.

ಮದ್ಯದ ಅಮಲಿನಲ್ಲಿ ಪೊಲೀಸ್ ಸಿಬ್ಬಂದಿಗೆ ಹಲ್ಲೆ

ಮಡಿಕೇರಿ: ಕರ್ತವ್ಯದಲ್ಲಿದ್ದ ಪೊಲೀಸ್ ಮುಖ್ಯಪೇದೆಯ ಮೇಲೆ ವ್ಯಕ್ತಿಯೊಬ್ಬ ಹಲ್ಲೆ ನಡೆಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಘಟನೆ ಪಾಲಿಬೆಟ್ಟದಲ್ಲಿ ನಡೆದಿದ್ದು,ಈ ಸಂಬಂಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಾಲಿಬೆಟ್ಟದ ಜುಮ್ಮಾ ಮಸೀದಿಯ ಬಳಿ ಏ.7 ರ ರಾತ್ರಿ 10.30ಗಂಟೆ ಸುಮಾರಿಗೆ ಪಾಲಿಬೆಟ್ಟದ ಊರುಗುಪ್ಪೆ ನಿವಾಸಿ ಸೈಯದ್ ಅಲವಿ (37) ಎಂಬಾತ ಮದ್ಯ ಸೇವಿಸಿ ಕಿರುಚಾಡುತ್ತಾ ಸಾರ್ವಜನಿಕರಿಗೆ ತೊಂದರೆ ಮಾಡುತ್ತಿದ್ದನೆನ್ನಲಾಗಿದೆ. ಈ ವಿಚಾರ ತಿಳಿದ ಪಾಲಿಬೆಟ್ಟ ಉಪಠಾಣೆಯ ಮುಖ್ಯಪೇದೆ ಎಂ.ಎಂ. ಆಲಿಬಾ ಸ್ಥಳಕ್ಕೆ ತೆರಳಿ ಮನೆಗೆ ತೆರಳುವಂತೆ ಸೈಯದ್ ಅಲವಿಗೆ ಸೂಚಿಸಿದ್ದಾರೆ. ಈ ಸಂದರ್ಭ ಸೈಯದ್ ಅಲವಿ, ಮುಖ್ಯಪೇದೆಯ ಸಮವಸ್ತ್ರ ಹಿಡಿದು ಎಳೆದಾಡಿ ಸಮವಸ್ತ್ರದ ಅಂಗಿಯನ್ನು ಹರಿದು ಎಡಗಣ್ಣಿಗೆ ಗುದ್ದಿ ಗಾಯಗೊಳಿಸಿ ತಳ್ಳಿ ಹಾಕಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾನೆ.

ಗಾಯಗೊಂಡ ಮುಖ್ಯಪೇದೆ ಪಾಲಿಬೆಟ್ಟ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಕೊಂಡಿದ್ದು, ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೊಸ ಕ್ರಾಂತಿಯ ಮೂಲಕ ಮತ್ತೊಮ್ಮೆ ರಾಜ್ಯದ ಗಮನ ಸೆಳೆಯುತ್ತಿದೆ ಶತಮಾನ ಕಂಡಿರುವ ಅಕ್ಷರ ದೇಗುಲ

ವಂಡ್ಸೆ ಸರಕಾರಿ ಶಾಲೆಯಲ್ಲಿ ಬೋಧನೆಗೆ ಎಐ ಶಿಕ್ಷಕಿ!

ಕುಂದಾಪುರ: ಸಾಧನೆಯ ಮೂಲಕ ಗುರುತಿಸಿಕೊಂಡ ಸರ್ಕಾರಿ ಶಾಲೆಯೊಂದು ಮತ್ತೊಮ್ಮೆ ರಾಜ್ಯದ ಗಮನ ಸೆಳೆಯುತ್ತಿದೆ.

111 ವರ್ಷಗಳ ಭವ್ಯ ಇತಿಹಾಸಹೊಂದಿರುವ ಕುಂದಾಪುರ ತಾಲೂಕು ಬೈಂದೂರು ಶೈಕ್ಷಣಿಕ ವಲಯದ ವಂಡ್ಸೆ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯು ಪ್ರಸ್ತುತ ಸಂಚಲನ ಉಂಟು ಮಾಡುತ್ತಿರುವ ಎ.ಐ ರೋಬೊ ಶಿಕ್ಷಕಿಯನ್ನು ಪರಿಚಯಿಸುವ ಮೂಲಕ ರಾಜ್ಯದ ಗಮನ ಸೆಳೆದಿದ್ದು, ಕರ್ನಾಟಕ ರಾಜ್ಯದಲ್ಲೇ ಪ್ರಥಮವಾಗಿ ಸರಕಾರಿ ಶಾಲೆಯೊಂದು ಬೋಧನೆಗೆ ಎ.ಐ ಟೀಚರ್ 'ಐರಿಸ್' ಅನ್ನು ಪರಿಚಯಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯೊಂದನ್ನು ಸೃಷ್ಟಿಸುವತ್ತ ದಿಟ್ಟ ಹೆಜ್ಜೆ ಇಟ್ಟಿದೆ.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎ.ಐ) ಶಿಕ್ಷಕಿ ಈಗಾಗಲೇ ಶಾಲೆಯಲ್ಲಿ ಕಾರ್ಯ ನಿರ್ವಹಣೆಗೆ ಸಜ್ಜಾಗಿದೆ. 2026-27ನೇ ಸಾಲಿನಲ್ಲಿ ಎ.ಐ ರೋಬೊ ಟೀಚರ್ ಬೋಧನೆ ಲಭ್ಯವಾಗಲಿದೆ. ಸದಾ ಹೊಸತನ, ಪ್ರಯೋಗಶೀಲತೆಯ ಮೂಲಕ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗುವ ವಂಡ್ಸೆ ಸರಕಾರಿ ಶಾಲೆಯಲ್ಲಿ ಸಂಪೂರ್ಣ ಖಾಸಗಿ ಸಹಭಾಗಿತ್ವದೊಂದಿಗೆ ಎ.ಐ. ಟೀಚರ್ ಅಳವಡಿಕೆ ಮಾಡಿಕೊಂಡಿರುವುದು ಮತ್ತೊಂದು ಸಾಧನೆಯಾಗಿದೆ.

2024ರಲ್ಲಿ ಕೇರಳ ರಾಜ್ಯದ ಶಾಲೆಯೊಂದರಲ್ಲಿ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' ಶಿಕ್ಷಕಿ ಐರಿಸ್ ಪರಿಚಯಿಸಲಾಗಿತ್ತು. ಇದೀಗ ವಂಡ್ಸೆ ಶಾಲೆ ಐರಿಸ್ ಪರಿಚಯಿಸಲು ಮುಂದಾಗಿದೆ. ಈಗಾಗಲೇ ಕಂಪೆನಿ ಐರಿಸ್‌ನ್ನು ಶಾಲೆಗೆ ನೀಡಿದೆ. ಅದನ್ನು ಪಠ್ಯ ಕ್ರಮಕ್ಕೆ ಅಳವಡಿಸುವ, ನಿರ್ವಹಣೆ ತರಬೇತಿ ನೀಡುವ ಕಾರ್ಯವೂ ಆಗುತ್ತಿದೆ. ಮೇಕರ್ ಲ್ಯಾಬ್ಸ್ ಎಜುಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹಯೋಗದೊಂದಿಗೆ ಇದನ್ನು ಅಭಿವೃದ್ಧಿಪಡಿಸಲಾಗಿದೆ. ತಿರುವನಂತಪುರಂನಲ್ಲಿರುವ ಕೆಟಿಸಿಟಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಅನಾವರಣಗೊಂಡ ಐರಿಸ್, ವಿದ್ಯಾರ್ಥಿಗಳಿಗೆ ಕಲಿಕೆಯ ಅನುಭವವನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾಗಿದೆ.



ನೀತಿ ಆಯೋಗ ಪ್ರಾರಂಭಿಸಿದ ಅಟಲ್ ಟಿಂಕರಿಂಗ್ ಲ್ಯಾಬ್ ಯೋಜನೆಯಡಿಯಲ್ಲಿ ನಿರ್ಮಿಸಲಾದ ಐರಿಸ್ ಸಾಂಪ್ರದಾಯಿಕ ಬೋಧನಾ ವಿಧಾನಗಳನ್ನು ಕ್ರಾಂತಿಗೊಳಿಸುವ ಗುರಿಯನ್ನು ಹೊಂದಿರುವ ಹಲವಾರು ವೈಶಿಷ್ಟ್ಯಗಳನ್ನು ಹೊಂದಿದೆ. ಇಪ್ಪತ್ತು ಭಾಷೆಗಳನ್ನು ಮಾತನಾಡುವ ಮತ್ತು ಪ್ರಶ್ನೆಗಳನ್ನು ನಿಭಾಯಿಸುವ ಸಾಮರ್ಥ್ಯದೊಂದಿಗೆ ಐರಿಸ್ ಪ್ರತಿ ವಿದ್ಯಾರ್ಥಿಗೆ ಕಲಿಕೆಯ ಅನುಭವ ನೀಡುತ್ತದೆ. ಇದು ಧ್ವನಿ ನೆರವು, ಸಂವಾದಾತ್ಮಕ ಕಲಿಕೆ ಮಾಡ್ಯೂಲ್‌ಗಳು, ಸಾಮರ್ಥ್ಯಗಳು ಮತ್ತು ಚಲನಶೀಲತೆಯನ್ನು ಒಳಗೊಂಡಿದೆ. ಸೀರೆಯಲ್ಲಿ ಕಂಗೊಳಿಸಿದ 'ಐರಿಸ್ ಎಐ' ಶಿಕ್ಷಕಿಯು ವಿದ್ಯಾರ್ಥಿಗಳ ಜತೆ ಸಂವಾದ ನಡೆಸುವ ಹಾಗೂ ಕೈಕುಲುಕುತ್ತದೆ. ವಿದ್ಯಾರ್ಥಿಗಳಿಗೆ ಬಹುಬೇಗ ಇಷ್ಟವಾಗುತ್ತದೆ. ಮಗು ಯಾವುದೇ ಪ್ರಶ್ನೆ ಕೇಳಿದರೂ ಎ.ಐ ಶಿಕ್ಷಕಿ ತಟ್ಟಂತ ಉತ್ತರ ಹೇಳುತ್ತದೆ. ವಿಶೇಷವಾಗಿ ಇಂಗ್ಲಿಷ್ ಕಲಿಕೆಗೆ ಹೆಚ್ಚು ಪೂರಕವಾಗಲಿದೆ.

2016ರಲ್ಲಿ ಶತಮಾನೋತ್ಸವವನ್ನು ಆಚರಿಸಿಕೊಂಡ ಶಾಲೆಯನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲಿ ಶ್ರೀ ಮೂಕಾಂಬಿಕಾ ಚಾರಿಟೇಬಲ್ ಟ್ರಸ್ಟ್ ಸಾರಥ್ಯದಲ್ಲಿ ಎಸ್.ಡಿ.ಎಂಸಿ, ಹಳೆ ವಿದ್ಯಾರ್ಥಿ ಸಂಘ ಮತ್ತು ಶಿಕ್ಷಕರ ಸಹಕಾರದೊಂದಿಗೆ ಇವತ್ತು ಉಡುಪಿ ಜಿಲ್ಲೆಯಲ್ಲಿ ಒಂದು ಪ್ರತಿಷ್ಠಿತ ಶಾಲೆಯಾಗಿ ಮೂಡಿ ಬಂದಿದೆ. ಪೂರ್ವ ಪ್ರಾಥಮಿಕ ಶಾಲೆಯಿಂದ ಆಂಗ್ಲ ಭಾಷಾ ಭೋದನೆ ಆರಂಭಿಸಲಾಯಿತು. ಪ್ರಸ್ತುತ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

- 2026-27ನೇ ಸಾಲಿನಲ್ಲಿ ಎ.ಐ ರೋಬೊ ಟೀಚರ್ ಬೋಧನೆ ಲಭ್ಯವಾಗಲಿದೆ.
- ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗುವ ವಂಡ್ಸೆ ಸರಕಾರಿ ಶಾಲೆಯಲ್ಲಿ ಸಂಪೂರ್ಣ ಖಾಸಗಿ ಸಹಭಾಗಿತ್ವದೊಂದಿಗೆ ಎ.ಐ. ಟೀಚರ್ ಅಳವಡಿಕೆ ಮಾಡಿಕೊಂಡಿರುವುದು ಸಾಧನೆ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 36° 26°
ಉಡುಪಿ 32° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 10, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಕಾಸರಗೋಡಿನಲ್ಲಿ ಅಭ್ಯರ್ಥಿಗಳ ಭವಿಷ್ಯ ಮತಗಟ್ಟೆಯಲ್ಲಿ ಭದ್ರ



ಪುಟ 6

ಅಭಿವೃದ್ಧಿಯಾಗದೆ ಮೂಲೆಗುಂಪಾಗಿದೆ ಬೈಂದೂರಿನ ಹೊಸಕೆರೆ

ಬಿರು ಬಿಸಿಲನ್ನೂ ಲೆಕ್ಕಿಸದೆ ಬಂದು, ಸರತಿ ಸಾಲಿನಲ್ಲಿ ನಿಂದು ನಾಡಿನ ಭವ್ಯ ಭವಿಷ್ಯ ಬರೆದ ಮತದಾರ



ಕೇರಳ ವಿಧಾನಸಭಾ ಚುನಾವಣೆ ಅಂಗವಾಗಿ ಗುರುವಾರ ಕಾಸರಗೋಡು ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಡೆದ ಮತದಾನವು ಅತ್ಯಂತ ಶಾಂತಿಯುತವಾಗಿ ಮುಕ್ತಾಯಗೊಂಡಿದ್ದು, ದಿನಪೂರ್ತಿ ಮತದಾರರು ಆಯಾ ಬೂತ್‌ಗಳಿಗೆ ತೆರಳಿ ಉತ್ಸಾಹದಿಂದ ಮತ ಚಲಾಯಿಸಿದರು. (ಹೆಚ್ಚಿನ ವಿವರ ಪುಟ 5)

ಸುತ್ತಮುತ್ತ

ಕಬ್ಬಿಣದ ಬೀಮ್‌ಗೆ ಲಾರಿ ಡಿಕಿ: ಸ್ಕೂಟರ್ ಸವಾರ ಗಂಭೀರ ಗಾಯ

ಬಂಟ್ವಾಳ: ಮೊಡಂಕಾಪು ಬಳಿ ರೈಲ್ವೆ ಓವರ್ ಬ್ರಿಡ್ಜ್ ಬಳಿ ಹಾಕಲಾದ ಕಬ್ಬಿಣ ಬೀಮ್‌ಗೆ ಲಾರಿ ಡಿಕ್ಕಿಯಾಗಿ ಅದು ಸ್ಕೂಟರ್ ಸವಾರನ ಮೇಲೆ ಬಿದ್ದು ಆತ ಗಂಭೀರ ಗಾಯಗೊಂಡ ಘಟನೆ ಬುಧವಾರ ಸಂಜೆಯ ವೇಳೆ ನಡೆದಿದೆ. ವಾಹನ ಸಾಗಾಟದ ಕಂಟೈನರ್ ಲಾರಿ ರೈಲ್ವೆ ಮೇಲ್ಸೇತುವೆಯ ತಡೆಬೇಲಿಗೆ ಡಿಕ್ಕಿಯಾಗಿದೆ. ಈ ಸಂದರ್ಭ ಕಬ್ಬಿಣದ ಬೀಮ್ ಸೇತುವೆಯ ಅಡಿಯಲ್ಲಿ ಸಂಚರಿಸುತ್ತಿದ್ದ ಪಚ್ಚಿನಡ್ಕ ಬಳಿಕ ನೂರ್ನಡ್ಕ ನಿವಾಸಿಯ ಮೇಲೆ ಬಿದ್ದು ಅವರಿಗೆ ಗಂಭೀರ ಗಾಯವಾಗಿದೆ. ಗಾಯಾಳುವನ್ನು ತಕ್ಷಣ ಸ್ಥಳೀಯರು ಖಾಸಗಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಬೀಮ್ ಬಿದ್ದು ಸ್ಕೂಟರ್ ಜಖಂಗೊಂಡಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಶುಭಾರಂಭವಾದ ಬೆನ್ನಲ್ಲೇ ಹಾರಾಟಕ್ಕೆ ವಿಘ್ನ

‘ಜಝೀರ’ ವಾಪಸ್!

ಮೇ 15 ತನಕ ಎಲ್ಲಾ ವಿಮಾನ ಸೇವೆ ಬಂದ್

ಮಂಗಳೂರು: ಮಧ್ಯಪ್ರಾಚ್ಯ ಯುದ್ಧಕ್ಕೆ ಒಂದಿಷ್ಟು ವಿರಾಮ ದೊರಕಿದ್ದು, ಈ ಮಧ್ಯೆ ಪೂರ್ವ ನಿರ್ಧರಿತ ಕಾರ್ಯಾಚರಣೆಯಂತೆ ಕುವೈಟ್‌ನ ಜಝೀರ ಏರ್‌ವೇಸ್‌ನ ಪ್ರಥಮ ವಿಮಾನ ಪ್ರಯಾಣಿಕರ ಜೊತೆಗೆ ಮಂಗಳೂರು ವಿಮಾನ ನಿಲ್ದಾಣದಲ್ಲಿ ಬಂದಿಳಿದಿದೆ. »ಪುಟ 6





ವಿಮಾನ ಸೇವೆ ಸ್ಥಗಿತ

ಮಂಗಳೂರು, ಕೊಯಮತ್ತೂರು, ಸಹಿತ 9 ಕಡೆಗಳಿಗೆ ಏ.10ರಿಂದ ಮೇ 15ರವರೆಗೆ ಜಝೀರಾ ತನ್ನ ಎಲ್ಲಾ ವಿಮಾನಗಳ ಹಾರಾಟವನ್ನು ರದ್ದುಗೊಳಿಸಿದೆ.

ಎಲ್ಲೆಡೆ ಶಾಂತಿಯುತ ಚುನಾವಣೆ

ಫಸ್ಟ್ ವೋಟರ್ ಬಾಯಿಗೆ ಹಲ್ವಾ

ಆಯೋಗದ ಐಡಿಯಾಗೆ ಮೆಚ್ಚುಗೆ

ಕಾಸರಗೋಡು: ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಗುರುವಾರ ಮತದಾನವು ಶಾಂತಿಯುತವಾಗಿ ಮುಕ್ತಾಯವಾಗಿದೆ. »ಪುಟ 6



ಸುತ್ತ ಮುತ್ತ

ಮುಲ್ಕಿ: ವಿವಿಧ ಕಾಲೇಜು

ಮುಲ್ಕಿ: ಕಿಲ್ಪಾಡಿ ಮೆಡಲಿನ್ ಪಿಯು ಕಾಲೇಜು ಶೇ. 98 ಫಲಿತಾಂಶ ಗಳಿಸಿದೆ. 148 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ ಕಲಾ ವಿಭಾಗ ಶೇ100%, ವಿಜ್ಞಾನ ವಿಭಾಗ 98%,ವಾಣಿಜ್ಯ ವಿಭಾಗ 97% 49 ವಿಶಿಷ್ಟ ಶ್ರೇಣಿ,ಪ್ರಥಮ,88,ದ್ವಿತೀಯ8 ಫಲಿತಾಂಶ ಲಭಿಸಿದೆ. ಶ್ರೀ ನಾರಾಯಣ ಸನಿಲ್ ಸರಕಾರಿ ಪದವಿ ಪೂರ್ವ ಕಾಲೇಜು ಹಳೆಯಂಗಡಿ ಶೇ. 86 ಫಲಿತಾಂಶ ಗಳಿಸಿದೆ. ಶ್ರೀ ನಾರಾಯಣ ಸನಿಲ್ ಸರಕಾರಿ ಪದವಿಪೂರ್ವ ಕಾಲೇಜು ಹಳೆಯಂಗಡಿ ಶೇ. 86 ಫಲಿತಾಂಶ ಗಳಿಸಿದೆ. ವಿಶಿಷ್ಟಶ್ರೇಣಿ 3, ಪ್ರಥಮದರ್ಜೆ 16, ದ್ವಿತೀಯ ದರ್ಜೆ11 ಫಲಿತಾಂಶ ಲಭಿಸಿದೆ. ಮುಲ್ಕಿ ಸರಕಾರಿ ಪದವಿಪೂರ್ವ ಕಾಲೇಜಿನ ಕಲಾ ವಿಭಾಗದಲ್ಲಿ 33 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 30 ತೇರ್ಗಡೆ ,ವಿಶಿಷ್ಟಶ್ರೇಣಿ 2,ಪ್ರಥಮ13, ದ್ವಿತೀಯ12, ಫಲಿತಾಂಶ 90.90% ವಿಜ್ಞಾನ ವಿಭಾಗದಲ್ಲಿ 21 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 18 ತೇರ್ಗಡೆ ,ವಿಶಿಷ್ಟಶ್ರೇಣಿ 3,ಪ್ರಥಮ13, ದ್ವಿತೀಯ4, ಫಲಿತಾಂಶ 85.7% ವಾಣಿಜ್ಯ ವಿಭಾಗದ 36 ವಿದ್ಯಾರ್ಥಿಗಳಲ್ಲಿ 32 ತೇರ್ಗಡೆ ,ವಿಶಿಷ್ಟ ಶ್ರೇಣಿ 1,ಪ್ರಥಮ13, ದ್ವಿತೀಯ 16, ಫಲಿತಾಂಶ 89% ಲಭಿಸಿದೆ.

ಕೆವಿಜಿ ಅಮರಜ್ಯೋತಿ ಕಾಲೇಜ್: ರ್‍ಯಾಂಕ್ ಸಾಧನೆ

ಸುಳ್ಯ: ದ್ವಿತೀಯ ಪಿಯುಸಿ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು ಸುಳ್ಯದ ಕೆವಿಜಿ ಅಮರಜ್ಯೋತಿ



ಪದವಿ ಪೂರ್ವ ಕಾಲೇಜ್ ಶೇ.100 ಉತ್ತೀರ್ಣತೆ ದಾಖಲಿಸುವುದರೊಂದಿಗೆ ವಾಣಿಜ್ಯ ವಿಭಾಗದಲ್ಲಿ ವಂಶಿ ಪಿ.ಎಂ. ರಾಜ್ಯಕ್ಕೆ 7ನೇ ರ್‍ಯಾಂಕ್ ಗಳಿಸಿದ್ದಾರೆ. ಈ ಬಾರಿ ಪರೀಕ್ಷೆಗೆ 91 ವಿದ್ಯಾರ್ಥಿಗಳು ಹಾಜರಾಗಿದ್ದು, ವಿಜ್ಞಾನ ವಿಭಾಗದಲ್ಲಿ 47 ವಿದ್ಯಾರ್ಥಿಗಳು ಹಾಗೂ ವಾಣಿಜ್ಯ ವಿಭಾಗದಲ್ಲಿ 44 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ವಂಶಿ ಪಿ.ಎಂ 600ರಲ್ಲಿ 594 ಅಂಕಗಳನ್ನು ಪಡೆದು ರಾಜ್ಯಕ್ಕೆ 7 ರ್‍ಯಾಂಕ್ ಗಳಿಸಿದರೆ ವಿಜ್ಞಾನ ವಿಭಾಗದಲ್ಲಿ ಶಾನ್ವಿ ಪಿ.ಎನ್. 600ರಲ್ಲಿ 584 ಅಂಕಗಳೊಂದಿಗೆ ಕಾಲೇಜಿನಲ್ಲಿ ಮೊದಲ ಸ್ಥಾನ ಗಳಿಸಿದ್ದಾರೆ.

ಕುಮಾರಸ್ವಾಮಿ ವಿದ್ಯಾಲಯ

ಸುಬ್ರಹ್ಮಣ್ಯ: ಕುಮಾರಸ್ವಾಮಿ ವಿದ್ಯಾಲಯದ ಪದವಿ ಪೂರ್ವ ಕಾಲೇಜ್ ದ್ವಿತೀಯ ಪಿ.ಯು.ನಲ್ಲಿ ಶೇ.98.75 ಉತ್ತೀರ್ಣತೆ ದಾಖಲಿಸಿದೆ. ಒಟ್ಟು



80 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 79 ಮಂದಿ ತೇರ್ಗಡೆ ಹೊಂದಿ ಶೇ.98.75 ಉತೀರ್ಣತೆ ದಾಖಲಿಸಿದೆ.

ವಿಜ್ಞಾನ ವಿಭಾಗದಲ್ಲಿ ದೀಪಕ್ ಡಿ. 587, ಪ್ರಲೋಜ್ಞ ಎಲ್.ಪಿ. 582, ಪೂರ್ವಿ ರೈ 580, ಅನೀಶ್ ಕೆ.ಎಸ್. 580, ನಿವೇದ್ಯ, ಗಣೇಶ್ 577, ಚಿನ್ಮಯಿ ಬಿ. 577 ಅಂಕ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 21 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 21 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ.100 ಫಲಿತಾಂಶ ಬಂದಿದೆ. ಹರಿಹರ ಪಲ್ಲತ್ತಡ್ಕದ ದಿಟ ದಿವಾಕರ ಮುಂಡಾಜೆ ಅವರ ಪುತ್ರಿ ಆಶಿಕಾ ಎಂ.ಡಿ. 595 ಅಂಕ ಪಡೆದಿದ್ದಾರೆ. ಸ್ವಾತಿ ಎಂ.ಸಿ. 593, ಚಿನ್ಮಯಿ ಕೆ.ಎಸ್. 580 ಪಡೆದಿದ್ದಾರೆ.

ವಿದ್ಯಾನಿಕೇತನ ಕಾಲೇಜು

ಮಡಿಕೇರಿ: ಪಿಯುಸಿ ಪರೀಕ್ಷೆಯಲ್ಲಿ ಗೋಣಿಕೊಪ್ಪದ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜು



ಶೇ.99.64 ಸಾಧನೆ ಮಾಡಿದೆ. 280 ವಿದ್ಯಾರ್ಥಿಗಳ ಪೈಕಿ 279 ಮಂದಿ ಉತ್ತೀರ್ಣರಾಗಿದ್ದು 145 ಮಂದಿ ಡಿಸ್ಟಿಂಕ್ಷನ್ ಹಾಗೂ 131 ಮಂದಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ತಲಾ 591 ಅಂಕ ಪಡೆದಿರುವ ಹರಿಕೃಷ್ಣನ್ ಎಂ. ಹಾಗೂ ವಿಪುಲ್ ಉತ್ತಪ್ಪ ಬಿ.ಸಿ. ಕಾಲೇಜಿಗೆ ಮೊದಲಿಗರಾಗಿ ಜಿಲ್ಲೆಯಲ್ಲಿ ದ್ವಿತೀಯರಾಗಿದ್ದಾರೆ. ಜೆನ್ನಿಕಾ ಡೇವಿಡ್ (590) ಹಾಗೂ ಜಾಸ್ಮಿನ್ ಡಿ (587) ಕ್ರಮವಾಗಿ ಕಾಲೇಜಿಗೆ ದ್ವಿತೀಯ ಹಾಗೂ ತೃತೀಯ ಸ್ಥಾನದಲ್ಲಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಸಾತ್ವಿ ದೇಚಮ್ಮ (583) ಪ್ರಥಮ, ಬಿ.ವಿ.ಪಲ್ಲವಿ ಹಾಗೂ ದಕ್ಷಾ ಮುತ್ತಮ್ಮ (ತಲಾ 579) ದ್ವಿತೀಯ ಹಾಗೂ ರುಹೀನಾ ಬೇಗಂ (577) ತೃತೀಯ ಸ್ಥಾನ ಪಡೆದಿದ್ದಾರೆ.

ಸವಣೂರು, ಅಂಬಿಕಾ, ಕೆವಿಜಿ ಕಾಲೇಜಿಗೆ ಶೇ.100ರಷ್ಟು ಫಲಿತಾಂಶದ ಸಾಧನೆ

ಪಿಯುಸಿ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳು

ಸವಣೂರಿನ ವಿದ್ಯಾರಶ್ಮಿ ಸ್ವತಂತ್ರ ಪದವಿ ಪೂರ್ವ ಕಾಲೇಜು: ಶೇ.100 ಫಲಿತಾಂಶ

ಪುತ್ತೂರು: ಮಾರ್ಚ್ 2026ರ ದ್ವಿತೀಯ ಪಿಯುಸಿ ಪರೀಕ್ಷೆ-1ರ ಫಲಿತಾಂಶ ಪ್ರಕಟವಾಗಿದ್ದು ಸವಣೂರಿನ ವಿದ್ಯಾರಶ್ಮಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನಿಂದ ಪರೀಕ್ಷೆಗೆ ಹಾಜರಾಗಿದ್ದ ಎಲ್ಲಾ 28 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.100 ಉತ್ತೀರ್ಣತೆ ದಾಖಲಿಸಿದೆ. ಪರೀಕ್ಷೆಗೆ ಹಾಜರಾಗಿದ್ದ 28 ವಿದ್ಯಾರ್ಥಿಗಳ ಪೈಕಿ 12 ಮಂದಿ ವಿಶಿಷ್ಟ ಶ್ರೇಣಿ, 16 ಮಂದಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ವಾಣಿಜ್ಯ ವಿಭಾಗ: ಆಯಿಷತ್ ಶಿಫಾ 581/600(ಶೇ.96.83), ಮುಹಮ್ಮದ್ ಶಹೀರ್ 571/600(ಶೇ.95.16), ಪ್ರತೀಕ್ಷ ಪಿ. 569/600 (ಶೇ.94.83), ಮೊಹಮ್ಮದ್ ಫಾರಿಝಲ್ 551/600 (ಶೇ.91.83) ಮೊಹಮ್ಮದ್ ಸಹದ್ 541/600 (ಶೇ.90.16), ಅವನಿ ಆರ್. ರೈ 536/600 (ಶೇ.89.33), ಮೊಹಮ್ಮದ್ ಜಲಾಲುದ್ದೀನ್ ಎನ್. 527/600(ಶೇ.87.83).

ವಿಜ್ಞಾನ ವಿಭಾಗ: ಮೊಹಮ್ಮದ್ ರಾಶಿದ್ 554/600(ಶೇ.92.3), ಶ್ರೀರಕ್ಷ ಪಿ. 552/600 (ಶೇ.92), ಖದೀಜತ್ ಆರಿಝಲ ಎ.ಎಸ್. 552/600 (ಶೇ.92), ಫಾತಿಮತ್ ಶಬೀಬ 525/600 (ಶೇ.87.50), ಶಮ ಕೆ. 524/600 (ಶೇ.87.33) ಸೇರಿದಂತೆ 12 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಉತ್ತಮ ಫಲಿತಾಂಶ ಗಳಿಸಿದ ವಿದ್ಯಾರ್ಥಿಗಳನ್ನು ಮತ್ತು ಬೋಧಕ ಸಿಬ್ಬಂದಿಯವರನ್ನು ಸಂಸ್ಥೆಯ ಸಂಚಾಲಕರು ಸವಣೂರು ಸೀತಾರಾಮ ರೈ ಕೆ., ಆಡಳಿತಾಧಿಕಾರಿ ಅಶ್ವಿನ್ ಎಲ್. ಶೆಟ್ಟಿ



ಮತ್ತು ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ ಎಂದು ಪ್ರಾಂಶುಪಾಲೆ ಶಶಿಕಲಾ ಎಸ್. ಆಳ್ವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬಿಕಾ ಪದವಿ ಪೂರ್ವ ವಿದ್ಯಾಲಯ: ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಸಾಧನೆ



ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಮುನ್ನಡೆಸುತ್ತಿರುವ ನೆಲ್ಲಿಕಟ್ಟೆ ಅಂಬಿಕಾ ಪದವಿ ಪೂರ್ವ ಕಾಲೇಜ್ ಹಾಗೂ ಬಪ್ಪಳಿಗೆ ವಸತಿಯುತ ಅಂಬಿಕಾ ಪದವಿ ಪೂರ್ವ ವಿದ್ಯಾಲಯಗಳು 2025-26ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ.100 ಉತ್ತೀರ್ಣತೆ ದಾಖಲಿಸಿದೆ. ನೆಲ್ಲಿಕಟ್ಟೆಯ ವಾಣಿಜ್ಯ ವಿಭಾಗ ಶೇ.100 ಉತ್ತೀರ್ಣತೆ ದಾಖಲಿಸಿ ಸಾಧನೆ ಮೆರೆದಿದೆ.

ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಇಂದಿರಾ ನಗರ ಬೆಳ್ಳಾರೆ ನಿವಾಸಿ ಶಾರ್ವರೀ ಆರ್. ಎಸ್. 600ರಲ್ಲಿ 597 ಅಂಕವನ್ನು ಪಡೆಯುವ ಮೂಲಕ ರಾಜ್ಯಕ್ಕೆ ದ್ವಿತೀಯ ಸ್ಥಾನ ಗಳಿಸಿದ್ದಾರೆ. ನಂದಿಲ ಹೌಸ್ ಹಾರಾಡಿ ನಿವಾಸಿ ತ್ರಿಶೂಲ್ ಎನ್.ಡಿ. 594 ಅಂಕವನ್ನು ಪಡೆಯುವ ಮೂಲಕ ರಾಜ್ಯಕ್ಕೆ 5ನೇ ಸ್ಥಾನ ಪಡೆದಿದ್ದಾರೆ. ಬಪ್ಪಳಿಗೆ, ಅಂಬಿಕಾ ವಸತಿಯುತ ಪದವಿ ಪೂರ್ವ ವಿದ್ಯಾಲಯ 2025-26ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ.100 ಫಲಿತಾಂಶವನ್ನು ದಾಖಲಿಸಿದೆ. ವಿಜ್ಞಾನ ವಿಭಾಗದಲ್ಲಿ ಕಡಬದ ತಾಲೂಕಿನ ಆಲಂಕಾರು ನಿವಾಸಿ ಗಗನ್ ಕೆ.ಆರ್. 600ರಲ್ಲಿ 594 ಅಂಕವನ್ನು ಪಡೆಯುವ ಮೂಲಕ ರಾಜ್ಯಕ್ಕೆ 5ನೇ ಸ್ಥಾನ



ಗಳಿಸಿದ್ದಾರೆ.

ನೆಲ್ಲಿಕಟ್ಟೆ ಕಾಲೇಜ್

ನೆಲ್ಲಿಕಟ್ಟೆ ಪ.ಪೂ. ಕಾಲೇಜಿನಿಂದ 2025-26ರ ಪರೀಕ್ಷೆಗೆ ಹಾಜರಾದ ಒಟ್ಟು 231 ವಿದ್ಯಾರ್ಥಿಗಳಲ್ಲಿ 173 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗು 58 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ಕಾಲೇಜು ಶೇ.100 ಫಲಿತಾಂಶ ದಾಖಲಿಸಿದೆ. ವಾಣಿಜ್ಯ ವಿಭಾಗದಲ್ಲಿ ಪುತ್ತೂರು ಶೆಣೈ ಕಂಪೌಂಡ್ ಮುಖ್ಯ ರಸ್ತೆ ನಿವಾಸಿ ಪ್ರತೀಕ್ಷಾ ಶೆಣೈ 600ರಲ್ಲಿ 594 ಅಂಕಗಳೊಂದಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಪರೀಕ್ಷೆಗೆ ಹಾಜರಾದ ಒಟ್ಟು 37 ವಿದ್ಯಾರ್ಥಿಗಳಲ್ಲಿ 31 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 6 ಮಂದಿ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶೇ.100 ಫಲಿತಾಂಶ ದಾಖಲಿಸಿದೆ.

ಬಪ್ಪಳಿಗೆ ವಸತಿಯುತ ಪಿಯು ಕಾಲೇಜ್

ಬಪ್ಪಳಿಗೆ ಅಂಬಿಕಾ ವಸತಿಯುತ ಪಿಯು ಕಾಲೇಜಿನಿಂದ **2025-26ರ** ಪರೀಕ್ಷೆಗೆ ಹಾಜರಾದ ಒಟ್ಟು **216** ವಿದ್ಯಾರ್ಥಿಗಳಲ್ಲಿ **159** ವಿದ್ಯಾರ್ಥಿಗಳು ವಿಶಿಷ್ಟಶ್ರೇಣಿಯಲ್ಲಿ ಹಾಗು **56** ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ **ಶೇ.100** ಫಲಿತಾಂಶ ದಾಖಲಿಸಿದೆ. ಬೆಂಗಳೂರಿನ ಅಖಿಲೇಶ್ ಅನಂತ ಶರ್ಮ **591** ಮತ್ತು ಪುತ್ತೂರಿನ ಕುಂಬ್ರ ನಿವಾಸಿ ಪುತ್ರಿ ಸನ್ನಿಧಿ **591** ಅಂಕವನ್ನು ಪಡೆದಿದ್ದಾರೆ.

ಕಡಬ: ಶ್ರೀ ರಾಮಕುಂಜೇಶ್ವರ ಪದವಿ ಪೂರ್ವ ಕಾಲೇಜು



ಕಡಬ: ರಾಮಕುಂಜದ ಶ್ರೀ ರಾಮಕುಂಜೇಶ್ವರ ಪ.ಪೂ. ಕಾಲೇಜಿನಿಂದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಿಂದ ಒಟ್ಟು 261 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಿ ಆ ಪೈಕಿ 256 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ. 98.08 ಫಲಿತಾಂಶ ದಾಖಲಾಗಿದೆ ಎಂದು ಕಾಲೇಜಿನ ಕಾರ್ಯದರ್ಶಿ ರಾಧಾಕೃಷ್ಣ




ಕೆ.ಎಸ್. ಹಾಗೂ ಪ್ರಾಂಶುಪಾಲ ಚಂದ್ರಶೇಖರ ಕೆದ್ದೊಟ್ಟೆ ಅವರು ತಿಳಿಸಿದ್ದಾರೆ. 85 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 151 ಮಂದಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕಾಲೇಜಿನ ವಿಜ್ಞಾನ ವಿಭಾಗದ ಆಯಿಶಾ ರಿಝಾ ಕೆ. 580, ಹಿತೇಶ್ 579, ಬಿ. ತೀಕ್ಷ್ಣವಿ 576, ಲೇಖನ 572, ಕೀರ್ತಿ ಕೆ. 571, ಆರ್. ಪ್ರಣಾಮ್ ಮಿತ್ರ 570, ವಾಣಿಜ್ಯ ವಿಭಾಗದ ಅನುಶ್ರೀ ಉಡುಪ 589, ಡಿ.ಎಲ್.ಮಧುರ 587, ಲಯಶ್ರೀ 585, ನಿತಿಶಾ 585, ಗೌತಮ್ 585, ನಿಶ್ಮಾ 583, ಧನ್ಯ ಎಂ.ಜಿ.582, ಶ್ರೇಯಾ ಎಂ. 577, ಸಿಂಚನಾ 575, ಕೃತಿಕಾ ಕೆ. 575, ಲಿಖಿತಾ ಕೆ. 570, ಕಲಾ ವಿಭಾಗದಲ್ಲಿ ಹೊನ್ನಶ್ರೀ ಬಿ.ಪಿ. 560 ಅಂಕ ಗಳಿಸಿದ್ದಾರೆ.

ಕಣಚೂರು ಮಹಿಳಾ ಕಾಲೇಜಿಗೆ ಶೇ.99 ಫಲಿತಾಂಶ

ಕೊಣಾಜೆ: ಕಣಚೂರು ಮಹಿಳಾ ಪದವಿ ಪೂರ್ವ ಕಾಲೇಜು ದೇರಳಕಟ್ಟೆ ಇದರ 2025-26 ನೇ ಸಾಲಿನ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99 ಫಲಿತಾಂಶ ಲಭಿಸಿದ್ದು, ಪರೀಕ್ಷೆಗೆ ಹಾಜರಾದ ಒಟ್ಟು 218 ವಿದ್ಯಾರ್ಥಿನಿಯರಲ್ಲಿ 68 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿಯಲ್ಲಿ, 132 ವಿದ್ಯಾರ್ಥಿನಿಯರು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ (PCMB) 32 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

30 ಅತ್ಯುತ್ತಮ ಶ್ರೇಣಿ

ಅನ್‌ಫ ಮರಿಯಮ್ ಕೆ.ಎ. 581 (96.83%),ಸಾರ ಸೈಮಾ 579(96.5%), ಅಂಕಗಳನ್ನು ಗಳಿಸಿರುತ್ತಾರೆ. ವಾಣಿಜ್ಯ ವಿಭಾಗದ ಕಂಪ್ಯೂಟರ್ ಸೈನ್ಸ್ (ಗಣಕ ವಿಜ್ಞಾನ) ವಿಭಾಗದಲ್ಲಿ 30 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣ ರಾಗಿರುತ್ತಾರೆ. ಅಲೀನ ಆಯಿಷಾ 588(98 %) , ಶರೋನ್ ಸಲೋನಿ ಮಾಬೆನ್ 586 (97.66%) ಅಂಕ ಗಳಿಸಿರುತ್ತಾರೆ. ವಾಣಿಜ್ಯವಿಭಾಗದಲ್ಲಿ



(HEBA) 01 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಆಮಿನಾ ಹಸ್ನ ಅನೀಫ್ (87%) ಗಳಿಸಿದ್ದಾರೆ. ಕಲಾ ವಿಭಾಗದ 5 ವಿದ್ಯಾರ್ಥಿನಿ ಉತ್ತಮ ಶ್ರೇಣಿ ಯಲ್ಲಿ ಉತ್ತೀರ್ಣರಾಗಿದ್ದಾರೆ. ಹಲೀಮತ್ ರಮೀಝ 574 (95.66%), ಹಿಬಾ ಜೈನಬ 548 (91.33%)ಅಂಕ ಗಳಿಸಿದ್ದಾರೆ.

ಸಾಧನೆಗೆ ಅಭಿನಂದನೆ

ವಿದ್ಯಾರ್ಥಿನಿಯರ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಬೋಧಕೇತರ ಸಿಬ್ಬಂದಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಎನ್.ಎಂ.ಪಿ.ಯು. ಕಾಲೇಜಿಗೆ ಶೇ.100 ಫಲಿತಾಂಶ



ಸುಳ್ಯ: ಸುಳ್ಯ ಎನ್.ಎಂ.ಪಿ.ಯು. ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾದ 89 ವಿದ್ಯಾರ್ಥಿಗಳಲ್ಲಿ 89 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.100 ಫಲಿತಾಂಶ ದಾಖಲಾಗಿದೆ. ಒಟ್ಟು 34 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 50 ಮಂದಿ ಪ್ರಥಮ ದರ್ಜೆ, 5 ಮಂದಿ ದ್ವಿತೀಯ ದರ್ಜೆ ಗಳಿಸಿದ್ದು ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ 33 ಮಂದಿ ಹಾಜರಾಗಿದ್ದು 10 ಮಂದಿ ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಗಳಿಸಿ ಶೇ. 100 ಫಲಿತಾಂಶ ದಾಖಲಾಗಿದೆ . ವಾಣಿಜ್ಯ ವಿಭಾಗದ 49 ವಿದ್ಯಾರ್ಥಿಗಳಲ್ಲಿ 24 ಮಂದಿ ಡಿಸ್ಟಿಂಕ್ಷನ್ ಗಳಿಸಿ ಎಲ್ಲರೂ ಉತ್ತೀರ್ಣರಾಗಿ ಶೇ. 100 ದಾಖಲಾಗಿದೆ ಮತ್ತು ಕಲಾ ವಿಭಾಗದಲ್ಲಿ ಪರೀಕ್ಷೆ ಬರೆದ 7 ವಿದ್ಯಾರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾಗಿ ಶೇ.100 ಫಲಿತಾಂಶ ದಾಖಲಾಗಿದೆ. ವಿಜ್ಞಾನ ವಿಭಾಗದ ಸುಗುಣ ಎಸ್ 596, ಅಭಿಜ್ಞಾ ಭಟ್ ಎಸ್ 595, ಸಾಕ್ಷಿ, ಎ 587, ವಾಣಿಜ್ಯ ವಿಭಾಗದ ಶರಣ್ಯ ಪಿ ಜಿ 590, ಯು. ಬಿ. ಕಾರ್ತಿಕ್ ರಾವ್ 577, ಸಿಂಚನ ಬಿ 572 ಅಂಕ ಗಳಿಸಿದ್ದಾರೆ. ಕಲಾ ವಿಭಾಗದ ಗುಣಶೇಖರ ಪಿ ಆರ್ 481, ಯಶ್ ವಂತ್ ಕುಶಾಲಪ್ಪ 465, ತನ್ವಿ ಪಿಬಿ 460ಅಂಕಗಳನ್ನು ಪಡೆದುಕೊಂಡು ಕಾಲೇಜಿಗೆ ಅಗ್ರ ಸ್ಥಾನಿಗಳಾಗಿದ್ದಾರೆ.

ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಳ



ಕಟೀಲು: ಶ್ರೀ ದುರ್ಗಾಪರಮೇಶ್ವರೀ ದೇವಳ ಪದವೀಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಒಟ್ಟು 325 ವಿದ್ಯಾರ್ಥಿಗಳಲ್ಲಿ 314 ಮಂದಿ ಉತ್ತೀರ್ಣರಾಗಿದ್ದು 96.62 ಫಲಿತಾಂಶ ದಾಖಲಿಸಿದೆ. ವಾಣಿಜ್ಯ ವಿಭಾಗದಲ್ಲಿ 173ಮಂದಿಯಲ್ಲಿ 64 ಮಂದಿ ವಿಶಿಷ್ಟ ಶ್ರೇಣಿಯಲ್ಲಿ 76 ಮಂದಿ ಪ್ರಥಮ ಶ್ರೇಣಿಯಲ್ಲಿ, 16ಮಂದಿ ದ್ವಿತೀಯ ಶ್ರೇಣಿಯಲ್ಲಿ, 14 ಮಂದಿ ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿ 98.27 ಫಲಿತಾಂಶ ದಾಖಲಿಸಿದೆ. ಶಿವಮನ್ಯು ಶ್ರೀಕಾಂತ್ ಭಟ್(589), ಕಾರ್ತಿಕ್ ಭಂಡಾರಿ(588), ಅನನ್ಯಾ(585) ಕಾಲೇಜಿಗೆ ಮೊದಲ ಮೂರು ಸ್ಥಾನಗಳನ್ನು ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ 152 ವಿದ್ಯಾರ್ಥಿಗಳಲ್ಲಿ 144 ಮಂದಿ ಉತ್ತೀರ್ಣರಾಗಿದ್ದು, 49ಮಂದಿ ವಿಶಿಷ್ಟ ಶ್ರೇಣಿಯಲ್ಲಿ, 92ಮಂದಿ ಪ್ರಥಮ ಶ್ರೇಣಿಯಲ್ಲಿ, 04 ಮಂದಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿ 96 ಶೇ. ಫಲಿತಾಂಶ ದಾಖಲಿಸಿದೆ.ಕಾರ್ತಿಕ್ ಕೋಟ್ಯಾನ್(594), ಶಾರ್ವರಿ (584), ದೀಕ್ಷಿತ್(583) ಕಾಲೇಜಿಗೆ ಮೊದಲ ಮೂರು ಸ್ಥಾನಗಳನ್ನು ಪಡೆದಿದ್ದಾರೆ.

ನರೇಂದ್ರ ಪಿಯು ಕಾಲೇಜ್: ಶೇ. ಶೇ.98 ಫಲಿತಾಂಶ

ಪುತ್ತೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ತೆಂಕಿಲದ ನರೇಂದ್ರ ಪದವಿ ಪೂರ್ವ ಕಾಲೇಜ್ ಶೇ.97 ಉತ್ತೀರ್ಣತೆ ದಾಖಲಿಸಿದೆ.



ವಾಣಿಜ್ಯ ವಿಭಾಗ: ಹರ್ಷಿತಾ ಕೆ. 593(ಶೇ.98.8) ಅಂಕಗಳನ್ನು ಗಳಿಸುವುದರ ಮೂಲಕ ಕಾಲೇಜಿನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಶಿಕ್ಷಿತಾ ಎಂ.ಕೆ.(589), ಶಾಲ್ಮಲಿ ಆರ್.ಎಸ್. (579), ಶರಣ್ಯ (575), ಎಮ್. ಎಸ್. ಶರ್ವಾಣಿ ಆಚಾರ್ಯ(532), ಪಲ್ಲವಿ ಎಂ.(527), ಸಿಂಧು ಸರಳಾಯ(525) ಅಂಕಗಳನ್ನು ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾರೆ.

ವಿಜ್ಞಾನ ವಿಭಾಗ: ನಂದನಾ 590(ಶೇ.98.3) ಅಂಕಗಳನ್ನು ಗಳಿಸುವುದರ ಮೂಲಕ ಕಾಲೇಜಿನಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಸಿಂಚನಾ ಜೆ.ಎನ್.(587), ತೃಷಾ ಕೆ.ಆರ್.(585), ಅರ್ಚನಾ(583), ಪಿ. ಕವನಶ್ರೀ (579), ಪ್ರಕೃತಿ ವಿ. ರೈ (575), ರಶ್ಮಿತಾ ಎ.ಪಿ. (574), ಲಿತಿಕಾ (572), ಸಹನಾ ಎನ್. (567), ಮೋಕ್ಷಾ ಸಿ.ಕೆ.(564), ಮೋಕ್ಷಾ ಬಿ. (561), ರಿತಿಕಾ ಬಿ.ಆರ್.(559), ಅನುಷಾ ಎನ್.ಜೆ. (558), ಸನಿಕ ಪಿ. ರೈ (554), ಎ. ಶ್ರವಣ ಕುಮಾರ್ (554), ಹರಿಣಿ ಗೌಡ (553), ಸಿಂಚನಾ ಪಿ.ಜಿ.(546), ಹರ್ಷಿತಾ(542), ರೇಖಾ ಎಲ್. (542), ಭವಿತ್ ಎಂ. (536), ಗಾಯನ ಎ.(534), ಅಖಿಲೇಶ್ (534), ಪೂರ್ವಿ ಬಿ. ಎಚ್. (533), ಅನುಶ್ರೀ ವಿ.(531), ಶೃತಿ ಎನ್.ಕೆ.(527), ಸಹನಾ ಎಂ.(522), ಇಂಚರ (521), ಪಲ್ಲವಿ(518), ಕೆ. ಭವಿಷ್ಯಾ (516), ಆಕಾಶ್ (516), ಶ್ರಾವ್ಯಶ್ರೀ ಕೆ.(510), ಪ್ರಜ್ವಲ್ ಎ.(510) ಅಂಕಗಳನ್ನು ಗಳಿಸಿ ವಿಶಿಷ್ಟಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಶೇ.98 ಫಲಿತಾಂಶ ಲಭಿಸಿದೆ. ಒಟ್ಟು 39 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಗೊಂಡು ಕಾಲೇಜಿಗೆ ಶೇ.97 ಫಲಿತಾಂಶ ಲಭಿಸಿದೆ ಎಂದು ಕಾಲೇಜಿನ ಪ್ರಾಂಶುಪಾಲ ಪ್ರಸಾದ್ ಶ್ಯಾನಭಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಲ್ಕಿ ನಾರಾಯಣ ಗುರು ಕಾಲೇಜು

ಮುಲ್ಕಿ: ನಾರಾಯಣ ಗುರು ಸಂಯುಕ್ತ ಪದವಿಪೂರ್ವ ಕಾಲೇಜಿಗೆ ಶೇ100% ಫಲಿತಾಂಶ ಲಭಿಸಿದೆ.

133 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ 43 ವಿದ್ಯಾರ್ಥಿಗಳಲ್ಲಿ ವಿಶಿಷ್ಟ ಶ್ರೇಣಿ 15,ಪ್ರಥಮದರ್ಜೆ 27, ದ್ವಿತೀಯ ದರ್ಜೆ 1, ವಾಣಿಜ್ಯ ವಿಭಾಗದ 90 ವಿದ್ಯಾರ್ಥಿಗಳಲ್ಲಿ ವಿಶಿಷ್ಟ ಶ್ರೇಣಿ 27, ಪ್ರಥಮ ದರ್ಜೆ 59, ದ್ವಿತೀಯ ದರ್ಜೆ 4 ಫಲಿತಾಂಶ ಲಭಿಸಿದೆ. ವಾಣಿಜ್ಯ ವಿಭಾಗದ ಅನ್ವಿತಾ ಆರ್ 597(99.5%) ದಿಯಾ 594 (99%) ವಿಜ್ಞಾನ ವಿಭಾಗದ ಶ್ರಾವ್ಯಾ 590 (98.33%)ಅಂಕಗಳಿಸಿದ್ದಾರೆ.

ಹೆಬ್ರಿಯ ಅಮೃತ ಭಾರತಿ ಕಾಲೇಜಿಗೆ ರ್‍ಯಾಂಕ್

ಕಾರ್ಕಳ: ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಹೆಬ್ರಿಯ ಅಮೃತ ಭಾರತಿ ಪದವಿ ಪೂರ್ವ ಕಾಲೇಜಿನ ಸಮೀಕ್ಷಾ ಆರ್. ಅವರು 600ರಲ್ಲಿ 597 ಅಂಕಗಳನ್ನು ಪಡೆದು ರಾಜ್ಯ



ಮಟ್ಟದಲ್ಲಿ ರ್‍ಯಾಂಕ್ ಗಳಿಸಿದ್ದಾರೆ. ಈಕೆ ಅಜೆಕಾರು ಸಮೀಪದ ಮರ್ಣೆ ಗ್ರಾಮದ ನಿವಾಸಿಗಳಾದ ರವೀಚಂದ್ರ ನಾಯಕ್ ಹಾಗೂ ಸರಳ ದಂಪತಿಗಳ ಪುತ್ರಿ. ತಮ್ಮ ಸಾಧನೆ ಕುರಿತು ಮಾತನಾಡಿದ ಸಮೀಕ್ಷಾ, ನಿರಂತರ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಮತ್ತು ಪೋಷಕರ ಬೆಂಬಲದಿಂದಲೇ ಈ ಫಲಿತಾಂಶ ಸಾಧ್ಯವಾಗಿದೆ. ಎಂದು ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಬೇಕೆಂಬ ಆಶಯ ಹೊಂದಿದ್ದೇನೆ ಎಂದು ಮಾಧ್ಯಮಗಳಿಗೆ ತಿಳಿಸಿದರು.

ವಿಜಯಾ ಪಿಯು ಕಾಲೇಜು: ಶೇ. 94.28 ಫಲಿತಾಂಶ

ಮುಲ್ಕಿ: ವಿಜಯಾ ಪಿಯು ಕಾಲೇಜು ಶೇ. 94.28% ಫಲಿತಾಂಶ ಗಳಿಸಿದೆ. 70 ವಿದ್ಯಾರ್ಥಿಗಳುಪರೀಕ್ಷೆಗೆಹಾಜರಾಗಿದ್ದು66 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ವಿಶಿಷ್ಟ ಶ್ರೇಣಿ 21, ಪ್ರಥಮ 38, 6 ದ್ವಿತೀಯ ಶ್ರೇಣಿ ಲಭಿಸಿದೆ. ವಿಜ್ಞಾನ ವಿಭಾಗದ 24 ವಿದ್ಯಾರ್ಥಿಗಳಲ್ಲಿ ವಿಶಿಷ್ಟ ಶ್ರೇಣಿ 8, ಪ್ರಥಮ 16 ಪಡೆದಿದ್ದು, ವಿಭಾಗ ಶೇ.100 ಫಲಿತಾಂಶ ದಾಖಲಿಸಿದೆ. ವಾಣಿಜ್ಯ ವಿಭಾಗದ 46 ವಿದ್ಯಾರ್ಥಿಗಳಲ್ಲಿ, ವಿಶಿಷ್ಟ ಶ್ರೇಣಿ 13, ಪ್ರಥಮ 22, 6 ಮಂದಿ ದ್ವಿತೀಯ ಶ್ರೇಣಿ ಗಳಿಸಿದ್ದಾರೆ.

ಪಿಯು ಫಲಿತಾಂಶ: ರಾಜ್ಯದಲ್ಲಿ ಕೊಡಗಿಗೆ 3ನೇ ಸ್ಥಾನ

ಮಡಿಕೇರಿ: ಪ್ರಸಕ್ತ (2025-26ನೇ) ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ಕೊಡಗು ಜಿಲ್ಲೆಯು ಶೇ.92.30ರಷ್ಟು ಫಲಿತಾಂಶ ಪಡೆಯುವುದರೊಂದಿಗೆ ರಾಜ್ಯದಲ್ಲಿ 3ನೇ ಸ್ಥಾನಕ್ಕೇರಿದೆ. ಕಳೆದ ಬಾರಿ ಜಿಲ್ಲೆಯು ಶೇ.83.84ರಷ್ಟು ಸಾಧನೆ ಮಾಡುವ ಮೂಲಕ 4ನೇ ಸ್ಥಾನದಲ್ಲಿತ್ತು.

ಜಿಲ್ಲೆಯಲ್ಲಿ ಈ ಬಾರಿ 1898 ಗಂಡು ಹಾಗೂ 2847 ಹೆಣ್ಣು ಮಕ್ಕಳು ಸೇರಿದಂತೆ ಒಟ್ಟು 4745 ವಿದ್ಯಾರ್ಥಿಗಳು ಪರೀಕ್ಷೆ ಬರದಿದ್ದು, ಇದರಲ್ಲಿ 1752 ಗಂಡು ಹಾಗೂ 2628 ಹೆಣ್ಣು ಸೇರಿದಂತೆ ಒಟ್ಟು 4380 ಮಂದಿ ತೇರ್ಗಡೆಯಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪೊನ್ನಂಪೇಟೆ ಸಿಐ ಪಿಯು ಕಾಲೇಜಿನ ಭಾಷಿತಾ ಕೆ.ಡಿ. 594 ಅಂಕ ಪಡೆದು ಜಿಲ್ಲೆಗೆ ಮೊದಲಿಗರಾಗಿದ್ದು, ಗೋಣಿಕೊಪ್ಪ ವಿದ್ಯಾನಿಕೇತನ ಪಿಯು ಕಾಲೇಜಿನ ಹರಿಕೃಷ್ಣನ್ ಎಂ. ಹಾಗೂ ವಿಪುಲ್ ಉತ್ತಪ್ಪ ತಲಾ 591 ಅಂಕ ಗಳಿಸಿ ದ್ವಿತೀಯ ಮತ್ತು ಕುಶಾಲನಗರ ವಿವೇಕಾನಂದ ಪಿಯು ಕಾಲೇಜಿನ ಗ್ರೀಷ್ಮಾ ಕೆ.ಎಲ್ 590 ಅಂಕದೊಂದಿಗೆ ತೃತೀಯ ಸ್ಥಾನದಲ್ಲಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಮಡಿಕೇರಿ ಸಂತ ಮೈಕಲರ ಪದವಿ ಪೂರ್ವ ಕಾಲೇಜಿನ ಸಿಂಚನಾ ಪ್ರಸನ್ನ 597 ಅಂಕ ಪಡೆದು ಜಿಲ್ಲೆಗೆ ಪ್ರಥಮ, ಕುಶಾಲನಗರ ವಿವೇಕಾನಂದ ಕಾಲೇಜಿನ ರೈಲಾ ಸಾರಮ್ಮ (590) ದ್ವಿತೀಯ ಅದೇ ಕಾಲೇಜಿನ ಕೀರ್ತನಾ ವಿ. (588) ಹಾಗೂ ವೀರಾಜಪೇಟೆ ಕಾವೇರಿ ಪದವಿ ಪೂರ್ವ ಕಾಲೇಜಿನ ಫರೀದಾ ಎಂ.ಎಸ್ (588) ತೃತೀಯ ಸ್ಥಾನ ಪಡೆದಿದ್ದಾರೆ.

ಕಲಾ ವಿಭಾಗ: ಶನಿವಾರಸಂತೆ ಭಾರತಿ ಪದವಿ ಪೂರ್ವಾ ಕಾಲೇಜಿನ ಫಾತೀಮಾ ಎಸ್.ಎ (592), ಕೊಡಿಗೆ ಸರ್ಕಾರಿ ಪಿಯು ಕಾಲೇಜಿನ ನಂದಿತಾ (584) ದ್ವಿತೀಯ ಹಾಗೂ ಮೂರ್ನಾಡು ಪಿಯು ಕಾಲೇಜಿನ ಕೆ.ಎಂ ಜುಹಾರಾ (570) 3ನೇ ಸ್ಥಾನದಲ್ಲಿದ್ದಾರೆ.


ಜಿಲ್ಲೆಯ 13 ಕಾಲೇಜುಗಳು ಶೇ. 100 ಫಲಿತಾಂಶ ದಾಖಲು

ಕೊಡಗು ಜಿಲ್ಲೆಯಲ್ಲಿ ಗೋಣಿಕೊಪ್ಪ ಲಯನ್ಸ್ ಪದವಿ ಪೂರ್ವ ಕಾಲೇಜು, ಸೋಮವಾರಪೇಟೆ ಸಂತ ಜೋಸೆಫರ ಕಾಲೇಜು, ಗರಗಂದೂರು ಮೊರಾರ್ಜಿ ದೇಸಾಯಿ ಪ.ಪೂ.ಕಾಲೇಜು, ಪೊನ್ನಂಪೇಟೆ ಸಂತ ಅಂತೋಣಿ ಪ.ಪೂ.ಕಾಲೇಜು, ವೀರಾಜಪೇಟೆ ಸಂತ ಅನ್ನಮ್ಮ ಪ.ಪೂ.ಕಾಲೇಜು,ಗೋಣಿಕೊಪ್ಪ ಕೂರ್ಗ್ ಪ.ಪೂ. ಕಾಲೇಜು,ಮಡಿಕೇರಿ ಸಂತ ಮೈಕಲರ ಪ.ಪೂ.ಕಾಲೇಜು, ಕೊಟ್ಟಮುಡಿಯ ಏಕಲವ್ಯ ಪ.ಪೂ. ಕಾಲೇಜು, ಪೆರುಂಬಾಡಿಯ ಎಸ್ಇಎಸ್.ಪದವಿಪೂರ್ವ ಕಾಲೇಜು,ಗೋಣಿಕೊಪ್ಪ ಸರ್ವದೈವತಾ ಪ.ಪೂ.ಕಾಲೇಜು ಭಾಗಮಂಡಲದ ಅಟಲ್ ಬಿಹಾರಿ ವಾಜಪೇಯಿ ಪದವಿಪೂರ್ವ ಕಾಲೇಜು ಮತ್ತು ಕೊಡ್ಲಿಪೇಟೆಯ ಅಬ್ದುಲ್ ಕಲಾಂ ಪದವಿ ಪೂರ್ವ ಕಾಲೇಜು.

ಸರಸ್ವತಿ ವಿದ್ಯಾಲಯಕ್ಕೆ ಶೇ. 98.64 ಫಲಿತಾಂಶ ಸಾಧನೆ

ಗಂಗೊಳ್ಳಿ: 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಪದವಿ ಪೂರ್ವ ಕಾಲೇಜು ಶೇ. 98.64 ಫಲಿತಾಂಶ ದಾಖಲಿಸಿದೆ.

ಪರೀಕ್ಷೆಗೆ ಹಾಜರಾದ 147 ವಿದ್ಯಾರ್ಥಿಗಳಲ್ಲಿ 145 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದು, 63 ವಿದ್ಯಾರ್ಥಿಗಳು ವಿಶಿಷ್ಟ ದರ್ಜೆಯಲ್ಲಿ, 69 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 12 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಮತ್ತು ಓರ್ವ ವಿದ್ಯಾರ್ಥಿ ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಶೇ.100 ಫಲಿತಾಂಶ ದಾಖಲಾಗಿದೆ. ಸಂಸ್ಕೃತ ವಿಷಯದಲ್ಲಿ 16 ವಿದ್ಯಾರ್ಥಿಗಳು 100 ಅಂಕಗಳನ್ನು ಪಡೆದಿದ್ದರೆ, ವ್ಯವಹಾರ ಅಧ್ಯಯನದಲ್ಲಿ 9, ಲೆಕ್ಕಶಾಸ್ತ್ರದಲ್ಲಿ 3, ಗಣಿತ, ಭೌತಶಾಸ್ತ್ರ ಮತ್ತು ಕಂಪ್ಯೂಟರ್ ಸಾಯನ್ಸ್ ನಲ್ಲಿ ತಲಾ ಇಬ್ಬರು ವಿದ್ಯಾರ್ಥಿಗಳು, ಸಂಖ್ಯಾಶಾಸ್ತ್ರ ಅರ್ಥಶಾಸ್ತ್ರ ಮತ್ತು



ಕನ್ನಡದಲ್ಲಿ ತಲಾ ಒಬ್ಬ ವಿದ್ಯಾರ್ಥಿ 100 ಅಂಕಗಳನ್ನು ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 594 ಅಂಕಗಳನ್ನು ಪಡೆದಿರುವ ಗೌತಮಿ ಜಿ.ನಾಯಕ್ ಕಾಲೇಜಿನ ಅಗ್ರ ಸ್ಥಾನಿಯಾಗಿದ್ದಾಳೆ. ವಿಜ್ಞಾನ ವಿಭಾಗದಲ್ಲಿ ಪ್ರತೀಕ್ ಕೊಠಾರಿ 590 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಪ್ರತೀಕ್ ಕೊಠಾರಿ (590), ಆದಿತ್ಯ ಎಸ್.ಪೂಜಾರಿ (589), ನವ್ಯಶ್ರೀ ಕೆ. (586), ಉತ್ತಮ ಸಾಧನೆ ಮಾಡಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಗೌತಮಿ ಜಿ.ನಾಯಕ್ (594), ಧನ್ಯ ಯು. (593), ಸಿಂಧು (592), ಸಿಂಚನಾ (589), ದಿಯಾ ಜಿ.ಪೈ (586) ಮತ್ತು ಅಮೃತಾ (586) ಉತ್ತಮ ಸಾಧನೆ ಮಾಡಿದ್ದಾರೆ.

ಸುತ್ತಮುತ್ತ

ಹಸಿಮೀನು ಮಾರುಕಟ್ಟೆ: ದರಪಟ್ಟಿ ಪ್ರದರ್ಶಿಸಲು ಸೂಚನೆ

ಕಡಬ: ಕಡಬ ಪಟ್ಟಣ ಪಂಚಾಯತ್ ಅಧೀನದಲ್ಲಿರುವ ಹಸಿಮೀನು ಮಾರುಕಟ್ಟೆಯಲ್ಲಿ ತಾಜಾ ಮೀನುಗಳನ್ನು ಮಾರಾಟ ಮಾಡುತ್ತಿಲ್ಲ ಹಾಗೂ ಹೆಚ್ಚಿನ ದರಕ್ಕೆ ಮೀನು ಮಾರಾಟ ಮಾಡುತ್ತಿದ್ದಾರೆ ಎನ್ನುವ ಗ್ರಾಹಕರ ದೂರಿನ ಹಿನ್ನಲೆಯಲ್ಲಿ ಮೀನು ಮಾರಾಟಗಾರರು ಸ್ಟಾಲ್‌ನ ಮುಂದೆ ಪ್ರತಿದಿನ ದರಪಟ್ಟಿ ಪ್ರದರ್ಶಿಸಬೇಕು ಮತ್ತು ಗುಣಮಟ್ಟದ ತಾಜಾ ಮೀನುಗಳನ್ನು ಮಾರಾಟ ಮಾಡಬೇಕು ಎಂದು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ನೋಟೀಸ್ ಜಾರಿ ಮಾಡಿದ್ದಾರೆ. ಹಸಿಮೀನು ಮಾರುಕಟ್ಟೆಯ ಸ್ಟಾಲ್ ಸಂಖ್ಯೆ 2ರ ಮಾಲಕ ಆದಂ ಸಾಹೇಬ್ ಹಾಗೂ ಸ್ಟಾಲ್ ಸಂಖ್ಯೆ 3ರ ಮಾಲಕ ಕೆ.ಎಂ. ಮ್ಯಾಥ್ಯೂ ತಾಜಾ ಮೀನುಗಳನ್ನು ಮಾರಾಟ ಮಾಡದೇ, ಮೀನುಗಳನ್ನು ಐಸ್‌ನಲ್ಲಿ ಹಾಕಿ 2–3 ದಿನಗಳ ಕಾಲ ದಾಸ್ತಾನು ಇಟ್ಟು ಅನಂತರ ಮಾರಾಟ ಮಾಡಲಾಗುತ್ತಿದೆ. ಹಾಗೆಯೇ ಮೀನಿಗೆ ಬೇಕಾಬಿಟ್ಟಿ ಧಾರಣೆ ವಿಧಿಸಿ ಗ್ರಾಹಕರಿಂದ ಹೆಚ್ಚಿನ ಹಣ ವಸೂಲಿ ಮಾಡಲಾಗುತ್ತಿದೆ. ಅದಕ್ಕೆ ಕಡಿವಾಣ ಹಾಕಬೇಕು ಎಂದು ಪಟ್ಟಣ ಪಂಚಾಯತ್‌ಗೆ ದೂರು ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಸಂಬಂಧಿಸಿದ ಇಬ್ಬರು ವ್ಯಾಪಾರಿಗಳಿಗೆ ನೋಟೀಸ್ ಜಾರಿ ಮಾಡಿದ್ದು ಆಹಾರ ಇಲಾಖೆಯಿಂದ ಅಧಿಕೃತ ಪ್ರಮಾಣಪತ್ರ ಪಡೆಯಬೇಕು, ಪ್ರತಿದಿನ ಮೀನಿನ ಧಾರಣೆಯನ್ನು ಸ್ಪಷ್ಟವಾಗಿ ಗ್ರಾಹಕರಿಗೆ ಕಾಣಿಸುವಂತೆ ಫಲಕದಲ್ಲಿ ಪ್ರದರ್ಶಿಸಬೇಕು ಹಾಗೂ 7 ದಿನಗಳೊಳಗೆ ಕೈಗೊಂಡ ಕ್ರಮದ ಬಗ್ಗೆ ಪಾಲನಾ ವರದಿ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ. ನಿರ್ದೇಶನಗಳನ್ನು ಉಲ್ಲಂಘಿಸಿದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ನೋಟೀಸ್‌ನಲ್ಲಿ ಎಚ್ಚರಿಸಲಾಗಿದೆ.

ಏ. 13: ಡಾ.ಕೆ.ಗೋವಿಂದ ಭಟ್‌ಗೆ ಸಾರ್ವಜನಿಕ ಶ್ರದ್ಧಾಂಜಲಿ ಸಭೆ

ಬಂಟ್ವಾಳ: ಭಾರತೀಯ ಪಾರಂಪರಿಕ ರಂಗಭೂಮಿಯಲ್ಲಿ ಯಕ್ಷಗಾನ ಕ್ಷೇತ್ರದ ಪ್ರಾತಿನಿಧಿಕ ಕಲಾವಿದ ದಶಾವತಾರ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ವರನಟ ಡಾ.ಕೆ.ಗೋವಿಂದ ಭಟ್ ಸೂರಿಕುಮೇರು ಅವರಿಗೆ ಡಾ. ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ ರಿ. ಸಂಪಾಜೆ ವತಿಯಿಂದ ಸಾರ್ವಜನಿಕ ಶ್ರದ್ಧಾಂಜಲಿ ಸಭೆ ಬಂಟ್ವಾಳದ ಸ್ಪರ್ಶ ಕಲಾ ಮಂದಿರದಲ್ಲಿ ಏಪ್ರಿಲ್ 13ರಂದು ನಡೆಯಲಿದೆ. ಬೆಳಗ್ಗೆ 11ರಿಂದ ಅಪರಾಹ್ನ 5 ಗಂಟೆವರೆಗೆ ಕಾರ್ಯಕ್ರಮಗಳು ನಡೆಯಲಿವೆ. ಗೋವಿಂದ ಸ್ಮರಣೆ, ಸ್ಮರಣ ಭೋಜನ ಮತ್ತು ಗೋವಿಂದಾರ್ಪಣ ಎಂಬ ಹೆಸರಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಆಶೀರ್ವಚನ ನೀಡುವರು. ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್ ಮತ್ತು ಮಂಗಳೂರು ವಿ.ವಿ. ಕುಲಪತಿ ಪ್ರೊ.ಪಿ.ಎಲ್. ಧರ್ಮ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದ್ದು ಪ್ರಮುಖರು ಈ ವೇಳೆ ಗೋವಿಂದ ಭಟ್ ಅವರ ಕುರಿತು ಮಾತನಾಡುವರು. ಬಳಿಕ ಸ್ಮರಣ ಭೋಜನ ನಂತರ, ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ ಉಜಿರೆ ವತಿಯಿಂದ ಗೋವಿಂದಾರ್ಪಣ ಯಕ್ಷಗಾನ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪರಿಷ್ಕೃತ ಆಸ್ತಿ ತೆರಿಗೆ ಪಾವತಿಗೆ ಸೂಚನೆ

ಉಡುಪಿ: ಸರ್ಕಾರದ ಸುತ್ತೋಲೆಯಂತೆ ಸಾಲಿಗ್ರಾಮ ಪಟ್ಟಣ ಪಂಚಾಯತ್‌ನ ಆಸ್ತಿ ತೆರಿಗೆಯನ್ನು ಶೇ. 3 ರಷ್ಟು ಹೆಚ್ಚಿಸಿ, ಪರಿಷ್ಕರಿಸಲಾಗಿದ್ದು ಎಲ್ಲಾ ವಾಸ್ತವ್ಯ ಮತ್ತು ವಾಣಿಜ್ಯ ಕಟ್ಟಡಗಳ ಹಾಗೂ ಖಾಲಿ ನಿವೇಶನಗಳ ಮಾಲಕರು ಪ್ರಸಕ್ತ ಸಾಲಿನ ಆಸ್ತಿ ತೆರಿಗೆಯನ್ನು ಏ. 30ರ ಒಳಗೆ ಪಾವತಿಸಿದ್ದಲ್ಲಿ ಆಸ್ತಿ ತೆರಿಗೆ ಮೇಲೆ ಶೇ. 5 ರಷ್ಟು ರಿಯಾಯಿತಿ ಪಡೆಯಬಹುದಾಗಿದೆ. ಮೇ ಅಥವಾ ಜೂನ್ ತಿಂಗಳಲ್ಲಿ ದಂಡ ರಹಿತವಾಗಿ ಪಾವತಿಸಬಹುದಾಗಿದ್ದು ಜುಲೈ 01 ರ ನಂತರ ಆಸ್ತಿ ತೆರಿಗೆ ಪಾವತಿಸಿದ್ದಲ್ಲಿ ತಿಂಗಳಿಗೆ ಶೇ. 2 ರಷ್ಟು ದಂಡವನ್ನು ವಿಧಿಸಲಾಗುವುದು. ಆದ್ದರಿಂದ ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ಎಲ್ಲಾ ಸಾರ್ವಜನಿಕರು ಏಪ್ರಿಲ್ 30 ರ ಒಳಗೆ ಆಸ್ತಿ ತೆರಿಗೆಯನ್ನು ಪಾವತಿಸಿ, ರಿಯಾಯಿತಿ ಸೌಲಭ್ಯದ ಸದುಪಯೋಗ ಪಡೆದುಕೊಳ್ಳುವಂತೆ ಹಾಗೂ ನಳ್ಳಿ ನೀರಿನ ಶುಲ್ಕ, ಮಾಸಿಕ ಅಂಗಡಿ ಫೀ ಬಾಕಿ ಇರುವುದನ್ನು ಕ್ಲಪ್ತ ಸಮಯದಲ್ಲಿ ಪಾವತಿಸಿ, ಪಟ್ಟಣ ಪಂಚಾಯತ್ ನೊಂದಿಗೆ ಸಹಕರಿಸುವಂತೆ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳ ಕಚೇರಿಯ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಸಂಕಷ್ಟದಲ್ಲಿದೆ ಜಾರಂದಗುಡ್ಡೆ ವನಿತಾ ಶೆಟ್ಟಿ ಅವರ ಕುಟುಂಬ | ದಾನಿಗಳಿಂದ ಸಿಗದ ನಿರೀಕ್ಷಿತ ಸ್ಪಂದನೆ

ನನಸಾಗದ ಮನೆಯ ಕನಸು, ಮಗಳ ವಿದ್ಯಾಭ್ಯಾಸಕ್ಕೂ ಅಡ್ಡಿ

ಬಂಟ್ವಾಳ: ಮನೆ ಬಾಡಿಗೆ ಹಣವನ್ನು ಉಳಿಸಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಉದ್ದೇಶದಿಂದ ಖರೀದಿಸಿದ್ದ ಮಣ್ಣಿನ ಗೋಡೆಯ ಮುರುಕಲು ಮನೆ ಕುಸಿದು ವರ್ಷಗಳು ಎರಡಾದರೂ ಜಾರಂದಗುಡ್ಡೆ ವನಿತಾ ಶೆಟ್ಟಿ ಅವರ ಹೊಸ ಮನೆಯ ಕನಸು ಮಾತ್ರ ಇನ್ನೂ ಕನಸಾಗಿಯೇ ಉಳಿದಿದೆ.

ಹೊಸ ಮನೆ ನಿರ್ಮಾಣದ ಉಸ್ತುವಾರಿ ವಹಿಸಿದ್ದ ಬಂಟರ ಸಂಘ ಮನೆಯನ್ನು ಬಹುತೇಕ ಪೂರ್ಣಗೊಳಿಸಿದೆ. ಆದರೆ ಕಾಮಗಾರಿ ಮುಕ್ತಾಯದ ಹಂತದಲ್ಲಿ ದಾನಿಗಳ ನಿರೀಕ್ಷಿತ ಸ್ಪಂದನೆ ಲಭಿಸದೆ ಹೊಸ ಮನೆಯ ಸುತ್ತಲೂ ಗಿಡಗಂಟಿ ಆವರಿಸುತ್ತಿದೆ. ಮನೆ ನಿರ್ಮಾಣದ ಪೂರ್ಣ ಹೊಣೆ ಈಗ ಸಂತ್ರಸ್ತ ಮಹಿಳೆ ವನಿತಾ ಶೆಟ್ಟಿ ಹೆಗಲಿಗೆ ಬಿದ್ದಿದ್ದು, ಮೂವರು ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಜತೆಗೆ ಮನೆ ನಿರ್ವಹಣೆ ಜವಾಬ್ದಾರಿ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಸರಕುಗಳು ಕಳ್ಳರ ಪಾಲಾಗುವ ಆತಂಕ

ಕಿಟಿಕಿ, ಬಾಗಿಲು ಜೋಡಣೆ, ಸಾರಣೆ, ವಿದ್ಯುತ್ ಸಂಪರ್ಕ ಕೆಲಸಗಳು ಮಾತ್ರವೇ ಬಾಕಿ ಉಳಿದಿವೆ. ಈ ಕಾಮಗಾರಿಗಾಗಿ ಸಹೃದಯ ದಾನಿಗಳು ನೀಡಿದ ಮರಳು, ಸಿಮೆಂಟ್ ದಿನಗಳೆದಂತೆ ನಿಷ್ಪ್ರಯೋಜಕವಾಗುತ್ತಿದೆ. ವನಿತಾ ಶೆಟ್ಟಿಯೇ ಮನೆಗೆ ಆಧಾರವಾಗಿದ್ದು, ಕೆಲಸಕ್ಕೆ ಹೋದ ಸಂದರ್ಭದಲ್ಲಿ ಮನೆಯಲ್ಲಿ ಯಾರೂ ಇಲ್ಲದಿರುವುದರಿಂದ ಮರಳು ಸಹಿತ ಕಾಮಗಾರಿಗೆ ತಂದಿರಿಸಿದ ಸರಕುಗಳು ಕಳ್ಳರ ಪಾಲಾಗುವ ಆತಂಕವೂ ಎದುರಾಗಿದೆ.ಇವರ ಮನೆ ಸಂಪೂರ್ಣಗೊಂಡು ಕನಸು ನನಸಾಗುವ ನಿಟ್ಟಿನಲ್ಲಿ ದಾನಿಗಳ ಸಹಕಾರವನ್ನು ಯಾಚಿಸಿದ್ದಾರೆ.

ಈ ಬಡಕುಟುಂಬಕ್ಕೆ ಧನಸಹಾಯ ನೀಡಲಿಚ್ಛಿಸುವ ದಾನಿಗಳು ವನಿತಾ ಶೆಟ್ಟಿ ಅವರ ಗೂಗಲ್ ಪೇ ನಂಬರ್ 70267 75683 ಅನ್ನು ಸಂಪರ್ಕಿಸಬಹುದಾಗಿದೆ.



ವಿದ್ಯಾಭ್ಯಾಸ ಕನಸಿಗೂ ಅಡಚಣೆ

ಮೂವರು ಹೆಣ್ಣು ಮಕ್ಕಳಿಗೂ ವಿದ್ಯಾಭ್ಯಾಸ ನೀಡಬೇಕೆಂಬ ಹಂಬಲವಿದೆ. ಆದರೆ ಮನೆ ನಿರ್ಮಾಣದ ಹೊಣೆ ನನ್ನನ್ನು ಮತ್ತಷ್ಟು ಜರ್ಝರಿತವಾಗಿಸಿದೆ. ಸಾಕಷ್ಟು ಮಂದಿ ದಾನಿಗಳು ಕೈಲಾದಷ್ಟು ಸಹಕಾರ ನೀಡಿದ್ದಾರೆ. ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಮನೆ ನಿರ್ಮಾಣದ ಜವಾಬ್ದಾರಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಕನಸಿಗೂ ಅಡಚಣೆಯಾಗಿದೆ. ದೈನಂದಿನ ಜೀವನ ನಿರ್ವಹಣೆಯೇ ಹೋರಾಟದಂತಾಗಿದೆ.

– ವನಿತಾ ಶೆಟ್ಟಿ ಜಾರಂದಗುಡ್ಡೆ, ಸಂತ್ರಸ್ತ ಮಹಿಳೆ

ವಿದ್ಯಾಭ್ಯಾಸ ಮೊಟಕಿಗೆ ನಿರ್ಧಾರ

ಸಂತ್ರಸ್ತೆ ವನಿತಾ ಶೆಟ್ಟಿ ಅವರ ಮೂವರು ಹೆಣ್ಣುಮಕ್ಕಳು ಪ್ರತಿಭಾವಂತರಾಗಿದ್ದು, ಹಿರಿಯ ಮಗಳು ದ್ವಿತೀಯ ಪಿಯುಸಿಯಲ್ಲಿದ್ದಾಳೆ. ಉನ್ನತ ವ್ಯಾಸಾಂಗ ಮಾಡುವ ಕನಸಿದ್ದರೂ ತಾಯಿಯ ಸಂಕಷ್ಟ, ಆರ್ಥಿಕ ಅನಾನುಕೂಲತೆಯಿಂದಾಗಿ ವಿದ್ಯಾಭ್ಯಾಸವನ್ನು ದ್ವಿತೀಯ ಪಿಯುಸಿಗೆ ಮೊಟಕುಗೊಳಿಸಲು ನಿರ್ಧರಿಸಿದ್ದಾರೆ.

ರಾತ್ರಿಗೆ ಸೆಣಬಿನ ಗೋಣಿ!

ಸದ್ಯ ಪಕ್ಕದಲ್ಲೇ ಇರುವ ಪುಟ್ಟ ಗುಡಿಸಲು ಕುಟುಂಬಕ್ಕೆ ಬೆಚ್ಚನೆಯ ಆಸರೆಯಾಗಿದೆ. ಎಡೆಬಿಡದೆ ಮಳೆ ಸುರಿದಾಗ ನೆಲದಲ್ಲಿ ಒರತೆ ಬರುವುದರಿಂದ ದಿನಗಳೆಯುವುದೇ ಕಷ್ಟವಾಗುತ್ತದೆ. ಕಳೆದ ಎರಡು ವರ್ಷಗಳು ಮಳೆಗಾಲದಲ್ಲಿ ಸೆಣಬಿನ ಗೋಣಿ ಚೀಲಗಳನ್ನು ನೆಲಕ್ಕೆ ಹಾಸಿ, ಅದರ ಮೇಲೆ ಚಾಪೆ ಹಾಕಿ ಮೂವರು ಮಕ್ಕಳೊಂದಿಗೆ ರಾತ್ರಿ ಕಳೆದಿದ್ದೇನೆ. ಸಾಧ್ಯವಾದಷ್ಟು ಬೇಗ ಹೊಸ ಮನೆ ಕಾಮಗಾರಿ ಪೂರ್ಣಗೊಂಡರೆ ತನ್ನ ಹಾಗೂ ಮಕ್ಕಳ ಸಂಕಷ್ಟ ದೂರವಾಗುತ್ತದೆ ಎನ್ನುತ್ತಾರೆ ಸಂತ್ರಸ್ತ ಮಹಿಳೆ ವನಿತಾ ಶೆಟ್ಟಿ

ಕಾಪು ದೇಗುಲದಿಂದ ಪಡುಬಿದ್ರಿಗೆ ಅದ್ದೂರಿ ಮೆರವಣಿಗೆ | ಪೂರ್ವಭಾವಿ ಸಭೆ ನಿರ್ಧಾರ

99 ವಾಹನಗಳಲ್ಲಿ ಹಸಿರು ಹೊರೆಕಾಣಿಕೆ ಸಲ್ಲಿಕೆ

ಕಾಪು: ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವದ ಅಂಗವಾಗಿ ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನದಿಂದ ಬೃಹತ್ ಹೊರೆ ಕಾಣಿಕೆ ನೀಡುವ ಸಂಕಲ್ಪ ಮಾಡಿದ್ದೇವೆ, ಅಮ್ಮನ ಸನ್ನಿಧಾನದಿಂದ 99 ವಾಹನಗಳ ಮೂಲಕ ಹೊರೆ ಕಾಣಿಕೆಯನ್ನು ಪಡುಬಿದ್ರಿ ಉಳ್ಳಾಯನ ಸನ್ನಿಧಾನಕ್ಕೆ ಸಮರ್ಪಿಸಬೇಕೆನ್ನುವುದು ನಮ್ಮೆಲ್ಲರ ಆಶಯ.

ಈ ಹಿಂದೆ ಅಮ್ಮನ ಸನ್ನಿಧಾನದಲ್ಲಿ ನಡೆದ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ಅಧ್ಯಕ್ಷರಾಗಿ ಡಾ. ಕೆ ಪ್ರಕಾಶ್ ಶೆಟ್ಟಿ ಮತ್ತು ಹೊರೆ ಕಾಣಿಕೆ ಸಮರ್ಪಣಾ ಸಮಿತಿಯ ಅಧ್ಯಕ್ಷರಾಗಿ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಸೇವೆ ಸಲ್ಲಿಸಿದ್ದು ಇದೀಗ ಪಡುಬಿದ್ರಿಯಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ, ಹಾಗಾಗಿ ನಾವೆಲ್ಲ ಅವರ ಜೊತೆಗೂಡಬೇಕಿದೆ ಎಂದು ದೇವಳದ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ರಾಜರ್ಷಿ ಕೆ.ವಾಸುದೇವ ಶೆಟ್ಟಿ ಹೇಳಿದರು.

ಈ ಸಂದರ್ಭ ಮಾತನಾಡಿದ ಕಾಪು ಕ್ಷೇತ್ರದ ಶಾಸಕ ಮತ್ತು ದೇವಳದ ಅಭಿವೃದ್ಧಿ ಸಮಿತಿಯ ಕಾರ್ಯಾಧ್ಯಕ್ಷ ಗುರ್ಮೆ ಸುರೇಶ್ ಶೆಟ್ಟಿ ನಾನು ಶಾಸಕನಾಗಿರುವುದು ನನ್ನ ಭಾಗ್ಯ ಕಾಪು ಹೊಸ ಮಾರಿಗುಡಿ ದೇವಸ್ಥಾನ, ನನ್ನೂರಿನ ಕಳತ್ತೂರು ಬ್ರಹ್ಮಬೈದರ್ಕಳ ಗರಡಿ, ಪಡುಬಿದ್ರಿ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನ ಹೀಗೆ ಇನ್ನು ಅನೇಕ ದೇವಸ್ಥಾನ, ದೈವಸ್ಥಾನಗಳು ನನ್ನ ಅವಧಿಯಲ್ಲಿ ಜೀರ್ಣೋದ್ಧಾರಗೊಂಡು, ಲೋಕಾರ್ಪಣೆಯಾಗುತ್ತಿರುವುದು ಬಹಳಷ್ಟು ಸಂತೋಷವಾಗುತ್ತಿದೆ, ರಾಜಕೀಯ, ಜಾತಿ, ಧರ್ಮಗಳನ್ನು ಮೀರಿ ನಾವೆಲ್ಲರೂ ಧಾರ್ಮಿಕ ಕಾರ್ಯಗಳಿಗೆ ಒಂದಾಗಿ ಶ್ರಮಿಸಬೇಕಿದೆ, ಕಾಪುವಿನ ಜನತೆಯ ಸಹಕಾರದಿಂದ ಹೊರೆ ಕಾಣಿಕೆಯನ್ನು ಯಶಸ್ವಿಯಾಗಿಸೋಣ ಎಂದರು.



ಈ ಸಂದರ್ಭದಲ್ಲಿ ಆನೆಗುಂದಿ ಸಂಸ್ಥಾನದ ಉಪಾಧ್ಯಕ್ಷ ನಾಗರಾಜ್ ಆಚಾರ್ಯ, ಜಲಂಚಾರು ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಧರ್ಮದರ್ಶಿ ರವಿರಾಜ್ ಶೆಟ್ಟಿ ಪಂಜಿತ್ತೂರು ಗುತ್ತು, ಕಾಪು ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮನೋಹರ್ ಎಸ್. ಶೆಟ್ಟಿ, ವಿಶ್ವಕರ್ಮ ಸಮಾಜದ ಮುಂದಾಳು ಗಣೇಶ್ ಆಚಾರ್ಯ, ಪುರಸಭೆ ಅಧ್ಯಕ್ಷೆ ಮೋಹಿನಿ ಶೆಟ್ಟಿ ಕಾಪು ವಲಯ ಬ್ರಾಹ್ಮಣ ಸಂಘದ ಅಧ್ಯಕ್ಷ ರಾಮಕೃಷ್ಣ ತಂತ್ರಿ, ಎಲ್ಲೂರು ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಸದಸ್ಯ ನಿರಂಜನ್ ಶೆಟ್ಟಿ ಪಡುಬಿದ್ರಿ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಸದಸ್ಯರುಗಳಾದ ಪ್ರಕಾಶ್ ಶೆಟ್ಟಿ ಪಡುಹಿತ್ಲು ಮತ್ತು ಸುಕುಮಾರ್ ಶ್ರೀಯಾನ್, ಕಾಪು ಭಾಗದ ಹೊರೆಕಾಣಿಕೆ ಆಯೋಜಕರಾದ ಅರುಣ್ ಶೆಟ್ಟಿ ಪಾದೂರು ಹಾಗೂ ಶ್ರೀಕರ ಶೆಟ್ಟಿ ಕಲ್ಯ, ವ್ಯವಸ್ಥಾಪನ ಸಮಿತಿ ಸದಸ್ಯರು, ಅಭಿವೃದ್ಧಿ ಸಮಿತಿ ಸದಸ್ಯರು ಇದ್ದರು. ಯೋಗೀಶ್ ವಿ. ಶೆಟ್ಟಿ ಪ್ರಸ್ತಾವಿಕವಾಗಿ ಮಾತನಾಡಿ, ನಿರ್ಮಲ್ ಕುಮಾರ್ ಹೆಗ್ಡೆ ನಿರೂಪಿಸಿದರು. ಗೀತಾಂಜಲಿ ಸುವರ್ಣ ವಂದಿಸಿದರು.

ವೈಕುಂಠ ಬಾಳಿಗಾ ಕಾನೂನು ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ಸ್ಪರ್ಧೆ ಉದ್ಘಾಟನೆ ಇಂದು

ಇಂದಿನಿಂದ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ

ಉಡುಪಿ: ನಗರದ ಪ್ರತಿಷ್ಠಿತ ವೈಕುಂಠ ಬಾಳಿಗಾ ಕಾನೂನು ಮಹಾವಿದ್ಯಾಲಯವು ಅಡ್ವಕೇಟ್ ಪಿ. ಶಿವಾಜಿ ಶೆಟ್ಟಿ ಸ್ಮಾರಕ 10ನೇ ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯನ್ನು ಇದೇ ಏ. 10ರಿಂದ 12ರವರೆಗೆ ಆಯೋಜಿಸುತ್ತಿದ್ದು ಈ ಕುರಿತು ಕಾಲೇಜಿನ ಪ್ರಾಂಶುಪಾಲೆ ಪ್ರೊ. ಸುರೇಖಾ ಅವರು ಮಾಹಿತಿ ನೀಡಿದ್ದಾರೆ.

ಹತ್ತನೇ ವರ್ಷದ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಏ. 10ರಂದು ಮಧ್ಯಾಹ್ನ 2.30 ಗಂಟೆಗೆ ನಡೆಯಲಿದ್ದು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎಂ.ಜಿ. ಉಮಾ ಅವರು ಚಾಲನೆ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಬೆಂಗಳೂರಿನ ಅಲಯನ್ಸ್ ವಿಶ್ವವಿದ್ಯಾನಿಲಯದ ಪ್ರೊ. (ಡಾ.) ಪ್ರಕಾಶ್ ಕಣಿವೆ, ಟಿ.ಎಂ. ಪೈ ಪ್ರತಿಷ್ಠಾನದ ಮುಖ್ಯಸ್ಥ ಟಿ. ಅಶೋಕ್ ಪೈ ಹಾಗೂ ಜಯಂತಿ ಪಿ. ಶಿವಾಜಿ ಶೆಟ್ಟಿಯವರು ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ದೇಶದ ವಿವಿಧ ರಾಜ್ಯಗಳ ಒಟ್ಟು 28 ಕಾನೂನು ಕಾಲೇಜಿನ ತಂಡಗಳು ಈ ತರ್ಕಸಮರದಲ್ಲಿ ಪಾಲ್ಗೊಳ್ಳುತ್ತಿದ್ದು, ಸ್ಪರ್ಧೆಯ ಭಾಗವಾಗಿ ಕಾನೂನು ರಸಪ್ರಶ್ನೆ ಹಾಗೂ ತೀರ್ಪು ಬರೆಯುವ ವಿಶೇಷ ಸ್ಪರ್ಧೆಗಳನ್ನೂ ಆಯೋಜಿಸಲಾಗಿದೆ.

ಏ.12ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ, ದಿಲ್ಲಿಯ ಆದಾಯ ತೆರಿಗೆ ನ್ಯಾಯಮಂಡಳಿಯ ನ್ಯಾಯಿಕ ಸದಸ್ಯ ಯೋಗೀಶ್ ಕುಮಾರ್ ಹಾಗೂ ಬೆಂಗಳೂರಿನ ಕರ್ನಾಟಕ ರಾಜ್ಯ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ನಿರ್ದೇಶಕ ಪ್ರೊ. (ಡಾ.) ಚಿದಾನಂದ ರೆಡ್ಡಿ ಎಸ್ ಪಾಟೀಲ್ ಅವರು ಅತಿಥಿಗಳಾಗಿ ಪಾಲ್ಗೊಂಡು ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.



ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳ ಮುಂದುವರಿದ ಭಾಗವಾಗಿ ಏ.20 ಮತ್ತು 21ರಂದು "ಪುನಶ್ಚೇತನಕಾರಿ ನ್ಯಾಯ ಸುಸ್ಥಿರತೆ ಮತ್ತು ಹವಾಮಾನ ಕ್ರಮ" ಎಂಬ ವಿಷಯದ ಮೇಲೆ ಎರಡು ದಿನಗಳ ಅಂತರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ. ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್, ಮಾಹೆಯ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಮತ್ತು ಜೆಎಸ್ ಎಸ್ ಕಾನೂನು ಕಾಲೇಜು ಸಹಯೋಗದಲ್ಲಿ ನಡೆಯುವ ಈ ಗೋಷ್ಠಿಯನ್ನು ಪ್ರೊ. (ಡಾ.) ಸಾಯಿರಾಂ ಭಟ್ ಉದ್ಘಾಟಿಸಲಿದ್ದು ಕೀನ್ಯಾ ಸ್ಕೂಲ್ ಆಫ್ ಲಾದ ಪ್ರೊ. ಜಾಕ್ವೆಲಿನ್ ಮೆಹೋನ್ನರವರು ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಳ್ಳಲಿದ್ದಾರೆ. ಮೇ 9 ರಿಂದ 15ರ ವರೆಗೆ ಗೋಳಿಯಂಗಡಿಯಲ್ಲಿ ವಾರ್ಷಿಕ ವಿಶೇಷ ಶಿಬಿರವನ್ನು ಆಯೋಜಿಸಲಾಗಿದ್ದು, ಸ್ವಚ್ಛತೆ ಹಾಗೂ ಕಾನೂನಿನ ಅರಿವು ಮೂಡಿಸುವ ಕಾರ್ಯಕ್ರಮಗಳು ನಡೆಯಲಿವೆ. ಮೇ 26ರಂದು ನಡೆಯಲಿರುವ ಡಾ. ಟಿ.ಎಂ.ಎ. ಪೈ ದತ್ತಿ ಉಪನ್ಯಾಸದಲ್ಲಿ ನಿವೃತ್ತ ಪ್ರಾಧ್ಯಾಪಕ ಎಚ್.ಕೆ. ನಾಗರಾಜರವರು ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಾಂಶುಪಾಲೆ ವಿವರಿಸಿದರು. ಈ ಸುದ್ದಿಗೋಷ್ಠಿಯಲ್ಲಿ ಉಪ ಪ್ರಾಂಶುಪಾಲೆ ಡಾ. ಪ್ರೀತಿ ಹರೀಶ್ ರಾಜ್, ಕಾರ್ಯಕ್ರಮ ಸಂಯೋಜಕ ಡಾ. ಶ್ರೀನಿವಾಸ್, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ವಕೀಲ ಶ್ರೀಧರ್ ಮತ್ತು ಜಯಂತಿ ಶಿವಾಜಿ ಶೆಟ್ಟಿ ಅವರು ಉಪಸ್ಥಿತರಿದ್ದರು.

ಬಪ್ಪನಾಡು: ವಿಜೃಂಭಣೆಯ ಮಹಾರಥೋತ್ಸವ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ಪಲ್ಲಕ್ಕಿ ಉತ್ಸವ ಮಹಾರಥೋತ್ಸವ ವಿಜೃಂಭಣೆಯಿಂದ ನಡೆಯಿತು

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ ಹಾಗೂ ಅರ್ಚಕ ನರಸಿಂಹ ಭಟ್ ಹಾಗೂ ಶ್ರೀಪತಿ ಉಪಾಧ್ಯಾಯ ನೇತೃತ್ವದಲ್ಲಿ ಬುಧವಾರ ಬೆಳಗ್ಗೆ ವಿಶೇಷ ಪ್ರಾರ್ಥನೆ, ಕವಾಟೋದ್ಘಾಟನೆ ಹಾಗೂ ಭಕ್ತರಿಗೆ ಮಲ್ಲಿಗೆ ಹೂವಿನ ಪ್ರಸಾದ ವಿತರಣೆ,ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು.

ರಾತ್ರಿ ಶ್ರೀ ದೇವರ ಉತ್ಸವ ಬಲಿ, ಓಕುಳಿ, ಶ್ರೀ ದೇವಿ ಮತ್ತು ಸಸಿಹಿತ್ಲು ಶ್ರೀ ಭಗವತಿಯರ ಭೇಟಿ,ಮಹಾ ರಥೋತ್ಸವ, ತೂಟೆದಾರ, ಜಳಕದ ಬಲಿ, ಅವಭೃತ ಧ್ವಜಾವರೋಹಣ ನಡೆಯಿತು

ಈ ಸಂದರ್ಭ ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಮಾಜಿ ಸಚಿವ ಅಭಯ ಚಂದ್ರ ಜೈನ್, ಕ್ಷೇತ್ರದ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಮಾಜಿ ಮೊಕ್ತೇಸರ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಅರ್ಚಕ ಗೋಪಾಲಕೃಷ್ಣ ಭಟ್, ಪ್ರಸಾದ್ ಭಟ್, ಚಂದ್ರಶೇಖರ ಕಾಸಪ್ಪಯ್ಯನವರ ಮನೆ, ಉದ್ಯಮಿ ಎಂ.ಎಚ್. ಅರವಿಂದ ಪೂಂಜಾ, ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಅರ್ಚಕ ಅಪ್ಪು ಯಾನೆ ಶ್ರೀನಿವಾಸ ಪೂಜಾರಿ, ಆಡಳಿತ ಮೊಕ್ತೇಸರ ಚಂದ್ರಶೇಖರ ಬೆಲ್ಚಡ, ಬಪ್ಪನಾಡು ಕ್ಷೇತ್ರದ ಅಭಿವೃದ್ಧಿ ಸಮಿತಿಯ ಅತುಲ್ ಕುಡ್ವ ಸತೀಶ್ ಭಂಡಾರಿ, ಉದ್ಯಮಿ ಶರತ್ ಸಾಲ್ಯಾನ್, ಸುನೀಲ್ ಆಳ್ವ ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು, ಅಶ್ವಿನ್ ಆಳ್ವ ಕುಬೆವೂರು, ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್, ಸತೀಶ್ ಅಂಚನ್ ,ಸಂಜೀವ ದೇವಾಡಿಗ, ಮಹೀಮ್ ಹೆಗ್ಡೆ ಸುಜಿತ್ ಸಾಲ್ಯಾನ್, ಚಂದ್ರಶೇಖರ ಸುವರ್ಣ, ರಮೇಶ್ ಅಮೀನ್ ಕೊಕ್ಕರಕಲ್ ,ದಿನೇಶ್ ಹೆಗ್ಡೆ ಮಾನಂಪಾಡಿ, ಸತೀಶ್ ಶೆಟ್ಟಿ ಪೇಟೆ ಮನೆ, ಪುನರೂರು ಪ್ರತಿಷ್ಠಾನದ ಅಧ್ಯಕ್ಷ ದೇವಪ್ರಸಾದ್ ಪುನರೂರು, ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ ವರ್ಮ, ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು.



ಗುರುವಾರ ಕ್ಷೇತ್ರದಲ್ಲಿ ಊರಪರವೂರ ಭಕ್ತರಿಂದ ಹಣ್ಣು ಕಾಯಿ ಸಮರ್ಪಣೆ ನಡೆಯಿತು. ಶುಕ್ರವಾರ ಕ್ಷೇತ್ರದಲ್ಲಿ ಸಂಪ್ರೋಕ್ಷಣೆ, ಮಹಾ ಮಂತ್ರಾಕ್ಷತೆ ನಡೆಯಲಿದೆ.

ವಿವೇಕಾನಂದದಲ್ಲಿ 'ಶಿವಾರ್ಪಣಂ' ಭರತನಾಟ್ಯದ ಕಾರ್ಯಾಗಾರ ಮುರಳಿಕೃಷ್ಣ

ಭಾರತೀಯ ಕಲಾ ಪ್ರಕಾರಗಳು ವೈವಿಧ್ಯಮಯ

ಪುತ್ತೂರು: ಲಲಿತ ಕಲೆಗಳನ್ನು ನಮ್ಮ ಹಿರಿಯರು ದೈವಿಕ ಕಲೆಯನ್ನಾಗಿ ಸ್ವೀಕರಿಸಿ ಅದನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಿದ್ದಾರೆ. ಯಾವ ಕಲೆಗಳು ಖುಷಿಯನ್ನು ಕೊಡುತ್ತದೆಯೋ ಹಾಗೆಯೇ ಬೇಗನೇ ಮನವನ್ನು ಆವರಿಸಿಕೊಳ್ಳುತ್ತದೆಯೋ ಅವುಗಳು ದೈವಿಕ ಕಲೆಗಳೆನ್ನಬಹುದು. ಭಾರತೀಯ ಲಲಿತ ಕಲೆಗಳಲ್ಲಿ ಭರತನಾಟ್ಯ, ಮೋಹಿನಿಯಾಟ್ಟಂ, ಕಥಕ್ಕಳಿ, ಕೂಚಿಪುಡಿ ಇತ್ಯಾದಿ ಪ್ರಕಾರಗಳನ್ನು ಕಾಣಬಹುದಾಗಿದ್ದು ಒಂದೊಂದು ಪ್ರಾಂತ್ಯದಲ್ಲೂ ಬೇರೆ ಬೇರೆ ತೆರನಾದ ವಿಶೇಷತೆಗಳಿಂದ ಕೂಡಿದೆ. ಇಂತಹಾ ವೈವಿಧ್ಯತೆಯನ್ನು ನಾವು ಭಾರತೀಯ ಕಲೆಗಳಲ್ಲಿ ಕಾಣಬಹುದಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿ ಸಂಚಾಲಕ ಮುರಳಿಕೃಷ್ಣ ಕೆ.ಎನ್. ಹೇಳಿದರು.

ನಗರದ ವಿವೇಕಾನಂದ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜಿನ(ಸ್ವಾಯತ್ತ) ವಿವೇಕಾನಂದ ಸಂಶೋಧನಾ ಕೇಂದ್ರ, ಭಾರತೀಯ ಸಂಸ್ಕೃತಿ ಮತ್ತು ಲಲಿತ ಕಲೆಗಳ ಅಧ್ಯಯನ ಕೇಂದ್ರ, ಲಲಿತ ಕಲಾ ಸಂಘ, ಐಕ್ಯೂಎಸಿ ಹಾಗೂ ಪುತ್ತೂರಿನ ನೃತ್ಯೋಪಾಸನಾ ಕಲಾ ಅಕಾಡೆಮಿ ಸಹಯೋಗದಲ್ಲಿ ನಡೆದ 'ಶಿವಾರ್ಪಣಂ' ಭರತನಾಟ್ಯದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿದ್ದ ನೃತ್ಯೋಪಾಸನಾ ಕಲಾ ಅಕಾಡೆಮಿಯ ನಿರ್ದೇಶಕಿ ವಿದುಷಿ ಶಾಲಿನಿ ಆತ್ಮಭೂಷಣ ಮಾತನಾಡಿದರು. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ ಹಾಗೂ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಶುಭಾಶಂಸನೆಗೈದರು. ಈ ಸಂದರ್ಭ ವಿದುಷಿ ಶಾಲಿನಿ ಆತ್ಮಭೂಷಣ ಅವರನ್ನು ಸನ್ಮಾನಿಸಲಾಯಿತು. ವಿವೇಕಾನಂದ ಸಂಶೋಧನಾ ಕೇಂದ್ರದ ನಿರ್ದೇಶಕಿ ಹಾಗೂ ಸ್ನಾತಕೋತ್ತರ ವಿಭಾಗದ ಡೀನ್ ಡಾ. ವಿಜಯ ಸರಸ್ವತಿ ಬಿ. ಸ್ವಾಗತಿಸಿ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಮತ್ತು ಭಾರತೀಯ ಸಂಸ್ಕೃತಿ ಮತ್ತು ಲಲಿತ ಕಲೆಗಳ ಅಧ್ಯಯನ ಕೇಂದ್ರದ ಸಂಯೋಜಕಿ ಡಾ. ವಿದ್ಯಾ ಎಸ್. ವಂದಿಸಿದರು. ಕಾಲೇಜಿನ ವಿದ್ಯಾರ್ಥಿ ಸಂಘದ ಜತೆ ಕಾರ್ಯದರ್ಶಿ ಹಂಪನಾ ಕಾರ್ಯಕ್ರಮ ನಿರ್ವಹಿಸಿದರು.



ನವರಸಗಳ ಪ್ರಸ್ತುತಿ

ನೃತ್ಯೋಪಾಸನಾ ಕಲಾ ಅಕಾಡೆಮಿಯ ಮತ್ತು ನೃತ್ಯವನ್ನು ಅಭ್ಯಸಿಸಿದ ಕಾಲೇಜಿನ ಆಯ್ದ ವಿದ್ಯಾರ್ಥಿಗಳಿಂದ ನವರಸಗಳ ಪ್ರಸ್ತುತಿಯ ಕುರಿತಾದ ಭರತನಾಟ್ಯ ಕಾರ್ಯಾಗಾರ ನಡೆಯಿತು. ಕಾರ್ಯಾಗಾರದಲ್ಲಿ ಹಾಡುಗಾರಿಕೆಯಲ್ಲಿ ಡಾ. ನಿಶಿತಾ ಪುತ್ತೂರು, ಮೃದಂಗದಲ್ಲಿ ವಿದ್ವಾನ್ ಬಾಲಕೃಷ್ಣ ಹೊಸಮನೆ ಹಾಗೂ ನಟುವಾಂಗದಲ್ಲಿ ವಿದುಷಿ ಶಾಲಿನಿ ಆತ್ಮಭೂಷಣ ಸಹಕರಿಸಿದರು.

ಶ್ರೀಕ್ಷೇತ್ರ ಹನುಮಗಿರಿಯಲ್ಲಿ ಶ್ರೀರಾಮ ಜ್ಯೋತಿ, ಹನುಮ ಜ್ಯೋತಿ ರಥಯಾತ್ರೆಗೆ ಅದ್ದೂರಿ ಸ್ವಾಗತ

ಪುತ್ತೂರು: ಅಯೋಧ್ಯೆಯಿಂದ ರಾಮ ಜ್ಯೋತಿ, ಅಂಜನಾದ್ರಿಯಿಂದ ಹನುಮ ಜ್ಯೋತಿ ಪುತ್ತೂರು, ಸುಳ್ಯ, ಕಡಬ ತಾಲೂಕು ಮತ್ತು ಕಾಸರಗೋಡು ಜಿಲ್ಲೆಯ 60 ಗ್ರಾಮಗಳಲ್ಲಿ ಸಂಚರಿಸಿ ಒಟ್ಟು 14 ದಿನ, 2609 ಕಿ.ಮೀ. ದೂರ ಕ್ರಮಿಸಿ ಈಶ್ವರಮಂಗಲದ ಶ್ರೀ ಪಂಚಲಿಂಗೇಶ್ವರ ದೇವಳಕ್ಕೆ ಬಂದ ಶ್ರೀರಾಮ–ಹನುಮ ಜ್ಯೋತಿ ರಥಯಾತ್ರೆಯು ಗುರುವಾರ ಸಂಜೆ ಪಂಚಲಿಂಗೇಶ್ವರ ದೇವಳದಿಂದ ಹನುಮಗಿರಿ ಕ್ಷೇತ್ರಕ್ಕೆ ಅದ್ದೂರಿ ಮೆರವಣಿಗೆಯ ಮೂಲಕ ಪ್ರವೇಶಿಸಿದ್ದು, ಈ ವೇಳೆ ಹನುಮಗಿರಿ ದ್ವಾರದ ಬಳಿ ರಥಯಾತ್ರೆಗೆ ಅದ್ದೂರಿ ಸ್ವಾಗತ ನೀಡಲಾಯಿತು.

ಪಂಚಲಿಂಗೇಶ್ವರ ದೇವಳದಿಂದ ಹನುಮಗಿರಿ ತನಕ ನಡೆದ ಶ್ರೀರಾಮ–ಹನುಮ ರಥಯಾತ್ರೆಯು ಚೆಂಡೆ ವಾದನ, ಸಿಂಗಾರಿ ಮೇಳ, ಶಂಖ–ಜಾಗಟೆ, ಕುಣಿತ ಭಜನೆ, ಚೆಂಡೆ, ವಾದ್ಯಗಳ ವೈಭವದೊಂದಿಗೆ ಆಕರ್ಷಣೀಯವಾಗಿ ನಡೆಯಿತು. ಮಾತೆಯರು ಪೂರ್ಣಕುಂಭ ಸ್ವಾಗತ ನೀಡಿದರು. ಹನುಮಗಿರಿ ಪ್ರವೇಶ ದ್ವಾರದ ಬಳಿ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ರಥಯಾತ್ರೆಯನ್ನು ಸ್ವಾಗತಿಸಿದರು. ಬಳಿಕ ಮೆರವಣಿಗೆಯ ಮೂಲಕ ಅವಳಿ ಜ್ಯೋತಿಯನ್ನು ಪಂಚಮುಖಿ ಆಂಜನೇಯ ಕ್ಷೇತ್ರಕ್ಕೆ ಕೊಂಡೊಯ್ಯಲಾಯಿತು. ರಾಘವೇಶ್ವರ ಭಾರತಿ ಸ್ವಾಮೀಜಿ ಅವರು ಪಂಚಮುಖಿ ಕ್ಷೇತ್ರದಲ್ಲಿ ಅವಳಿ ಜ್ಯೋತಿ ಬೆಳಗಿಸಿ ದೀಪ ವನ್ನು ಪ್ರಜ್ವಲಿಸಿ ಪೂಜೆಯನ್ನು ನೆರವೇರಿಸಿದರು. ಭಕ್ತರಿಗೆ ಮಂತ್ರಾಕ್ಷತೆಯನ್ನು ವಿತರಿಸಿದರು.



ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್‌ಕುಮಾರ್ ಕಟೀಲು, ಶ್ರೀರಾಮ ಹನುಮ ಜ್ಯೋತಿ ರಥಯಾತ್ರೆ ಸಮಿತಿ ಸಂಚಾಲಕ ಮುರಳೀಕೃಷ್ಣ ಹಸಂತಡ್ಕ, ಕ್ಷೇತ್ರದ ಆಡಳಿತ ಧರ್ಮದರ್ಶಿ ನನ್ಯ ಅಚ್ಚುತ ಮೂಡೆತ್ತಾಯ, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಸಂಜೀವ ಮಠಂದೂರು, ಸೀತಾರಾಮ ರೈ ಕೆದಂಬಾಡಿಗುತ್ತು, ಸಾಜ ರಾಧಾಕೃಷ್ಣ ಆಳ್ವ, ರವಿಕಿರಣ್ ಶೆಟ್ಟಿ ಬೆದ್ರಾಡಿ, ಶಶಿಕುಮಾರ್ ರೈ ಬಾಲ್ಯೊಟ್ಟು, ಬೂಡಿಯಾರ್ ರಾಧಾಕೃಷ್ಣ ರೈ, ಪ್ರಧಾನ ಕಾರ್ಯದರ್ಶಿಗಳಾದ ಆರ್ .ಸಿ. ನಾರಾಯಣ ರೆಂಜ, ನಹುಷಾ ಪಳಸೀರು, ಕ್ಷೇತ್ರದ ಧರ್ಮದರ್ಶಿಗಳಾದ ಶಿವರಾಮ ಪಿ., ಶಿವರಾಮ ಶರ್ಮ ಕತ್ರಿಬೈಲು, ನಾರಾಯಣಿ ಅಮ್ಮ ಅನುಪಮ, ನಾಗಪ್ಪ ಗೌಡ ಬೊಮ್ಮೆಟ್ಟಿ, ಸುಬ್ಬಪ್ಪ ಪಾಟಾಳಿ, ಸವಿತಾ ರೈ ನೆಲ್ಲಿತ್ತಡ್ಕ ಸರೋಜಿನಿ ನಾಗಪ್ಪಯ್ಯ, ನಿತ್ಯಾನಂದ ಭಟ್ ಮೂನಡ್ಕ, ರವಿಕಿರಣ್ ಶೆಟ್ಟಿ, ಪೂರ್ಣಚಂದ್ರ ನೆಲ್ಲಿತ್ತಡ್ಕ, ಮತ್ತಿತರರು ಉಪಸ್ಥಿತರಿದ್ದರು.

ಸಂಜೆ ಲವ ವೇದಿಕೆಯಲ್ಲಿ ರಾಮಕೃಷ್ಣ ಕಾಟುಕುಕ್ಕೆ ಮತ್ತು ಬಳಗದವರಿಂದ 'ದಾಸವಾಣಿ', ಪುತ್ತೂರು ವೈಷ್ಣವಿ ನಾಟ್ಯಾಲಯದ ಯೋಗೀಶ್ವರಿ ಜಯಪ್ರಕಾಶ್ ಅವರ ಶಿಷ್ಯರಿಂದ ನೃತ್ಯ ರೂಪಕ 'ಶ್ರೀರಾಮ ಪುನರಾಗಮನ', ಕುಶ ವೇದಿಕೆಯಲ್ಲಿ ಸಾಯಿ ಶಕ್ತಿ ಬಳಗದವರಿಂದ ಜೋಡು ಜೀಟಿಗೆ ನಾಟಕ ನಡೆಯಿತು.

ಇಂದಿನ ಕಾರ್ಯಕ್ರಮ

ಬೆಳಗ್ಗೆ 6ರಿಂದ ಸಾಮೂಹಿಕ ಪ್ರಾರ್ಥನೆ, ಯಾಗ ಶಾಲಾ ಪ್ರವೇಶ, ಮಹಾ ಸಂಕಲ್ಪ, ಕಚ್ಚಾಚರಣೆ, ಪುಣ್ಯಾಹ, ದೇವತಾ ನಾಂದಿ, ಕಂಕಣ ಬಂಧನ, ಪ್ರಧಾನ ಪೀಠದಲ್ಲಿ ಕಲಶ ಸ್ಥಾಪನೆ, 100 ವೈದಿಕರಿಂದ ಜಪ ಪ್ರಾರಂಭ, ಅಷ್ಟೋತ್ತರ ಶತನಾರಿಕೇಳ(108) ಗಣಹವನ, ಪೂರ್ಣಾಹುತಿ, ಮಧ್ಯಾಹ್ನ ಮಹಾಪೂಜೆ (ಯಾಗ ಮಂಟಪದಲ್ಲಿ) ಪ್ರಸಾದ ವಿತರಣೆ, ಸಂಜೆ ಜಪ ಮುಂದುವರಿಕೆ, ದೇವತಾ ಪ್ರಾರ್ಥನೆ, ಆಚಾರ್ಯವರಣ, ಪುಣ್ಯಾಹವಾಚನ, ಪ್ರಾಸಾದಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತುಬಲಿ, ವಾಸ್ತು ಪುಣ್ಯಾಹಂತ, ಅಷ್ಟಾವಧಾನ ಸೇವೆ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮ

ಲವ ವೇದಿಕೆಯಲ್ಲಿ ಧೀಶಕ್ತಿ ಮಹಿಳಾ ಯಕ್ಷಗಾನ ಬಳಗ ತೆಂಕಿಲ, ಪುತ್ತೂರು ಇವರಿಂದ ತಾಳಮದ್ದಳೆ ಶರಸೇತು ಬಂಧನ, ಡಾ. ವಿದ್ಯಾಲಕ್ಷ್ಮಿ ಕೆ., ನಾಟ್ಯ ವಿದ್ಯಾಲಯ, ಕುಂಬಳೆ ಇವರ ಶಿಷ್ಯ ವೃಂದದವರಿಂದ ಭರತನಾಟ್ಯ ಕಾರ್ಯಕ್ರಮ ನೃತ್ಯ ಸಂಭ್ರಮ, ರಂಗಯ್ಯ ಬಲ್ಲಾಳ್ ಸುಸ್ವರ ಮೆಲೋಡೀಸ್, ಉಪ್ಪಿನಂಗಡಿ ಇವರಿಂದ ಭಕ್ತಿ ಭಾವ ಸಂಗಮ, ವಿದುಷಿ ದೀಪ್ತಿ ರವಿಚಂದ್ರ ಇವರ ಶಿಷ್ಯವೃಂದ–ಶಾರದ ಕಲಾಕೇಂದ್ರ ಕುಂಬ್ರ ಇವರಿಂದ ಭರತನಾಟ್ಯ, ರಾತ್ರಿ 7ರಿಂದ ಶ್ರೀ ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ, ಹನುಮಗಿರಿ ಮೇಳ ಪ್ರಸಂಗ ನಮೋ ರಘುವಂಶ ದೀಪ ನಡೆಯಲಿದೆ. ಕುಶ ವೇದಿಕೆ ಅಮರಗಿರಿಯಲ್ಲಿ ಶ್ರೀ ಪಂಚಶ್ರೀ ಮಹಿಳಾ ಸಂಘ ಮತ್ತು ಶ್ರೀ ಕೋದಂಡರಾಮ ಮಕ್ಕಳ ಕುಣಿತ ಭಜನಾ ತಂಡದಿಂದ ನೃತ್ಯ, ದತ್ತಾತ್ರೇಯ ರಾವ್ ಪುತ್ತೂರು ಮತ್ತು ಭಾಸ್ಕರ ದಾಸ್ ಹಾಗೂ ಬಳಗದವರಿಂದ ಭಕ್ತಿ ಸಂಗೀತ, ವಿದುಷಿ ನಿಶಿತಾ ಪಾಣಾಜೆ ಮತ್ತು ಶಿಷ್ಯ ವೃಂದದವರಿಂದ ಭರತನಾಟ್ಯ, ಅಂಬಿಕಾ ಯಕ್ಷಕಲಾ ವೃಂದ ಬಪ್ಪಳಿಗೆ ಇವರಿಂದ ಯಕ್ಷಗಾನ ಪ್ರಸಂಗ ವಿಜಯ ಯಾತ್ರೆ, ಸಂಜೆ 5ರಿಂದ 6 ವರ್ಣಂ ನೃತ್ಯ ತಂಡ ಈಶ್ವರಮಂಗಲ ಮತ್ತು ಶ್ರೀರಾಮ ಲಹರಿ ನಾಟ್ಯಾಲಯ ದೇಲಂಪಾಡಿ ಇವರಿಂದ ನೃತ್ಯ ನೃತ್ಯ ಹನುಮಾನ್–ಕಲಾ ತಪಸ್ವಿ ನಾಟ್ಯ ನಿಲಯ ಗುರು ಶ್ರೀ ಬಾಲಕೃಷ್ಣ ಮಂಜೇಶ್ವರ ಇವರ ತಂಡದಿಂದ ಶಾಸ್ತ್ರೀಯ ಹಾಗೂ ಜಾನಪದ ನೃತ್ಯ ಕಾರ್ಯಕ್ರಮ ನಡೆಯಲಿದೆ.

ರಾಜ್ಯಪಾಲರಿಂದ ಉದ್ಘಾಟನೆ

ಪೇಜಾವರ ಸ್ವಾಮೀಜಿಯವರು ಯಾಗ ಶಾಲೆಯಲ್ಲಿ ಆಶೀರ್ವಚನ ಮತ್ತು ರಾಜ್ಯದ ರಾಜ್ಯಪಾಲರಾದ ತಾವರ್‌ಚಂದ್ ಗೆಹ್ಲೋಟ್ ಆಗಮಿಸಿ ಪಂಚಮುಖಿ ಆಂಜನೇಯ ಕ್ಷೇತ್ರದ ಮುಖ ಮಂಟಪವನ್ನು ಉದ್ಘಾಟಿಸಲಿದ್ದಾರೆ.

ಸುತ್ತ ಮುತ್ತ

ಕರುಂಬಿತ್ತಿಲ್‌ನಲ್ಲಿ ಏ.15ರಿಂದ ಐದು ದಿನಗಳ ಸಂಗೀತ ಶಿಬಿರ

ಮಂಗಳೂರು: ಕರುಂಬಿತ್ತಿಲ್ ಫೌಂಡೇಶನ್ ವತಿಯಿಂದ ಬೆಳ್ತಂಗಡಿಯ ನಿಡ್ಲೆ ಗ್ರಾಮದ ಕರುಂಬಿತ್ತಿಲ್ ಮನೆಯಲ್ಲಿ ಐದು ದಿನಗಳ ಸಂಗೀತ ಶಿಬಿರ 'ಕರುಂಬಿತ್ತಿಲ್ ಶಿಬಿರ' ಏ.15ರಿಂದ ಆರಂಭಗೊಳ್ಳಲಿದೆ. ಶಿಬಿರದಲ್ಲಿ ಸಂಗೀತ ತರಗತಿಗಳು, ಪ್ರಸಿದ್ಧ ಕಲಾವಿದರಿಂದ ಕಛೇರಿಗಳು, ಲಯ ವಿನ್ಯಾಸಗಳು ನಡೆಯಲಿದೆ. ಏ.15ರಂದು ಶಿಬಿರ ಉದ್ಘಾಟನೆಗೊಳ್ಳಲಿದೆ. ಏ.15ರಂದು ಖ್ಯಾತ ಕಲಾವಿದರಾದ ಮಾರುತಿ ಪ್ರಸಾದ್, ಎಚ್.ವಿ. ರಘುರಾಮ್, ಪನ್ನಗ ಶರ್ಮನ್ ಅವರಿಂದ ಸಂಗೀತ ಕಛೇರಿ ನಡೆಯಲಿದೆ. ಏ.16ರಂದು ಎಡನೀರು ಮಠಾಧೀಶ ಸಚ್ಚಿದಾನಂದ ಭಾರತೀ ಶ್ರೀಗಳು ದಿವ್ಯ ಸಾನಿಧ್ಯ ವಹಿಸಲಿದ್ದು, ಏ.19ಕ್ಕೆ ಸಮಾರೋಪದಂದು ಉಡುಪಿ ಸೋದೆ ಮಠದ ವಿಶ್ವವಲ್ಲಭತೀರ್ಥ ಸ್ವಾಮೀಜಿ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ಭಾಗವಹಿಸಲಿದ್ದಾರೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್ನೆಸ್ಸೆಸ್ ಶಿಬಿರ

ಕೊಣಾಜೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಡಿಪು ಇಲ್ಲಿನ ರಾಷ್ಟ್ರೀಯ ಸೇವಾ ಯೋಜನೆಯ 2025-26 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆಯು ಇತ್ತೀಚೆಗೆ ಕೊಣಾಜೆಯ ವಿಶ್ವಮಂಗಳ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆಯಿತು. ಕಾಲೇಜು ಅಭಿವೃದ್ಧಿ ಸಮಿತಿಯ ಕಾರ್ಯಾಧ್ಯಕ್ಷ ಪ್ರಶಾಂತ್ ಕಾಜವ ಶಿಬಿರ ಉದ್ಘಾಟಿಸಿದರು.ಮುಡಿಪು ಜನ ಶಿಕ್ಷಣ ಟ್ರಸ್ಟ್‌ನ ಸ್ವಚ್ಛತಾ ರಾಯಭಾರಿ ಶೀನಶೆಟ್ಟಿ ಹಾಗೂ ಕೃಷ್ಣಮೂಲ್ಯ ಭಾಗವಹಿಸಿದರು. ಮಂಗಳೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಶೇಷಪ್ಪ ಕೆ. ಮಾಹಿತಿ ನೀಡಿದರು. ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಡಾ. ಸುರೇಖಾ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾಲೇಜಿನ ಪ್ರಾಂಶುಪಾಲ ಸತೀಶ್ ಗಟ್ಟಿ ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಸಹಶಿಬಿರಾಧಿಕಾರಿ ಉಸ್ಮಾನ್ ಸ್ವಾಗತಿಸಿ, ಶಿಬಿರಾಧಿಕಾರಿ ತನುಜ ಎಂ. ಅವರು ವಂದಿಸಿದರು. ಬಿಂದುಶ್ರೀ ನಿರೂಪಿಸಿದರು

ಸೇನಾ ಪೂರ್ವ ಸಿದ್ಧತಾ ತರಬೇತಿ : ಅರ್ಜಿ ಆಹ್ವಾನ

ಉಡುಪಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಭಾರತೀಯ ಸೇನೆ/ ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಹಾಗೂ 3(ಬಿ) ಗಳ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಏ.27 ಕೊನೆ ದಿನ. ತರಬೇತಿಯು ಬ್ರಹ್ಮಾವರ ತಾಲೂಕು ಬಾರ್ಕೂರು ಹನೆಹಳ್ಳಿ ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಲಿದೆ. ಅರ್ಹ ಅಭ್ಯರ್ಥಿಗಳನ್ನು ನಗರದ ಅಜ್ಜರಕಾಡು ಮಹಾತ್ಮಗಾಂಧಿ ಮೈದಾನದಲ್ಲಿ ಮೇ 2 ರಂದು ನಡೆಯಲಿರುವ ರ್ಯಾಲಿಯಲ್ಲಿ ಆಯ್ಕೆ ಮಾಡಲಾಗುವುದು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಕೊಠಡಿ ಸಂಖ್ಯೆ: 304, ಬಿ ಬ್ಲಾಕ್, ಎರಡನೇ ಮಹಡಿ, ರಜತಾದ್ರಿ, ಮಣಿಪಾಲ ಇಲ್ಲಿಗೆ ಕಳುಹಿಸಲು ಪ್ರಕಟಣೆ ತಿಳಿಸಿದೆ.

ಮೇ 5ರಿಂದ ಅವಂದೂರು ದೇವಸ್ಥಾನ ಬ್ರಹ್ಮಕಲಶೋತ್ಸವ

ನಾಪೋಕ್ಲು: ಅವಂದೂರು ಗ್ರಾಮದ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮೇ 5ರಿಂದ 8 ರವರೆಗೆ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ನೆರವೇರಲಿದೆ. ಈ ನಿಟ್ಟಿನಲ್ಲಿ ಉಪಸಮಿತಿಗಳನ್ನು ರಚಿಸಲಾಯಿತು.

ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷರು ಚೊಕ್ಕಾಡಿ ಅಪ್ಪಯ್ಯ, ಕಾರ್ಯದರ್ಶಿ ಪಟ್ಟಡ ಸುಗುಣ ಕುಮಾರ್, ಖಜಾಂಚಿ ಬೆಳ್ಯನ ಚಂದ್ರಪ್ರಕಾಶ್, ಪ್ರಧಾನ ಅರ್ಚಕರಾದ ದಿನೇಶ್ ಭಟ್, ಗ್ರಾಮದ ತಕ್ಕ ಮುಖ್ಯಸ್ಥರು, ಗ್ರಾಮದ ಕಾರ್ಯದರ್ಶಿ ಕಾಳೇರಮ್ಮನ ಪೂವಯ್ಯ, ಗ್ರಾ.ಪಂ. ಸದಸ್ಯರಾದ ಊರೊಳನ ತೇಜಕುಮಾರ್, ದೇವಾಯಿರ ದೇವಯ್ಯ, ದೇವಾಯಿರ ದಾಮೋದರ, ದೇವಾಯಿರ ಚಂದ್ರಶೇಖರ್, ಹೊಸೂರು ಗಿರೀಶ್, ಬೆಳ್ಯನ ವಾಸುದೇವ, ಬೆಳ್ಯನ ನಾಣಯ್ಯ, ಬೆಳ್ಯನ ಪವಿತ್ರ, ಪಟ್ಟಡ ನಂದಕುಮಾರ್, ಪಟ್ಟಡ ದೀಪಕ್, ಕಾಳೇರಮ್ಮನ ಮೇದಪ್ಪ ಕಾಳೇರಮ್ಮನ ಅಶೋಕ, ಊರೊಳನ ಮಂಜುನಾಥ್, ಪೊನ್ನಚ್ಚನ ಚಂಗಪ್ಪ ಕಡ್ಯದ ಭವಾನಿಶಂಕರ್ ಕಡ್ಯದ ಪ್ರಸನ್ನ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದು ಸಲಹೆ ನೀಡಿದರು.

ಜಲಜೀವನ್ ಮಿಷನ್ 2.0 ಯೋಜನೆ ವಿಸ್ತರಣೆ | ಕೊಡಗು ಜಿಲ್ಲೆಯಲ್ಲಿ ಪ್ರಗತಿ ಪರಿಶೀಲನಾ ಸಭೆ

ಕಾಮಗಾರಿಯಲ್ಲಿ ಲೋಪ ಸಲ್ಲ: ಸಂಸದ ಯದುವೀರ್ ಸೂಚನೆ



ಮಡಿಕೇರಿ: ಕೇಂದ್ರ ಪುರಸ್ಕೃತ ಜಲಜೀವನ್ ಮಿಷನ್ 2.0 ಯೋಜನೆಯನ್ನು 2028ರವರೆಗೂ ವಿಸ್ತರಿಸುವ ಹಿನ್ನೆಲೆಯಲ್ಲಿ ಯೋಜನೆಯ ಪ್ರಗತಿ ಮತ್ತು ಪರಿಣಾಮಕಾರಿ ಅನುಷ್ಠಾನ ಕುರಿತು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಸಭೆ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಲಜೀವನ್ ಮಿಷನ್ ಯೋಜನೆಯ ಜೊತೆಗೆ ಜಲ ಮಹೋತ್ಸವ ಸೇರಿದಂತೆ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲು ಸರ್ಕಾರದಿಂದ ಅನುಮತಿ ದೊರೆತಿದ್ದು, ಆ ನಿಟ್ಟಿನಲ್ಲಿ ಕಾಮಗಾರಿ ಕೈಗೊಳ್ಳುವಂತೆ ಸಂಸದರು ಸೂಚಿಸಿದರು.

ಕೇಂದ್ರ ಪುರಸ್ಕೃತ ಜಲ ಜೀವನ್ ಮಿಷನ್ 2.0 ಯೋಜನೆ ಸಮರ್ಪಕವಾಗಿ ಅನುಷ್ಠಾನ ಗೊಳಿಸಬೇಕು. ಯಾವುದೇ ಕಾರಣಕ್ಕೂ ಲೋಪ ಉಂಟಾಗದಂತೆ ಎಚ್ಚರ ವಹಿಸಬೇಕೆಂದು ನಿರ್ದೇಶನ ನೀಡಿದರು. ಕೇಂದ್ರ ಸರ್ಕಾರ, ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಬೇಕು ಎಂಬ ಉದ್ದೇಶದದಿಂದ ಹಲವು ಅಭಿವೃದ್ಧಿ ಕೆಲಸ ಕೈಗೊಂಡಿದೆ. ಆ ನಿಟ್ಟಿನಲ್ಲಿ ಅಧಿಕಾರಿಗಳು ಎಚ್ಚರದಿಂದ ಕಾರ್ಯ ನಿರ್ವಹಿಸಬೇಕು ಎಂದರು.

ಡಿಸಿ ಎಸ್.ಜೆ.ಸೋಮಶೇಖರ್ ಜಲಜೀವನ್ ಮಿಷನ್ ಪ್ರಗತಿ ಮತ್ತು ಅನುಷ್ಠಾನ ಸಂಬಂಧ ಹಲವು ಸಲಹೆ, ಮಾರ್ಗದರ್ಶನ ನೀಡಿದರು. ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಜಲಜೀವನ್ ಮಿಷನ್ ಯೋಜನೆ ಅನುಷ್ಠಾನ ಸಂಬಂಧ ಕಾಲ ಕಾಲಕ್ಕೆ ಭೇಟಿ ನೀಡಿ ಪರಿಶೀಲಿಸಲಾಗುತ್ತದೆ. ಹಾಗೆಯೇ ಮಾಹಿತಿ ನೀಡಲಾಗುತ್ತದೆ ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಭಾಸ್ಕರ್ ಅವರು, ಜಲ ಮಹೋತ್ಸವ ಕಾರ್ಯಕ್ರಮ ಜಿಲ್ಲೆಯ 23 ಗ್ರಾ.ಪಂ.ಗಳಲ್ಲಿ ಹಮ್ಮಿಕೊಳ್ಳಲು ಅನುಮತಿ ದೊರೆತಿದೆ ಎಂದರು. ಜೆಜೆಎಂ ಯೋಜನೆಯಡಿ ಕೈಗೊಂಡಿರುವ ಎಸ್‌ವಿಎಸ್ ಕಾಮಗಾರಿಯನ್ನು ಘಟಕವಾರು ಹಮ್ಮಿಕೊಳ್ಳಲಾಗಿದೆ. ಆ ನಿಟ್ಟಿನಲ್ಲಿ 457 ಕಾಮಗಾರಿಗಳಲ್ಲಿ 369 ಕಾಮಗಾರಿ ಪೂರ್ಣಗೊಂಡಿದ್ದು, 86 ಕಾಮಗಾರಿ ಪ್ರಗತಿಯಲ್ಲಿದೆ ಎಂದು ಭಾಸ್ಕರ್ ನುಡಿದರು.

ಕೊಡಗು ಜಿಲ್ಲೆಯಲ್ಲಿ ಎಂವಿಎಸ್ ಯೋಜನೆಯಡಿ 8.52 ಕೋಟಿ ರೂ. ವೆಚ್ಚದಲ್ಲಿ ಬಹು ಗ್ರಾಮ ಕುಡಿಯುವ ನೀರು ಪೂರೈಕೆಗೆ ಕುಶಾಲನಗರ ತಾಲೂಕಿನ 12 ಜನವಸತಿ ಪ್ರದೇಶಗಳಿಗೆ ನೀರು ಒದಗಿಸಲಾಗುತ್ತಿದೆ ಎಂದರು.

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಹೊಸದಾಗಿ ಅನುಷ್ಠಾನ ಮಾಡಲುದ್ದೇಶಿಸಿರುವ ಬಹುಗ್ರಾಮ ಕುಡಿಯುವ ನೀರು ಯೋಜನೆ ಸಂಬಂಧಿಸಿದಂತೆ ಮಡಿಕೇರಿ ಉಪ ವಿಭಾಗ, ಸೋಮವಾರಪೇಟೆ, ಕುಶಾಲನಗರ, ಸೋಮವಾರಪೇಟೆ ಉಪ ವಿಭಾಗ, ಪೊನ್ನಂಪೇಟೆ ಮತ್ತು ವೀರಾಜಪೇಟೆ, ತಾಲೂಕುಗಳನ್ನು ಗುರುತಿಸಲಾಗಿದ್ದು 533 ಜನ ವಸತಿ ಪ್ರದೇಶದಲ್ಲಿ 12 ಕಾಮಗಾರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು. 2025-26ನೇ ಸಾಲಿನ ಕ್ರಿಯಾ ಯೋಜನೆ ಕಾಮಗಾರಿ ಪರಿಶೀಲಿಸಿದಾಗ ಮಡಿಕೇರಿ ತಾಲೂಕಿನಲ್ಲಿ 24 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, 35 ಲಕ್ಷ ರೂ. ವೆಚ್ಚ ಅಂದಾಜು ಮಾಡಲಾಗಿದೆ ಎಂದರು.

6 ಕಾಮಗಾರಿ ಪ್ರಗತಿ

ಜಿ.ಪಂ. ವ್ಯಾಪ್ತಿಯ ಶುದ್ಧ ಕುಡಿಯುವ ನೀರಿನ ಘಟಕ ಸಂಬಂಧಿಸಿದಂತೆ 36 ಶುದ್ದೀಕರಣ ಘಟಕಗಳನ್ನು ಅಳವಡಿಸಲಾಗಿದ್ದು, ಇದರಲ್ಲಿ 27 ಘಟಕಗಳು ಕಾರ್ಯನಿರ್ವಹಿಸುತ್ತಿವೆ. 9 ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಹೇಳಿದರು.

ಪಿವಿಟಿಜಿ, ಪಿ.ಎಂ.ಜನಮನ್ ಯೋಜನೆಯಡಿ ಜಿಲ್ಲೆಯಲ್ಲಿ 8 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇದರಲ್ಲಿ ಒಂದು ಕಾಮಗಾರಿ ಪೂರ್ಣಗೊಂಡಿದೆ. 6 ಕಾಮಗಾರಿ ಪ್ರಗತಿಯಲ್ಲಿದ್ದು, ಒಂದು ಕಾಮಗಾರಿ ಪ್ರಾರಂಭವಾಗಿಲ್ಲ ಎಂದು ವಿವರಿಸಿದರು.

ತಟ್ಟೆಕೆರೆಯಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು ಗ್ರಾ.ಪಂ.ಗೆ ಹಸ್ತಾಂತರಿಸಲಾಗಿದೆ. 6 ಕಾಮಗಾರಿಗಳ ಕೊಳವೆ ಮಾರ್ಗ ಮತ್ತು ನಳ ಸಂಪರ್ಕ ಪೂರ್ಣಗೊಂಡಿದೆ. ಹಾಗೆಯೇ ಒಎಚ್‌ಟಿ ಕಾಮಗಾರಿ ಪ್ರಗತಿಯಲ್ಲಿದೆ. ಒಟ್ಟು 374 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದರು.

ನವೋದಯ ಶಾಲೆಯಲ್ಲಿ ನೀರಿನ ಕೊರತೆ: ಜವಾಹರ್ ನವೋದಯ ವಿದ್ಯಾಲಯಕ್ಕೆ ಕುಡಿಯುವ ನೀರು ಪೂರೈಕೆ ಸಂಬಂಧ ಇದೇ ಸಂದರ್ಭ ಚರ್ಚಿಸಲಾಯಿತು. ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಅವರು, ಕೂಟುಹೊಳೆಯಿಂದ ಮಡಿಕೇರಿ ನಗರಕ್ಕೆ ಪೂರೈಕೆಯಾಗುವ ನೀರನ್ನು ನವೋದಯ ಶಾಲೆಗೆ ನೀಡಲು ಕಷ್ಟವಾಗಲಿದೆ. ಆದ್ದರಿಂದ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಂತೆ ಸಲಹೆ ಮಾಡಿದರು. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿರೇಂದ್ರ ಸೇರಿದಂತೆ ಇಂಜಿನಿಯರ್‌ಗಳು, ಇತರರು ಇದ್ದರು.

ಮೂಡುಪಡುಕೋಡಿ ಶಾಲೆಯಲ್ಲಿ 'ಕಲಾ-ಶೂನ್ಯ ತ್ಯಾಜ್ಯ' ಮಾಹಿತಿ ಶಿಬಿರ



ಬಂಟ್ವಾಳ: ತಾಲೂಕಿನ ಇರ್ವತ್ತೂರುಪದವು ಶ್ರೀ ಶಾರದಾ ಸೇವಾ ಟ್ರಸ್ಟ್ ಮತ್ತು ಜೆಸಿಐ ಬಂಟ್ವಾಳ ಸಹಯೋಗದಲ್ಲಿ ಮೂಡು ಪಡುಕೋಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಮೂರು ದಿನಗಳ ಬೇಸಿಗೆಯ 'ಕಲಾ ಮತ್ತು ಶೂನ್ಯ ತ್ಯಾಜ್ಯ ಮಾಹಿತಿ ಶಿಬಿರ'ಕ್ಕೆ ಮೂಡುಪಡುಕೋಡಿ ಹಿ.ಪ್ರಾ. ಶಾಲಾ ಸಭಾಂಗಣದಲ್ಲಿ ಬುಧವಾರ ಚಾಲನೆ ನೀಡಲಾಯಿತು.

ವಾಮದಪದವು ಸ.ಪ.ಪೂ. ಕಾಲೇಜಿನ ಚಿತ್ರಕಲಾ ಶಿಕ್ಷಕ ಮುರಳೀಕೃಷ್ಣ ಶಿಬಿರ ಉದ್ಘಾಟಿಸಿ, ಇರ್ವತ್ತೂರುಪದವು ಶ್ರೀ ಶಾರದಾ ಸೇವಾ ಟ್ರಸ್ಟ್ ಸ್ಥಳೀಯವಾಗಿ ಸಮಾಜಮುಖಿ ಚಟುವಟಿಕೆಯಿಂದ ಗುರುತಿಸಿಕೊಂಡಿದ್ದು, ಬೇಸಿಗೆ ಶಿಬಿರ ಆಯೋಜಿಸುವ ಮೂಲಕ ಮಕ್ಕಳ ಪ್ರತಿಭೆ ಅನಾವರಣಗೊಳಿಸಲು ಅವಕಾಶ ಒದಗಿಸಿದ್ದು ಇದರ ಸದುಪಯೋಗಪಡೆದು ಕೊಳ್ಳಬೇಕೆಂದರು.

ರಂಗಭೂಮಿ ಕಲಾವಿದ ರತ್ನ ದೇವ್ ಪುಂಜಾಲಕಟ್ಟೆ ಮಾತನಾಡಿದರು. ಬಂಟ್ವಾಳ ಜೆಸಿಐ ಅಧ್ಯಕ್ಷ ಕಿಶೋರ್ ಆಚಾರ್ಯ ಸಭಾಧ್ಯಕ್ಷತೆ ವಹಿಸಿ, ಮಾತನಾಡಿದರು.

ಪತ್ರಕರ್ತ ವೆಂಕಟೇಶ್ ಬಂಟ್ವಾಳ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷೆ ಶಾಲಿನಿ ಯತೀಶ್ ಪೂಜಾರಿ, ಇರ್ವತ್ತೂರು ಶಾರದಾ ಸೇವಾ ಟ್ರಸ್ಟ್‌ನ ಪದಾಧಿಕಾರಿ ಸುಧೀಂದ್ರ ಶೆಟ್ಟಿ, ಪ್ರಶಾಂತ್ ಜೈನ್, ದಯಾನಂದ ಎರ್ಮನಾಡು, ಅವರು ಅತಿಥಿಗಳಾಗಿ ಭಾಗವಹಿಸಿ ಶುಭಹಾರೈಸಿದರು. ಉಪನ್ಯಾಸಕಿ ಸಂಧ್ಯಾ ಅಳಕೆ, ಕಲಾವಿದರಾದ ವಿದ್ಯಾನಂದ, ಶೈಲೇಶ್,ಯಕ್ಷ, ಸತ್ಯಶೀ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯ ಸುನಿಲ್ ಸ್ವಾಗತಿಸಿ, ವಂದಿಸಿದರು. ಶಿಕ್ಷಕ ವೃಂದ ಸಹಕರಿಸಿದರು.

ವ್ಯಂಗ್ಯಚಿತ್ರಗಾರರಿಗೆ ಸಾಹಿತ್ಯ ಜ್ಞಾನವೂ ಅತೀ ಅಗತ್ಯ: ಅಮೃತ್ ವಿಟ್ಲ ಅಭಿಪ್ರಾಯ



ಕೊಣಾಜೆ: ಚಿತ್ರಕಲೆಯಲ್ಲಿ ವ್ಯಂಗ್ಯಚಿತ್ರ ರಚನೆಗೆ ಅದರದ್ದೇ ಆದ ಮಹತ್ವತೆ ಇದೆ. ವ್ಯಂಗ್ಯ ಚಿತ್ರ ಕಲಾವಿದನಿಗೆ ತಾಳ್ಮೆ, ಚಿತ್ರ ರಚನೆಯ ಕೌಶಲ್ಯದ ಜೊತೆಗೆ ಸಾಹಿತ್ಯ ಜ್ಞಾನವೂ ಅತ್ಯಗತ್ಯ ಎಂದು ವ್ಯಂಗ್ಯಚಿತ್ರ ಕಲಾವಿದ ಅಮೃತ್ ವಿಟ್ಲ ತಿಳಿಸಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಎನ್ ಜಿ ಪಾವಂಜೆ ಲಲಿತಕಲಾ ಪೀಠ ಹಾಗೂ ಮುಡಿಪುವಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ವಿಶ್ವಮಂಗಳ ಆಂಗ್ಲಮಾಧ್ಯಮ ಶಾಲೆಯಲ್ಲಿ ಮಂಗಳವಾರ ನಡೆದ 'ವ್ಯಂಗ್ಯ ಚಿತ್ರ ರಚನೆ' ಕುರಿತು ನಡೆದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವ್ಯಂಗ್ಯಚಿತ್ರಗಳಲ್ಲಿ ರಾಜಕೀಯ, ಸಾಮಾಜಿಕ ಸೇರಿದಂತೆ ಅನೇಕ ಬಗೆಯ ವ್ಯಂಗ್ಯ ಚಿತ್ರಗಳು ಇರುವುದನ್ನು ಗಮನಿಸಬಹುದು. ವ್ಯಂಗ್ಯ ಚಿತ್ರವನ್ನು ಸೂಕ್ಷ್ಮವಾಗಿ ನೋಡುವುದು ಕೂಡಾ ಒಂದು ಕಲೆಗಾರಿಕೆಯಾಗಿದ್ದು ಇದರಲ್ಲಿ ಹಾಸ್ಯದ ಪರಿಕಲ್ಪನೆಯನ್ನು ಸೃಷ್ಟಿಸುವುದು ಸುಲಭದ ಕೆಲಸವಲ್ಲ, ಇದಕ್ಕೆ ನೈಪುಣ್ಯತೆ ಮತ್ತು ಪರಿಣತಿಯೂ ಅಗತ್ಯ. ವ್ಯಂಗ್ಯ ಚಿತ್ರರಲ್ಲಿ ರಚನೆಗೆ ಪೂರಕವಾಗಿ ಶಾಸ್ತ್ರೀಯ ಅಭ್ಯಾಸ ಕ್ರಮವೂ ಇದೆ ಎಂದರು.

ಎನ್‌ಎಸ್‌ಎಸ್ ಜಿಲ್ಲಾ ಸಂಯೋಜನಾಧಿಕಾರಿ ಡಾ. ಶೇಷಪ್ಪ ಮಾತನಾಡಿ, ಕಾರ್ಯಾಗಾರದಿಂದ ಕಲಾಸಕ್ತಿ ಬೆಳೆಯುತ್ತದೆ ಎಂದರು. ಮಂಗಳೂರು ವಿವಿ ಯಕ್ಷಗಾನ ಅಧ್ಯಯನ ಕೇಂದ್ರದ ಸಂಶೋಧನಾ ಅಧಿ ಕಾರಿ ಡಾ.ಸತೀಶ್ ಕೊಣಾಜೆ ಮಾತನಾಡಿದರು. ಎನ್ನೆಸ್ಸೆಸ್ ಶಿಬಿರಾಧಿಕಾರಿ ತನುಜಾ, ಇತಿಹಾಸ ಪ್ರಾಧ್ಯಾಪಕ ಲೋಕೇಶ್, ಸ್ವಾತಿ ರಾವ್ ಮೊದಲಾದವರು ಇದ್ದರು. ವಿದ್ಯಾರ್ಥಿನಿ ಚೈತ್ರ ಸ್ವಾಗತಿಸಿ, ಶರಣ್ಯ ವಂದಿಸಿದರು. ಶ್ರೇಯ ನಿರೂಪಿಸಿದರು. ರಿಝ್ವಾನ್ ಅತಿಥಿಗಳನ್ನು ಪರಿಚಯಿಸಿದರು.

ಮುದ್ಯ ಪಾರಂತಿ ಶ್ರೀಕ್ಷೇತ್ರದ ಬ್ರಹ್ಮಕಲಶೋತ್ಸವ ಸಂಭ್ರಮಕ್ಕೆ ಚಾಲನೆ



ಉಪ್ಪಿನಂಗಡಿ: ಬಜತ್ತೂರು ಗ್ರಾಮದ ಮುದ್ಯ ಪಾರಂತಿ ಕ್ಷೇತ್ರ ಶ್ರೀ ಪಾರ್ವತಿ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯುವ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವಕ್ಕೆ ಏ.7ರಂದು ವಿದ್ಯುಕ್ತವಾಗಿ ಚಾಲನೆ ನೀಡಲಾಗಿದೆ. ಏ.12ರ ತನಕ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಬ್ರಹ್ಮಕಲಶೋತ್ಸವ ಸಂಭ್ರಮ ನಡೆಯಲಿದೆ.

ಬ್ರಹ್ಮಕಲಶೋತ್ಸವಕ್ಕೆ ಬೆಳಗ್ಗೆ 8.45ಕ್ಕೆ ಮುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಸಂಚಾಲಕ ಅರುಣ್‌ಕುಮಾರ್ ಪುತ್ತಿಲ ಅವರು ದೇವಸ್ಥಾನದಲ್ಲಿ ದೀಪ ಪ್ರಜ್ವಲಿಸುವ ಮೂಲಕ ಚಾಲನೆ ನೀಡಿದರು.

ಸಭಾ ವೇದಿಕೆಯಲ್ಲಿ ನಡೆಯುವ ಭಜನಾ ಕಾರ್ಯಕ್ರಮಗಳಿಗೆ ದೇವಸ್ಥಾನದ ಆಡಳಿತಾಧಿಕಾರಿ ನರಿಯಪ್ಪ ಮಠದ ಅವರು ದೀಪ ಪ್ರಜ್ವಲಿಸುವ ಮೂಲಕ ಚಾಲನೆ ನೀಡಿದರು. ಬ್ರಹ್ಮಕಲಶೋತ್ಸವದ ಅಂಗವಾಗಿ ಆಯೋಜಿಸಲಾದ ಹಸಿರುವಾಣಿ ಸಮರ್ಪಣಾ ಕಾರ್ಯಕ್ಕೆ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಚಾಲನೆ ನೀಡಿದರು. ಉಗ್ರಾಣ ಮುಹೂರ್ತವನ್ನು ಮಾಜಿ ಶಾಸಕ ಸಂಜೀವ ಮಠಂದೂರು ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪುಣ್ಚಪ್ಪಾಡಿ ಶಾಲೆಯಲ್ಲಿ ಮಕ್ಕಳ ವಿಶೇಷ ಶಿಬಿರ 'ಬಣ್ಣಾಯಣ' ಉದ್ಘಾಟನೆ



ಸವಣೂರು: ಮಕ್ಕಳ ಕಲಿಕೆ ಅವಕಾಶಗಳ ಸುತ್ತ ಹಣೆದುಕೊಂಡಿದೆ ಎಂದು ನಿವೃತ್ತ ಶಿಕ್ಷಕ ರಾಮ್ ಭಟ್ ಹೇಳಿದರು.

ಪುಣ್ಚಪ್ಪಾಡಿ ಶಾಲೆಯಲ್ಲಿ ನಡೆದ 7 ನೇ ವರ್ಷದ ಮಕ್ಕಳ ಶಿಬಿರ ಬಣ್ಣಾಯಣ ಉದ್ಘಾಟಿಸಿ, ಕೇವಲ ಪುಸ್ತಕದ ಓದು ಮಾತ್ರವಲ್ಲದೇ ಸಹಪಠ್ಯ ಚಟುವಟಿಕೆಗಳ ತೊಡಗಿಸಿಕೊಳ್ಳುವಿಕೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಎಂದರು. ಸರಕಾರಿ ಶಾಲೆಗಳ ಮಕ್ಕಳಿಗೆ ಇಂತಹ ಅತ್ಯುತ್ತಮವಾದ ಶಿಬಿರ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಮಣ್ಣಿನಲ್ಲಿ ಬಣ್ಣಾಯಣದ ಅಕ್ಷರಗಳಿಗೆ ಬಣ್ಣ ಹಚ್ಚುವ ಮೂಲಕ ಬಣ್ಣದ ಆಯನವನ್ನು ಆರಂಭಿಸಿದ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪಿ.ಡಿ. ಕೃಷ್ಣಕುಮಾರ್ ರೈ ಮಾತನಾಡಿ, ನಮ್ಮ ಶಾಲೆಯು ಮಕ್ಕಳಿಗೆ ವಿವಿಧ ಬಗೆಯ ಚಟುವಟಿಕೆಗಳನ್ನು ಆಯೋಜಿಸಿ ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ನೀಡುತ್ತಿದೆ. ಎಲ್ಲಾ ಮಕ್ಕಳು ಅಕಾಶಗಳನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕು ಎಂದರು.

ರಂಗದಾಟದ ಸಂಪನ್ಮೂಲ ವ್ಯಕ್ತಿ ಉದಯ ಸಾರಂಗ್ ಮಾತನಾಡಿ, ಇಂದಿನ ಮಕ್ಕಳು ತಮ್ಮ ಅಮೂಲ್ಯ ಬಾಲ್ಯವನ್ನು ಮೊಬೈಲ್, ಟಿವಿಯಲ್ಲಿ ಕಳೆದುಕೊಳ್ಳುತ್ತಿದ್ದಾರೆ. ಅದರ ಬದಲು ಪುಸ್ತಕ ಓದುವುದು, ಚಿತ್ರ ಕಲೆ, ಹಾಡು ನೃತ್ಯ ಹೀಗೆ ಹವ್ಯಾಸಗಳನ್ನು ಬೆಳೆಸಿಕೊಂಡು ಪ್ರತಿಭಾವಂತರಾಗಿ ಬೆಳೆಯಬೇಕು ಎಂದರು. ಸಮಾಜ ಸೇವಕ, ಪ್ರಗತಿಪರ ಕೃಷಿಕ ಗಿರಿಶಂಕರ ಸುಲಾಯ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಗೀತಾ, ಸಮೂಹ ಸಂಪನ್ಮೂಲ ವ್ಯಕ್ತಿ ಜಯಂತ್ ವೈ., ಎಸ್‌ಡಿಎಂಸಿ ಅಧ್ಯಕ್ಷ ವಿಜಯ ಕುಚ್ಚೆಜಾಲು ಶುಭಾಶಂಸನೆಗೈದರು. ಶಾಲಾ ಮುಖ್ಯ ಗುರು ರಶ್ಮಿತಾ ಜೈನ್ ನರಿಮೊಗರು ಸ್ವಾಗತಿಸಿ, ಶಿಕ್ಷಕಿ ಶೋಭಾ ಕೆ. ವಂದಿಸಿದರು. ಶಿಕ್ಷಕರಾದ ಭಾಗೀರಥಿ, ಲೀಲಾವತಿ, ಭವಾನಿ ಕೆ. ವಿವಿಧ ಕಾರ್ಯಕ್ರಮ ನಿರ್ವಹಿಸಿದರು.

ಸರ್ಕಾರದಿಂದ ಬಿಪಿಎಲ್ ಕಾರ್ಡ್ ರದ್ದಿಗೆ ನವೀನ್ ನಾಯಕ್ ಖಂಡನೆ

ಕಾರ್ಕಳ: ದಿವಾಳಿ ಎದ್ದಿರುವ ರಾಜ್ಯ ಸರ್ಕಾರದಿಂದ ವೃದ್ದಾಪ್ಯ, ವಿಧವಾ, ಅಂಗವಿಕಲ ವೇತನ ರದ್ದು, ಬಡವರ ಬಿಪಿಎಲ್ ಕಾರ್ಡ್ ರದ್ದು ಸರ್ಕಾರದ ಈ ನಡೆ ಖಂಡನೀಯ ಎಂದು ಬಿಜೆಪಿ ಕ್ಷೇತ್ರಾಧ್ಯಕ್ಷ ನವೀನ್ ನಾಯಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ರಾಜ್ಯ ಸರ್ಕಾರ ದಿವಾಳಿ ಎದ್ದಿದ್ದು ಅಭಿವೃದ್ಧಿಗೆ ಹಣ ನೀಡದ ಸ್ಥಿತಿಗೆ ತಲುಪಿದೆ. ಆರ್ಥಿಕ ಮುಗ್ಗಟ್ಟಿನಿಂದ ಸರ್ಕಾರ ನಡೆಸಲು ಆಗದ ಹಿನ್ನಲೆಯಲ್ಲಿ ಈ ಹಿಂದೆ ವಿವಿಧ ಸರ್ಕಾರಗಳು ನೀಡಿದ ಜನಪರ ಯೋಜನೆಗಳನ್ನು ನಿಧಾನವಾಗಿ ನಿಲ್ಲಿಸುವ ಸಂಚು ರೂಪಿಸಿದೆ. ಆರ್ಥಿಕ ಬಿಕ್ಕಟ್ಟನ್ನು ಸರಿದೂಗಿಸುವ ನೆಪದಲ್ಲಿ ಆದರ ಭಾಗವಾಗಿ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ದಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಧವಾ ವೇತನ, ಅಂಗವಿಕಲ ವೇತನಗಳನ್ನು ಈಗಾಗಲೇ ಮನ ಬಂದಂತೆ ತಾಲ್ಲೂಕಿನಾದ್ಯಂತ ಸಾವಿರಾರು ಫಲಾನುಭವಿಗಳ ಪಟ್ಟಿಗಳನ್ನು ರದ್ದು ಪಡಿಸಿದೆ. ಜೊತೆಗೆ ಆರೋಗ್ಯ, ಮನೆ ನಿರ್ಮಾಣ, ಮಕ್ಕಳ ವಿದ್ಯಾಭ್ಯಾಸ ಸೇರಿದಂತೆ ಅಗತ್ಯ ಸೌಕರ್ಯಗಳನ್ನು ಸೃಷ್ಟಿಸಿಕೊಳ್ಳಲು ಬಡವರು ಮಾಡಿರುವ ಬ್ಯಾಂಕ್ ಸಾಲ ವರದಿಗಳನ್ನು ಪಡೆದು ಅವರ ಬಿಪಿಎಲ್ ಕಾರ್ಡುಗಳನ್ನು ರದ್ದು ಪಡಿಸಿದ್ದಾರೆ. ಬಡವರ ಸೌಲತ್ತುಗಳನ್ನು ಕಿತ್ತುಕೊಳ್ಳುವ ಮೂಲಕ ಅವರನ್ನು ಮತ್ತಷ್ಟು ಬಡತಕ್ಕೆ ತಳ್ಳುವ ಕೆಟ್ಟ ನಿರ್ಧಾರವನ್ನು ರಾಜ್ಯ ಸರ್ಕಾರ ಹೊಂದಿದೆ.

ಸರ್ಕಾರದ ಕೆಟ್ಟ ಚಾಳಿಯಿಂದಾಗಿ ಕಾರ್ಕಳ ತಾಲ್ಲೂಕಿನಾದ್ಯಂತ ಸಾವಿರಾರು ಕುಟುಂಬಗಳು ಬೀದಿಗೆ ಬೀಳುವ ಸ್ಥಿತಿ ನಿರ್ಮಾಣವಾಗಿದೆ. ಬಿಪಿಎಲ್ ಕಾರ್ಡು ಇಲ್ಲದೆ ಬಡ ಕುಟುಂಬಗಳು ಲಕ್ಷಾಂತರ ವೆಚ್ಚದ ಆರೋಗ್ಯ ಸೇವೆಯನ್ನು ಪಡೆಯಲು ಸಾಧ್ಯವಾಗದೆ ಕಂಗಾಲಾಗಿದ್ದಾರೆ. ನಿತ್ಯ ಸಾವಿರಾರು ಕುಟುಂಬಗಳು ತಾಲ್ಲೂಕು ಕಚೇರಿ ಅಲೆದು ಕಾರ್ಡಿಗಾಗಿ ದುಂಬಾಲು ಬೀಳುತ್ತಿದ್ದರು ಆಡಳಿತರೂಡ ರಾಜ್ಯ ಸರ್ಕಾರ ಅವರ ಅಹವಾಲು ಸ್ವೀಕರಿಸದಷ್ಟು ಕುರುಡಾಗಿದೆ. ವಿಧವಾ ವೇತನ, ಅಂಗವಿಕಲ ವೇತನದಂತಹ ಆವಶ್ಯಕ ಸೇವೆ ಸಿಗದಿದ್ದರೆ ಈಗಾಗಲೇ ನೊಂದಿರುವ ಕುಟುಂಬಗಳು ಮತ್ತಷ್ಟು ತೊಳಲಾಟಕ್ಕೆ ಸಿಲುಕಲಿದ್ದಾರೆ. ಸರ್ಕಾರ ಬಡವರ ಭಾಗ್ಯಗಳನ್ನು ಕಿತ್ತುಕೊಳ್ಳುವ ದುಷ್ಟ ಕೃತ್ಯಗಳನ್ನು ನಿಲ್ಲಿಸಬೇಕು. ಅದರಲ್ಲೂ ವಿಶೇಷವಾಗಿ ಬಡವರ ಮೇಲೆ ದಬ್ಬಾಳಿಕೆ ಮಾಡುವಂತ ಇಂತಹ ಕೃತ್ಯಗಳನ್ನು ಉಡುಪಿ ಜಿಲ್ಲಾಡಳಿತ ಮಾಡಬಾರದು. ಮತ್ತು ಕಾರ್ಕಳ ಬಿಜೆಪಿ ಇದನ್ನು ಅತ್ಯಂತ ಕಟುವಾಗಿ ಖಂಡಿಸುತ್ತೇವೆ. ಎಂದು ಕಾರ್ಕಳ ಕ್ಷೇತ್ರಾಧ್ಯಕ್ಷ ನವೀನ್ ನಾಯಕ್ ತಿಳಿಸಿದ್ದಾರೆ.



ಬಿಜೆಪಿ ಸ್ಥಾಪನಾ ದಿನವನ್ನು ಪಕ್ಷದ ಬೆಳ್ತಂಗಡಿ ಬಿಜೆಪಿ ಕಚೇರಿಯಲ್ಲಿ ಆಚರಿಸಲಾಯಿತು. ಮನ್ ಕೀ ಬಾತ್ ಜಿಲ್ಲಾ ಸಂಚಾಲಕ ಸೀತಾರಾಮ್ ಬಿ.ಎಸ್., ಮಂಡಲ ಅಧ್ಯಕ್ಷ ಶ್ರೀನಿವಾಸ್ ರಾವ್ ಧರ್ಮಸ್ಥಳ, ಹಿರಿಯರಾದ ವಿಧಾನ ಪರಿಷತ್ ಶಾಸಕ ಪ್ರತಾಪ್ ಸಿಂಹ ನಾಯಕ್, ಮಂಡಲ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಪಾರೆಂಕಿ, ಪ್ರಧಾನ ಕಾರ್ಯದರ್ಶಿ ಜಯಾನಂದ ಗೌಡ ಮತ್ತಿತರರು ಇದ್ದರು.



ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ಬಂಟ್ವಾಳ ವತಿಯಿಂದ ಬಿ.ಮೂಡ ಗ್ರಾಮದ ಕೈಕಂಬದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾರತ ಸರಕಾರದ ಅಕ್ಷಯ್ ಮಿತ್ರ ಯೋಜನೆಯಡಿ ಕ್ಷಯ ರೋಗಿಗೆ ತಿಂಗಳ ಪೌಷ್ಟಿಕ ಆಹಾರ ಸಾಮಗ್ರಿಗಳ ಕಿಟ್ ವಿತರಿಸಲಾಯಿತು. ವಲಯದ ಅಧ್ಯಕ್ಷ ರಾಜೇಂದ್ರ ಕೆ., ಗೌರವಾಧ್ಯಕ್ಷ ಕಿಶೋರ್, ಮಾಜಿ ಅಧ್ಯಕ್ಷ ದಯಾನಂದ್ ಬಂಟ್ವಾಳ್, ಕುಮಾರ ಸ್ವಾಮಿ ಕನ್ಯಾನ, ಹರೀಶ್ ಕುಂದರ್, ಪ್ರದಾನ ಕಾರ್ಯದರ್ಶಿ ರವಿ ಕಲ್ಪನೆ, ಕೋಶಾಧಿಕಾರಿ ಕೃಷ್ಣ ರಾಜ್ ರಾವ್,ಛಾಯಾ ಕಾರ್ಯದರ್ಶಿ ಪ್ರಶಾಂತ್, ವೈದ್ಯಾಧಿಕಾರಿ ಡಾ. ಅಶ್ವಿನಿ ಬಾಲಕೃಷ್ಣ ಆಸ್ಪತ್ರೆಯ ಸಿಬ್ಬಂದಿ ಗಳು ಇದ್ದರು.

ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ | 553.03 ಕೋ.ರೂ. ವ್ಯವಹಾರ

ಆರ್ಥಿಕ ವರ್ಷದಲ್ಲಿ 2.40 ಕೋಟಿ ರೂ. ಲಾಭ ಸಾಧನೆ



ಸುಳ್ಯ: ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು 1913 ರಲ್ಲಿ ಆರಂಭಗೊಂಡು 4 ಕಂದಾಯ ಗ್ರಾಮಗಳ ಕಾರ್ಯವ್ಯಾಪ್ತಿ ಹೊಂದಿದ್ದು, 2025-26 ನೇ ಸಾಲಿನಲ್ಲಿ ಸಂಘ 2.40 ಕೋ.ರೂ. ಲಾಭ ಗಳಿಸಿದೆ.

ಪ್ರಸ್ತುತ ಸಂಘದಲ್ಲಿ 5128 ಸದಸ್ಯರಿದ್ದು ಶೇರು ಹಣವು ರೂ. 9.41 ಕೋಟಿ ಇದೆ. ಸದಸ್ಯರ ಠೇವಣಿ ರೂ. 58.49 ಕೋಟಿ ಇದ್ದು ಸದಸ್ಯರ ಹೊರ ಬಾಕಿ ಸಾಲವು ರೂ. 94.72 ಕೋಟಿ ಇರುತ್ತದೆ. ಹಾಗೂ ಸಾಲ ವಸೂಲಾತಿ ಪ್ರಮಾಣವು ಶೇ.97.76 ಆಗಿದೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಸಾಲ ರೂ.43.24 ಕೋಟಿಯಿದ್ದು, ಸಂಘದಲ್ಲಿ 134 ಸ್ವ ಸಹಾಯ ಸಂಘಗಳು ಇರುತ್ತವೆ. ಸಂಘದ ದುಡಿಯುವ ಬಂಡವಾಳ 124.89 ಕೋಟಿ ಹಾಗೂ 2025-26 ನೇ ಸಾಲಿನ ಒಟ್ಟು ವ್ಯವಹಾರವು ರೂ.553.03 ಕೋಟಿ ಆಗಿದೆ. ಈ ಸಾಲಿನಲ್ಲಿ ಅಂದಾಜು 2.40 ಕೋಟಿ ಲಾಭ ಬಂದಿದೆ ಎಂದು ಸಂಘದ ಅಧ್ಯಕ್ಷ ಚಂದ್ರಶೇಖರ ಶಾಸ್ತ್ರಿ ತಿಳಿಸಿದ್ದಾರೆ. ಸಂಘದ ಉಪಾಧ್ಯಕ್ಷ ಸದಾನಂದ ಕಾರ್ಜ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನೇಮಿರಾಜ ಪಲ್ಲೋಡಿ, ನಿರ್ದೇಶಕರಾದ ಸುಬ್ರಮಣ್ಯ ಕುಳ, ಲಿಗೋಧರ ಆಚಾರ್ಯ ನಾಯರ್ ಕೆರೆ, ಚಿನ್ನಪ್ಪ ಗೌಡ ಚೊಟ್ಟೆಮಜಲು, ವಾಚಣ್ಣ ಕೆರೆಮೂಲೆ, ಮುದರ ಐವತ್ತೊಕ್ಲು, ಅರುಣ ರೈ ಕೇನ್ಯ, ವಾಸುದೇವ ಗೌಡ ಕೆರೆಕ್ಕೋಡಿ, ತಿಮ್ಮಪ್ಪ ಗೌಡ ಕೂತ್ಕುಂಜ , ವನಿತಾ ಅತ್ಯಡ್ಕ, ಬೇಬಿ ಕಟ್ಟ ಮತ್ತು ಸಿಬ್ಬಂದಿ ವರ್ಗ ಸಭೆಯಲ್ಲಿ ಉಪಸ್ಥಿತರಿದ್ದರು. 2026-27 ನೇ ಸಾಲಿನಲ್ಲಿ ಕೇನ್ಯ ಶಾಖೆಯಲ್ಲಿ ನೂತನ ಕಟ್ಟಡ ಉದ್ಘಾಟನೆ ಮತ್ತು ಪೂರ್ಣ ಪ್ರಮಾಣದ ವ್ಯವಹಾರ ಮಾಡಲು ನಿರ್ಧರಿಸಿದೆ.

ಶ್ರೀ ಬಪ್ಪನಾಡು ಸೌಹಾರ್ದ ಸಹಕಾರಿ ಸಂಘಕ್ಕೆ 25.20 ಲ.ರೂ. ಲಾಭ

ಒಟ್ಟು 51.83 ಕೋಟಿ ರೂ. ವ್ಯವಹಾರ

ಮಂಗಳೂರು: ಶ್ರೀ ಬಪ್ಪನಾಡು ಸೌಹಾರ್ದ ಸಹಕಾರಿ ಸಂಘ, ಮುಲ್ಕಿಯಲ್ಲಿ ಪ್ರಧಾನ ಕಚೇರಿಯನ್ನು ಮತ್ತು ಹಳೆಯಂಗಡಿಯಲ್ಲಿ ಶಾಖೆಯೊಂದಿಗೆ ವ್ಯವಹಾರ ನಡೆಸುತ್ತಿದ್ದು 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಒಟ್ಟು ರೂ.51 ಕೋಟಿ 83ಲಕ್ಷ ವ್ಯವಹಾರ ನಡೆಸಿ ರೂ.25ಲಕ್ಷ 20ಸಾವಿರ ಲಾಭಗಳಿಸಿದೆ ಎಂದು ಸಂಘದ ಅಧ್ಯಕ್ಷರಾದ ಸತೀಶ್ ಕುಮಾರ್ ಸಭೆಯಲ್ಲಿ ತಿಳಿಸಿದರು.



ಸಂಘವು ಕಳೆದ ಆರ್ಥಿಕ ವರ್ಷ 2025-26ರಲ್ಲಿ ಠೇವಣಿ ಸಂಗ್ರಹಣೆಯಲ್ಲಿ ಶೇ31%ರಷ್ಟು ಹೆಚ್ಚಳದೊಂದಿಗೆ ರೂ.11.47ಕೋಟಿ ಮತ್ತು ಸಾಲ ನೀಡುವಿಕೆಯಲ್ಲಿ ಶೇ16.38% ಹೆಚ್ಚಳದೊಂದಿಗೆ ರೂ.8.15ಕೋಟಿ ಮತ್ತು ಲಾಭ ಗಳಿಕೆಯಲ್ಲಿ ಶೇ17.26% ಹೆಚ್ಚಳದೊಂದಿಗೆ ರೂ.25ಲಕ್ಷ 20ಸಾವಿರ ಪ್ರಗತಿಯನ್ನು ಕಂಡಿವೆ. ಒಟ್ಟು ನಿಗಳು ರೂ.1ಕೋಟಿ 48ಲಕ್ಷ ಹಾಗು ರೂ.13ಕೋಟಿ 16ಲಕ್ಷ ದುಡಿಯುವ ಬಂಡವಾಳವನ್ನು ಹೊಂದಿದೆ. ಸಂಘವು ಸದಸ್ಯರಿಗೆ ಪ್ರತಿ ವರ್ಷವೂ ತೃಪ್ತಿಕರವಾದ ಡಿವಿಡೆಂಡ್ ನೀಡುತ್ತಿದ್ದು ಇದರೊಂದಿಗೆ ಪ್ರತೀ ವರ್ಷ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಸಾಧಕ ಸದಸ್ಯರನ್ನು ಮತ್ತು ಸದಸ್ಯರ ಮಕ್ಕಳನ್ನು ಗುರುತಿಸುವಿಕೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಸಂಘವು ಪ್ರತೀ ವರ್ಷ ಲೆಕ್ಕಪರಿಶೋಧನೆಯಲ್ಲಿ 'ಎ' ಶ್ರೇಣಿಯನ್ನು ಪಡೆಯುತ್ತಿದೆ. ಸಂಘದ ಸದಸ್ಯರ ಬೇಡಿಕೆಗೆ ತಕ್ಕಂತೆ ತ್ವರಿತಗತಿಯ ಸೇವೆಯನ್ನು ನೀಡುವುದರೊಂದಿಗೆ ಪ್ರತೀ ವರ್ಷವು ತನ್ನ ಸದಸ್ಯರಿಗೆ ಸಾಮಾಜಿಕ, ಶೈಕ್ಷಣಿಕ ಮತ್ತು ವೈದ್ಯಕೀಯ ನೆರವುಗಳಿಗೆ ಸಹಕಾರಿಯಾಗಿದೆ. ಸಂಘದ ಪ್ರಗತಿಗೆ ಸಹಕರಿಸಿದ ಸದಸ್ಯರಿಗೆ, ಸಿಬ್ಬಂದಿ ವರ್ಗದವರಿಗೆ, ಎಲ್ಲ ಆಡಳಿತ ಮಂಡಳಿಯ ನಿರ್ದೇಶಕರಿಗೆ, ಎಲ್ಲಾ ರೀತಿಯ ಸಲಹೆಗಾರರಿಗೆ, ಸಂಘದ ಅಧ್ಯಕ್ಷರಾದ ಸತೀಶ್ ಕುಮಾರ್‌ರವರು ಅಭಿನಂದಿಸಿದರು ಎಂದು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸುತ್ತಮುತ್ತ

ನಟ, ನಿರ್ದೇಶಕ ರಾಜೇಶ್ ಮಾಧವನ್ ಹಕ್ಕು ಚಲಾವಣೆ

ಕಾಸರಗೋಡು: ನಟ ಮತ್ತು ನಿರ್ದೇಶಕ ರಾಜೇಶ್ ಮಾಧವನ್ ಬೆಳ್ಳಿ ಪರದೆಯ ಗದ್ದಲದಿಂದ ಸ್ವಲ್ಪ ವಿರಾಮ ತೆಗೆದುಕೊಂಡು ಪ್ರಜಾಪ್ರಭುತ್ವ ಪ್ರಕ್ರಿಯೆ ಯಲ್ಲಿ ಭಾಗವಹಿಸಲು ತಮ್ಮ ಊರಿಗೆ ಆಗಮಿಸಿದ್ದರು.



ಅವರು ಎರ್ನಾಕುಳಂನಿಂದ ಕಾಸರಗೋಡಿನ ಪೆರ್ಲಡಕ್ಕಕ್ಕೆ ತಲುಪಿ ಉದುಮ ಕ್ಷೇತ್ರದ ಕೊಳತ್ತೂರಿನ ಬೂತ್ ಸಂಖ್ಯೆ 184ರಲ್ಲಿ ಮತ ಚಲಾಯಿಸಿದರು. ಪ್ರತಿಯೊಂದು ಮತವು ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ ಎಂಬ ದೃಢ ನಿಶ್ಚಯದೊಂದಿಗೆ ಅವರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಆಗಮಿಸಿದರು.

ಮತಗಟ್ಟೆ ಅಧಿಕಾರಿಗಳಿಗೆ ಇಂದು ಕರ್ತವ್ಯಕ್ಕೆ ರಜೆ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾದ ಪ್ರಿಸೈಡಿಂಗ್ ಆಫೀಸರ್‌ಗಳು ಮತ್ತು ಮತಗಟ್ಟೆ ಅಧಿಕಾರಿಗಳು ಏ.10ರಂದು ತಮ್ಮ ಉದ್ಯೋಗಕ್ಕೆ ತೆರಳಬೇಕಾಗಿಲ್ಲ ಎಂದು ಮುಖ್ಯ ಚುನಾವಣಾ ಅಧಿಕಾರಿ ತಿಳಿಸಿದ್ದಾರೆ. ಮತದಾನದ ನಂತರ ಇವಿಎಂಗಳು, ವಿವಿಪ್ಯಾಟ್‌ಗಳು ಮತ್ತು ಚುನಾವಣೆಗೆ ಸಂಬಂಧಿಸಿದ ಇತರ ಪತ್ರಿಕೆಗಳನ್ನು ಮೊಹರು ಮಾಡಿ ಹಿಂತಿರುಗಿಸಬೇಕಾಗಿರುವುದರಿಂದ ಮತದಾನದ ಮರುದಿನ ತಡರಾತ್ರಿಯವರೆಗೆ ಅವರು ಚುನಾವಣಾ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಆದ್ದರಿಂದ ಇದನ್ನು ಚುನಾವಣಾ ಕರ್ತವ್ಯವೆಂದು ಪರಿಗಣಿಸಿ ರಜೆ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ.

ಇಂದಿನಿಂದ ಉದಯಗಿರಿ ಶ್ರೀ ವಿಷ್ಣುಮೂರ್ತಿ ದೈವದ ಒತ್ತೆಕೋಲ

ಕಾಸರಗೋಡು: ಉದಯಗಿರಿ ಶ್ರೀ ವಿಷ್ಣುಮೂರ್ತಿ ಕ್ಷೇತ್ರದಲ್ಲಿ ಒತ್ತೆಕೋಲ ಮಹೋತ್ಸವವು ಏ.10ರಿಂದ 12ರ ವರೆಗೆ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಏ.10ರಂದು ಬೆಳಗ್ಗೆ ಬ್ರಹ್ಮಶ್ರೀ ಉಳಿಯ ತ್ತಾಯ ವಿಷ್ಣು ಆಸ್ರರಿಗೆ ಪೂರ್ಣಕುಂಭ ಸ್ವಾಗತ, 7.30ಕ್ಕೆ ಆನೆಚಪ್ಪರ ಏರಿಸುವುದು, ಗಣಪತಿ ಹೋಮ, ತಂಬಿಲ, ಸಂಜೆ 4ಕ್ಕೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆಯು ಕೈಲಾಸಪುರ ಶ್ರೀ ರಕ್ತೇಶ್ವರಿ ಗುಳಿಗ ಸನ್ನಿಧಿಯಿಂದ ಆರಂಭಗೊಳ್ಳಲಿದೆ. ಬಳಿಕ ಉಗ್ರಾಣ ತುಂಬಿಸುವುದು ನಡೆಯಲಿದೆ. 6.30ಕ್ಕೆ ದೀಪಾರಾಧನೆ, ರಾತ್ರಿ 7.30ರಿಂದ ಕೈಕೊಟ್ಟುಕ್ಕಳಿ, 8 ಗಂಟೆಗೆ ಮೆಗಾ ಫ್ಯೂಶನ್ ಡ್ಯಾನ್ಸ್, 9 ಗಂಟೆಗೆ ಪೂರಕ್ಕಳಿ ನಡೆಯಲಿದೆ. ಏ.11ರಂದು ಬೆಳಗ್ಗೆ 7.30ಕ್ಕೆ ಮೇಲೇರಿ ಸೇರಿಸು ವುದು, ಸಂಜೆ 6.30ಕ್ಕೆ ದೀಪಾರಾಧನೆ, ಭಂಡಾರ ಆಗಮನ, ರಾತ್ರಿ 7 ಗಂಟೆಗೆ ಅಗ್ನಿಸ್ಪರ್ಶ, 9.30ಕ್ಕೆ ಕುಳಿಚ್ಚಾಟ್ಟಂ, 11.30ಕ್ಕೆ ಸುಡುಮದ್ದು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 8 ಗಂಟೆಗೆ ಲೈವ್ ಮ್ಯೂಸಿಕಲ್ ಫ್ಯೂಷನ್, 9.30ರಿಂದ ವಿವಿಧ ಕಡೆಗಳಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, 12 ಗಂಟೆಗೆ ವೈಕಂ ವಿಜಯಲಕ್ಷ್ಮೀ ನೇತೃತ್ವದ ಮೆಗಾ ಮ್ಯೂಸಿಕಲ್ ಲೈವ್ ಕಾರ್ಯಕ್ರಮ ನಡೆಯಲಿದೆ. ಏ.12ರಂದು ಮುಂಜಾನೆ 4 ಗಂಟೆಗೆ ಶ್ರೀ ವಿಷ್ಣುಮೂರ್ತಿ ದೈವದ ಅಗ್ನಿಸ್ನಾನ, 8 ಗಂಟೆಗೆ ತುಲಾಭಾರ ಬಳಿಕ ಭಂಡಾರ ನಿರ್ಗಮನಗೊಳ್ಳಲಿದೆ.

ಇಂದಿನಿಂದ ಸುವರ್ಣ ಮಹೋತ್ಸವ

ಮುಳ್ಳೇರಿಯ: ಬೆಳ್ಳೂರು ಕಿನ್ನಿಂಗಾರು ಬೀಜದಕಟ್ಟೆ ಸಮೀಪದ ಗಿರಿಪುರಂ ಭಜನಾ ಮಂದಿರದ ಸುವರ್ಣ ಮಹೋತ್ಸವವು ಏ.10 ಮತ್ತು 11ರಂದು ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಏ.10ರಂದು ಸಂಜೆ 6ಕ್ಕೆ ಚೌಕಿಪೂಜೆ, 6.30ರಿಂದ ಯಕ್ಷಗಾನ ಬಯಲಾಟ, ರಾತ್ರಿ 8ರಿಂದ ಅನ್ನ ಸಂತರ್ಪಣೆ ನಡೆಯಲಿದೆ.

ಏ.11ರಂದು ಸಂಜೆ 6ಕ್ಕೆ ದೀಪ ಪ್ರಜ್ವಲನೆ, ಭಜನಾ ತಂಡಗಳಿಂದ ಕುಣಿತ ಭಜನೆ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಆರಂಭ, ರಾತ್ರಿ 9 ಗಂಟೆಗೆ ಮಹಾಪೂಜೆ, ಅನ್ನ ಸಂತರ್ಪಣೆ, ಅಂಗನವಾಡಿ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಮಂದಿರದ ಅಧ್ಯಕ್ಷ ವೆಂಕಟ್ರಮಣ ಕುಂಜತ್ತಾಯ ಅಧ್ಯಕ್ಷತೆ ವಹಿಸುವರು. ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಧಾರ್ಮಿಕ ಭಾಷಣ ಮಾಡುವರು. ಇದೇ ವೇಳೆ ಮಂದಿರದ ಸ್ಥಾಪಕ ಸದಸ್ಯರಿಗೆ ಸನ್ಮಾನ, 11.30ರಿಂದ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.







ವಿಧಾನಸಭಾ ಚುನಾವಣೆಯ ಅಂಗವಾಗಿ ಮೊದಲ ಬಾರಿಗೆ ಮತ ಚಲಾಯಿಸಿದವರಿಗೆ ಚುನಾವಣಾ ಆಯೋಗದ ನಿರ್ದೇಶನದಂತೆ ಕಾಸರಗೋಡು ಜಿಲ್ಲೆಯಲ್ಲಿ ಹಲ್ವಾ ಸಿಹಿ ತಿಂಡಿ ವಿತರಿಸಲಾಯಿತು.

ಕೇರಳ ವಿಧಾನಸಭಾ ಚುನಾವಣೆ | ಕಾಸರಗೋಡಲ್ಲಿ ಮತದಾರರ ಉತ್ತಮ ಸ್ಪಂದನೆ

ಅಭ್ಯರ್ಥಿಗಳ ಭವಿಷ್ಯ ಮತಗಟ್ಟೆಯಲ್ಲಿ ಭದ್ರ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆ ಅಂಗವಾಗಿ ಗುರುವಾರ ನಡೆದ ಮತದಾನವು ಕಾಸರಗೋಡು ಜಿಲ್ಲೆಯಲ್ಲಿ ಶಾಂತಿಯುತ, ನ್ಯಾಯ ಸಮ್ಮತ ಹಾಗೂ ಉತ್ತಮ ರೀತಿಯಲ್ಲಿ ಸಮಾಪ್ತಿಯಾ ಯಿತು. ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪುರ ಈ ಐದು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾನವು ಶಾಂತಿಯುತವಾಗಿ ಮುಕ್ತಾಯವಾಯಿತು.

ಬೂತ್‌ಗಳಲ್ಲಿ ಬೆಳಿಗ್ಗೆ 7 ಗಂಟೆಯಿಂದ ಮತದಾನ ಆರಂಭವಾಗಿದ್ದು, ಸಂಜೆ 6 ಗಂಟೆಯ ತನಕ ನಡೆಯಿತು. ಕೆಲವು ಬೂತ್‌ಗಳಲ್ಲಿ ಟೋಕನ್ ನೀಡಿ 6 ಗಂಟೆ ಬಳಿಕವೂ ಮತದಾನ ನಡೆಸಲಾ ಯಿತು. ಜಿಲ್ಲೆಯ ಎಲ್ಲಾ ಮತಗಟ್ಟೆಗಳಲ್ಲೂ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ಅಲ್ಲದೆ ಕುಡಿಯುವ ನೀರಿನ ಸೌಲಭ್ಯ, ತ್ಯಾಜ್ಯ ಆಳವಡಿಕೆ ಕೇಂದ್ರ, ವೆಬ್ ಕಾಸ್ಟಿಂಗ್, ಸಿಸಿಟಿವಿ ಕ್ಯಾಮರಾ ಇತ್ಯಾದಿಗಳನ್ನು ಅಳವಡಿಸಲಾಗಿತ್ತು.

ಕುಗ್ಗದ ಪುಷ್ಪಾ ರಾವ್ ಮತದಾನದ ಉತ್ಸಾಹ



ಕಾಸರಗೋಡು: ವಯಸ್ಸಾದರೂ ಮತದಾನದ ಉತ್ಸಾಹದಲ್ಲಿ ಕುಗ್ಗದಿದ್ದರೆ ಪ್ರಜಾಪ್ರಭುತ್ವ ಪ್ರಕ್ರಿಯೆ ಯಲ್ಲಿ ಭಾಗವಹಿಸಲು ಯಾವುದೇ ಅಡ್ಡಿಯಿಲ್ಲ ಎಂಬುದನ್ನು ಪುಷ್ಪಾ ರಾವ್ ಸಾಬೀತುಪಡಿಸಿದ್ದಾರೆ. ವಯೋಸಹಜ ಶಾರೀರಿಕ ಸಮಸ್ಯೆಗಳಿಂದ ಬಳಲುತ್ತಿ ರುವ ಮತ್ತು ಪಾರ್ಶ್ವವಾಯುವಿಗೆ ಒಳಗಾದ ಅವರ ದೇಹವು ಮತದಾನದ ಉತ್ಸಾಹಕ್ಕೆ ಅಡ್ಡಿಯಾಗಲಿಲ್ಲ. ಅಚಲ ಉತ್ಸಾಹದಿಂದ ಮತ ಚಲಾಯಿಸಲು ಮತದಾನ ಕೇಂದ್ರಕ್ಕೆ ಆಗಮಿಸಿದ ಈ 66 ವರ್ಷದ ಮಹಿಳೆ ಎಲ್ಲರಿಗೂ ಮಾದರಿಯಾದರು.

ಕುಂಬಳೆ ಕಂಚಿಕಟ್ಟೆ ನಿವಾಸಿಯಾದ ಪುಷ್ಪಾ ರಾವ್ ಅವರು ತಮ್ಮ ಪುತ್ರ ಮತ್ತು ಸ್ಥಳೀಯರ ಸಹಾಯದಿಂದ ಕುಂಬಳೆ ಹೋಲಿ ಫ್ಯಾಮಿಲಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಬೂತ್ ಸಂಖ್ಯೆ 167ಕ್ಕೆ ವೀಲ್‌ಚೆಯರ್‌ನಲ್ಲಿ ಆಗಮಿಸಿದರು. ಮತ ಚಲಾಯಿಸಿದರು. ಪ್ರತಿಯೊಂದು ಮತವೂ ಮೌಲ್ಯಯುತವಾಗಿದೆ ಎಂಬ ದೊಡ್ಡ ಸಂದೇಶವನ್ನು ಪುಷ್ಪಾ ರಾವ್ ಅವರು ಸಮಾಜಕ್ಕೆ ಸಾರಿದ್ದಾರೆ.

83ನೇ ವಯಸ್ಸಿನ ಅಬ್ದುಲ್ಲರಿಂದ ಮತ ಚಲಾವಣೆ

ಪ್ರಜಾಪ್ರಭುತ್ವದ ಬಗೆಗಿನ ಬದ್ಧತೆಗೆ ಸಾಕ್ಷಿಯಾಗಿ 83 ವರ್ಷದ ಅಬ್ದುಲ್ಲ ಅವರು ಖುದ್ದಾಗಿ ಮತ ಚಲಾಯಿಸಲು ಬಂದರು. ಬದರಿಯಾ ನಗರ ನಿವಾಸಿ ಅವರು ಕುಂಬಳೆ ಜಿಎಸ್‌ಬಿ ಶಾಲೆಯ ಬೂತ್ ಸಂಖ್ಯೆ 163ರಲ್ಲಿ ಉತ್ಸಾಹದಿಂದಲೇ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಮತಕ್ಕೂ ಮೌಲ್ಯವಿದೆ. ಹಾಗೆ ಮಾಡುವುದು ಕರ್ತವ್ಯ ಮಾತ್ರವಲ್ಲ, ಜವಾಬ್ದಾರಿಯೂ ಆಗಿದೆ ಎಂದು ಅಬ್ದುಲ್ಲ ನುಡಿದರು. ವಯಸ್ಸಿನಲ್ಲಿ ಕಡಿಮೆಯಾಗದ ಅವರ ಉತ್ಸಾಹವು ಮತಗಟ್ಟೆಗೆ ಬಂದ ಇತರ ಮತದಾರರಿಗೂ ಸ್ಫೂರ್ತಿ ನೀಡಿತು.

ಮೊದಲ ಮತದಾನಗೈದ ಯುವ ಮತದಾರರು

ಈ ಬಾರಿಯ ವಿಧಾನಸಭಾ ಚುನಾವಣೆಯು ವಿವಿಧ ಕೌತುಕ ವಿಚಾರಗಳಿಗೆ ಸಾಕ್ಷಿಯಾಗಿವೆ. ಅದರಂತೆ ಯುವ ಮತದಾರರು ಮೊದಲ ಮತದಾನಗೈಯ್ಯಲು ಉತ್ಸಾಹದಿಂದ ಮತಗಟ್ಟೆಗಳಿಗೆ ಆಗಮಿಸಿದರು. ಬೇರಿಕೆ ಮೂಲದ ಈ ಯುವ ಮತದಾರರು ಮಂಜೇಶ್ವರ ಕ್ಷೇತ್ರದ ಮಂಗಲ್ಪಾಡಿ ಜಿಬಿಎಲ್‌ಪಿ ಶಾಲೆಯ ಬೂತ್ ಸಂಖ್ಯೆ 103ರಲ್ಲಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ಮತಗಟ್ಟೆಗಳಲ್ಲಿ ಈ ಹೊಸ ಪೀಳಿಗೆಯ ಸಕ್ರಿಯ ಉಪಸ್ಥಿತಿಯು ಪ್ರಜಾಪ್ರಭುತ್ವದ ಭವಿಷ್ಯವು ಸುರಕ್ಷಿತ ವರ್ಗದ ಕೈಯಲ್ಲಿದೆ ಎಂಬುದರ ಸಂಕೇತವಾಗಿತ್ತು.

ಮೊದಲ ಮತದಾರರಿಗೆ ಹಲ್ವಾ ಗಿಫ್ಟ್

ಈ ಬಾರಿಯ ವಿಧಾನಸಭಾ ಚುನಾವಣೆಯ ಅಂಗವಾಗಿ ಮೊದಲ ಬಾರಿಗೆ ಮತ ಚಲಾಯಿಸಿದ ವರಿಗೆ ಚುನಾವಣಾ ಆಯೋಗದ ನಿರ್ದೇಶನದಂತೆ ಕಾಸರಗೋಡು ಜಿಲ್ಲೆಯಲ್ಲಿ ಹಲ್ವಾ ಸಿಹಿ ತಿಂಡಿ ನೀಡಲಾಗಿತ್ತು. ತಮ್ಮ ಹಕ್ಕುಗಳನ್ನು ನೋಂದಾಯಿ ಸಿಕೊಳ್ಳುವ ಹೆಮ್ಮೆಯೊಂದಿಗೆ ಮೊದಲ ಮತದಾರರು ಹಲ್ವಾದ ರುಚಿಯನ್ನು ಸವಿದರು. ಯುವ ಮತದಾರ ರನ್ನು ಮತಗಟ್ಟೆಗಳಿಗೆ ಆಕರ್ಷಿಸುವ ಉದ್ದೇಶದಿಂದ ಪ್ರಾರಂಭಿಸಲಾದ ಸಿಹಿ ಮತ ಅಭಿಯಾನದ ಭಾಗವಾಗಿ ಮತಗಟ್ಟೆಗಳಲ್ಲಿ ಮೊದಲ ಬಾರಿಗೆ ಮತದಾರರಿಗೆ ಹಲ್ವಾವನ್ನು ವಿತರಿಸಲಾಯಿತು.

ಕೇಂದ್ರ ಚುನಾವಣಾ ಆಯೋಗವು ಕಾಸರಗೋಡು ಜಿಲ್ಲೆಗೆ ಅಗತ್ಯದ ಹಲ್ವಾವನ್ನು ಒದಗಿಸಿದೆ. ಮಂಜೇಶ್ವರ ಕ್ಷೇತ್ರದ ನಂಬರ್ ವನ್ ಬೂತ್ ಆಗಿರುವ ಕುಂಜತ್ತೂರು ಜಿವಿಎಚ್‌ಎಸ್ ಶಾಲೆಯಿಂದ ತೃಕ್ಕರೀಪುರ ಕ್ಷೇತ್ರದ ತೃಕ್ಕರೀಪುರ ಜಿವಿಎಚ್‌ಎಸ್ ಶಾಲೆಯ 136 ಬೂತ್‌ಗಳಿಗೆ ಸ್ವೀಪ್ ನೋಡಲ್ ಅಧಿಕಾರಿ ರತೀಶ್ ಪಿಲಿಕ್ಕೋಡು ಅವರ ನೇತೃತ್ವದಲ್ಲಿ ಹಲ್ವಾವನ್ನು ವಿತರಿಸ ಲಾಯಿತು. ಈ ಬಾರಿ ಜಿಲ್ಲೆಯಲ್ಲಿ 11,061 ಮಂದಿ ಮೊದಲ ಬಾರಿ ಮತದಾನದ ಮತದಾರರಿದ್ದರು.

ಮಾಹಿತಿ, ವೆಬ್‌ಕಾಸ್ಟಿಂಗ್ ಮೇಲ್ವಿಚಾರಣೆಗೆ ನಿಯಂತ್ರಣ ಕೊಠಡಿ

ಜಿ.ಪಂ. ಸಭಾಂಗಣದಲ್ಲಿ ಮತದಾನದ ಮಾಹಿತಿ ಮತ್ತು ವೆಬ್ ಕಾಸ್ಟಿಂಗ್‌ಗಾಗಿ ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿ ಕಾರ್ಯನಿರ್ವಹಿಸು ತ್ತಿದೆ. ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ಎಲ್ಲಾ 5 ಕ್ಷೇತ್ರಗಳ ಮತಗಟ್ಟೆ ಗಳ ವೆಬ್‌ಕಾಸ್ಟಿಂಗ್‌ನ್ನು ಮೇಲ್ವಿಚಾರಣೆ ಮಾಡಲು, ಪ್ರತೀ ಕ್ಷೇತ್ರದಲ್ಲಿನ ಮತದಾನದ ಶೇಕಡಾವಾರು ಪ್ರಮಾಣ ತಿಳಿಯಲು ವಿದ್ಯಾನಗರ ಸಿವಿಲ್ ಸ್ಟೇಷನ್ ಕಾಂಪೌಂಡ್‌ನ ಜಿ.ಪಂ. ಸಭಾಂಗಣದಲ್ಲಿ ರುವ ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿ ಗುರುವಾರ ಬೆಳಿಗ್ಗೆಯಿಂದ ಕಾರ್ಯನಿರ್ವಹಿಸಿತು.

ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಅಳವಡಿಸಲಾಗಿರುವ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮೇಲ್ವಿಚಾರಣೆ ಮಾಡಲು ನಿಯಂತ್ರಣ ಕೊಠಡಿಯಲ್ಲಿ ವಿಶೇಷ ಪರದೆಗಳ ಅಳವಡಿಸಲಾಗಿತ್ತು. ಜಿಲ್ಲೆಯ ಎಲ್ಲಾ ಮತಗಟ್ಟೆಗಳ ಮೇಲ್ವಿಚಾ ರಣೆ ನಡೆಸಲು ವಿಶೇಷ ಅಧಿಕಾರಿಗಳ ನೇಮಿಸಲಾಗಿತ್ತು. ಜಿಲ್ಲಾ ಚುನಾವ ಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನಿಯಂತ್ರಣ ಕೊಠಡಿಗೆ ಆಗಮಿಸಿ ಚಟುವಟಿಕೆಗಳ ನೇತೃತ್ವ ವಹಿಸಿದ್ದರು. ಅಣಕು ಮತದಾನದಲ್ಲಿ ದೋಷಪೂರಿತ ಇವಿಎಂ ಯಂತ್ರಗಳ ಬದಲಾಯಿಸಲು ತುರ್ತು ಕ್ರಮ ಕೈಗೊಳ್ಳಲಾಯಿತು. ಜಿಲ್ಲೆಯ 1146 ಮತಗಟ್ಟೆಗಳನ್ನು ಕ್ಲಪ್ತ ಸಮಯದಲ್ಲಿ ಮೇಲ್ವಿಚಾರಣೆ ಮಾಡಲಾಯಿತು. ಇದಕ್ಕಾಗಿ ವೆಬ್ ಕಾಸ್ಟಿಂಗ್ ಕೊಠಡಿ ಯಲ್ಲಿ ಸುಮಾರು 30 ಸಿಬ್ಬಂದಿಗಳು ಏಕಕಾಲದಲ್ಲಿ ಕೆಲಸ ನಿರ್ವಹಿಸಿದ್ದರು. ಒಂದು ಪರದೆ ಒಂಬತ್ತು ಬೂತ್‌ಗಳಿಂದ ದೃಶ್ಯಗಳನ್ನುಂದೇ ಸಮಯ ವೀಕ್ಷಿಸ ಬಹುದು. ವೆಬ್ ಕಾಸ್ಟಿಂಗ್ ನಿಯಂತ್ರಣ ಕೊಠಡಿಯಲ್ಲಿ 12 ಪರದೆ ಸ್ಥಾಪಿಸಲಾಗಿದೆ. ಪ್ರತಿ ಕ್ಷೇತ್ರಕ್ಕೆ ಎರಡು ಪರದೆ ಮತ್ತು ಜಿಲ್ಲಾಧಿಕಾರಿ ಮೇಲ್ವಿಚಾರಣೆ ಮಾಡಲು ಪ್ರತ್ಯೇಕ ಎರಡು ಪರದೆಗಳ ಸ್ಥಾಪಿಸಲಾಗಿದೆ.

ಜಿಲ್ಲೆಯಲ್ಲಿ ಮಾದರಿಯಾಗಿ ಕಾರ್ಯಾಚರಿಸಿದ ಐದು ಬೂತ್‌ಗಳು



ಕಾಸರಗೋಡು: ಪ್ರಜಾಪ್ರಭುತ್ವದ ಹಬ್ಬಕ್ಕಾಗಿ ಕಾಸರಗೋಡು ಜಿಲ್ಲೆಯಲ್ಲಿ ಐದು ಮಾದರಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಹಸಿರು ಮಾನದಂಡಗಳನ್ನು ಸಂಪೂರ್ಣವಾಗಿ ಪಾಲಿಸಿ ನಿರ್ಮಿಸಲಾದ ಈ ಮತಗಟ್ಟೆಗಳು ಮತದಾರರಿಗೆ ಹೃದಯ ತುಂಬಿದ ಮತ್ತು ಹಸಿರು ಅನುಭವವನ್ನು ನೀಡುವಲ್ಲಿ ಯಶಸ್ವಿಯಾದವು.

ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ ಒಂದರಂತೆ ಮಾದರಿ ಮತಗಟ್ಟೆಗಳನ್ನು ಸ್ಥಾಪಿಸಲಾ ಯಿತು. ಮಂಜೇಶ್ವರ ಕ್ಷೇತ್ರದ ಪೈವಳಿಕೆನಗರ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆ ಮತ್ತು ಕಾಸರಗೋಡು ಕ್ಷೇತ್ರದ ವಿದ್ಯಾಗಿರಿ ಎಸ್‌ಎಬಿಎಂ ಪಂ. ಯುಪಿ ಶಾಲೆಯಲ್ಲಿ ಮಾದರಿ ಮತಗಟ್ಟೆಯನ್ನು ಅಳವಡಿಸಲಾಯಿತು. ಉದುಮ ಕ್ಷೇತ್ರದ ಬಾರ ಜಿಡಬ್ಲ್ಯೂ ಎಲ್‌ಪಿ ಶಾಲೆ, ಕಾಞಂಗಾಡು ಕ್ಷೇತ್ರದ ರಾವಣೇಶ್ವರ ಜಿಎಚ್‌ಎಸ್ ಶಾಲೆ, ತೃಕ್ಕರೀಪುರ ಕ್ಷೇತ್ರದ ನೀಲೇಶ್ವರ ಸರ್ಕಾರಿ ಎಲ್‌ಪಿ ಶಾಲೆ ಮಾದರಿ ಮತಗಟ್ಟೆಯನ್ನು ಸ್ಥಾಪಿಸಲಾಗಿತ್ತು.

ಹಳೆಯ ಕಾಲದ ಭವ್ಯತೆ ಮೆಲುಕು ಹಾಕುವ ನಿಟ್ಟಿನಲ್ಲಿ ಹಳೆಯ ಕಾಲದ ಕುರ್ಚಿಗಳು ಮತ್ತು ರೇಡಿಯೋಗಳನ್ನು ಹೊಂದಿದ್ದ ಈ ಮತಗಟ್ಟೆ ಗಳು ಮತದಾರರಿಗೆ ಕುತೂಹಲ ಮೂಡಿಸುವಲ್ಲಿ ಯಶಸ್ವಿಯಾದವು. ಸಂಪೂರ್ಣವಾಗಿ ಹಸಿರೆಲೆಗಳು ಮತ್ತು ನೈಸರ್ಗಿಕ ವಸ್ತುಗಳಿಂದ ತಯಾರಿಸಲ್ಪಟ್ಟ ಹಾಗೂ ಪ್ಲಾಸ್ಟಿಕ್ ಬಳಸದ ಈ ಹಸಿರು ಮತಗಟ್ಟೆ ಗಳು ಪರಿಸರ ಸಂರಕ್ಷಣೆಯ ಸಂದೇಶ ನೀಡಿದವು.

ಮಹಿಳೆಯರು ಮಾತ್ರ ಮತದಾನದ ವ್ಯವಸ್ಥೆ, ಭದ್ರತೆ ಮತ್ತು ಶುಚಿಗೊಳಿಸುವ ಕರ್ತವ್ಯಗಳನ್ನು ನಿರ್ವಹಿಸಿದ ಗುಲಾಬಿ ಮತಗಟ್ಟೆಗಳು ಅತ್ಯುತ್ತಮವಾಗಿ ಸೇವೆ ಸಲ್ಲಿಸಿದವು. ಜಿಲ್ಲೆಯ ಕೆಲವೆಡೆಗಳಲ್ಲಿ ಬೇಸಿಗೆಯ ಉಷ್ಣತೆ ನಿವಾರಿಸಲು ಮತದಾರರಿಗೆ ನೀರು ಮತ್ತು ವಿಶ್ರಾಂತಿ ಪಡೆಯಲು ವಿಶೇಷ ಸೌಲಭ್ಯ ಒದಗಿಸಲಾಗಿತ್ತು. ಹಿರಿಯ ನಾಗರಿಕರು ಮತ್ತು ದಿವ್ಯಾಂಗರಿಗೆ ಯಾವುದೇ ಅಡೆತಡೆಗಳಿಲ್ಲದೆ ಮತ ಚಲಾಯಿಸಲು ಮತಗಟ್ಟೆ ಗಳಲ್ಲಿ ಮೂಲಭೂತ ಸೌಲಭ್ಯ ಮಾಡಲಾಗಿತ್ತು.

ವೆಬ್ ಕಾಸ್ಟಿಂಗ್ ವೀಕ್ಷಿಸಿದ ವಿಜಯ್ ಬಾಲಕೃಷ್ಣ ವಾಘ್ಮೋರೆ



ಕಾಸರಗೋಡು: ವಿಧಾನಸಭಾ ಚುನಾವಣೆ 2026ರ ಭಾಗವಾಗಿ ಚುನಾವಣಾ ಸಾಮಾನ್ಯ ವೀಕ್ಷಕ ವಿಜಯ್ ಬಾಲಕೃಷ್ಣ ವಾಘ್ಮೋರೆ ಅವರು ಕಾಸರಗೋಡು ಜಿಲ್ಲೆಯ ಎಲ್ಲಾ ಕ್ಷೇತ್ರಗಳ ಮತಗಟ್ಟೆಗಳಲ್ಲಿ ವೆಬ್ ಕಾಸ್ಟಿಂಗ್‌ನ್ನು ಮೇಲ್ವಿಚಾರಣೆ ಮಾಡಲು ಮತ್ತು ಪ್ರತಿ ಕ್ಷೇತ್ರದಲ್ಲಿನ ಮತದಾನದ ಶೇಕಡಾವಾರು ಪ್ರಮಾಣವನ್ನು ತಿಳಿಯಲು ವಿದ್ಯಾನಗರ ಸಿವಿಲ್ ಸ್ಟೇಷನ್ ಕಾಂಪೌಂಡ್ ನಲ್ಲಿರುವ ಜಿಲ್ಲಾ ಪಂಚಾಯತ್ ಸಭಾಂಗಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ಮೇಲ್ವಿಚಾರಣೆಯಲ್ಲಿ ನಿಯಂತ್ರಣ ಕೊಠಡಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಕಾರ್ಯನಿರ್ವಹಿಸಿತು.

ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿಜಯ್ ಭರತ್ ರೆಡ್ಡಿ ಅವರು ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿಗೆ ಭೇಟಿ ನೀಡಿ ಚಟುವಟಿಕೆಗಳನ್ನು ಪರಿಶೀಲಿಸಿದರು. ವಿವಿಧ ಕ್ಷೇತ್ರಗಳಲ್ಲಿ ವೆಬ್ ಕಾಸ್ಟಿಂಗ್‌ಗಾಗಿ ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿತ್ತು.

ಹಸಿರು ಮಾನದಂಡಗಳ ಅನುಸರಿಸಿ ಝೀರೋ ವೇಸ್ಟ್ ಬೂತ್ ಸ್ಥಾಪನೆ



ಕಾಸರಗೋಡು: ವಿಧಾನಸಭಾ ಚುನಾವಣೆಯ ಭಾಗವಾಗಿ ಕುಂಬಳೆದಲ್ಲಿರುವ ಜಿಎಸ್‌ಬಿಎಸ್ ಶಾಲೆಯು ಹಸಿರು ನಿಯಮ ಅಳವಡಿಸುವ ಮೂಲಕ ಮಾದರಿ ಶೂನ್ಯ ತ್ಯಾಜ್ಯ ಬೂತ್ ಆಗಿ ಮಾರ್ಪಟ್ಟಿತು. 162, 163, 165 ಮತ್ತು 166 ಸಂಖ್ಯೆಯ ಬೂತ್‌ಗಳನ್ನು ಹಸಿರು ಬೂತ್ ಗಳಾಗಿ ವ್ಯವಸ್ಥೆಗೊಳಿಸಲಾಯಿತು. ಸಾಧ್ಯವಾದಷ್ಟು ಪ್ಲಾಸ್ಟಿಕ್ ಬಳಕೆ ತಪ್ಪಿಸುವ ಮೂಲಕ ಪರಿಸರ ಸ್ನೇಹಿ ರೀತಿಯಲ್ಲಿ ಬೂತ್‌ಗಳನ್ನು ಸ್ಥಾಪಿಸಲಾಯಿತು. ತ್ಯಾಜ್ಯ ನಿರ್ವಹಣೆಗೆ ವಿಶೇಷ ವ್ಯವಸ್ಥೆಗಳನ್ನು ಒದಗಿಸುವುದರೊಂದಿಗೆ ಮತದಾರರು ತಮ್ಮ ತ್ಯಾಜ್ಯವನ್ನು ವಿಂಗಡಿಸಲು, ಸಂಗ್ರಹಿಸಲು ಸುಲಭವಾಯಿತು. ಹಸಿರು ನಿಯಮದ ಮಹತ್ವ ಒತ್ತಿಹೇಳುವ ರೀತಿಯಲ್ಲಿ ಹಸಿರೆಲೆಗಳು ಮತ್ತು ಇತರ ವಸ್ತುಗಳನ್ನು ಬಳಸಿ ಮಾಡಿದ ಅಲಂಕಾರಗಳನ್ನು ಬೂತ್‌ನೊಳಗೆ – ಹೊರಗೆ ಜೋಡಿಸಲಾಗಿತ್ತು ಎಂಬುದು ಗಮನಾರ್ಹ. ಜನರಿಗೆ ಶೂನ್ಯ ತ್ಯಾಜ್ಯಸಂದೇಶ ತಲುಪಿಸಲು ಸಂದೇಶ ಫಲಕ ಸಹ ಅಳವಡಿಸಲಾಗಿತ್ತು.

ದಿವ್ಯಾಂಗರೇ ನಿರ್ವಹಿಸಿದ ಕಾಞಂಗಾಡಿನ 3ನೇ ಮತಗಟ್ಟೆ



ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಗುರುವಾರ ನಡೆದ ಮತದಾನದ ಹಿನ್ನೆಲೆ ಕಾಞಂಗಾಡಿನ ಮುಕ್ಕೂಡ್ ಶಾಲೆಯ 3ನೇ ಮತಗಟ್ಟೆಯು ದೈಹಿಕ ಇತಿಮಿತಿ ಗಳನ್ನು ಮೀರಿ ಇಚ್ಛಾಶಕ್ತಿಯಿಂದ ಕಾರ್ಯನಿರ್ವಹಿಸುವ ಮೂಲಕ ಇತಿಹಾಸ ನಿರ್ಮಿಸಿತು. ಈ ಮತಗಟ್ಟೆ ಯನ್ನು ಸಂಪೂರ್ಣ ದಿವ್ಯಾಂಗ ವಿಭಾಗದ ಅಧಿಕಾರಿಗಳು ನಿರ್ವಹಿಸಿ ಐತಿಹಾಸಿಕ ಪ್ರಕ್ರಿಯೆ ರೂಪಿಸುವಲ್ಲಿ ಯಶಸ್ವಿಯಾದರು. ಪೆರಿಯ ಪಶು ವೈದ್ಯಕೀಯ ಶಸ್ತ್ರಚಿಕಿತ್ಸಕ ಡಾ.ವಿಕ್ರಮ್ ಕೃಷ್ಣನ್ ಈ ಮಾದರಿ ಮತಗಟ್ಟೆಯ ಪ್ರಿಸೈಡಿಂಗ್ ಆಫೀಸರ್ ಆಗಿ ಕಾರ್ಯ ನಿರ್ವಹಿಸಿದರು. ಅವರಿಗೆ ಕೆಎಸ್‌ಇಬಿ ಅಧಿಕಾರಿ ಗಳಾದ ಎಂ.ಶಮೀರ್, ಪಿ.ಕೆ.ಷರೀಫ್ ಮತ್ತು ಶಿಕ್ಷಕ ಯು.ಪಿ.ವಿ.ಪ್ರಶಾಂತ್ ಅವರು ಇತರ ಮತಗಟ್ಟೆ ಅಧಿಕಾರಿಗಳಾಗಿ ಸಂಪೂರ್ಣ ಬೆಂಬಲ ನೀಡಿದರು. ಸ್ಥಳೀಯಾಡಳಿತ ಇಲಾಖೆಯ (ಎಲ್‌ಎಸ್‌ಜಿಡಿ) ಉದ್ಯೋಗಿ ನಿಮ್ಮಿ ಓ. ಬೂತ್ ಮಟ್ಟದ ಅಧಿಕಾರಿಯಾಗಿದ್ದರು. ಈ ಮತಗಟ್ಟೆಯಲ್ಲಿ ಒಟ್ಟು 768 ಮತದಾರರಿದ್ದಾರೆ. ದಿವ್ಯಾಂಗ ವಲಯದ ಅಧಿಕಾರಿಗಳು ಈ ಮತಗಟ್ಟೆಯಲ್ಲಿ ನ್ಯಾಯಸಮ್ಮತ ಮತದಾನ ನಡೆಯುವಂತೆ ಉತ್ತಮ ಕೆಲಸ ನಿರ್ವಹಿಸಿದರು.

ಅರ್ತಿವೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ

ದೇವಸ್ಥಾನಗಳು ಸಂಸ್ಕಾರ ಕಲಿಸುವ ಕೇಂದ್ರವಾಗಲಿ: ಒಡಿಯೂರು ಶ್ರೀ

ಮಂಗಳೂರು: ಧಾರ್ಮಿಕ ಶ್ರದ್ಧಾಕೇಂದ್ರಗಳ ಮೂಲಕ ವ್ಯಕ್ತಿ ನಿರ್ಮಾಣದ ಕಾರ್ಯವಾಗಲಿ. ದೇವಸ್ಥಾನಗಳು ಸಂಸ್ಕಾರ ಕಲಿಸುವ ಕೇಂದ್ರ ವಾಗಲಿ ಎಂದು ಒಡಿಯೂರು ಕ್ಷೇತ್ರದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಕುಂಜತ್ತಬೈಲ್ ಕೊಂಗಿಬೈಲ್ ಅರ್ತಿವೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯುತ್ತಿರುವ ಅಷ್ಟಬಂಧ ಬ್ರಹ್ಮಕಲಶದ ಧಾರ್ಮಿಕ ಸಭಾ ಕಾರ್ಯಕ್ರಮ ದಲ್ಲಿ ಆಶೀರ್ವಚನ ನೀಡಿದ ಅವರು, ಸಂಬಂಧಗಳು ವ್ಯವಹಾರ ಆಗಬಾರದು. ವಿಷ್ಣು ದೇವರ ಅವತಾರ ಎಂದರೆ ದುಷ್ಟ ನಿಗ್ರಹಕ್ಕಾಗಿ. ನರಸಿಂಹ ಅವತಾರ ಇದಕ್ಕೊಂದು ಉದಾಹರಣೆ. ಬಲಿ ಯನ್ನು ನಿಗ್ರಹಿಸಲು ವಾಮನ ಅವತಾರ ತಾಳಿದ್ದು ಇನ್ನೊಂದು ಉದಾಹರಣೆ ಎಂದರು.

ಕೊಂಚಾಡಿ ಶ್ರೀ ದುರ್ಗಾಪರಮೇಶ್ವರಿ ನಾಗಕನ್ನಿಕಾ ದೇವಳ ಮೊಕ್ತೇಸರ ಬಾಲಕೃಷ್ಣ ಕೊಟ್ಟಾರಿ ಮಾತನಾಡಿದರು.

ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಿಠಲ ಆಳ್ವ ಅಧ್ಯಕ್ಷತೆ ವಹಿಸಿದ್ದರು. ಬಜರಂಗದಳ ಮುಖಂಡ ಭುಜಂಗ ಕುಲಾಲ್ ಅದ್ಯಪಾಡಿ, ಕರ್ನಾಟಕ ರಾಜ್ಯ ಆಹಾರ ಆಯೋಗದ ಸದಸ್ಯ ಸುಮಂತ್ ರಾವ್, ಕಾವೂರು ಬಂಟರ ಸಂಘದ ಅಧ್ಯಕ್ಷ ಆನಂದ ಶೆಟ್ಟಿ ಅಡ್ಯಾರ್, ಕಾವೂರು ಠಾಣೆಯ ಪೊಲೀಸ್ ನಿರೀಕ್ಷಕ ರಾಘವೇಂದ್ರ ಬೈಂದೂರ್, ಪ್ರಸೂತಿ ತಜ್ಞೆ ಡಾ. ಸಂಗೀತಾ ಅಜಯ್ ಕೋಟ್ಯಾನ್, ಉಪ ತಹಶೀಲ್ದಾರ್ ನವೀನ್ ಕುಮಾರ್, ಕಾವೂರು ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಲೋಕೇಶ್ ಭಂಡಾರಿ, ಪ್ರಮುಖರಾದ ಎಂ.ಎಸ್. ಶೆಟ್ಟಿ ಸರಪಾಡಿ, ಡಾ. ಸತೀಶ್ ಕಲ್ಲಿಮಾರ್, ಕೊರಗಪ್ಪ ಶೆಟ್ಟಿ ಆಕಾಶಭವನ, ಸಂದೀಪ್ ಪಚ್ಚನಾಡಿ, ಮೈನಾ ಜಿ. ರೈ ದೆಪ್ಪುಣಿಗುತ್ತು, ಸಂಗೀತಾ ನಾಯಕ್ ಪಚ್ಚನಾಡಿ, ಕಿರಣ್ ಶೆಟ್ಟಿ, ಕ್ಷೇತ್ರದ ಆಡಳಿತ ಮೊಕ್ತೇಸರ ಡಾ. ನರೇಶ್ ರೈ, ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ಆಶಿಕ್ ಬಲ್ಲಾಳ್ ಮೊದಲಾದವರು ಉಪಸ್ಥಿತರಿದ್ದರು.

ವೇದಿಕೆ ನಿರ್ವಹಣಾ ಸಮಿತಿಯ ಸಂಚಾಲಕ ಸುಧಾಕರ ಆಳ್ವ ಸ್ವಾಗತಿಸಿದರು. ಜಗದೀಶ್ ಶೆಟ್ಟಿ ಮುರ ವಂದಿಸಿದರು. ಡಾ. ಪ್ರಿಯಾ ಹರೀಶ್, ಸುರೇಖಾ ಶೆಟ್ಟಿ, ಶಿಲ್ಪಾ ಸಂತೋಷ್ ಕಾರ್ಯಕ್ರಮ ನಿರೂಪಿಸಿದರು.



ಹೆತ್ತವರು ಮಕ್ಕಳಿಗೆ ಸಂಸ್ಕಾರ, ಸನ್ಮಾರ್ಗ ಕಲಿಸಬೇಕು

ಆಡಳಿತ ಮಂಡಳಿ, ಅರ್ಚಕರು, ಭಕ್ತರು ಒಟ್ಟಿಗೆ ಜೊತೆಗೂಡಿ ಕೆಲಸ ಮಾಡಿದರೆ ದೇವಸ್ಥಾನಗಳ ಅಭಿವೃದ್ಧಿ ಸಾಧ್ಯ. ಸಮಾಜದಲ್ಲಿ ಶಾಂತಿ ನೆಲೆಸಲು ದೇವಸ್ಥಾನಗಳು ಬೇಕು. ಮಕ್ಕಳಿಗೆ ಸನ್ಮಾರ್ಗ, ಸಂಸ್ಕಾರ ಬೋಧಿಸುವ ಕೆಲಸ ಹೆತ್ತವರಿಂದ ಆಗಬೇಕು.

● ಬಾಲಕೃಷ್ಣ ಕೊಟ್ಟಾರಿ

ಪೊಳಲಿ ಶ್ರೀ ರಾಜರಾಜೇಶ್ವರೀ ದೇವಸ್ಥಾನಕ್ಕೆ ಪನ್ವೆಲ್ ಶಾಸಕ ಪ್ರಶಾಂತ್ ಠಾಕೂರ್ ಭೇಟಿ





ಬಂಟ್ವಾಳ: ಜಾತ್ರಾ ಸಂಭ್ರಮದಲ್ಲಿರುವ ಪೊಳಲಿ ಪೊಳಲಿಯ ಶ್ರೀ ರಾಜರಾಜೇಶ್ವರೀ ದೇವಸ್ಥಾನದ ಮೂರನೇ ಚೆಂಡಿನ ದಿನದಂದು ಮಹಾರಾಷ್ಟ್ರದ ಪನ್ವೆಲ್ ನ ಬಿಜೆಪಿ ಶಾಸಕರಾದ ಪ್ರಶಾಂತ್ ಠಾಕೂರ್ ಭೇಟಿ ನೀಡಿದರು. ದೇವರ ದರುಶನ ಪಡೆದ ಶಾಸಕರಿಗೆ ದೇವಳದ ಪ್ರಸಾದ ನೀಡಲಾಯಿತು.

ಈ ಸಂದರ್ಭ ಬಂಟ್ವಾಳ ಶಾಸಕ ಉಳಿಪಾಡಿಗುತ್ತು ರಾಜೇಶ್ ನ್ಯಾಕ್ ಅವರು ಶಾಸಕ ಪ್ರಶಾಂತ್ ಠಾಕೂರ್ ಅವರಿಗೆ ಕ್ಷೇತ್ರದ ಹಿನ್ನಲೆಯನ್ನು ವಿವರಿಸಿದಲ್ಲದೆ, ಕ್ಷೇತ್ರದ ವತಿಯಿಂದ ಗೌರವಿಸಿದರು. ಪನ್ವೆಲ್‌ನ ನಗರಸೇವಕರಾದ ದಳಂದಿಲ ಸಂತೋಷ್ ಶೆಟ್ಟಿ, ಬಿಜೆಪಿ ಬಂಟ್ವಾಳ ಮಂಡಲದ ಪ್ರಧಾನ ಕಾರ್ಯದರ್ಶಿ ಸುದರ್ಶನ್ ಬಜ ಮೊದಲಾದವರು ಉಪಸ್ಥಿತರಿದ್ದರು.

ಸುತ್ತ ಮುತ್ತ

ಏ.12-26: ರಜಾ ಮೇಳ ಮಕ್ಕಳ ಬೇಸಿಗೆ ಶಿಬಿರ

ಕುಂದಾಪುರ: ಮಕ್ಕಳಲ್ಲಿ ಸೃಜನಶೀಲತೆ, ಕಲೆ ಮತ್ತು ವ್ಯಕ್ತಿತ್ವಾಭಿವೃದ್ಧಿಯನ್ನು ಉತ್ತೇಜಿಸಲು ಭಾವ ಭೂಮಿ ಕುಂದಾಪುರ, ಜೇಸಿಐ ಕುಂದಾಪುರ, ಹಾಗೂ ಧ್ವನಿ ಮ್ಯೂಸಿಕಲ್ ಕುಂದಾಪುರ ಇವರ ವತಿಯಿಂದ 'ರಜಾ ಮೇಳ' ಮಕ್ಕಳ ಬೇಸಿಗೆ ಶಿಬಿರ ಕುಂದಾಪುರದ ಜೇಸಿಐ ಸಭಾಭವನದಲ್ಲಿ ಏ.12ರಿಂದ 26ರವರೆಗೆ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 2.30ರವರೆಗೆ ನಡೆಯಲಿದೆ. 6 ರಿಂದ 15 ವರ್ಷದ ಮಕ್ಕಳಿಗೆ ಈ ಶಿಬಿರದಲ್ಲಿ ಭಾಗವಹಿಸುವ ಅವಕಾಶವಿದ್ದು, ಶಿಬಿರದಲ್ಲಿ ಮಕ್ಕಳ ರಂಗ ಸಂಗೀತ, ಕಥಾ ವಾಚನ, ಕ್ರಾಫ್ಟ್ ಮತ್ತು ಡ್ರಾಯಿಂಗ್, ಕ್ಲೇ ಮಾಡೆಲಿಂಗ್, ಕರೋಕೆ, ಡ್ಯಾನ್ಸ್, ಡ್ರಾಮಾ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಶಿಬಿರದ ನಿರ್ದೇಶಕರಾಗಿ ನಾಗೇಶ್ ಕೆದೂರ್ ಅವರು ಕಾರ್ಯನಿರ್ವಹಿಸಲಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9632864530 ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಏ.20ಕ್ಕೆ ಶ್ರೀ ಹಂದೆ ದೇವಸ್ಥಾನದ ಶ್ರೀ ದೇವರ ಶ್ರೀಮನ್ಮಹಾರಥೋತ್ಸವ

ಕೋಟ: ಬ್ರಹ್ಮಾವರ ತಾಲೂಕು ಕೋಟ ವಿವೇಕ ಪ್ರೌಢಶಾಲೆ ಹತ್ತಿರದ ಹಂದಟ್ಟು ಗ್ರಾಮದ ಶ್ರೀ ಹಂದೆ ವಿಷ್ಣುಮೂರ್ತಿ ಮತ್ತು ಹಂದೆ ವಿನಾಯಕ ದೇವಸ್ಥಾನದ ಶ್ರೀಮನ್ಮಹಾರಥೋತ್ಸವವು ಏ.20ರಂದು ಅಕ್ಷಯ ತೃತೀಯದಂದು ನಡೆಯಲಿದೆ. ಶ್ರೀ ದೇವರ ಧಾರ್ಮಿಕ ಕಾರ್ಯಕ್ರಮ ಏ.15ರಿಂದ ನಡೆಯಲಿದೆ. ಏ.19 ರಿಂದ 21ರ ತನಕ ಪ್ರತಿದಿನ ಸಂಜೆ 5.30ಗೆ ಸಭಾ ಕಾರ್ಯಕ್ರಮ, ಸನ್ಮಾನ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಶ್ರೀ ದೇವರ ರಂಗ ಮಂಟಪದಲ್ಲಿ ನಡೆಯಲಿದೆ. ಆನುವಂಶಿಕ ಮೊಕ್ತೇಸರ ಎಚ್. ಅಮರ ಹಂದೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

'ಜಝೀರ' ವಾಪಸ್!

ಗಲ್ಫ್ ರಾಷ್ಟ್ರಗಳಲ್ಲಿರುವ ಭಾರತೀಯರು ಸ್ವದೇಶಕ್ಕೆ ಆಗಮಿಸಲು ಮತ್ತು ನಿರ್ಗಮಿಸಲು ಅನುಕೂಲಕರವಾಗುವ ಹಿನ್ನಲೆಯಲ್ಲಿ ಕುವೈಟ್‌ನ ಜಝೀರ ಏರ್‌ವೇಸ್ ಸಂಸ್ಥೆಯ ವಿಮಾನ ಗಲ್ಫ್ ರಾಷ್ಟ್ರಗಳಲ್ಲಿದ್ದ ಭಾರತೀಯರನ್ನು ಹೊತ್ತುಕೊಂಡು ಮಂಗಳೂರಿಗೆ ಆಗಮಿಸಿದೆ. ವಿಮಾನ ಕ್ಯಾಪ್ಟನ್ ಜಿಮ್ಮಿ ಮೌಸಾ ಅವರೊಂದಿಗೆ ನಾಲ್ವರು ಸಿಬಂದಿಗಳು ಹಾಗೂ 11 ಮಕ್ಕಳು ಸೇರಿದಂತೆ 181 ಪ್ರಯಾಣಿಕರನ್ನು ಒಳಗೊಂಡ ಜಝೀರ ವಿಮಾನ(ಜೆ9 3417) ಭಾರತೀಯ ಕಾಲಮಾನ ಸಂಜೆ 4.25ಕ್ಕೆ ಮಂಗಳೂರು ವಿಮಾನ ನಿಲ್ದಾಣದಲ್ಲಿ ಬಂದಿಳಿಯಿತು. ಬಳಿಕ ಸಂಜೆ 6.10ಕ್ಕೆ ಜಝೀರ ವಿಶೇಷ ವಿಮಾನ(ಜೆ9 3418) ಒಂದು ಮಗು ಸೇರಿದಂತೆ 151 ಪ್ರಯಾಣಿಕರೊಂದಿಗೆ ದಮ್ಮಾಮ್ ಮೂಲಕ ಕುವೈಟ್‌ಗೆ ಪ್ರಯಾಣ ಬೆಳೆಸಿತು. ದಮ್ಮಾಮ್‌ನಿಂದ ರಸ್ತೆ ಮೂಲಕ ಪ್ರಯಾಣಿಕರು ಕುವೈಟ್‌ಗೆ ತೆರಳಲಿದ್ದಾರೆ.

9 ಕಡೆಗಳಿಗೆ ಸ್ಥಗಿತ

ಮಂಗಳೂರು, ಕೊಯಮತ್ತೂರು, ಗೋವಾ, ಕಣ್ಣೂರು, ಕೋಝಿಕ್ಕೋಡ್, ಲಕ್ನೋ, ಮಧುರೈ, ತಿರುಚಿರಾಪಳ್ಳಿ ಮತ್ತು ವಿಜಯವಾಡಕ್ಕೆ ಏಪ್ರಿಲ್ 10ರಿಂದ ಜಾರಿಗೆ ಬರುವಂತೆ ಮೇ 15ರವರೆಗೆ ಜಝೀರಾ ಏರ್‌ವೇಸ್ ಸಂಸ್ಥೆ ಎಲ್ಲಾ ವಿಮಾನಗಳ ಹಾರಾಟ ರದ್ದುಗೊಳಿಸಿದೆ. ಪರಿಣಾಮ ಬೀರುವ ವಿಮಾನಗಳಲ್ಲಿ ಬುಕ್ಕಿಂಗ್ ಹೊಂದಿರುವ ಪ್ರಯಾಣಿಕರಿಗೆ ಪೂರ್ಣ ಮರುಪಾವತಿ ನೀಡಲಾಗುವುದು. ಟ್ರಾವೆಲ್ ಏಜೆಂಟ್‌ಗಳ ಮೂಲಕ ಮಾಡಿದ ಬುಕಿಂಗ್‌ಗಳಿಗೆ, ಮೊತ್ತವನ್ನು ಕ್ರೆಡಿಟ್ ಶೆಲ್‌ನಲ್ಲಿ ಸೇರಿಸಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ. ಈ ರದ್ಧತಿಯಿಂದ ಉಂಟಾದ ಅನಾನುಕೂಲತೆಗಾಗಿ ಪ್ರಾಮಾಣಿಕವಾಗಿ ಗ್ರಾಹಕರ ಕ್ಷಮೆ ಯಾಚಿಸುತ್ತೇವೆ. ಈ ನಿರ್ಧಾರಗಳನ್ನು ಎಂದಿಗೂ ಹಗುರವಾಗಿ ತೆಗೆದುಕೊಳ್ಳಲಾಗುವುದಿಲ್ಲ ಮತ್ತು ನಮ್ಮ ನಿಯಂತ್ರಣ ಮೀರಿದ ಕಾರ್ಯಾಚರಣೆಯ ಸಂದರ್ಭಗಳಿಂದ ನಡೆಸಲ್ಪಡುತ್ತವೆ. ಈ ಸವಾಲುಗಳ ಹೊರತಾಗಿಯೂ ಸಂಸ್ಥೆಯ ಬದ್ಧತೆ ಅಚಲವಾಗಿ ಉಳಿದಿದೆ. ಸುರಕ್ಷಿತ ಮತ್ತು ವಿಶ್ವಾಸಾರ್ಹ ಪ್ರಯಾಣ ಅನುಭವವನ್ನು ನೀಡಲು ಅವಿಶ್ರಾಂತವಾಗಿ ಕೆಲಸ ಮಾಡುತ್ತಿರುವ ಸುಮಾರು 500 ಸಮರ್ಪಿತ ಜಝೀರಾ ಉದ್ಯೋಗಿಗಳ ಬೆಂಬಲದೊಂದಿಗೆ ನಾವು ಭಾರತದಲ್ಲಿನ 8 ಸ್ಥಳಗಳಿಗೆ ದಮ್ಮಾಮ್‌ನಲ್ಲಿರುವ ಸಂಸ್ಥೆಯ ಕಾರ್ಯಾಚರಣಾ ನೆಲೆಯ ಮೂಲಕ ಸೇವೆ ಸಲ್ಲಿಸುವುದನ್ನು ಮುಂದುವರಿಸಲಾಗುವುದು. ಸಂಪರ್ಕವನ್ನು ಕಾಪಾಡಿಕೊಳ್ಳುವುದು ಮತ್ತು ಈ ಸಮಯದಲ್ಲಿ ನಮ್ಮ ಪ್ರಯಾಣಿಕರಿಗೆ ಸಾಧ್ಯವಾದಷ್ಟು ಉತ್ತಮ ಸೇವೆಯನ್ನು ಒದಗಿಸುವುದರ ಮೇಲೆ ನಮ್ಮ ಗಮನ ಉಳಿದಿದೆ ಎಂದು ಜಝೀರಾ ಏರ್‌ವೇಸ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಭರತನ್ ಪಶುಪತಿ ತಿಳಿಸಿದ್ದಾರೆ. ಜಝೀರಾ ಏರ್‌ವೇಸ್‌ನಲ್ಲಿ ಭಾರತದ ಇತರ ಸ್ಥಳಗಳಿಗೆ ಪ್ರಯಾಣಿಸುವ ಎಲ್ಲಾ ಪ್ರಯಾಣಿಕರು ಚೆಕ್-ಇನ್ ಮಾಡುವ ಮೊದಲು ತಮ್ಮ ವಿಮಾನ ವೇಳಾಪಟ್ಟಿ ಪರಿಶೀಲಿಸಲು ಸೂಚಿಸಲಾಗಿದೆ. ಪ್ರಸ್ತುತ ನಡೆಯುತ್ತಿರುವ ಕಾರ್ಯಾಚರಣೆ ಹೊಂದಾಣಿಕೆಗಳ ನಡುವೆ ಸುಗಮ ಪ್ರಯಾಣದ ಅನುಭವವನ್ನು ಖಚಿತಪಡಿಸಿಕೊಳ್ಳಲು ಈ ಮೂಲಕ ಉದ್ದೇಶಿಸಲಾಗಿದೆ. ಮರುಪಾವತಿಗಾಗಿ, ಪ್ರಯಾಣಿಕರು ತಮ್ಮ ಪ್ರಯಾಣ ಏಜೆಂಟ್‌ಗಳನ್ನು ಅಥವಾ ಬುಕಿಂಗ್ ಪ್ಲಾಟ್‌ಫಾರ್ಮ್‌ಗಳನ್ನು ಸಂಪರ್ಕಿಸಬಹುದು. ಜಝೀರಾ ಏರ್‌ವೇಸ್ ವೆಬ್‌ಸೈಟ್: ರಿಚಿದಜಜಿಡಿಚಿಜಿಡಿತಿಚಿಥಿ?.ಛಿಠಟ ಅಥವಾ ಅಪ್ಲಿಕೇಶನ್ ಮೂಲಕ ಮಾಡಿದ ಬುಕ್ಕಿಂಗ್‌ಗಳಿಗಾಗಿ, ಮರುಪಾವತಿಯನ್ನು ಅದೇ ಮೂಲಕ ಪ್ರಕ್ರಿಯೆಗೊಳಿಸಬಹುದು ಎಂದು ಸಂಸ್ಥೆ ತಿಳಿಸಿದೆ.

ಮೊದಲ ಮತದಾರರಿಗೆ ಹಲ್ವಾ ಗಿಫ್ಟ್

ಈ ಬಾರಿಯ ವಿಧಾನಸಭಾ ಚುನಾವಣೆಯ ಅಂಗ ಮೊದಲ ಬಾರಿಗೆ ಮತ ಚಲಾಯಿಸಿದ ವರಿಗೆ ಚುನಾವಣಾ ಆಯೋಗದ ನಿರ್ದೇಶನದಂತೆ ಕಾಸರಗೋಡು ಜಿಲ್ಲೆಯಲ್ಲಿ ಹಲ್ವಾ ಸಿಹಿ ತಿಂಡಿ ನೀಡಲಾಗಿತ್ತು. ತಮ್ಮ ಹಕ್ಕುಗಳನ್ನು ನೋಂದಾಯಿಸಿಕೊಳ್ಳುವ ಹೆಮ್ಮೆಯೊಂದಿಗೆ ಮೊದಲ ಮತದಾರರು ಹಲ್ವಾದ ರುಚಿಯನ್ನು ಸವಿದರು.

ಶಿಥಿಲ ದಂಡೆ ಒಡೆದರೆ ಕೃಷಿಭೂಮಿಗೆ ನೀರು ನುಗ್ಗಿ ಭಾರೀ ನಷ್ಟ ಸಂಭವಿಸುವ ಸಾಧ್ಯತೆ | ಹೂಳು ತುಂಬಿದ ಕೆರೆ

ಅಭಿವೃದ್ಧಿಯಾಗದೆ ಮೂಲೆಗುಂಪಾಗಿದೆ ಬೈಂದೂರಿನ ಹೊಸಕೆರೆ



ಸಂಗಮ ವಿಶೇಷ

ಬೈಂದೂರು: ಮಾನವ ಏನೇ ಹರಸಾಹಸ ಮಾಡಿದರೂ ಪ್ರಕೃತಿ ಎದುರು ಶೂನ್ಯ. ಹಿಂದೆ ರಾಜ-ಮಹಾರಾಜರ ಕಾಲದಿಂದಲೂ ನಮ್ಮ ಹಿರಿಯರಿಂದ ಬಳುವಳಿಯಾಗಿ ಬಂದಿರುವ ಬೈಂದೂರುಹೃದಯಭಾಗಹಾಗೂಗ್ರಾಮದೇವತೆಶ್ರೀ ಸೇನೇಶ್ವರ ದೇವಸ್ಥಾನದಿಂದ ಕೂಗಳತೆ ದೂರದಲ್ಲಿರುವ ನೈಸರ್ಗಿಕ ನೀರಿನ ಧಾರೆ ಈ 'ಹೊಸಕೆರೆ'. ಕಳೆದ ಹಲವಾರು ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾಣದೇ ಮೂಲೆಗುಂಪಾಗಿರುವುದು ಮಾತ್ರ ದುರ್ದೈವದ ಸಂಗತಿಯಾಗಿದೆ.

ಕೆರೆಯ ಎರಡೂ ಬದಿಗಳಲ್ಲಿ ನಿರ್ಮಿಸಿದ ಮೆಟ್ಟಿಲುಗಳು ಪ್ರಸ್ತುತ ಸ್ಥಾನಪಲ್ಲಟಗೊಂಡಿದ್ದು, ಶಿಲಾಮೆಟ್ಟಿಲುಗಳು ಒಂದೊಂದಾಗಿ ಕೆರೆಯ ಉದರ ಸೇರುತ್ತಿದೆ. ಕೆರೆದಂಡೆಯೂ ಶಿಥಿಲಗೊಂಡಿದ್ದು, ಇದು ಮುಂದುವರಿದು ದಂಡೆ ಒಡೆದರೆ ಪಕ್ಕದ ಕೃಷಿಭೂಮಿಗೆ ನೀರು ನುಗ್ಗಿ ಭಾರೀ ನಷ್ಟ ಸಂಭವಿಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಆ ನೆಲೆಯಲ್ಲಿ ಈ ನೈಸರ್ಗಿಕ ಕೆರೆಯ ಬಗ್ಗೆ ಸರ್ಕಾರ, ಜನಪ್ರತಿನಿಧಿಗಳು ವಿಶೇಷವಾಗಿ ಗಮನಿಸಬೇಕಾಗಿದೆ. ಇದನ್ನು ಅಭಿವೃದ್ಧಿಪಡಿಸುವ ಮೂಲಕ ಮುಂದಿನ ಪೀಳಿಗೆವರೆಗೂ ಉಳಿಸಿಕೊಳ್ಳುವ ಅನಿವಾರ್ಯತೆಯಿದೆ.

ಈ ಹಿಂದೆ ಜಲಾನಯನ ಇಲಾಖೆ ನಿಧಿಯಿಂದ ಎರಡು ಬಾರಿ ಹೂಳೆತ್ತುವ ಕಾರ್ಯ ಮಾಡಿದ್ದರು. ಇದರಿಂದ ಸುತ್ತಮುತ್ತಲಿನ ಬಾವಿಗಳಲ್ಲಿ ಅಂತರ್ಜಲ ಹೆಚ್ಚಾಗಿತ್ತು. ಪ್ರಸ್ತುತ ಮತ್ತೆ ಇಲ್ಲಿ ಹೂಳುತುಂಬಿದೆ. ಬೈಂದೂರು ಹಾಗೂ ಆಸುಪಾಸಿನ ಹೆಚ್ಚಿನ ಮಕ್ಕಳು ಹಾಗೂ ಯುವಕರು ಈಜು ಕಲಿತಿದ್ದು ಇದೇ ಕೆರೆಯಲ್ಲಿ ಎನ್ನುವುದು ವಿಶೇಷ.

ಹಿಂದಿನ ಶಾಸಕರ ಭರವಸೆ

ಹಿಂದಿನ (2013) ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದ ಕೆ. ಗೋಪಾಲ ಪೂಜಾರಿ, ಒಂದು ಕೋಟಿ ಅನುದಾನದಲ್ಲಿ ಈ ಕೆರೆಯನ್ನು ಹೂಳೆತ್ತಿ ಪುನರುಜ್ಜೀವಗೊಳಿಸುವುದಾಗಿ ಶಾರದಾ ವೇದಿಕೆ ಯಲ್ಲಿ ನಡೆದ ಅಭಿನಂದನಾ ಸಭೆಯಲ್ಲಿ ಘೋಷಣೆ ಮಾಡಿದ್ದರು. ಆದರೆ ಅವರ ಶಾಸಕತ್ವದ ಅವಧಿಯಲ್ಲಿ ಈ ಕೆರೆಯ ಬಗ್ಗೆ ಪ್ರಸ್ತಾವ ಸಲ್ಲಿಸಿದರೂ ಚಕಾರ ಎತ್ತದ ಪರಿಣಾಮ ಅವರು ಮಾತುಗಳು ಕೇವಲ ಘೋಷಣೆಗಷ್ಟೇ ಸೀಮಿತವಾಯಿತು. ನಂತರ ಬಂದ ಶಾಸಕ ಬಿ.ಎಂ. ಸುಕುಮಾರ ಶೆಟ್ಟಿ ಕೂಡ ಈ ಕೆರೆಯ ಅಭಿವೃದ್ಧಿಯ ಬಗ್ಗೆ ಮನಸ್ಸು ಮಾಡಲಿಲ್ಲ. ಈಗ ಕೆರೆಯಲ್ಲಿ ಹೂಳು ತುಂಬಿಕೊಂಡಿದ್ದು, ಪರಿಸರದಲ್ಲಿರುವ ಬಾವಿಗಳಲ್ಲಿ ನೀರಿನ ಸಮಸ್ಯೆ ಕಾಣುತ್ತಿದೆ. ಬೇಸಿಗೆಯಲ್ಲಿ ಈ ಭಾಗಗಳಲ್ಲಿ ಕುಡಿಯುವ ನೀರಿಗೂ ತಾತ್ವಾರ ಉಂಟಾಗಿದೆ. ಈ ಬಗ್ಗೆ ಈಗಿನ ಶಾಸಕ ಗುರುರಾಜ ಶೆಟ್ಟಿ ಗಂಟಿಹೊಳೆ ಹಾಗೂ ಸಂಸದ ಬಿ.ವೈ. ರಾಘವೇಂದ್ರ ಶೀಘ್ರವಾಗಿ ಈ ಕೆರೆಗೊಂದು ಕಾಯಕಲ್ಪ ನೀಡಬೇಕಾಗಿದೆ ಎನ್ನುವುದು ಈಜುಪ್ರಿಯರ ಆಗ್ರಹವಾಗಿದೆ. ಅಲ್ಲದೇ ನೈಸರ್ಗಿಕ ಈಜುಕೊಳ ಇದಾಗಿದ್ದು, ಈ ಕೆರೆಯನ್ನು ಸಂಬಂಧಪಟ್ಟ ಇಲಾಖೆ ವತಿಯಿಂದ ಅಭಿವೃದ್ಧಿಪಡಿಸಿದರೆ ಪ್ರವಾಸಿಗರಿಗೂ ಆಕರ್ಷಣೀಯ ಸ್ಥಳವಾಗುತ್ತದೆ ಎನ್ನುತ್ತಾರೆ ಸ್ಥಳೀಯರು.

> **ಅನುಕೂಲವಿದೆ**
> ಸರ್ಕಾರಗಳು ಕೃತಕ ಈಜುಕೊಳ ನಿರ್ಮಿಸಿ ಕಾರ್ಯಕ್ರಮ ನೀಡುವ ಬದಲು ಪ್ರಕೃತಿದತ್ತವಾಗಿರುವ ನೈಸರ್ಗಿಕ ಕೆರೆ ಅಭಿವೃದ್ಧಿಪಡಿಸಿದ್ದಲ್ಲಿ ಕ್ರೀಡಾಪ್ರೇಮಿಗಳಿಗೆ, ಯುವಜನತೆಗೆ ಹಾಗೂ ಕೃಷಿಕರಿಗೆ ಲಾಭದ ಜತೆಗೆ ಹೆಚ್ಚು ಅನುಕೂಲವಾಗುತ್ತಿತ್ತು.
> ● ಬಿ. ಕೃಷ್ಣಮೂರ್ತಿ ಕಾರಂತ್, ಬೈಂದೂರು

ಸುಗ್ಗಿ ಬೇಸಾಯಕ್ಕೆ ಆಧಾರ

ಸುಮಾರು ಮುಕ್ಕಾಲು ಎಕ್ರೆ ವಿಶಾಲವಾದ ಈ ಕೆರೆಗೆ ನೂರಾರು ವರ್ಷಗಳ ಇತಿಹಾಸವಿದ್ದು, ಈ ಕುರಿತ ಶಿಲಾಶಾಸನವೂ ಇದೆ. ಶ್ರೀಸೇನೇಶ್ವರ ವಾರ್ಷಿಕ ಜಾತ್ರಾ ಸಂದರ್ಭದಲ್ಲಿ ಶ್ರೀದೇವರ ಅವಭೃತಸ್ನಾನ ಈ ಕೆರೆಯಲ್ಲಿಯೇ ನಡೆಯುತ್ತದೆ. ಅಲ್ಲದೇ ಈ ಕೆರೆಯ ನೀರನ್ನು ಬಳಸಿ ಪರಿಸರದ ರೈತರು ಸುಗ್ಗಿ ಬೇಸಾಯ ಕೂಡಾ ಮಾಡುತ್ತಿದ್ದಾರೆ.

ಸುರೇಶ್ ಬಂಗೇರಗೆ ಯಕ್ಷ ಕಲಾವಿದ ದಿ. ಕೋಟ ವೈಕುಂಠ ಪ್ರಶಸ್ತಿ ಪ್ರದಾನ



ಕೋಟ: ಯಕ್ಷಗಾನದಲ್ಲಿ ಕೋಟ ವೈಕುಂಠರ ಪಾತ್ರ ಗಣನೀಯವಾದದ್ದು ಎಂದು ಕೋಟದ ಅಮೃತೇಶ್ವರೀ ಮೇಳದ ಯಜಮಾನ ಆನಂದ್ ಸಿ ಕುಂದರ್ ಹೇಳಿದರು.

ಬುಧವಾರ ಕೋಟತಟ್ಟು ಬಾರಿಕೆರೆ ಹತ್ತು ಸಮಸ್ತರ ವತಿಯಿಂದ ಹಮ್ಮಿಕೊಂಡ ಕೋಟ ಅಮೃತೇಶ್ವರೀ ದಶಾವತಾರ ಯಕ್ಷಗಾನ ಮೇಳದ ಗ್ರಾಮದ ಸೇವೆಯಾಟದಲ್ಲಿ ಕೋಟ ಸುರೇಶ್ ಬಂಗೇರರಿಗೆ ಯಕ್ಷಕಲಾವಿದ ಕೋಟ ವೈಕುಂಠ ಪ್ರಶಸ್ತಿ ಪ್ರದಾನಮಾಡಿ ಮಾತನಾಡಿ, ಓರ್ವ ಕಲಾವಿದ ರಂಗಸ್ಥಳದಲ್ಲಿ ಹೇಗೆ ಪಳಗಬೇಕು ಎಂಬುವುದನ್ನು ಕೋಟ ವೈಕುಂಠರು ಆ ಕಾಲಘಟ್ಟದಲ್ಲಿ ತೋರಿಸಿಕೊಟ್ಟಿದ್ದಾರೆ. ಯಕ್ಷಗಾನ ಮೇಳವನ್ನು ಮುನ್ನಡೆಸುವುದರೊಂದಿಗೆ ತನ್ನ ವೇಷ ನಿರ್ವಹಿಸುವ ಪರಿ ಪದಗಳಲ್ಲಿ ವರ್ಣಿಸಲು ಸಾಲದು. ಅದೇ ರೀತಿ ತನ್ನ ಸಂಪ್ರದಾಯ ಬದ್ಧ ಯಕ್ಷಕಲೆಯ ಮೂಲಕ ಸುರೇಶ್ ಬಂಗೇರರು ಯಕ್ಷಕಲಾ ಕ್ಷೇತ್ರಕ್ಕೆ ಧಾರೆ ಎರೆದಿದ್ದಾರೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕೋಟ ಸುರೇಶ್ ಬಂಗೇರರಿಗೆ ಕೋಟ ವೈಕುಂಠ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೋಟತಟ್ಟು ಗ್ರಾಮದ ಹಿರಿಯರಾದ ಒಳಮಾಡು ಸೋಮ ಮರಕಾಲ, ಯಕ್ಷ ಸಂಘಟಕರಾದ ರಾಜು ಮರಕಾಲ, ರಂಜೀತ್ ಕುಮಾರ್, ರತ್ನಾಕರ ಬಾರಿಕೆರೆ, ಆನಂತ ಮರಕಾಲ, ಕೋಟ ಅಮೃತೇಶ್ವರೀ ದೇವಸ್ಥಾನದ ಟ್ರಸ್ಟಿಗಳಾದ ಎಂ. ಶಿವ ಪೂಜಾರಿ, ಗಣೇಶ್ ನೆಲ್ಲಿಬೆಟ್ಟು ಮತ್ತಿತರರು ಉಪಸ್ಥಿತರಿದ್ದರು.

ಸೈಬರ್ ಭದ್ರತೆ ಕೇವಲ ವೃತ್ತಿಯಲ್ಲ, ರಾಷ್ಟ್ರಕ್ಕೆ ಮಾಡುವ ಸೇವೆ: ವಿಜಯಂತ್



ಕುಂದಾಪುರ: ಕುಂದಾಪುರ ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎರಡು ದಿನಗಳ ಕಂಪ್ಯೂಟೇಶನಲ್ ಇಂಟೆಲಿಜೆನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಸ್ಮಾರ್ಟ್ ಟೆಕ್ನಾಲಜೀಸ್' (ICCIEST-2026) ಬೃಹತ್ ಅಂತರಾಷ್ಟ್ರೀಯ ಸಮ್ಮೇಳನದ ಉದ್ಘಾಟನೆ ಬುಧವಾರ ನಡೆಯಿತು.

ಹೊಸದಿಲ್ಲಿ ಸೈಬರ್ ಸೆಕ್ಯೂರಿಟಿ ಅಸೋಸಿಯೇಷನ್ ಆಫ್ ಇಂಡಿಯಾ ಮಹಾನಿರ್ದೇಶಕ, ಎಂಐಟಿಕೆ ಮುಖ್ಯ ಸಲಹೆಗಾರ ವಿಜಯಂತ್ ಗೌರ್ ಮಾತನಾಡಿ, ಡಿಜಿಟಲೀಕರಣ ಹೆಚ್ಚುತ್ತಿರುವ ಈ ಕಾಲದಲ್ಲಿ ಸೈಬರ್ ಭದ್ರತೆ ಕೇವಲ ವೃತ್ತಿಯಲ್ಲ, ಅದು ರಾಷ್ಟ್ರಕ್ಕೆ ಮಾಡುವ ಸೇವೆ ಎಂದು ಅಭಿಪ್ರಾಯಪಟ್ಟರು.

ಉಡುಪಿ ಸೈಬರ್ ಕ್ರೈಂ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ನೀಲೇಶ್ ಜಿ.ಚೌಹಾಣ್, ಸಮಾಜದಲ್ಲಿ ನಡೆಯುತ್ತಿರುವ ಇತ್ತೀಚಿನ ಸೈಬರ್ ವಂಚನೆಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು. ಸೈಬರ್ ಕ್ರೈಮ್ ಸ್ಪೆಷಲಿಸ್ಟ್ ಮತ್ತು ಪೊಲೀಸ್ ಕಾನ್ಸ್ಟೇಬಲ್ ನಿಲೇಶ್, ಸೈಬರ್ ಪ್ರಕರಣಗಳಲ್ಲಿ ಪೊಲೀಸರಿಗೆ ನೆರವಾಗಲು ಮತ್ತು ಪ್ರಾಯೋಗಿಕ ಅನುಭವ ಪಡೆಯಲು ವಿದ್ಯಾರ್ಥಿಗಳಿಗೆ ಪೊಲೀಸ್ ಠಾಣೆಯಲ್ಲಿ ಇಂಟರ್ನ್‌ಶಿಪ್ ಮಾಡುವಂತೆ ಮುಕ್ತ ಆಹ್ವಾನ ನೀಡಿದರು. ಸೈಬರ್ ಸುರಕ್ಷತಾ ತಜ್ಞರು ಮತ್ತು ಭಾರತೀಯ ಸೇನೆಯ ನಿವೃತ್ತ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ಸಂತೋಷ್ ನಾಥುರಾಮ್ ಖಾಡ್ಸೆ ಮತ್ತು ಕಾಲೇಜಿನ ಪ್ರಾಂಶುಪಾಲ ಡಾ. ರಾಮಕೃಷ್ಣ ಹೆಗ್ಡೆ ಇದ್ದರು. ಡಾ. ಚಂದ್ರ ವಿಜಯ್ ಸಿಂಗ್ ಅವರು ಸಮ್ಮೇಳನದ ಉದ್ದೇಶಗಳ ಬಗ್ಗೆ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ಶ್ರೀನಿಧಿ ಪರಿಚಯಿಸಿದರು. ಸೃಷ್ಟಿ ವಂದಿಸಿದರು.

ರಾಮಪ್ಪ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಅಮೃತ ಮಹೋತ್ಸವ



ಕಾರ್ಕಳ: ಪುಲ್ಕೇರಿ ರಾಮಪ್ಪ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಅಮೃತ ಮಹೋತ್ಸವ ಜರುಗಿತು.

ಇದೇ ಸಂದರ್ಭದಲ್ಲಿ ದಾನಿಗಳು ಹಾಗೂ ಹಳೆವಿದ್ಯಾರ್ಥಿಗಳಿಂದ ನೂತನವಾಗಿ ನಿರ್ಮಿಸಲಾದ ಶಿಶುಮಂದಿರ ಹಾಗೂ ಶಾಲಾ ಕಟ್ಟಡವನ್ನು ಲೋಕಾರ್ಪಣೆಗೊಳಿಸಿದ ವಿದ್ಯಾಭಾರತಿಯ ನಿಕಟಪೂರ್ವ ಮಧ್ಯಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಜಿ.ಆರ್. ಜಗದೀಶ್ ಶುಭ ಹಾರೈಸಿದರು. ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶಾಲೆಯ ಆಡಳಿತ ಮಂಡಳಿ ಸದಸ್ಯ ಶರತ್ ಡಿ. ಕಲ್ಯಾ, ಹಿರಿಯರಾದ ಕೀರ್ತಿಶೇಷ ರಾಮಪ್ಪರವರ ದೂರದೃಷ್ಟಿತ್ವದಿಂದ ಸ್ಥಾಪಿಸಿದ ಈ ವಿದ್ಯಾಸಂಸ್ಥೆಯನ್ನು ಮುಂದಿನ ದಿನಗಳಲ್ಲಿ ಸೈನಿಕ ಶಾಲೆಯಾಗಿ ಪರಿವರ್ತಿಸುವ ಬಗ್ಗೆ ಸಮಯೋಚಿತವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಸುಧೀರ್ ಜೈನ್, ಮ್ಯಾನೇಜರ್ ಹ್ಯೂಮನ್ ರಿಸೋರ್ಸ್ ಎಂಆರ್‌ಪಿಎಲ್ ಮಂಗಳೂರು, ಕೆ.ಬಿ. ಕೀರ್ತನ್ ಕುಮಾರ್, ಜಂಟಿ ಜನರಲ್ ಮ್ಯಾನೇಜರ್, ಮಾರುಕಟ್ಟೆ ಅಭಿವೃದ್ಧಿ ಪರದೀಪ್ ಫಾಸ್ಫೇಟ್, ಲಿ ಪಣಂಬೂರು, ಮಂಗಳೂರು, ಆಡಳಿತ ಮಂಡಳಿ ಸದಸ್ಯರಾದ ನಿವೃತ್ತ ಏರ್‌ವೈಸ್ ಮಾರ್ಷಲ್ ಕ್ಯಾಪ್ಟನ್ ರಮೇಶ್ ಕಾರ್ಣಿಕ್, ಸಂತೋಷ್ ಹೆಗ್ಡೆ ಸೂರಜ್ ಕಲ್ಯಾ, ಅಮೃತ ಮಹೋತ್ಸವ ಸಮಿತಿ ಗೌರವಾಧ್ಯಕ್ಷ ಚಂದ್ರಶೇಖರ ಹೆಗ್ಡೆ ಉಪಾಧ್ಯಕ್ಷ ಉಮೇಶ್ ರಾವ್, ಶಾಲಾ ಮುಖ್ಯ ಶಿಕ್ಷಕ ಹರೀಶ್ ಶೆಟ್ಟಿ ಉಪಸ್ಥಿತರಿದ್ದರು, ಇದೇ ಸಂದರ್ಭದಲ್ಲಿ ದಾನಿಗಳು, ನಿವೃತ್ತ ಶಿಕ್ಷಕರು, ಪ್ರಸ್ತುತ ಶಿಕ್ಷಕರ ಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಆಳ್ವಾಸ್ ವಿದ್ಯಾಸಂಸ್ಥೆಯ ಸಂಗೀತ ಶಿಕ್ಷಕಿ ಶೃತಿ ಕೆ. ಶಿಂದೆ ವಂದೇಮಾತರಂ ಗೀತೆ ಹಾಡಿದರು. ನಿವೃತ್ತ ಶಿಕ್ಷಕ ವಸಂತ ಎಂ. ಪ್ರಸ್ತಾವನೆಗೈದ ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀಧರ ಎನ್ ಸುವರ್ಣ ಸ್ವಾಗತಿಸಿದರು, ಅಮೃತ ಮಹೋತ್ಸವ ಸಂಚಾಲಕರಾದ ಪ್ರಕಾಶ್ ರಾವ್ ವಂದಿಸಿದರು. ಸಹ ಸಂಚಾಲಕ ಶಿವಾನಂದ ಬಂಗೇರ ನಿರೂಪಿಸಿದರು. ದಾನಿಗಳ ವಿವರಗಳನ್ನು ಅಮೃತ ಮಹೋತ್ಸವ ಸಮಿತಿ ಕಾರ್ಯದರ್ಶಿ ಹರೀಶ್ ಅಂಚನ್ ವಾಚಿಸಿದರು.

ಚಪ್ಪರಿಕೆ, ರಾಗಿಹಕ್ಲು, ಕನ್ಯಾನ, ಹೆಮ್ಮಾಡಿ ಶಾಲೆಯಲ್ಲಿ ಕೌಶಲ್ಯ ಕೇಂದ್ರ ಉದ್ಘಾಟನೆ



ಬೈಂದೂರು: ಸರ್ಕಾರಿ ಶಾಲೆಯ ಉಳಿವಿಗಾಗಿ ಆರಂಭಿಸಿದ 300 ಟ್ರೀಸ್ ಯೋಜನೆಯಿಂದ ಇಂದು ಸುಮಾರು 150ಕ್ಕೂ ಹೆಚ್ಚು ಶಾಲೆಗಳು ಯಾವುದಾದರೂ ಒಂದು ಸೌಲಭ್ಯವನ್ನು ಪಡೆದುಕೊಂಡು ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಸಹಕಾರಿಯಾಗಿದೆ ಎಂದು ಶಾಸಕ ಗುರುರಾಜ್ ಗಂಟಿಹೊಳೆ ಹೇಳಿದರು.

ಸಮೃದ್ಧ ಬೈಂದೂರು 300 ಟ್ರೀಸ್ ಯೋಜನೆಯಲ್ಲಿ ಬೈಂದೂರು ಕ್ಷೇತ್ರದ ಚಪ್ಪರಿಕೆ, ರಾಗಿಹಕ್ಲು, ಕನ್ಯಾನ ಮತ್ತು ಹೆಮ್ಮಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸ್ವಯಂಸ್ಫೂರ್ತಿ ಫೌಂಡೇಶನ್ ಬೆಂಗಳೂರು ಸಹಯೋಗದಲ್ಲಿ ಹಾಗೂ ಕಾಂತಿ ಸ್ವೀಟ್ಸ್, ಪ್ಲಾನ್‌ವ್ಯೂವ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಟರಂಟೊ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಇನ್ಫೋಬ್ಲಾಕ್ಸ್ ಇವರ ಸಿಎಸ್‌ಆರ್ ನಿಧಿ ಸಹಕಾರಗಳೊಂದಿಗೆ ಕಂಪ್ಯೂಟರ್ ಲ್ಯಾಬ್, ಮಿನಿಲೈಬ್ರರಿಹಾಗೂಕ್ರೀಡಾಸಾಮಗ್ರಿಗಳನ್ನು ಒಳಗೊಂಡ ಕೌಶಲ್ಯ ಕೇಂದ್ರಗಳನ್ನು ಉದ್ಘಾಟಿಸಿ ಮಾತನಾಡಿದರು.

ಇದೇ ಸಮಯದಲ್ಲಿ ಎಂಆರ್‌ಪಿಎಲ್ ಸಂಸ್ಥೆಯ ಸಿಎಸ್‌ಆರ್ ನಿಧಿಯಿಂದ ಕಾಲ್ತೋಡು ಗ್ರಾಮದ ಕಪ್ಪಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 9,30,000 ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿದ ಎರಡು ತರಗತಿ ಕೋಣೆಗಳನ್ನು ಶಾಸಕರು ಉದ್ಘಾಟಿಸಿದರು. ನಂತರ ಉಪ್ಪುಂದ ಡಿಬಿಆರ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಿದ್ಯಾರ್ಥಿಗಳಿಗೆ ಡ್ರಾಯಿಂಗ್ ಕಿಟ್ ಮತ್ತು ಟಿಫಿನ್ ಬಾಕ್ಸ್‌ಗಳನ್ನು ವಿತರಿಸಲಾಯಿತು

ಸ್ವಯಂಸ್ಫೂರ್ತಿ ಫೌಂಡೇಶನ್ ಸಂಸ್ಥಾಪಕ ನಾಗರಾಜ ಶೆಟ್ಟಿ ಜಡ್ಕಲ್, ಇನ್ಫೋಬ್ಲಾಕ್ ಸಂಸ್ಥೆಯ ಮಹೇಶ್ ಪೂಜಾರಿ, ಎಂಆರ್‌ಪಿಎಲ್ ಸಂಸ್ಥೆಯ ಯಾದವ್, ಉಪ್ಪುಂದ ಡಿಬಿಆರ್ ಚಾರಿಟೇಬಲ್ ಟ್ರಸ್ಟ್ ಪ್ರವರ್ತಕ ರವಿಚಂದ್ರ ವಿ. ಕೆ., ಶಿಕ್ಷಣಾಧಿಕಾರಿ ನಾಗೇಶ ಕೆ. ನಾಯ್ಕ್, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮುಖ್ಯೋಪಾಧ್ಯಾಯರು, ಅಧ್ಯಾಪಕರು, ಅಧ್ಯಕ್ಷರು ಭಾಗವಹಿಸಿದ್ದರು.

ಏ.12-18: ಶ್ರೀ ನಂದಿಕೇಶ್ವರ, ಪರಿವಾರ ದೈವಗಳ ಬ್ರಹ್ಮಕಲಶೋತ್ಸವ

ಬೈಂದೂರು: ಬಿಜೂರು ಗ್ರಾಮದ ಶ್ರೀ ನಂದಿಕೇಶ್ವರ ಹಾಗೂ ಸಪರಿವಾರ ದೈವಗಳ ದೈವಸ್ಥಾನದಲ್ಲಿ ಏ.12ರಿಂದ 18ರ ವರೆಗೆ ಶ್ರೀ ನಂದಿಕೇಶ್ವರ ಪರಿವಾರ ದೈವಗಳ ಮತ್ತು ನಾಗ ದೇವರ ಪುನರ್ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ, ಸುವರ್ಣಮಹೋತ್ಸವ ಹಾಗೂ ಶ್ರೀ ರಾಮನಾಮ ಕೋಟಿ ಜಪಯಜ್ಞ ಪೂರ್ಣಾಹುತಿ ನಡೆಯಲಿದೆ.



ಏ.12ರಂದು ಸಂಜೆ ಗಂಟೆ 6ರಿಂದ ರಾಕ್ಷೋಘ್ನ ಹೋಮ, 1008 ಅಷ್ಟೋತ್ತರ ಸಹಸ್ರ ಬ್ರಹ್ಮಕಲಶ, ಕಲಶ ಸ್ಥಾಪನಾ ಪೂಜೆ ನಡೆಯಲಿದೆ.

ಎ.13ರಂದು ಬೆಳಗ್ಗೆ ಶ್ರೀ ನಾಗದೇವರ ಶಿಲಾಬಿಂಬ ಪುನಃಪ್ರತಿಷ್ಠೆ, ಅಧಿವಾಸ ಹೋಮ, ತತ್ವಹೋಮ, ಕಲಾವೃದ್ಧಿ ಹೋಮ, ಸರ್ಪ ಗಾಯತ್ರಿ ಹೋಮ, ಸರ್ಪ ಪ್ರಾಯಶ್ಚಿತ್ತ ತಿಲಹೋಮ ನಡೆಯಲಿದೆ. ಸಂಜೆ ಸಪರಿವಾರ ದೈವಗಳ ಪ್ರತಿಷ್ಠಾ ಹೋಮ, ರಾತ್ರಿ ಸಪರಿವಾರ ದೈವಗಳ ಪ್ರತಿಷ್ಠೆ, ಅಧಿವಾಸ ಹೋಮ, ಕಲಾವೃದ್ಧಿ ಹೋಮ ನಡೆಯಲಿದೆ. ಎ.14ರಂದು ಬೆಳಗ್ಗೆ ಕಲಾವೃದ್ಧಿ ಹೋಮಗಳು, ಪೂರ್ಣಾಹುತಿ, ಎಲ್ಲಾ ದೇವರಿಗೂ ಪಂಚಾಮೃತ ಪೂರ್ವಕ ಅಷ್ಟೋತ್ತರ ಸಹಸ್ರ ಕಲಶಾಭಿಷೇಕ ಮತ್ತು ಕಲಾಶಾಭಿಶೇಕ ನಡೆಯಲಿದೆ. ಸಂಜೆ ಆಶ್ಲೇಷಾ ಬಲಿ, ಎಲ್ಲಾ ದೇವರಿಗೂ ಕೂಷ್ಮಾಂಡಬಲಿ ಸಮರ್ಪಣೆ ನಡೆಯಲಿದೆ.

ಶ್ರೀ ರಾಮನಾಮ ಕೋಟಿ ಜಪಯಾಗ: ಏ. 15ರಂದು ಬೆಳಿಗ್ಗೆ 8.05ಕ್ಕೆ ಭಜನಾ ಸುವರ್ಣ ಮಹೋತ್ಸವದ ಪ್ರದೀಪ ಸ್ಥಾಪನೆಯೊಂದಿಗೆ ಅಖಂಡ ಭಜನೆ ಪ್ರಾರಂಭಗೊಳ್ಳಲಿದೆ. ಏ.18ರಂದು ಬೆಳಿಗ್ಗೆ ಪ್ರದೀಪ ವಿಸರ್ಜನೆಯೊಂದಿಗೆ ಭಜನಾ ಮಂಗಲೋತ್ಸವ ಜರುಗಲಿರುವುದು. ನಂತರ 50ನೇ ವರ್ಷದ ಭಜನಾ ಸುವರ್ಣಮಹೋತ್ಸವದ ಅಂಗವಾಗಿ ಶ್ರೀ ರಾಮನಾಮ ಕೋಟಿ ಜಪಯಜ್ಞ ಪ್ರಾರಂಭಗೊಂಡು ಪೂರ್ಣಾಹುತಿ ನಡೆಯಲಿದೆ. ಮಧ್ಯಾಹ್ನ ಹಿರಿಯ ಭಜನಾಕಾರರನ್ನು ಮತ್ತು ಹಿರಿಯ ಸ್ವಯಂಸೇವಕರನ್ನು ಗೌರವಿಸುವ ಕಾರ್ಯಕ್ರಮವಿದೆ. ಸಂಜೆ ಗಂಟೆ 5ರಿಂದ ಗೆಂಡಸೇವೆ ನಡೆಯಲಿದ್ದು, ರಾತ್ರಿ ಅನ್ನಸಂತರ್ಪಣೆ, ಶ್ರೀಕ್ಷೇತ್ರ ಹಿರಿಯಡ್ಕ ಮೇಳದವರಿಂದ 'ಶ್ರೀಸ್ವಾಮಿ ವೀರಭದ್ರ' ಯಕ್ಷಗಾನ ಪ್ರದರ್ಶನಗೊಳ್ಳಲಿದೆ. ಅಲ್ಲದೇ 6 ದಿನವೂ ಅನ್ನಸಂತರ್ಪಣೆ ನಡೆಯಲಿದೆ ಎಂದು ದೈವಸ್ಥಾನದ ಪ್ರಕಟಣೆ ತಿಳಿಸಿದೆ.

ಕಾಪು ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿಗೆ ಗುದ್ದಲಿಪೂಜೆ



ಕಾಪು: ಕಾಪು ಪುರಸಭಾ ವ್ಯಾಪ್ತಿಯ ವಿವಿಧ ವಾರ್ಡಿನ ಅಲ್ಪಸಂಖ್ಯಾತರ ಕಾಲೋನಿ ರಸ್ತೆ ಅಭಿವೃದ್ಧಿಗೆ 50 ಲಕ್ಷ ರೂ. ಅನುದಾನ ಮಂಜೂರಾಗಿದ್ದು, ಗುದ್ದಲಿ ಪೂಜೆಯನ್ನು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಗುರುವಾರ ನೆರವೇರಿಸಿದರು.

ಪುರಸಭಾ ವ್ಯಾಪ್ತಿಯ ಗುಜ್ಜಿ ವಾರ್ಡ್‌ನ ಮುಕ್ತರ್ ಸಾಹೇಬರ ಮನೆಯಿಂದ ಇಕ್ಬಾಲ್ ಸಾಹೇಬರ ಮನೆ ತನಕ ರಸ್ತೆ ಅಭಿವೃದ್ಧಿ - 40 ಲಕ್ಷ, ದುಗ್ಗನ್ ತೋಟ ಅಭಿಮಾನ್ ಗೋಲ್ಡ್ ಅಜಬ್ಬ ರವರ ಮನೆಯಿಂದ ಹಮೀದ್ ಅವರ ಮನೆ ವರೆಗೆ ರಸ್ತೆ ಅಭಿವೃದ್ಧಿಗೆ - 5 ಲಕ್ಷ, ತೊಟ್ಟಂ ವಾರ್ಡ್ ಮುಸ್ತಾಕ್ ಅವರ ಮನೆಯಿಂದ ಹಮೀದ್ ಅವರ ಮನೆ ವರೆಗೆ ರಸ್ತೆ ಅಭಿವೃದ್ಧಿಗೆ - 5 ಲಕ್ಷ ರೂ. ಸಹಿತ ಒಟ್ಟು 50 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು. ಪುರಸಭೆ ಅಧ್ಯಕ್ಷೆ ಮೋಹಿನಿ ಶೆಟ್ಟಿ, ಉಪಾಧ್ಯಕ್ಷೆ ಸರಿತಾ ಶಿವಾನಂದ, ಸದಸ್ಯರಾದ ರತ್ನಾಕರ ಶೆಟ್ಟಿ, ಶೈಲೇಶ್ ಅಮೀನ್, ಹರೀಣಾಕ್ಷಿ ದೇವಾಡಿಗ, ಉಮೇಶ್ ಕರ್ಕೇರ, ಸತೀಶ್ಚಂದ್ರ, ಆಸೀಫ್, ನೂರೂದ್ದೀನ್, ವಹೀದಾ ಇದ್ದರು.

ಊಪ್ಪರು ಡೈರಿಯಲ್ಲಿ ವಿಶ್ವ ಆರೋಗ್ಯ ದಿನಾಚರಣೆ, ಉಚಿತ ಆರೋಗ್ಯ ತಪಾಸಣೆ, ಮಾಹಿತಿ ಶಿಬಿರ | ರವಿರಾಜ ಹೆಗ್ಡೆ ಸಲಹೆ

ಆರೋಗ್ಯ ಕಾಪಾಡಲು ಗುಣಮಟ್ಟದ ಆಹಾರ ಸೇವಿಸಿ, ಸ್ವಚ್ಛತೆಯತ್ತ ಗಮನಕೊಡಿ

ಉಡುಪಿ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ಘಟಕ, ಜಿಲ್ಲಾ ಆಸ್ಪತ್ರೆ ಎನ್‌ಸಿಡಿ ವಿಭಾಗ, ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ (ಮಂಗಳೂರು) ಉಡುಪಿ, ಆದರ್ಶ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಉಡುಪಿ, ಭಾರತೀಯ ವೈದ್ಯಕೀಯ ಸಂಘ ಉಡುಪಿ ಕರಾವಳಿ, ಪ್ರಸಾದ್ ನೇತ್ರಾಲಯ, ದಂತ ವೈದ್ಯಕೀಯ ವಿಭಾಗ ಕೆಎಂಸಿ ಮಣಿಪಾಲ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಕೊಳಲಗಿರಿ ಆಶ್ರಯದಲ್ಲಿ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಮತ್ತು ಮಾಹಿತಿ ಶಿಬಿರ 'ಆರೋಗ್ಯಕ್ಕಾಗಿ ಒಟ್ಟಾಗಿ ವಿಜ್ಞಾನದೊಂದಿಗೆ ನಿಲ್ಲೋಣ' ಎಂಬ ಘೋಷ ವಾಕ್ಯದೊಂದಿಗೆ ಊಪ್ಪರು ಡೈರಿಯಲ್ಲಿ ನಡೆಯಿತು.



ಕಾರ್ಯಕ್ರಮ ಉದ್ಘಾಟಿಸಿದ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ನಿಯಮಿತ ಮಂಗಳೂರು ಉಡುಪಿ ಇದರ ಅಧ್ಯಕ್ಷ ಕೊಡವೂರು ರವಿರಾಜ ಹೆಗ್ಡೆ ಮಾತನಾಡಿ, ಪ್ರತಿಯೊಬ್ಬರೂ ಗುಣಮಟ್ಟದ ಆಹಾರ ಸೇವನೆ ಮತ್ತು ಸ್ವಚ್ಛತೆಯತ್ತ ಹೆಚ್ಚು ಗಮನಹರಿಸಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.

ಜಿಲ್ಲಾ ಅಸಾಂಕ್ರಾಮಿಕ ರೋಗಗಳ ಕಾರ್ಯಕ್ರಮಗಳ ಅಧಿಕಾರಿ ಡಾ. ಲತಾ ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿ, ವಿಶ್ವ ಆರೋಗ್ಯ ದಿನವನ್ನು ಆರೋಗ್ಯ ಜಾಗೃತಿ ಮತ್ತು ಆರೋಗ್ಯ ತಪಾಸಣೆ ನಡೆಸಿ ಅರ್ಥ ಪೂರ್ಣವಾಗಿ ಆಚರಿಸುತ್ತಿದ್ದೇವೆ ಎಂದು ತಿಳಿಸಿದರು. ಭಾರತೀಯ ವೈದ್ಯಕೀಯ ಸಂಘ ಕರಾವಳಿ ಉಡುಪಿ ಕಾರ್ಯದರ್ಶಿ ಡಾ. ಮಾನಸ್ ಮಾತನಾಡಿ, ವಿಶ್ವ ಆರೋಗ್ಯ ದಿನಾಚರಣೆ ಕೇವಲ ಆಚರಣೆ ಆಗಬಾರದು. ದೈಹಿಕ ಆರೋಗ್ಯದ ಜೊತೆಗೆ ಸಂಗೀತ, ವ್ಯಾಯಾಮ, ಕಲೆ, ಕರಕುಶಲ ಚಟುವಟಿಕೆ ಮೂಲಕ ಒತ್ತಡ ರಹಿತ ಮಾನಸಿಕ ಆರೋಗ್ಯಕ್ಕೆ ಒತ್ತು ನೀಡಬೇಕು ಎಂದರು.

ಹಾಲು ಒಕ್ಕೂಟದ ಉಪಾಧ್ಯಕ್ಷ ಉದಯ್ ಎಸ್. ಕೋಟ್ಯಾನ್, ಆದರ್ಶ ಆಸ್ಪತ್ರೆ ಕ್ಯಾನ್ಸರ್ ತಜ್ಞ ಡಾ. ಅನಂತ ಎಸ್. ಮಠದ್, ಪ್ರಸಾದ್ ನೇತ್ರಾಲಯದ ಡಾ. ಆಶಿಕ್, ಕೆಎಂಸಿ ಮಣಿಪಾಲ ದಂತ ವೈದ್ಯಕೀಯ ವಿಭಾಗಪಬ್ಲಿಕ್ ಹೆಲ್ತ್ ಡೆಂಟಿಸ್ಟ್ರಿ ಡಾ. ಪೂಜಾ, ಕೊಳಲಗಿರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಸುರೇಶ್ ನಾಯಕ್, ಆಪ್ತ ಸಮಾಲೋಚಕ ಮನು ಎಸ್.ಬಿ. ಇದ್ದರು. ಡಾ.ಅಂಜಲಿ ಸ್ವಾಗತಿಸಿದರು. ಚಂದ್ರಕಲಾ ನಿರೂಪಿಸಿದರು. ಶಶಿಧರ್ ಜೈನ್ ವಂದಿಸಿದರು. 220 ಫಲಾನುಭವಿಗಳು ಶಿಬಿರದಲ್ಲಿ ಪಾಲ್ಗೊಂಡರು.

> **ಮಕ್ಕಳ ಆರೋಗ್ಯದತ್ತ ಗಮನಹರಿಸಿ**
> ಪೋಷಕರು ತಮ್ಮ ಮಕ್ಕಳ ಆರೋಗ್ಯದ ಬಗ್ಗೆ ಸದಾ ಗಮನ ಹರಿಸಬೇಕು. ಮಕ್ಕಳು ಮೊಬೈಲ್ ಅನ್ನು ಹೆಚ್ಚು ಬಳಕೆ ಮಾಡದಂತೆ ಎಚ್ಚರವಹಿಸಬೇಕು. ಯೋಗ, ಧ್ಯಾನ, ಪ್ರಾಣಾಯಾಮ, ಹೊರಾಂಗಣ ಕ್ರೀಡೆಗಳಲ್ಲಿ ಮಕ್ಕಳನ್ನು ತೊಡಗಿಸಬೇಕು.
> ● ಡಾ. ಎಚ್.ಅಶೋಕ್, ಜಿಲ್ಲಾ ಸರ್ಜನ್